ಶುಕ್ರವಾರ, ನವೆಂಬರ್ 25, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 325 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಹಿಳಾ ಮತ
‘ಹೆಣ್ಣಿನ ಮೇಲಿನ ದೌರ್ಜನ್ಯ ತಡೆಗೆ ಕ್ರಿಯಾಶೀಲರಾಗಿ’

‘ಪೈಲಟ್ ನಂಬಿಕೆದ್ರೋಹಿ, ಸಿಎಂ ಆಗಲಾರರು’ 9
‘ಗಡಿ ವಿವಾದ: ಸರ್ವಪಕ್ಷ ಸಭೆ ಶೀಘ್ರ’ 6

ಇಂದು
ಸಿನಿಮಾ ಪುರವಣಿ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,272 ▲	18,484 ▲	₹54,350 (ಬೆಂಗಳೂರು) ▲	₹64,300 (ಬೆಂಗಳೂರು) ▲	81.70 ▲

ರೊನಾಲ್ಡೊ ದಾಖಲೆ

ದೋಹಾ: ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ ಅವರು ಐದು ವಿಶ್ವಕಪ್ ಫುಟ್‌ಬಾಲ್ ಟೂರ್ನಿಗಳಲ್ಲಿ ಗೋಲು ಗಳಿಸಿದ ವಿಶ್ವದ ಮೊದಲ ಆಟಗಾರ ಎಂಬ ದಾಖಲೆ ಮಾಡಿದ್ದಾರೆ. 14

ಚಿನಕುರಳಿ

ಪ್ರಕಾಶ್ ಶೆಟ್ಟಿ

ಇದೇ 27ಕ್ಕೆ ಒಕ್ಕಲಿಗರ ಸಭೆ • ವಿರಾಟ ಪಂಚಶಕ್ತಿ ತಾತ್ಕಾಲಿಕ ಮುಂದೂಡಿಕೆ

ಮೀಸಲಾತಿಗೆ ಪ್ರಬಲರ ಹಟ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡದ ಮೀಸಲಾತಿ ಪ್ರಮಾಣವನ್ನು ಸರ್ಕಾರ ಹೆಚ್ಚಳ ಮಾಡಿರುವ ಬೆನ್ನಲ್ಲೇ, ಪ್ರಬಲ ಸಮುದಾಯದವರು ಮೀಸಲಾತಿ ಪ್ರಮಾಣ ಹೆಚ್ಚಿಸಲು ಹಾಗೂ ಮೀಸಲಾತಿ ಪಟ್ಟಿಯ ಸ್ಥಾನ ಬದಲಾವಣೆಗೆ ಆಗ್ರಹಿಸಿ ಹೋರಾಟಕ್ಕೆ ಮುಂದಾಗಿದ್ದಾರೆ. ಚುನಾವಣೆ ಎದುರಾಗುತ್ತಿರುವ ಹಾಗೂ ವಿಧಾನಮಂಡಲ ಅಧಿವೇಶನ ಸಮೀಪಿಸುತ್ತಿರುವ ಹೊತ್ತಿನೊಳಗೆ ಒಕ್ಕಲಿಗ ಹಾಗೂ ಪಂಚಮಸಾಲಿ ಸಮುದಾಯದವರು ಮೀಸಲಾತಿಗೆ ಒತ್ತಾಯಿಸಿ ಹೋರಾಟವನ್ನು ತೀವ್ರಗೊಳಿಸಲು ಸಜ್ಜಾಗಿದ್ದಾರೆ.

ಶೇ 12ರಷ್ಟು ಮೀಸಲಾತಿಗೆ ಒಕ್ಕಲಿಗರ ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಕ್ಕಲಿಗ ಸಮುದಾಯದ ಮೀಸಲಾತಿ ಪ್ರಮಾಣವನ್ನು ಶೇ 4ರಿಂದ ಶೇ 12ಕ್ಕೆ ಹೆಚ್ಚಿಸಲು ಆಗ್ರಹಿಸಿ ದೊಡ್ಡ ಮಟ್ಟದ ಹೋರಾಟಕ್ಕೆ ಒಕ್ಕಲಿಗರ ಸಂಘ ಮತ್ತು ಮೀಸಲಾತಿ ಹೋರಾಟ ಸಮಿತಿ ಸಜ್ಜಾಗಿದೆ. ಸಮುದಾಯದ ಸ್ವಾಮೀಜಿಗಳು, ರಾಜಕಾರಣಿಗಳು ಮತ್ತು ಮುಖಂಡರು ಸೇರಿ ಪ್ರಮುಖರ ಸಭೆ ನ.27ರಂದು ನಡೆಯಲಿದ್ದು, ಹೋರಾಟ ರೂಪುರೇಷೆ ಸಿದ್ಧವಾಗಲಿದೆ.

ಈ ಕುರಿತು ಸುದ್ದಿಗೋಷ್ಠಿ ನಡೆಸಿದ ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಎನ್.ಬಾಲಕೃಷ್ಣ, ‘ಒಕ್ಕಲಿಗರ ಸಂಘದ ಆವರಣದಲ್ಲಿರುವ ಕುವೆಂಪು ಕಲಾ-ಕ್ಷೇತ್ರದಲ್ಲಿ ನಡೆಯಲಿರುವ ಸಭೆಯಲ್ಲಿ ಆದಿಚುಂಚನಗಿರಿ ಮಠದ ನಿರ್ಮಲಾ-ನಂದನಾಥ ಸ್ವಾಮೀಜಿ, ಪಟ್ಟನಾಯಕನ-ಹಳ್ಳಿ ಮಠದ ನಂಜಾವಧೂತಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನದ ಕುಮಾರ ಚಂದ್ರ-ಶೇಖರ ಸ್ವಾಮೀಜಿ ಅವರು ಸಾನಿಧ್ಯ ವಹಿಸಲಿದ್ದಾರೆ. ಆದಿ ಚುಂಚನಗಿರಿ ಶ್ರೀಗಳ ಸಲಹೆ ಮತ್ತು ಸೂಚನೆ ಮೇರೆಗೆ ಸಭೆ ಕರೆಯಲಾಗಿದೆ’ ಎಂದು ಹೇಳಿದರು.

ಸಿ.ಎನ್. ಬಾಲಕೃಷ್ಣ

ರಾಜ್ಯಸಭೆ ಸದಸ್ಯ ಎಚ್.ಡಿ.ದೇವೇಗೌಡ, ಬಿಜೆಪಿ ಮುಖಂಡ ಎಸ್.ಎಂ.ಕೃಷ್ಣ, ಸಂಸದ ಡಿ.ವಿ.ಸದಾನಂದಗೌಡ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಸಚಿವರಾದ ಆರ್.ಅಶೋಕ, ಸಿ.ಎನ್.ಅಶ್ವತ್ಥ ನಾರಾಯಣ, ಆರಗ ಜ್ಞಾನೇಂದ್ರ, ಎಸ್.ಟಿ. ಸೋಮಶೇಖರ್, ಕೆ.ಸುಧಾಕರ್ ಅವರನ್ನು ಸಭೆಗೆ ಆಹ್ವಾನಿಸಲಾಗಿದೆ ಎಂದರು.

8ನೇ ಪುಟ ನೋಡಿ

ಡಿ.19: ಪಂಚಮಸಾಲಿ ಸಮುದಾಯದ ಗಡುವು

ಬೆಂಗಳೂರು: ‘ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಕಲ್ಪಿಸುವ ಬಗ್ಗೆ ಬೆಳಗಾವಿಯಲ್ಲಿ ಡಿ.19ರಿಂದ ನಡೆಯಲಿರುವ ವಿಧಾನಮಂಡಲ ಅಧಿವೇಶನಕ್ಕೆ ಮುನ್ನ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಸರ್ಕಾರ ವರದಿ ಪಡೆಯಬೇಕು’ ಎಂದು ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಒತ್ತಾಯಿಸಿದ್ದಾರೆ.



ಬಸವ ಜಯಮೃತ್ಯುಂಜಯ ಸ್ವಾಮೀಜಿ

‘ಈ ಅವಧಿಯ ಒಳಗೆ ವರದಿ ಪಡೆಯದಿದ್ದರೆ ಡಿ.22 ರಂದು ಬೆಳಗಾವಿಯಲ್ಲಿ ಬೃಹತ್ ಸಮಾವೇಶ ನಡೆಸಲಾಗುವುದು’ ಎಂದು ಗುರುವಾರ ತಿಳಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿಯಾದ ಬಳಿಕ ಮಾತನಾಡಿದ ಅವರು, ‘ಸರ್ಕಾರಕ್ಕೆ ಗಡುವು ನೀಡಿರುವುದರಿಂದ ಡಿ.12ರಂದು ಬೆಂಗಳೂರಿನ ವಿಧಾನಸೌಧದ ಮುಂದೆ ನಡೆಸಲು ಉದ್ದೇಶಿಸಿದ್ದ ವಿರಾಟ್ ಪಂಚಶಕ್ತಿ ಸಮಾವೇಶವನ್ನು ನಡೆಸದಿರಲು ನಿರ್ಧರಿಸಲಾಗಿದೆ’ ಎಂದರು.

ಕಾರ್ಯಕಾರಿಣಿ ಸಭೆ: ಮೀಸಲಾತಿ ಕುರಿತು ಮುಂದಿನ ಹೋರಾಟ ರೂಪಿಸುವ ಬಗ್ಗೆ ನಗರದಲ್ಲಿ ಗುರುವಾರ ಪಂಚಮಸಾಲಿ ರಾಜ್ಯ ಕಾರ್ಯಕಾರಿಣಿ ಸಭೆ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ನಡೆಯಿತು. ಸಚಿವ ಸಿ.ಸಿ. ಪಾಟೀಲ, ಸಚಿವ ಶಂಕರ ಪಾಟೀಲ ಮುನೇನಕೊಪ್ಪ, ಶಾಸಕ ಬಸವನಗೌಡ ಪಾಟೀಲ ಯತ್ನಾಳ್, ಮಾಜಿ ಶಾಸಕ ವಿಜಯಾನಂದ ಕಾಶಪ್ಪನವರ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಸಮುದಾಯದ ಜನಪ್ರತಿನಿಧಿಗಳು ಇದ್ದರು.

ಇ.ಸಿ ನೇಮಕದಲ್ಲಿ ಕಾನೂನು ಉಲ್ಲಂಘನೆ: ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ‘ಚುನಾವಣಾ ಆಯುಕ್ತರ (ಇ.ಸಿ) ನೇಮಕಾತಿಯಲ್ಲಿ ಕೇಂದ್ರ ಸರ್ಕಾರವು ಕಾನೂನು ಉಲ್ಲಂಘಿಸಿದೆ. ಇದನ್ನು ನಾವು ಸ್ಪಷ್ಟವಾಗಿ ಹೇಳುತ್ತಿದ್ದೇವೆ’ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಚುನಾವಣಾ ಆಯುಕ್ತರ ನೇಮಕಾತಿಗೆ ಕೊಲಿಜಿಯಂ ಸ್ವರೂಪದ ವ್ಯವಸ್ಥೆಯನ್ನು ಜಾರಿಗೆ ತರಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಹಲವು ಅರ್ಜಿಗಳ ವಿಚಾರಣೆ ವೇಳೆ ಸುಪ್ರೀಂ

ಕೋರ್ಟ್ ಈ ಮಾತು ಹೇಳಿದೆ. ನ್ಯಾಯಮೂರ್ತಿ ಕೆ.ಎಂ.ಜೋಸೆಫ್ ನೇತೃತ್ವದ ಐವರು ಸದಸ್ಯರ ಸಂವಿಧಾನ ಪೀಠವು, ಸರ್ಕಾರವು ಉದ್ದೇಶ-ಪೂರ್ವಕವಾಗಿ ಯಾವ ಚುನಾವಣಾ ಆಯುಕ್ತರಿಗೂ ಆರು ವರ್ಷಗಳ ಅಧಿಕಾರದ ಅವಧಿ ಸಿಗದಂತೆ ನೋಡಿ-ಕೊಳ್ಳುತ್ತಿದೆ ಎಂದು ಹೇಳಿದೆ.

ಅರುಣ್ ಗೋಯಲ್ ಅವರನ್ನು ಚುನಾವಣಾ ಆಯುಕ್ತರಾಗಿ ನೇಮಕ ಮಾಡಿದ್ದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪೀಠವು ಪರಿಶೀಲಿಸಿದೆ.

9ನೇ ಪುಟ ನೋಡಿ

ಸಚಿವ ಸುಧಾಕರ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಶಾಶ್ವತ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಆರ್.ಆಂಜನೇಯ ರೆಡ್ಡಿ ದಾಖಲಿಸಿದ್ದ ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿದಂತೆ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಸೂಚಿಸಿದೆ.

ಈ ಕುರಿತು ಆಂಜನೇಯ ರೆಡ್ಡಿ ದಾಖಲಿಸಿರುವ ಖಾಸಗಿ ದೂರಿನ ವಿಚಾರಣೆ ನಡೆಸಿದ ‘ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ ವಿಶೇಷ ನ್ಯಾಯಾಲಯ ಸುಧಾಕರ್ ಸೇರಿದಂತೆ ಪ್ರಕರಣದ ಮೂವರು ಆರೋಪಿಗಳ ವಿರುದ್ಧ ಸಮನ್ಸ್ ಜಾರಿಗೊಳಿಸಲು ಆದೇಶಿಸಿದೆ.

2019ರಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಶಾಸಕರಾಗಿದ್ದ ಡಾ.ಕೆ.ಸುಧಾಕರ್ ಅವರನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರಾಗಿ ನೇಮಕ ಮಾಡಲಾಗಿತ್ತು. ‘ಸುಪ್ರೀಂಕೋರ್ಟ್ ಮಾರ್ಗಸೂಚಿಗಳ ಅನ್ವಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಸ್ಥಾನಕ್ಕೆ ಸುಧಾಕರ್ ಅರ್ಹತೆ ಹೊಂದಿಲ್ಲ’ ಎಂದು ಆಕ್ಷೇಪಿಸಿ ಆಂಜನೇಯ ರೆಡ್ಡಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿದ್ದರು.

‘ರೈತರಿಗೆ ಕಳ್ಳಬಟ್ಟಿ ಕುಡಿಸಿ ಜೈಲು ಸೇರಿದ್ದ ವ್ಯಕ್ತಿ ನನ್ನ ವಿರುದ್ಧ ಹೋರಾಟ ಮಾಡುತ್ತಿದ್ದಾರೆ’ ಎಂದು ಸುಧಾಕರ್ ಅವರು ಸಾರ್ವಜನಿಕ ಸಭೆಯೊಂದರಲ್ಲಿ ಆರೋಪ ಮಾಡಿದ್ದರು. ‘ಇದು ನನ್ನ ತೇಜೋವಧೆ’ ಎಂದು ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ಸುಧಾಕರ್ ವಿರುದ್ಧ ಅವರು ಪ್ರಕರಣ ದಾಖಲಿಸಿದ್ದರು.

Dine-in, Online Delivery & Takeaway: HSR Layout - 7825890008 | Brigade Road - 7825890024 | Electronic City - 7825890023 | Kalyan Nagar - 7825890026 | Hosur - 7825890041 | Indira Nagar - 7825890005 | Jaya Nagar - 7825890015 | Marathahalli - 7825890022 | MG Road - 7825890007 | New Bel Road - 7825890039 | Basaveshwar Nagar - 7825890003 | Uttarahalli - 7825890060 | Rajarajeshwari Nagar - 7825890059 | Arekere - 7825890016 | Total Mall Madiwala - 7825890032 | RMZ Yelanka - 7825890021 | Nexus Mall - 7825890036 | Kudlu Gate - 7825890031 | Mahadevapura - 7825890034 | Sarjapura - 7825890035 | White Field - 7825890028

Takeaway or Order on 7825898898

We are present in: USA, Paris, Dubai, Singapore, Malaysia & Srilanka

Connect: www.thalappakatti.com | DindigulThalappakatti | dindigulthalappakatti_

Scan To Order

*ಈ ಆಫರ್ ಚಿನ್ನದ ನಾಣ್ಯ / ಬಾರ್ ಕೊಳ್ಳುವಾಗ ಅನ್ವಯಿಸುವುದಿಲ್ಲ.
ಈ ಆಫರ್ ಹಳೇ ಚಿನ್ನವನ್ನು ಎಕ್ಸ್‌ಛೇಂಜ್ ಮಾಡಿಕೊಂಡಾಗ ಅನ್ವಯಿಸುತ್ತದೆ. ಕಡಿಮೆ ಅವಧಿಯ ಆಫರ್. ನಿಬಂಧನೆಗಳು ಅನ್ವಯಿಸುತ್ತವೆ.

AVAIL ATTRACTIVE GIFTS ON UPI PAYMENTS.

Karnataka | Andhra Pradesh | Tamil Nadu | Puducherry || Singapore

Store Locator

Shop online at: www.oriana.com | mail@grtjewels.com | GRT LIVE VIDEO SHOPPING Shop from the comfort of your home

‘ನೀರವಂ’ಗೆ ಇಂದು ಚಾಲನೆ

ಬೆಂಗಳೂರು: 6 ವರ್ಷಗಳ ಒಳಗಿನ ಮಕ್ಕಳಿಗೆ ಉಚಿತವಾಗಿ ಶ್ರವಣ ಸಾಧನ ಒದಗಿಸುವ ಯೋಜನೆ ‘ನೀರವಂ’ಗೆ ನ. 25ರಂದು ಚಾಲನೆ ದೊರೆಯಲಿದೆ.

ರೋಟರಿ ಜಿಲ್ಲೆ 3190ರ (ಬೆಂಗಳೂರು ದಕ್ಷಿಣ) ವತಿಯಿಂದ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಮಧ್ಯಾಹ್ನ 12 ಗಂಟೆಗೆ ಬನಶಂಕರಿ 2ನೇ ಹಂತದಲ್ಲಿರುವ ಮೆಂಟ್ ಆಸ್ಪತ್ರೆಯ ಸಭಾಂಗಣದಲ್ಲಿ ಉದ್ಘಾಟನೆ ನಡೆಯಲಿದೆ ಎಂದು ಪ್ರಕಟಣೆ ಹೇಳಿದೆ.

ಸುವರ್ಣ ಆರೋಗ್ಯ ಸೇವಾ ಟ್ರಸ್ಟ್, ಅಂಗವಿಕಲರಿಗೆ ಅಗತ್ಯ ಸಲಕರಣೆಗಳ ಖರೀದಿಗೆ ನೀಡುವ ಸಹಾಯ ಧನ ಯೋಜನೆಯ ನೆರವಿನೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ.

ರೋಟರಿ ಜಿಲ್ಲಾ ಗವರ್ನರ್ ಜಿತೇಂದ್ರ ಅನೇಜಾ ಉದ್ಘಾಟಿಸಲಿದ್ದಾರೆ. ರೋಟರಿ ಜಿಲ್ಲಾ ಚುನಾಯಿತ ಗವರ್ನರ್ ಉದಯಕುಮಾರ್ ಭಾಸ್ಕರ ಯೋಜನೆಯ ಸಲಹೆಗಾರರಾಗಿದ್ದಾರೆ. ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ಪ್ರದೀಪ್ ಕುಮಾರ್, ಇಎನ್‌ಟಿ ಶಸ್ತ್ರಚಿಕಿತ್ಸಕ ಡಾ.ಶ್ರೇಯಸ್ ಪಿ. ಪ್ರದೀಪ್, ನೀರವಂ ರಾಯಭಾರಿಗಳಾದ ಪ್ರಜ್ವಲ್ ದೇವರಾಜ್, ರಾಗಿಣಿ ಚಂದ್ರನ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಭೌತಿಕ, ಆನ್‌ಲೈನ್ ರೂಪದಲ್ಲಿ ಕರ್ನಾಟಕ ಚಿತ್ರಕಲಾ ಪರಿಷತ್ತು ಆಯೋಜನೆ

ಜ.8ಕ್ಕೆ ಚಿತ್ರಸಂತೆ, 4 ಲಕ್ಷ ಮಂದಿ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾವಿರಾರು ಕಲಾವಿದರ ಪ್ರತಿಭೆ ಅನಾವರಣಕ್ಕೆ ವೇದಿಕೆ ಕಲ್ಪಿಸುವ ಹಾಗೂ ಅವರು ರಚಿಸಿದ ಕಲಾಕೃತಿಗಳ ಮಾರಾಟಕ್ಕೆ ಅವಕಾಶ ಒದಗಿಸುವ ‘ಚಿತ್ರಸಂತೆ’ಯನ್ನು ಕರ್ನಾಟಕ ಚಿತ್ರಕಲಾ ಪರಿಷತ್ತು 2023ರ ಜ.8ರಂದು ಕುಮಾರಕೃಪಾ ರಸ್ತೆಯಲ್ಲಿ ಹಮ್ಮಿಕೊಂಡಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್, ‘20ನೇ ಚಿತ್ರಸಂತೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ. ಪರಿಷತ್ತಿನ ಕಲಾ ಗ್ಯಾಲರಿಗಳಲ್ಲಿ ಮೈಸೂರು ಸಾಂಪ್ರದಾಯಿಕ ಶೈಲಿಯ ಕಲಾಕೃತಿಗಳು, ತೊಗಲು ಬೊಂಬೆ ಕಲಾಕೃತಿಗಳು ಹಾಗೂ ಪ್ರಶಸ್ತಿಗೆ ಭಾಜನರಾದ ಕಲಾವಿದರ ಕಲಾಕೃತಿಗಳು ಪ್ರದರ್ಶನ ಕಾಣಲಿವೆ. ಚಿತ್ರಕಲಾ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಚಿತ್ರಸಂತೆ ನಡೆಯುವ ಸ್ಥಳದಲ್ಲಿ ದಿನವಿಡೀ ಕಲಾ ಪ್ರದರ್ಶನ ನೀಡಲಿದ್ದಾರೆ’ ಎಂದರು.

‘ಚಿತ್ರಸಂತೆಗೆ 4 ಲಕ್ಷ ಜನ ಭೇಟಿ ನೀಡುವ ನಿರೀಕ್ಷೆ ಇದೆ. ಮೈಸೂರು ಸಾಂಪ್ರದಾಯಿಕ, ರಾಜಸ್ಥಾನಿ, ಮಧುಬನಿ ಸೇರಿ ವಿವಿಧ ಶೈಲಿಯ ಕಲಾಕೃತಿಗಳು ಪ್ರದರ್ಶನ ಕಾಣಲಿವೆ. 19ನೇ ಚಿತ್ರಸಂತೆಯಲ್ಲಿ ₹ 3 ಕೋಟಿಗೂ ಅಧಿಕ ಮೊತ್ತದ ಕಲಾಕೃತಿಗಳು ಮಾರಾಟವಾಗಿದ್ದವು. ಉದಯೋನ್ಮುಖ ಕಲಾವಿದರಿಗೆ ಚಿತ್ರಸಂತೆ ತೆರೆದ ಶಾಲೆ ಎಂದು ಪ್ರಸಿದ್ಧಿ ಪಡೆದಿದೆ. 20ನೇ ಚಿತ್ರ ಸಂತೆಯಲ್ಲಿ ವಿವಿಧ ರಾಜ್ಯಗಳ ವೃತ್ತಿನಿರತ ಹಾಗೂ ಹವ್ಯಾಸಿ ಕಲಾವಿದರು ಪಾಲ್ಗೊಳ್ಳಲಿದ್ದಾರೆ’ ಎಂದು ಹೇಳಿದರು.

ನೇರ ಖರೀದಿಗೆ ಅವಕಾಶ: ‘ಹಿರಿಯ ಕಲಾವಿದರು ಹಾಗೂ ಅಂಗವಿಕಲರಿಗೆ ಪರಿಷತ್ತಿನ ಆವರಣದಲ್ಲಿಯೇ ಕಲಾಕೃತಿಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗುತ್ತದೆ. ಆವರಣದ ಒಳಗಡೆ ವಿವಿಧ ಬ್ಯಾಂಕ್‌ಗಳ ಎಟಿಎಂ ಯಂತ್ರಗಳು ಹಾಗೂ ಹೊರಗಡೆ ಸಂಚಾರಿ ಎಟಿಎಂ ಇರಲಿದೆ. ಈ ಚಿತ್ರಸಂತೆಯಲ್ಲಿ ₹ 100 ರಿಂದ ಲಕ್ಷಾಂತರ ರೂಪಾಯಿ ಮೌಲ್ಯದ ಕಲಾಕೃತಿಗಳು ಇರಲಿವೆ. ಕಲಾವಿದರಿಂದ ನೇರವಾಗಿ ಕಲಾಕೃತಿಗಳನ್ನು ಖರೀದಿಸಬಹುದು’ ಎಂದು ಬಿ.ಎಲ್. ಶಂಕರ್ ವಿವರಿಸಿದರು.

‘ಚಿತ್ರಸಂತೆಯಲ್ಲಿ ಸಾಮಾನ್ಯವಾಗಿ ಮೈಸೂರು ಸಾಂಪ್ರದಾಯಿಕ ಶೈಲಿ, ರಾಜಸ್ಥಾನಿ ಶೈಲಿ, ಮಧುಬನಿಯ ಶೈಲಿ, ತೈಲ ಮತ್ತು ಜಲ ವರ್ಣದ ಕಲಾಕೃತಿ ಗಳು ಲಭ್ಯವಿರುತ್ತವೆ. ಇವಲ್ಲದೆ, ಅಕ್ರಲಿಕ್, ಕೊಲಾಜ್, ಲಿಥೋಗ್ರಾಫ್ ಮೊದಲಾದ ಪ್ರಕಾರಗಳ ಕಲಾಕೃತಿಗಳು ದೊರೆಯುತ್ತವೆ. ವ್ಯಂಗ್ಯಚಿತ್ರಗಳ ಪ್ರದರ್ಶನಕ್ಕೂ ಅವಕಾಶ ಇರುತ್ತದೆ. ಕುಂಚ ಹಾಗೂ ಪೆನ್ಸಿಲ್‌ಗಳಿಂದ ಕಲಾರಸಿಕರ ಭಾವಚಿತ್ರಗಳನ್ನು ಸ್ಥಳದಲ್ಲೇ ರಚಿಸಿ ಕೊಡುವ ಕಲಾವಿದರು ಇರುತ್ತಾರೆ’ ಎಂದು ಹೇಳಿದರು.

1,500 ಕಲಾವಿದರು ಭಾಗಿ

ಬಿ.ಎಲ್. ಶಂಕರ್

‘ದೇಶದ ವಿವಿಧ ಭಾಗಗಳಿಂದ 1,500 ಕಲಾವಿದರು ಚಿತ್ರಸಂತೆಯಲ್ಲಿ ಭಾಗವಹಿಸಿ, ಕಲಾಕೃತಿಗಳನ್ನು ಪ್ರದರ್ಶಿಸಲಿದ್ದಾರೆ. ಕರ್ನಾಟಕದ ಜತೆಗೆ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಗೋವಾ, ಮಹಾರಾಷ್ಟ್ರ, ಪಂಜಾಬ್, ಪಶ್ಚಿಮ ಬಂಗಾಳ, ಒಡಿಶಾ ಸೇರಿ ವಿವಿಧ ರಾಜ್ಯಗಳ ಕಲಾವಿದರು ಪಾಲ್ಗೊಳ್ಳುತ್ತಿದ್ದಾರೆ’ ಎಂದು ಬಿ.ಎಲ್. ಶಂಕರ್ ಹೇಳಿದರು.

‘ಚಿತ್ರಸಂತೆಯಲ್ಲಿ ಕಲಾಕೃತಿ ಪ್ರದರ್ಶಿಸುವ ಕಲಾವಿದರ ಆನ್‌ಲೈನ್ ನೋಂದಣಿ ಆರಂಭವಾಗಿದೆ. ಸ್ಥಳೀಯ ಕಲಾವಿದರಿಗೆ ₹ 500 ಹಾಗೂ ಹೊರರಾಜ್ಯಗಳ ಕಲಾವಿದರಿಗೆ ₹ 1 ಸಾವಿರ ನೋಂದಣಿ ಶುಲ್ಕ ನಿಗದಿಪಡಿಸಲಾಗಿದೆ. ಡಿ.10ರವರೆಗೆ ಕಲಾವಿದರು ಅರ್ಜಿ ಸಲ್ಲಿಸಬಹುದು’ ಎಂದರು.

ಪ್ರಶಸ್ತಿ ಆಯ್ಕೆಗೆ ಸಮಿತಿ ರಚನೆ

‘ಚಿತ್ರಸಂತೆ ಅಂಗವಾಗಿ ಐವರು ಕಲಾವಿದರಿಗೆ ‘ಚಿತ್ರಕಲಾ ಸಮ್ಮಾನ್’ ಪ್ರಶಸ್ತಿ ನೀಡಲಾಗುತ್ತಿದೆ. ಈ ಪ್ರಶಸ್ತಿಗಳ ಆಯ್ಕೆಗೆ ಸಮಿತಿ ರಚಿಸಲಾಗಿದೆ. ‘ಪ್ರೊ.ಎಂ.ಎಸ್.ನಂಜುಂಡರಾವ್ ರಾಷ್ಟ್ರೀಯ ಪ್ರಶಸ್ತಿ’ ₹ 1 ಲಕ್ಷ ನಗದು ಒಳಗೊಂಡಿದೆ. ‘ಡಿ.ದೇವರಾಜ ಅರಸು ಪ್ರಶಸ್ತಿ’, ‘ವೈ.ಸುಬ್ರಹ್ಮಣ್ಯರಾಜು ಪ್ರಶಸ್ತಿ’, ‘ಎಂ.ಆರ್ಯಮೂರ್ತಿ ಪ್ರಶಸ್ತಿ’ ಮತ್ತು ‘ಎಚ್.ಕೆ.ಕೇಜ್ರಿವಾಲ್ ಪ್ರಶಸ್ತಿ’ಯನ್ನು ಕಲಾ ಸಾಧಕರಿಗೆ ನೀಡಲಾಗುತ್ತದೆ. ಈ ಪ್ರಶಸ್ತಿಗಳು ತಲಾ ₹ 50 ಸಾವಿರ ಮತ್ತು ಪ್ರಶಸ್ತಿ ಪತ್ರ ಒಳಗೊಂಡಿವೆ. 2023ರ ಜ.7ರಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು’ ಎಂದು ಬಿ.ಎಲ್. ಶಂಕರ್ ಹೇಳಿದರು.

ಸುದ್ದಿ 2 ನಿಮಿಷ

ಬೃಂದಾವನದಲ್ಲಿ ಚಿರತೆ: ಬೀದಿ ನಾಯಿಗಳ ಸೆರೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಕೆಆರ್‌ಎಸ್ ಅಣೆಕಟ್ಟೆಯ ಬೃಂದಾವನದಲ್ಲಿ ಆಗಾಗ ಕಾಣಿಸಿಕೊಳ್ಳುತ್ತಿರುವ ಚಿರತೆಯ ಸೆರೆಗೆ ಬೋನಿರಿಸಿ ಅದರೊಳಗೆ ನಾಯಿ ಕಟ್ಟಿದರೂ, ಚಿರತೆ ಸೆರೆ ಸಿಕ್ಕಿಲ್ಲ. ಇದರಿಂದ ಅರಣ್ಯ ಇಲಾಖೆ ಮತ್ತು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಕಂಗಾಲಾಗಿದ್ದಾರೆ.

ಚಿರತೆಗೆ ಆಹಾರ ದೊರೆಯದಂತೆ ಮಾಡಲು, ಬೃಂದಾವನ ಮತ್ತು ಆಸುಪಾಸಿನಲ್ಲಿ ನಡೆದ ಕಾರ್ಯಾಚರಣೆಯಲ್ಲಿ 20 ಬೀದಿ ನಾಯಿಗಳನ್ನು ಸೆರೆ ಹಿಡಿಯಲಾಗಿದೆ.

ಬೃಂದಾವನದ ಬಳಿ ಬೀದಿ ನಾಯಿಗಳು ಹೆಚ್ಚಿದ್ದು, ಚಿರತೆ ಅವುಗಳನ್ನು ಬೇಟೆಯಾಡಿ ಹೋಗುತ್ತಿದೆ.

ಹಾಗಾಗಿ ಬೋನಿನಲ್ಲಿ ಕಟ್ಟಿರುವ ನಾಯಿಯ ಬಳಿಗೆ ಬರುತ್ತಿಲ್ಲ. ಬೀದಿ ನಾಯಿಗಳು ಸಿಗದಿದ್ದರೆ ಚಿರತೆಯು ಆಹಾರಕ್ಕಾಗಿ ಬೋನಿಗೆ ಬೀಳಬಹುದು ಎಂಬ ಲೆಕ್ಕಾಚಾರ ಅಧಿಕಾರಿಗಳದ್ದಾಗಿದೆ.

ತಿಂಗಳಿನಿಂದ ಬೃಂದಾವನ ದಲ್ಲಿ ನಾಲ್ಕಾರು ಬಾರಿ ಕಾಣಿಸಿರುವ ಚಿರತೆ ಸೆರೆಗೆ 4 ಬೋನುಗಳನ್ನು ಇಡಲಾಗಿದೆ.

ರೋಜ್‌ಗಾರ್ ಮೇಳ: 217 ಯುವಕರಿಗೆ ನೇಮಕಾತಿ ಪತ್ರ

ಯಲಹಂಕ: 75ನೇ ಸ್ವಾತಂತ್ರ್ಯ ಅಮೃತಮಹೋತ್ಸವದ ಅಂಗವಾಗಿ ಕೇಂದ್ರ ಸರ್ಕಾರದ ರೋಜ್‌ಗಾರ್ ಯೋಜನೆಯಡಿಯಲ್ಲಿ ಇಲ್ಲಿನ ಎಸ್.ಟಿ.ಸಿ-ಭಾರತೀಯ ವಾಯುಪಡೆ ಕೇಂದ್ರದಲ್ಲಿ ಆಯೋಜಿಸಿದ್ದ ರೋಜ್‌ಗಾರ್ ಮೇಳದಲ್ಲಿ ವಿಡಿಯೊ ಕಾನ್ಫರೆನ್ಸ್ ಮೂಲಕ 217 ಯುವಕರಿಗೆ ನೇಮಕಾತಿ ಆದೇಶ ಪತ್ರಗಳನ್ನು ವಿತರಿಸಲಾಯಿತು.

ಈ ವೇಳೆ ಮಾತನಾಡಿದ ಕೇಂದ್ರ ಕಾರ್ಮಿಕ ಸಚಿವ ಭೂಪೇಂದ್ರ ಯಾದವ್, ‘ಕೇಂದ್ರ ಸರ್ಕಾರದ ರೋಜ್‌ಗಾರ್ ಯೋಜನೆಯಡಿಯಲ್ಲಿ 10 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಲಾಗಿದೆ. ಇದರ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ವಿಡಿಯೊ ಕಾನ್ಫರೆನ್ಸ್ ಮೂಲಕ ದೇಶದಾದ್ಯಂತ 71 ಸಾವಿರ ಯುವಕರಿಗೆ ನೇಮಕಾತಿ ಪತ್ರ ವಿತರಿಸಿದ್ದಾರೆ’ ಎಂದು ತಿಳಿಸಿದರು.

ಗಡಿಭದ್ರತಾ ಪಡೆಯ ಕೇಂದ್ರಗಳಲ್ಲಿ ಯುವಕರು ಮತ್ತು ಉದ್ಯೋಗಾಕಾಂಕ್ಷಿಗಳು, ಮೌಖಿಕ ಪರೀಕ್ಷೆ, ದೈಹಿಕ ಮತ್ತು ಆರೋಗ್ಯ ಸೇರಿ ವಿವಿಧ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಉದ್ಯೋಗಗಳಿಗೆ ನೇಮಕಗೊಂಡಿದ್ದಾರೆ. ಬಿ.ಎಸ್.ಎಫ್, ಎಚ್.ಎ.ಎಲ್, ಅಂಚೆ, ಕಂದಾಯ ಮತ್ತು ಬ್ಯಾಂಕಿಂಗ್ ವಿಭಾಗಗಳಲ್ಲಿ ಈ ಅಭ್ಯರ್ಥಿಗಳನ್ನು ಭರ್ತಿ ಮಾಡಲಾಗುವುದು ಎಂದರು.

ಭಾರತೀಯ ವಾಯುಪಡೆ ಕೇಂದ್ರದ ಐಜಿ ಜಾರ್ಜ್ ಮಂಜೂರನ್ ಅವರೂ ಇದ್ದರು.

ಡಿ. 1ರಿಂದ ‘ಸುಶಾಸನ ಮಾಸ’: ಅಶ್ವತ್ಥನಾರಾಯಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿವಂಗತ ಮಾಜಿ ಪ್ರಧಾನಿ ವಾಜಪೇಯಿಯವರ ಸ್ಮರಣಾರ್ಥವಾಗಿ ತಮ್ಮ ನೇತೃತ್ವದ ಉನ್ನತ ಶಿಕ್ಷಣ, ಐಟಿ-ಬಿಟಿ ಮತ್ತು ಕೌಶಲ್ಯಾಭಿವೃದ್ಧಿ ಹಾಗೂ ಜೀವನೋಪಾಯ ಇಲಾಖೆಗಳಲ್ಲಿ ಡಿ.1ರಿಂದ 'ಸುಶಾಸನ ಮಾಸ'ವನ್ನು ಆಚರಿಸಲಾಗುವುದು ಎಂದು ಸಚಿವ ಡಾ.ಸಿ ಎನ್ ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಆ ಮಾಸದಲ್ಲಿ ನಡೆಸಬೇಕಾದ ಕಾರ್ಯಕ್ರಮಗಳ ಕುರಿತು ಚರ್ಚಿಸಲು ಅವರು ಮೂರೂ ಇಲಾಖೆಗಳ ಉನ್ನತಾಧಿಕಾರಿಗಳ ಜತೆ ಗುರುವಾರ ಸಭೆ ನಡೆಸಿದರು.

ತಮ್ಮ ಇಲಾಖೆಗಳಲ್ಲಿನ ಹಲವು ಸುಧಾರಣಾ ಕ್ರಮಗಳನ್ನು ಇಡೀ ತಿಂಗಳು ಜನರಿಗೆ ತಿಳಿಸುವ ಸಲುವಾಗಿ ನಿರಂತರ ಕಾರ್ಯಕ್ರಮಗಳನ್ನು ಸುಶಾಸನ ಮಾಸದ ಸಂದರ್ಭದಲ್ಲಿ ಆಯೋಜಿಸಲಾಗುವುದು. ಡಿ.25ರಂದು ಸಮಾರೋಪ ಸಮಾರಂಭ ನಡೆಯಲಿದ್ದು, ಅಂದು ಮುಖ್ಯಮಂತ್ರಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಸಂಪೂರ್ಣವಾಗಿ ಹೊಸ ರೂಪ ನೀಡಲಾಗುವುದು. ಜತೆಗೆ ಕೌಶಲಾಭಿವೃದ್ಧಿ ಇಲಾಖೆಯ ಮೂಲಕ 10 ಸಾವಿರ ಜನರಿಗೆ ವಿವಿಧ ಸಂಸ್ಥೆಗಳಲ್ಲಿ ಉದ್ಯೋಗ ಕೊಡಿಸುವ ಸಂಬಂಧ ನೇಮಕಾತಿ ಪತ್ರಗಳನ್ನು ನೀಡಲಾಗುವುದು. ಹಾಗೆಯೇ, ಜಿಟಿಟಿಸಿ ಸುವರ್ಣ ಸಂಭ್ರಮದ ಅಂಗವಾಗಿ ಕಟ್ಟಿರುವ ನೂತನ ಕಟ್ಟಡವನ್ನು ಈ ಸಂದರ್ಭದಲ್ಲಿ ಲೋಕಾರ್ಪಣೆ ಮಾಡಲಾಗುವುದು. ತಾಂತ್ರಿಕ ಶಿಕ್ಷಣ ಇಲಾಖೆಗೆ ನೇಮಕಾತಿ ಮತ್ತು ವೃಂದ ನಿಯಮಗಳನ್ನು ಕೂಡ 15 ವರ್ಷಗಳ ನಂತರ ರೂಪಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಸುಶಾಸನ ಮಾಸಾಚರಣೆಯ ಅಂಗವಾಗಿ, ಉತ್ತಮ ವಿ.ವಿ.ಗಳು ಸೇರಿದಂತೆ ಹಲವು ವಿಭಾಗಗಳಲ್ಲಿ ಪ್ರಶಸ್ತಿಗಳನ್ನು ನೀಡುವ ಉದ್ದೇಶ ಇದೆ ಎಂದು ತಿಳಿಸಿ, ಇದಕ್ಕಾಗಿ ಸಿದ್ಧಗೊಳ್ಳುವಂತೆ ಅಧಿಕಾರಿಗಳಿಗೆ ಅವರು ಸೂಚಿಸಿದರು.

ಇದಲ್ಲದೆ, ಎಲ್ಲ ಕಾಲೇಜುಗಳಲ್ಲೂ ಎನ್‌ಇಪಿ ಮತ್ತು ಅದರ ಪ್ರಗತಿ ಕುರಿತು ಪ್ರಬಂಧ ಮತ್ತು ಚರ್ಚಾಸ್ಪರ್ಧೆಗಳನ್ನು ಆಯೋಜಿಸಲು ಸಚಿವರು ಸೂಚಿಸಿದರು. ರಾಜ್ಯದಲ್ಲಿ ಅಸ್ತಿತ್ವಕ್ಕೆ ಬರುತ್ತಿರುವ ಏಳು ಹೊಸ ವಿ.ವಿ.ಗಳಲ್ಲಿ ಆಗಬೇಕಿರುವ ಹುದ್ದೆಗಳ ನೇಮಕಾತಿಗೆ ಅನುಮೋದನೆ ಕೊಡಲಾಗುವುದು ಎಂದು ಅವರು ಹೇಳಿದರು.

ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ ತಿಮ್ಮೇಗೌಡ, ಐಟಿಬಿಟಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಮಣರೆಡ್ಡಿ, ಕೌಶಲ್ಯಾಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಪಿ.ಪ್ರದೀಪ, ಐಟಿಬಿಟಿ ನಿರ್ದೇಶಕಿ ಮೀನಾ ನಾಗರಾಜ, ಉದ್ಯೋಗ ಮತ್ತು ತರಬೇತಿ ಇಲಾಖೆ ಆಯುಕ್ತೆ ಜ್ಯೋತಿ, ಕಿಯೋನಿಕ್ಸ್ ವ್ಯವಸ್ಥಾಪಕ ನಿರ್ದೇಶಕ ರವಿ ಡಿ.ಚನ್ನಣ್ಣನವರ್, ಕೆಇಎ ಆಡಳಿತಾಧಿಕಾರಿ ಶಿವಕುಮಾರ ಅವರೂ ಇದ್ದರು.

‘ನನ್ನ ನಗರ ನನ್ನ ಬಜೆಟ್’ಗೆ ಚಾಲನೆ

ಬಿಬಿಎಂಪಿಯ 243 ವಾರ್ಡ್‌ಗಳಲ್ಲಿ ಸಾರ್ವಜನಿಕರ ಸಲಹೆ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ 2023-24ನೇ ಸಾಲಿನ ಆಯವ್ಯಯಕ್ಕೆ ಪೂರಕವಾಗಿ ಜನಾಗ್ರಹ ಸಂಸ್ಥೆ ಆರಂಭಿಸಿರುವ ‘ನನ್ನ ನಗರ ನನ್ನ ಬಜೆಟ್’ ಅಭಿಯಾನಕ್ಕೆ ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಮ್ ರಾಯಪುರ ಗುರುವಾರ ಚಾಲನೆ ನೀಡಿದರು.

‘ಮುಂದಿನ ಒಂದು ತಿಂಗಳು ಈ ಅಭಿಯಾನ ಎಲ್ಲ 243 ವಾರ್ಡ್‌ಗಳಲ್ಲಿ ಸಂಚರಿಸಲಿದೆ. ರಸ್ತೆ, ಪಾದಚಾರಿ ಮಾರ್ಗ, ಬೀದಿ ದೀಪ, ಘನತ್ಯಾಜ್ಯ ನಿರ್ವಹಣೆ ಹಾಗೂ ಮಳೆ ನೀರು ಕೊಯ್ಲಿನ ಬಗ್ಗೆ ನಾಗರಿಕರು ಸಲಹೆ ನೀಡಬಹುದು. ಆ ಸಲಹೆ ಹಾಗೂ ಅಭಿಪ್ರಾಯಗಳನ್ನು ಒಟ್ಟುಗೂಡಿಸಿ ಜನಾಗ್ರಹ ನಮಗೆ ಸಲ್ಲಿಸಲಿದೆ. ಬಜೆಟ್ ಸಂದರ್ಭದಲ್ಲಿ ಇವುಗಳನ್ನು ಪರಿಗಣಿಸಲಾಗುತ್ತದೆ’ ಎಂದು ಹೇಳಿದರು.

‘ಕಳೆದ ವರ್ಷದ ಆಯವ್ಯಯದಲ್ಲಿ 198 ವಾರ್ಡ್‌ಗಳ ಪೈಕಿ ಪ್ರತಿ ವಾರ್ಡ್‌ಗೆ ತಲಾ ₹1 ಕೋಟಿ ನಿಗದಿಪಡಿಸಲಾಗಿತ್ತು. ಅದನ್ನು ವಾರ್ಡ್ ಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳಿಗೆ ಹಣ ವ್ಯಯಿಸಿದ್ದು, ಅದಕ್ಕಾಗಿ ಈಗಾಗಲೇ ₹70 ಲಕ್ಷ ಬಿಡುಗಡೆ ಮಾಡಲಾಗಿದೆ. ಬಾಕಿ ₹30 ಲಕ್ಷ ರಸ್ತೆಗಳ ಗುಂಡಿ ಮುಚ್ಚಲು ವ್ಯಯಿಸಲಾಗುತ್ತಿದೆ’ ಎಂದರು.

‘ವಾರ್ಡ್‌ಗಳಿಗೆ ಇನ್ನೂ ಹೆಚ್ಚಿನ ಅನುದಾನ ಬಿಡುಗಡೆಗೊಳಿಸಬೇಕೆಂಬ ಒತ್ತಾಯವಿದೆ. ಅದನ್ನು ಪರಿಶೀಲಿಸಿ ಪ್ರತಿ ವಾರ್ಡ್‌ನಲ್ಲೂ ಆಗಬೇಕಿರುವ ಸ್ಥಳೀಯ ಕಾಮಗಾರಿಗಳಿಗೆ ಹೆಚ್ಚಿನ ಅನುದಾನವನ್ನು ಬಿಡುಗಡೆಗೊಳಿಸುವ ಆಲೋಚನೆಯಿದೆ. ಎಲ್ಲವನ್ನೂ ಪರಿಶೀಲಿಸಿ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುವುದು’ ಎಂದು ತಿಳಿಸಿದರು.

‘ನನ್ನ ನಗರ ನನ್ನ ಬಜೆಟ್’ ಅಭಿಯಾನಕ್ಕೆ ನಾಗರಿಕರು http://www.mycitymybudget.in ಮೂಲಕವೂ ಸಲಹೆ ನೀಡಬಹುದಾಗಿದೆ.

ಜನಾಗ್ರಹ ಸಂಸ್ಥೆ ನಾಗರಿಕ ಭಾಗವಹಿಸುವಿಕೆ ಯೋಜನಾ ಮುಖ್ಯಸ್ಥ ಸಂತೋಷ್ ನರಗುಂದ, ಬಿಎಎಫ್, ಬಿ-ಪ್ಯಾಕ್, ವೈಟ್‌ಫೀಲ್ಡ್ ರೈಸರ್ಜ್, ವಾರ್ಡ್ ಸಮಿತಿ ಬಳಗ ಸೇರಿ ಇನ್ನಿತರೆ ಎನ್.ಜಿ.ಒ ಸಂಸ್ಥೆಗಳವರು ಉಪಸ್ಥಿತರಿದ್ದರು.

‘ನನ್ನ ನಗರ ನನ್ನ ಬಜೆಟ್’ ಅಭಿಯಾನದ ಏಳನೇ ಆವೃತ್ತಿಗೆ ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಮ್ ರಾಯಪುರ ಗುರುವಾರ ಚಾಲನೆ ನೀಡಿದರು. ಜನಾಗ್ರಹದ ಮಹಾಲಕ್ಷ್ಮಿ.ಬಿ, ಸಂತೋಷ್ ನರಗುಂದ, ಲಲಿತಾಂಬ, ಪಾರ್ವತಿ ಇದ್ದಾರೆ –ಪ್ರಜಾವಾಣಿ ಚಿತ್ರ

ಕೆಪಿಎಸ್‌ಸಿ: ಗೋಪ್ಯ, ಐಟಿ ಕೋಶಕ್ಕೆ 34 ಹುದ್ದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಹುದ್ದೆಗಳ ನೇಮಕಾತಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಾವಿತ್ರ್ಯತೆ, ಗೋಪ್ಯ, ಪಾರದರ್ಶಕತೆ ಕಾಪಾಡುವ ಜೊತೆಗೆ, ತ್ವರಿತವಾಗಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಗೋಪ್ಯ ವಿಭಾಗ ಮತ್ತು ಐಟಿ (ಮಾಹಿತಿ ತಂತ್ರಜ್ಞಾನ) ಕೋಶವನ್ನು ಬಲಪಡಿಸಬೇಕೆಂಬ ಕೆಪಿಎಸ್‌ಸಿ ಪ್ರಸ್ತಾವಕ್ಕೆ ರಾಜ್ಯ ಸರ್ಕಾರ ಅನುಮೋದನೆ ನೀಡಿದೆ.

ಈಗಾಗಲೇ ಮಂಜೂರಾಗಿರುವ ಒಂದು ಜಂಟಿ ಪರೀಕ್ಷಾ ನಿಯಂತ್ರಕರ ಅಧೀನದಲ್ಲಿ ಎ, ಬಿ ಮತ್ತು ಸಿ ಎಂದು ಮೂರು ಹೆಚ್ಚುವರಿ ಗೋಪ್ಯ ಶಾಖೆಗಳಿಗೆ ಒಟ್ಟು 27 ಮತ್ತು ಹೊಸತಾಗಿ ಸೃಜಿಸುವ ಐಟಿ ಕೋಶಕ್ಕೆ 7 ಸೇರಿ ಒಟ್ಟು 34 ಹುದ್ದೆಗಳನ್ನು ಸೃಜಿಸಲು ಆರ್ಥಿಕ ಇಲಾಖೆ ಒಪ್ಪಿಗೆ ನೀಡಿದೆ.

‘ಹೊಸತಾಗಿ ಸೃಜಿಸಿರುವ ಐಟಿ ಕೋಶವನ್ನು ಬಳಸಿಕೊಂಡು ಮಾನವ ಹಸ್ತಕ್ಷೇಪವನ್ನು ಆದಷ್ಟು ಕಡಿಮೆ ಮಾಡಬೇಕು. ಕೆಪಿಎಸ್‌ಸಿಯಲ್ಲಿ ಇ–ಆಫೀಸ್ ಅಳವಡಿಸಿಕೊಂಡು, ಕೆಲಸದ ಸಾಮರ್ಥ್ಯದ ಮೂಲಕ ಹೆಚ್ಚಿನ ಪ್ರತಿಫಲ ಪಡೆಯಬೇಕು. ಈಗಿರುವ ಕೆಲಸಗಳ ಹಂತಗಳನ್ನು ಕಡಿತಗೊಳಿಸಿ, ಪರಿಶೀಲನಾ ಹಂತಗಳನ್ನು ಸರಳಗೊಳಿಸಬೇಕು’ ಎಂದೂ ಕೆಪಿಎಸ್‌ಸಿಗೆ ಸರ್ಕಾರ ಸೂಚಿಸಿದೆ.

ಕೆಪಿಎಸ್‌ಸಿಯು ಸುಧಾರಣೆಗೆ ಈ ಹಿಂದೆ ರಾಜ್ಯ ಸರ್ಕಾರ ರಚಿಸಿದ್ದ ಪಿ.ಸಿ. ಹೋಟಾ ಸಮಿತಿ, ಅಲ್ಲಿನ ಗಣಕ ಕೇಂದ್ರವನ್ನು ಬಲಪಡಿಸಬೇಕೆಂದು ಶಿಫಾರಸು ಮಾಡಿತ್ತು. ಅದರಂತೆ 2018ರಲ್ಲಿಯೇ ಸರ್ಕಾರಕ್ಕೆ ಕೆಪಿಎಸ್‌ಸಿ ಕಾರ್ಯದರ್ಶಿ ಪ್ರಸ್ತಾವ ಸಲ್ಲಿಸಿದ್ದರು. ಇತ್ತೀಚೆಗೆ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡಿದ್ದ ವಿಕಾಸ್ ಕಿಶೋರ್ ಸುರಳ್ಕರ್ ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸಿದ್ದರು.

ಮಲ್ಲತ್ತಹಳ್ಳಿ ಕೆರೆ ತೂಗುಸೇತುವೆ ಕಾಮಗಾರಿ: ತಾತ್ಕಾಲಿಕ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದ ಮಲ್ಲತ್ತಹಳ್ಳಿ ಕೆರೆ ಪ್ರದೇಶದಲ್ಲಿ ಮನರಂಜನಾ ಉದ್ಯಾನ ನಿರ್ಮಿಸುವ ಉದ್ದೇಶದಿಂದ ಕೈಗೊಂಡಿದ್ದ ಗಾಜಿನ ಮನೆ, ತೂಗು ಸೇತುವೆ ಮತ್ತು ಮಕ್ಕಳ ಆಟದ ರೈಲಿಗೆ ಸೇತುವೆ ನಿರ್ಮಾಣ ಕಾಮಗಾರಿಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗುವುದು’ ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹೈಕೋರ್ಟ್‌ಗೆ ತಿಳಿಸಿದೆ.

ನಗರದ ಕೆರೆಗಳ ಸಂರಕ್ಷಣೆ ಮತ್ತು ಪುನಶ್ಚೇತನಕ್ಕೆ ಸಂಬಂಧಿಸಿದಂತೆ ಸಿಟಿ ಜನ್ ಆ್ಯಕ್ಷನ್ ಗ್ರೂಪ್ ಮತ್ತು ವಕೀಲೆ ಗೀತಾ ಮಿಶ್ರಾ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಹೆಚ್ಚುವರಿ ಸರ್ಕಾರಿ ವಕೀಲ ಲಕ್ಷ್ಮಿನಾರಾಯಣ ಅವರು, ‘ಕಾಮಗಾರಿಗಾಗಿ ಈಗಾಗಲೇ ಟೆಂಡರ್ ಕರೆಯಲಾಗಿದೆ. ಆದಾಗ್ಯೂ, ಕೋರ್ಟ್ ಅನುಮತಿ ಪಡೆದೇ ಮುಂದಿನ ಹೆಜ್ಜೆ ಇರಿಸಲಾಗುವುದು. ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ -2014ರ ಕಲಂ 6ರ ಅನುಸಾರ ಬಫರ್ ಝೋನ್ ವ್ಯಾಪ್ತಿಯಲ್ಲಿ ಬರದಂತೆ ನೋಡಿಕೊಂಡು ಕಾಮಗಾರಿ ಮುಂದುವರಿಸುವ ಬಗ್ಗೆ ಪರಿಶೀಲಿಸಲಾಗುವುದು’ ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಮಧ್ಯಂತರ ಅರ್ಜಿ ವಿಲೇವಾರಿ ಮಾಡಿ ಆದೇಶಿಸಿತು. ಅಂತೆಯೇ, ಸುಬ್ರಹ್ಮಣ್ಯ ಕೆರೆ ಪ್ರದೇಶದ ಒತ್ತುವರಿ ತೆರವಿಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರಿಸುವಂತೆ ಸೂಚಿಸಿ ವಿಚಾರಣೆಯನ್ನು ಒಂದು ವಾರ ಕಾಲ ಮುಂದೂಡಿತು.

ನಗರದಲ್ಲಿ ಇಂದು

ವಿದ್ಯುತ್ ಚಾಲಿತ ವಾಹನಗಳ ವಿನ್ಯಾಸ ಹಾಗೂ ಸುರಕ್ಷತೆ ಬಗ್ಗೆ ಕಾರ್ಯಾಗಾರ: ಮುಖ್ಯ ಅತಿಥಿಗಳು: ಎಂ.ಜಿ. ಬಾಲಕೃಷ್ಣ, ಎಂ. ಲಕ್ಷ್ಮಣ, ಟಿ.ಜೆ. ರಾಮಮೂರ್ತಿ, ಆಯೋಜನೆ: ದಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್, ಸ್ಥಳ: ಎಂ.ವಿ. ಸಭಾಂಗಣ, ಐಇಐ, ನಂ.3, ಡಾ.ಬಿ. ಆರ್. ಅಂಬೇಡ್ಕರ್ ವೀಧಿ, ಬೆಳಿಗ್ಗೆ 9.45

‘ಹೊಸ ತಂತ್ರಜ್ಞಾನದ ಮೂಲಕ ವಹಿವಾಟು ಸ್ಥಿತ್ಯಂತರ’ ವಿಚಾರಸಂಕಿರಣ: ಮುಖ್ಯ ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ತೇಜಸ್ವಿ ಸೂರ್ಯ, ಪ್ರೊ.ಎನ್.ಆರ್. ಶೆಟ್ಟಿ, ರೋಹಿತ್ ಪೂಂಜಾ, ಎಚ್.ಸಿ. ನಾಗರಾಜ್, ಹಸೀಬ್ ಜೆ. ಅಹಮದ್, ಆಯೋಜನೆ ಹಾಗೂ ಸ್ಥಳ: ನಿಟ್ಟೆ ಮೀನಾಕ್ಷಿ ತಾಂತ್ರಿಕ ವಿಶ್ವವಿದ್ಯಾಲಯ, ಯಲಹಂಕ, ಬೆಳಿಗ್ಗೆ 10

ಸಂಕಲ್ಪ ಸಮಾವೇಶ: ಉದ್ಘಾಟನೆ: ಸತೀಶ್ ಜಾರಕಿಹೊಳಿ, ಸಾನ್ನಿಧ್ಯ: ಜ್ಞಾನಪ್ರಕಾಶ್ ಬಂತೇಜಿ, ಮಾಲಾರ್ಪಣೆ: ಬಂಜಗೆರೆ ಜಯಪ್ರಕಾಶ್, ಅಧ್ಯಕ್ಷತೆ: ಪರಶುರಾಮ ನೀಲನಾಯಕ್, ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸ್ಥಳ: ಪುರಭವನ, ಬೆಳಿಗ್ಗೆ 11

ರಾಷ್ಟ್ರ ಮಟ್ಟದ ಹ್ಯಾಕಥಾನ್: ಮುಖ್ಯ ಅತಿಥಿ: ಕೇನ್ ಹೆನ್ರಿ, ಗೌರವ ಅತಿಥಿಗಳು: ಸತೀಶ್ ಗುರುಮೂರ್ತಿ, ಎಂ.ಆರ್. ಸೀತಾರಾಮ್, ಉಪಸ್ಥಿತಿ: ಎಂ.ಆರ್. ರಾಮಯ್ಯ, ಬಿ.ಎಸ್. ರಾಮಪ್ರಸಾದ್, ಆಯೋಜನೆ ಹಾಗೂ ಸ್ಥಳ: ಇಎಸ್‌ಬಿ ಸೆಮಿನಾರ್ ಹಾಲ್, ಎಂ.ಎಸ್. ರಾಮಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಸಂಜೆ 4

‘ಗುಂಡು ಬಳಗ’ ಸಾಮಾಜಿಕ ನಾಟಕ: ಉಪಸ್ಥಿತಿ: ಶ್ರೀನಾಥ್, ರಾಮಣ್ಣ, ಸುರೇಶ್, ಗಜೇಂದ್ರ,

ರಂಗಪ್ರವೇಶ: ಧೃತಿ ಉಪಾಧ್ಯಾಯ, ಅತಿಥಿಗಳು: ಉಷಾ ದಾತಾರ್, ವೈಜಯಂತಿ ಕಾಶಿ, ಸುಮಾ ಜಗದೀಶ್, ಆಯೋಜನೆ: ಲೀಲಾ ನಾಟ್ಯಕಲಾ ವೃಂದ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5.30

ಧೃತಿ ಉಪಾಧ್ಯಾಯ

ಭರತನಾಟ್ಯ ರಂಗಪ್ರವೇಶ: ದಿಶಾ ಮಂಜುನಾಥ್, ಮುಖ್ಯ ಅತಿಥಿಗಳು: ರೋಹಿಣಿ ಸಿಂಧೂರಿ, ರಾಜೇಶ್ವರಿ ಎಚ್. ಆರ್., ಸಂಜಯ್ ಶಾಂತಾರಾಮ್, ಆಯೋಜನೆ: ನೃತ್ಯ ದಿಶಾ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 5.30


ದಿಶಾ ಮಂಜುನಾಥ್

ಆಯೋಜನೆ: ಪಾಪು ಕಲಾವಿದರ ಸಂಘ, ಸ್ಥಳ: ಲಾಸ್ಯರಂಜಿನಿ ಕಲಾಕ್ಷೇತ್ರ, ಲಿಂಗರಾಜಪುರ, ಸಂಜೆ 4.30

ತೀ.ನಂ.ಶ್ರೀ. ವಿಶೇಷ ದತ್ತಿ ಉಪನ್ಯಾಸ: ವಿಷಯ: ತೀ.ನಂ.ಶ್ರೀ. ಅವರ ಲಲಿತ ಪ್ರಬಂಧಗಳು, ಉಪನ್ಯಾಸಕ: ಪಿ. ನಂಜುಂಡ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಸಂಜೆ 5

ಪುಸ್ತಕ ಬಿಡುಗಡೆ: ‘ಭಾರತದ ಸಮಾಜ ಮತ್ತು ಮತ ಸುಧಾರಕರು’ ಪುಸ್ತಕ ಲೋಕಾರ್ಪಣೆ: ಪ್ರೊ.ಎಸ್. ಜಿ. ಸಿದ್ಧರಾಮಯ್ಯ, ಪುಸ್ತಕದ ಬಗ್ಗೆ: ಪ್ರೊ.ಎನ್. ಶೇಕ್ ಮಸ್ತಾನ್, ಅತಿಥಿ: ಎನ್. ಗಾಯತ್ರಿ, ಅಧ್ಯಕ್ಷತೆ: ಸಿ.ಕೆ. ರಾಮೇಗೌಡ, ಆಯೋಜನೆ: ಶಾಂತವೇರಿ ಗೋಪಾಲಗೌಡ ವಿಚಾರ ಸಂಸ್ಥೆ, ಚಿರಂತ್ ಪ್ರಕಾಶನ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.15

‘ಯಕ್ಷ ಕರ್ಣಭಾರ’ ಯಕ್ಷಗಾನ ಪ್ರದರ್ಶನ: ಉದ್ಘಾಟನೆ: ಆರ್. ಶ್ರೀಧರ್, ಅಧ್ಯಕ್ಷತೆ: ರವೀಂದ್ರ ಭಟ್ಟ, ಮುಖ್ಯ ಅತಿಥಿಗಳು: ಬೇಗಾರ್ ಶಿವಕುಮಾರ್, ಸೌಮ್ಯಾ ಪ್ರವೀಣ್, ಶ್ರೀನಿವಾಸ ನಾಯರಿ, ಗೋಪಾಲಕೃಷ್ಣ ನಾಯರಿ, ಆಯೋಜನೆ: ಸಮಸ್ತರು, ಸ್ಥಳ: ಸಂಸ ಬಯಲು ರಂಗಸ್ಥಳ, ರವೀಂದ್ರ ಕಲಾಕ್ಷೇತ್ರದ ಹಿಂಭಾಗ, ಸಂಜೆ 6.30

ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,
ಅಗ್ರಹಾರ ಟ್ಯಾಂಕ್‌ಬಂಡ ರಸ್ತೆ. ಬಿನ್ನಿಪೇಟೆ, ಬೆಂಗಳೂರು–560023
ಜಿಲ್ಲೆ: ಬೆಂಗಳೂರು ರಾಜ್ಯ: ಕರ್ನಾಟಕ
ಇ–ಮೇಲ್: apmcfv@rediffmail.com ದೂರವಾಣಿ: 080–26704150, 26707575
ಸಂ: ಹಹೂಮತ(ವಿ)ಕೃಉಮಾಸ(ಬೆಂ)/1312/2022–23 ದಿನಾಂಕ: 24.11.2022

ಟೆಂಡರ್–ಕಂ–ಬಹಿರಂಗ ಹರಾಜು ಪ್ರಕಟಣೆ

ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು. ಇವರ ಪತ್ರ ಸಂಖ್ಯೆ: ಕೃಮಾಇ/ಅಭಿವಿ–1/ಲೀಕಂಸೇ/309/2022 ದಿ:21–10–2022ರನ್ವಯ ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸಿಂಗೇನ ಅಗ್ರಹಾರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿನ **“ಹೆಚ್”** ಬ್ಲಾಕ್‌ನಲ್ಲಿ ಖಾಲಿ ಇರುವ ಮೂಲೆ **ನಿವೇಶನ ಸಂಖ್ಯೆ: 10ನ್ನು (ವಿಸ್ತೀರ್ಣ 1030.96 ಚದರ ಅಡಿ)** ಮಾನ್ಯ ನಿರ್ದೇಶಕರು ನಿವೇಶನಕ್ಕೆ ನಿಗಧಿಪಡಿಸಿರುವ ದರಗಳನ್ವಯ ಲೀಸ್–ಕಂ–ಸೇಲ್ ಮೌಲ್ಯ **ರೂ.18,55,728/–** ಗಳಿಗೆ ಟೆಂಡರ್–ಕಂ–ಬಹಿರಂಗ ಹರಾಜಿನ ಮೂಲಕ ಲೀಸ್–ಕಂ–ಸೇಲ್ ಆಧಾರದ ಮೇಲೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಾವಳಿ 2004 ರನ್ವಯ ಹಂಚಿಕೆ ಮಾಡಲು ಉದ್ದೇಶಿಸಿರುವುದರಿಂದ, ಸಮಿತಿಯ ಸಿಂಗೇನ ಅಗ್ರಹಾರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಲೈಸನ್ಸ್ ಪಡೆದು ಅಧಿಸೂಚಿಸಲ್ಪಟ್ಟ ವಿವಿಧ ಹಣ್ಣುಗಳ ವ್ಯಾಪಾರ ವಹಿವಾಟು ನಡೆಸುತ್ತಿರುವ ಪೇಟೆಕಾರ್ಯಕರ್ತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಷರತ್ತು ಮತ್ತು ನಿಬಂಧನೆಗಳು:–

1. ಟೆಂಡರ್–ಕಂ–ಬಹಿರಂಗ ಹರಾಜು ಮೂಲಕ ಹಂಚಿಕೆ ಪಡೆಯಲು ಇಚ್ಛಿಸುವ ಲೈಸನ್ಸ್ ಹೊಂದಿರುವ ಪೇಟೆಕಾರ್ಯಕರ್ತರು **ದಿನಾಂಕ: 06–12–2022 ರಂದು ಸಂಜೆ 4.30** ಗಂಟೆಯೊಳಗಾಗಿ ನೋಂದಣಿ ಶುಲ್ಕ ರೂ.500/– ಗಳಿಗೆ (ರೂ. ಐದು ನೂರು ಮಾತ್ರ) **(ಮರು ಪಾವತಿಸಲಾಗುವುದಿಲ್ಲ)** ಕಾರ್ಯದರ್ಶಿ, ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ, ಬೆಂಗಳೂರು. ಇವರ ಹೆಸರಿಗೆ ಡಿ.ಡಿ. ಪಡೆದು ಈ ಕಛೇರಿಗೆ ಸಲ್ಲಿಸಿ ನೊಂದಣಿ ಮಾಡಿಕೊಳ್ಳತಕ್ಕದ್ದು. ಈ ಹಿಂದೆ ಸಮಿತಿಯಲ್ಲಿ ನೋಂದಾಯಿಸಿಕೊಂಡವರು ಮತ್ತೊಮ್ಮೆ ನೋಂದಾಯಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ.
2. ನೊಂದಾಯಿತ ಅರ್ಹ ಪೇಟೆಕಾರ್ಯಕರ್ತರು ಶೇ.18 ರಂತೆ ಜಿ.ಎಸ್.ಟಿ. ಸೇರಿ ಒಟ್ಟು ಅರ್ಜಿ ಶುಲ್ಕ ರೂ.1180–00 (ರೂ. ಒಂದು ಸಾವಿರದ ನೂರ ಎಂಬತ್ತು ಮಾತ್ರ) ಗಳನ್ನು **(ಮರು ಪಾವತಿಸಲಾಗುವುದಿಲ್ಲ)** ಕಾರ್ಯದರ್ಶಿ, ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ, ಬೆಂಗಳೂರು. ಇವರ ಹೆಸರಿಗೆ ಡಿ.ಡಿ. ಪಡೆದು ಈ ಕಛೇರಿಗೆ ಸಲ್ಲಿಸಿ ನಮೂನೆ–IIIನ್ನು ಪಡೆಯತಕ್ಕದ್ದು.
3. ಭರ್ತಿ ಮಾಡಿದ ನಮೂನೆ–IIIರೊಂದಿಗೆ ಹಾಗೂ ನಿವೇಶನ ಮೌಲ್ಯದ ಶೇ.25 ರಷ್ಟು ಮುಂಗಡ ಮೊತ್ತ ರೂ.**4,63,932/–** ಗಳನ್ನು ಕಾರ್ಯದರ್ಶಿ, ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ, ಬೆಂಗಳೂರು. ಇವರ ಹೆಸರಿಗೆ ಡಿ.ಡಿ. ಪಡೆದು ಸದರಿ ಡಿ.ಡಿ. ಹಾಗೂ ನಿಗಧಿ ಪಡಿಸಿದ ದಾಖಲಾತಿಗಳನ್ನು ಲಗತ್ತಿಸಿ ಅರ್ಜಿ ಸಲ್ಲಿಸಲು ಕೊನೆಯ **ದಿ: 12–12–2022 ರಂದು ಮಧ್ಯಾಹ್ನ 12.30** ಗಂಟೆಯವರೆಗೆ.
4. **ದಿ: 12–12–2022 ರಂದು ಸಾಯಂಕಾಲ 3.00 ಗಂಟೆಗೆ.** ಟೆಂಡರ್–ಕಂ–ಬಹಿರಂಗ ಹರಾಜು ಪ್ರಕ್ರಿಯೆಯು ಬಿನ್ನಿಪೇಟೆ ಆಡಳಿತ ಕಛೇರಿಯಲ್ಲಿ ನಡೆಸಿ, ನಂತರ ಟೆಂಡರ್ ತೆರೆಯಲಾಗುವುದು.
5. ಯಾವುದೇ ಕಾರಣ ನೀಡದೇ ಟೆಂಡರ್‌ನ್ನು ಪರಿಗಣಿಸುವ/ರದ್ದುಗೊಳಿಸುವ/ತಿರಸ್ಕರಿಸುವ ಮತ್ತು ಟೆಂಡರ್ ದಿನಾಂಕವನ್ನು ಬದಲಾಯಿಸುವ ಹಕ್ಕನ್ನು ಈ ಸಮಿತಿ ಕಾಯ್ದಿರಿಸಿಕೊಂಡಿದೆ.

ಹೆಚ್ಚಿನ ವಿವರಗಳನ್ನು ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ, ಬೆಂಗಳೂರು. ಇಲ್ಲಿ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯದರ್ಶಿ | ವಾಪಾಸಂಇ/ವಾಪ್ರ/3233/2022–23 | ಸಹಿ/– ಆಡಳಿತಾಧಿಕಾರಿಗಳು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗಾಂಧಿನಗರ ವಿಭಾಗ, ಬೃಬೆಂಮಪಾ ಸಂಕೀರ್ಣ, ಉಪ್ಪಾರಪೇಟೆ ಪೊಲೀಸ್ ಠಾಣೆ ಹಿಂಭಾಗ, ಬೆಂಗಳೂರು–560009. .
ಸಂಖ್ಯೆ: ಕಾಪಾಅ/ಗಾಂಧಿ/ಇ–ಪ್ರೊಕ್/14/2022–23 ದಿನಾಂಕ: 24–11–2022

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
ಅಲ್ಪಾವಧಿ ಟೆಂಡರ್ ಪ್ರಕಟಣೆ : ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ ಇವರು ಬೃಬೆಂಮಪಾಲಿಕೆ ಆಯುಕ್ತರವರ ಪರವಾಗಿ ಬಿಬಿಎಂಪಿ/ಕೆಪಿಡಬ್ಲ್ಯೂಡಿ/ಸಿಪಿಡಬ್ಲ್ಯೂಡಿ/ರೈಲ್ವೇಸ್/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದಾದರೂ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ನೋಂದಾಯಿತರಾದ ಅರ್ಹ ದರ್ಜೆ–I ಗುತ್ತಿಗೆದಾರರಿಂದ ಕೆಳಗಿನ ಕೋಷ್ಟಕದಲ್ಲಿ ತಿಳಿಸಲಾದ ಕೆಲಸಕ್ಕೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಬಿಡ್‌ಗಳನ್ನು ದ್ವಿಲಕೋಟೆ ಪದ್ಧತಿಯಲ್ಲಿ ಕಲಂ–1.1 ರ ಅನ್ವಯ ಸೂಚನೆ ಅಡಿಯಲ್ಲಿ ನೀಡಲಾದ ವಿವರಗಳನ್ನು ಹೊಂದಿರುವ ತಾಂತ್ರಿಕ ಬಿಡ್ ಮತ್ತು ಹಣಕಾಸು ಬಿಡ್ ಸಲ್ಲಿಸತಕ್ಕದ್ದು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ https://eproc.karnataka.gov.in ಮೂಲಕ ಪಡೆದು ಸಲ್ಲಿಸಬಹುದು. ಟೆಂಡರ್‌ದಾರರು ಗುತ್ತಿಗೆ ಪಡೆಯಲು ಅರ್ಹತೆಗಾಗಿ ಕಲಂ–3 ರಲ್ಲಿ ಟೆಂಡರ್‌ದಾರರಿಗಾಗಿ ಸೂಚಿಸಲಾದ ಕನಿಷ್ಠ ಅರ್ಹತಾ ಅಗತ್ಯಗಳನ್ನು ಗಮನಿಸಬೇಕಾಗಿ ಸಲಹೆ ನೀಡಲಾಗಿದೆ. (ಸ್ಟಾಂಡರ್ಡ್ ಟೆಂಡರ್ ದಾಖಲಾತಿ – ಕೆಡಬ್ಲ್ಯೂ4).

ಕ್ರಮ ಸಂಖ್ಯೆ	ಕೆಲಸದ ಹೆಸರು	ಇಎಂಡಿ (ರೂ. ಲಕ್ಷಗಳಲ್ಲಿ)	ಟೆಂಡರ್ ಫಾರಂ ಬೆಲೆ (ರೂ. ಹಿಂದಿರುಗಿಸಲಾಗುವುದಿಲ್ಲ)
1.	ವಾರ್ಡ್ ಸಂಖ್ಯೆ–109 ರ ಹಳೆ ತರಗುಪೇಟೆ ಮುಖ್ಯ ರಸ್ತೆಯ ಹಾಗೂ ಅಡ್ಡ ರಸ್ತೆಗಳಿಗೆ ಸಿಸಿ ರಸ್ತೆ ಒದಗಿಸುವುದು ಮತ್ತು ಪಾದಚಾರಿ ಕಲ್ವರ್ಟ್ ಚರಂಡಿಗಳ ಕಾಮಗಾರಿಗಳು.	3.50	ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ದರ್ಜೆ–I ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು

ಪೂರ್ಣಗೊಳಿಸಲು ಕಾಲಾವಧಿ : 6 ತಿಂಗಳು

ವೇಳಾಪಟ್ಟಿ: 1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ **03/12/2022** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮೂಲಕ **12/12/2022 ರಂದು 16.00 ಗಂಟೆಗೆ** ಅಥವಾ ಮುಂಚಿತವಾಗಿ ಸಲ್ಲಿಸಬೇಕು ಮತ್ತು ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. 3) ಬಿಡ್ ಪೂರ್ವ ಸಭೆಯನ್ನು **09/12/2022 ರಂದು 11.00 ಗಂಟೆಗೆ** ಮುಖ್ಯ ಅಭಿಯಂತರರು (ಪಶ್ಚಿಮ), ಭಾಷ್ಯಂ ಉದ್ಯಾನವನ, ಶೇಷಾದ್ರಿಪುರಂ, ಬೆಂಗಳೂರು ಇವರ ಕಛೇರಿಯಲ್ಲಿ ಬಿಡ್ಡಿಂಗ್ ದಾಖಲೆಗಳಲ್ಲಿ ನೀಡಲಾದ “ಟೆಂಡರ್‌ದಾರರಿಗೆ ಸೂಚನೆಗೆ” ಸಂಬಂಧಿಸಿದಂತೆ ಯಾವುದೇ ಹಂತದಲ್ಲಿ ಉದ್ಭವಿಸಬಹುದಾದ ಯಾವುದೇ ಸಮಸ್ಯೆಗಳಿಗೆ ಸ್ಪಷ್ಟತೆ ಹಾಗೂ ಯಾವುದೇ ವಿಷಯಗಳ ಬಗ್ಗೆ ಪ್ರಶ್ನೆಗಳಿಗೆ ಉತ್ತರಿಸಲು ಏರ್ಪಡಿಸಲಾಗಿದೆ. 4) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗದ ಇವರ ಕಛೇರಿಯಲ್ಲಿ **14/12/2022 ರಂದು 12.30 ಗಂಟೆಗೆ** ವೆಬ್‌ಸೈಟ್ https://eproc.karnataka.gov.in ಮೂಲಕ ತೆರೆಯಲಾಗುವುದು.

ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ಮೂಲಕ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ

ನೈಋತ್ಯ ರೈಲ್ವೆ
ಇ–ಟೆಂಡರ್ ಸೂಚನೆ ಸಂ.
CAO/CN/BNC/EPC/74/2022
ದಿನಾಂಕ: 14–09–2022 ಕ್ಕೆ ತಿದ್ದುಪಡಿ
ಮೇಲೆ ತಿಳಿಸಿರುವ ಟೆಂಡರು ಸೂಚನೆಯಲ್ಲಿ ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕವು 12.12.2022 ರಿಂದ **10.02.2023** ವರೆಗೆ ವಿಸ್ತರಿಸಲಾಗಿದೆ.

ಇ–ಟೆಂಡರ್ ಸೂಚನೆ ಸಂ.
CAO/CN/BNC/107/2022
ದಿನಾಂಕ: 14–11–2022 ಕ್ಕೆ ತಿದ್ದುಪಡಿ
ಮೇಲೆ ತಿಳಿಸಿರುವ ಟೆಂಡರು ಸೂಚನೆಯಲ್ಲಿ (ಕ್ರಸಂ. 2) ಮುಕ್ತಾಯದ ಅವಧಿಯು 03 ತಿಂಗಳಿನಿಂದ **02 ತಿಂಗಳಿಗೆ** ಮಾರ್ಪಡಿಸಲಾಗಿದೆ.

ಇತರ ಎಲ್ಲಾ ನಿಯಮ ಮತ್ತು ನಿಬಂಧನೆಗಳು ಹಾಗೆಯೇ ಇರುವುದಾಗಿದೆ.
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ನಿರ್ಮಾಣ ಬೆಂಗಳೂರು ದಂಡು
PUB/510/AAD/PRB/SWR/2022-23
S.W.Railways SWRRLY SWRRLY

ನೈಋತ್ಯ ರೈಲ್ವೆ
ಇ–ಟೆಂಡರ್ ಸೂಚನೆ ಸಂ.: 04/Bridges/UBL 2022-23
ದಿನಾಂಕ: 17.11.2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ.	ಕಾಮಗಾರಿಯ ವಿವರ	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ: ವರಿಷ್ಠ ವಿಭಾಗೀಯ ಇಂಜಿನಿಯರ್ / ಸೇತುವೆಗಳು / ಹುಬ್ಬಳ್ಳಿ ವ್ಯಾಪ್ತಿಯಲ್ಲಿ ಬ್ರಿಡ್ಜ್ ಸಂ. 63 ಡೌನ್, 86/ಎ ಡೌನ್, 139/ಎ ಅಪ್, 139/ಎ ಡೌನ್, 157 ಅಪ್, 184 ಡೌನ್, 184 ಅಪ್, 184 ಲೂಪ್, 200 ಅಪ್, 200 ಡೌನ್, 204 ಅಪ್, 204 ಡೌನ್, 206 ಡೌನ್, 206 ಅಪ್, 240 ಡೌನ್, 240 ಅಪ್, 243 ಡೌನ್ & 243 ಅಪ್ – ಗದಗ–ಬಳ್ಳಾರಿ ವಿಭಾಗ, ಬ್ರಿಡ್ಜ್ ಸಂ. 4, 53, ಬಳ್ಳಾರಿ–ರಾಯದುರ್ಗ ವಿಭಾಗ, ಬ್ರಿಡ್ಜ್ ಸಂ. 39, 47, 66, 121, 133, 155 – ಹೊಸಪೇಟೆ – ವ್ಯಾಸ ಕಾಲೊನಿ ಜಂಕ್ಷನ್ – ಕೊಟ್ಟೂರು ವಿಭಾಗ, ಬ್ರಿಡ್ಜ್ ಸಂ. 3 – ತೋರಣಗಲ್ಲು ಜಂಕ್ಷನ್ – ರಂಜಿತ್‌ಪುರ ವಿಭಾಗ & ಬ್ರಿಡ್ಜ್ ಸಂ. 7 – ಗಿಣಿಗೇರ – ರಾಯಚೂರು ವಿಭಾಗ ಈ ಸ್ಥಳಗಳಲ್ಲಿ ಬೇಕಾದ ತಪಾಸಣಾ ವೇದಿಕೆ ವ್ಯವಸ್ಥೆಯ ಕಾಮಗಾರಿ.	ರೂ. 1,70,89,717.70
2	ಹುಬ್ಬಳ್ಳಿ ವಿಭಾಗ: ವರಿಷ್ಠ ವಿಭಾಗೀಯ ಇಂಜಿನಿಯರ್ / ಸೇತುವೆಗಳು / ಬೆಳಗಾವಿ ವ್ಯಾಪ್ತಿಯಲ್ಲಿರುವ ಕುಡಚಿ–ಉಗಾರ ಖುರ್ದ ವಿಭಾಗದ ನಡುವೆ ಬ್ರಿಡ್ಜ್ ಸಂ. 184 ಮತ್ತು ಲೋಂಡಾ–ತಿನೈ ಘಾಟ್ ನಡುವೆ ಬ್ರಿಡ್ಜ್ ಸಂ. 3ರಲ್ಲಿ ಸೈಡ್ ಪಾಥ್‌ವೇ ವ್ಯವಸ್ಥೆಯನ್ನು ಪೂರೈಸುವ ಕಾಮಗಾರಿ.	ರೂ. 1,55,99,639.14
3	ಹುಬ್ಬಳ್ಳಿ ವಿಭಾಗ: ವರಿಷ್ಠ ವಿಭಾಗೀಯ ಇಂಜಿನಿಯರ್ / ಸೇತುವೆಗಳು / ಬೆಳಗಾವಿ ವ್ಯಾಪ್ತಿಯಲ್ಲಿ ಕ್ರೈಸ್ಟ್ ಚರ್ಚ್ (ಸಿಸಿ ಕ್ರಿಬ್‌ಗಳು – 500 ಸಂ.) ಗಳ ಫ್ಯಾಬ್ರಿಕೇಷನ್ ಮತ್ತು ಪೂರೈಕೆ.	ರೂ. 85,71,741.55

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14.12.2022, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಇಂಜಿನಿಯರ್ / ಸಂಯೋಜನೆ ಹುಬ್ಬಳ್ಳಿ
PUB/505/AAD/PRB/SWR/2022-23
S.W.Railways SWRRLY SWRRLY

150ಕ್ಕೂ ಅಧಿಕ ವಿಚಾರ ಸಂಕಿರಣ ಆಯೋಜನೆ

ಬೆಂಗಳೂರು ಸಾಹಿತ್ಯ ಉತ್ಸವ ಡಿ.3ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಸಾಹಿತ್ಯ ಉತ್ಸವದ 11ನೇ ಆವೃತ್ತಿಯನ್ನು ಡಿ.3 ಮತ್ತು ಡಿ.4ಕ್ಕೆ ಕುಮಾರಕೃಪಾ ರಸ್ತೆಯಲ್ಲಿರುವ ಲಲಿತ್ ಅಶೋಕ್ ಹೋಟೆಲ್‌ನಲ್ಲಿ ಏರ್ಪಡಿಸಲಾಗಿದೆ.

ಎರಡು ದಿನಗಳ ಉತ್ಸವದಲ್ಲಿ ವಿಚಾರಸಂಕಿರಣಗಳು ಮತ್ತು ಸಂವಾದಗಳು ಬೆಳಿಗ್ಗೆ 10ರಿಂದ ನಡೆಯಲಿವೆ. 280 ಲೇಖಕರು ಹಾಗೂ ಭಾಷಣಕಾರರು ಗೋಷ್ಠಿಗಳಲ್ಲಿ ಭಾಗವಹಿಸಲಿದ್ದಾರೆ. 150ಕ್ಕೂ ಅಧಿಕ ವಿಚಾರಸಂಕಿರಣಗಳನ್ನು ಹಮ್ಮಿಕೊಳ್ಳಲಾಗಿದೆ. ಏಕಕಾಲದಲ್ಲಿ 4 ವೇದಿಕೆಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಪ್ರಸ್ತುತ ವಿದ್ಯಮಾನಗಳು, ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಕಲೆ, ಸಂಗೀತ, ಸಿನಿಮಾ, ಆಹಾರ, ಆರ್ಥಿಕತೆ, ನವೋದ್ಯಮ ಸೇರಿ ವೈವಿಧ್ಯಮಯ ವಿಷಯಗಳ ಕುರಿತು ತಜ್ಞರು ಚರ್ಚಿಸಲಿದ್ದಾರೆ.

ವಿವಿಧ ಭಾಷೆಯ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ ಇರಲಿದೆ. ಮಕ್ಕಳಿಗೆ ಪ್ರತ್ಯೇಕ ವೇದಿಕೆ ಇರಲಿದೆ. ಬೂಕರ್ ಪ್ರಶಸ್ತಿ ವಿಜೇತರಾದ ಗೀತಾಂಜಲಿ ಶ್ರೀ, ಶೆಹನ್ ಕರುಣಾತಿಲಕ, ಪ್ರವಾಸಿ ಬರಹಗಾರ ಪಿಕೊ ಲೈಯರ್, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ದಾಮೋದರ್ ಮೌಜೊ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರಾದ ಸಾರಾ ಜೋಸೆಫ್, ನಟರಾದ ಫರ್ಹಾನ್ ಅಖ್ತರ್, ರಮೇಶ್ ಅರವಿಂದ್, ಕಬೀರ್ ಬೇಡಿ, ಭಾರತದ ಫುಟ್ಬಾಲ್ ತಂಡದ ನಾಯಕ ಸುನಿಲ್ ಛೆಟ್ರಿ, ಲೇಖಕ ವಿಕ್ರಮ್ ಚಂದ್ರ, ಮಾಜಿ ಕ್ರಿಕೆಟಿಗ ವಿ.ವಿ.ಎಸ್. ಲಕ್ಷ್ಮಣ್, 'ಪದ್ಮಶ್ರೀ' ಪ್ರಶಸ್ತಿ ಪುರಸ್ಕೃತ ಕಲಾವಿದೆ ಮಂಜಮ್ಮ ಜೋಗತಿ ಸೇರಿ ಹಲವರು ಭಾಗವಹಿಸಲಿದ್ದಾರೆ.

ವೈವಿಧ್ಯದ ಅನಾವರಣ: 'ಈ ಉತ್ಸವದಲ್ಲಿ ಅರ್ಥಪೂರ್ಣ ಸಂವಾದ, ಆರೋಗ್ಯಕರ ಚರ್ಚೆಗಳು ನಡೆಯಲಿವೆ. ಉತ್ಸವ ನೋಂದಣಿ ಪ್ರಾರಂಭವಾಗಿದ್ದು, ಪ್ರವೇಶ ಉಚಿತ ಇರುತ್ತದೆ. ಈ ಉತ್ಸವವು ಸಾಹಿತ್ಯಿಕ ಲೋಕದ ವೈವಿಧ್ಯವನ್ನು ಅನಾವರಣ ಮಾಡಲಿದೆ. ಸಾಹಿತ್ಯ ಹಾಗೂ ಸಾಂಸ್ಕೃತಿಕ ಲೋಕದ ಪ್ರಮುಖರು, ಓದುಗರು, ಪ್ರಕಾಶಕರು, ವಿದ್ಯಾರ್ಥಿಗಳು ಮತ್ತು ಯುವ ವೃತ್ತಿಪರರನ್ನು ಒಂದೆಡೆ ಸೇರಿಸಲು ಈ ಉತ್ಸವ ಸಹಕಾರಿಯಾಗಲಿದೆ' ಎಂದು ಉತ್ಸವದ ನಿರ್ದೇಶಕಿ ಶೈನಿ ಆಂಟೋನಿ ಅವರು ತಿಳಿಸಿದ್ದಾರೆ.

'ಸಾಹಿತ್ಯದ ಜತೆಗೆ ಸಂಗೀತ, ಸಿನಿಮಾ, ಕ್ರೀಡೆ ಸೇರಿ ವಿವಿಧ ಕ್ಷೇತ್ರಗಳ ಪ್ರಮುಖರು ದೇಶ–ವಿದೇಶಗಳಿಂದ ಬರಲಿದ್ದಾರೆ ಎಂದು ಅವರು ಹೇಳಿದರು. ಮಾಹಿತಿಗೆ: www.bangaloreliteraturefestival.org

ಬಿಜಿಎಸ್ ಹೆಲ್ತ್ ಸಿಟಿ: ಸಂಸ್ಥಾಪಕರ ದಿನಾಚರಣೆ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಧಾರ್ಮಿಕ, ವೈಜ್ಞಾನಿಕ ಮನೋಭಾವ ಎರಡನ್ನೂ ಹೊಂದಿದ್ದ ಬಾಲಗಂಗಾಧರನಾಥ ಸ್ವಾಮೀಜಿ, ಉದಾತ್ತ ಚಿಂತನೆಯೊಂದಿಗೆ ಬಿಜಿಎಸ್ ಶಿಕ್ಷಣ ಸಂಸ್ಥೆಗೆ ಅಡಿಗಲ್ಲು ಹಾಕಿದ್ದರು. ನೂರಾರು ವಿವಿಧ ಬಗೆಯ ಶಾಲೆಗಳೊಂದಿಗೆ ಇಂದು ಬೃಹದಾಕಾರವಾಗಿ ಬೆಳೆದಿರುವ ಈ ಸಂಸ್ಥೆಯು ಜ್ಞಾನ, ವಿಜ್ಞಾನ, ಸಂಸ್ಕಾರ ಹರಡುವ ಕೆಲಸ ಮಾಡುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೆಚ್ಚುಗೆ ವ್ಯಕ್ತಪಡಿಸಿದರು.

ಬಿಜಿಎಸ್ ಶೈಕ್ಷಣಿಕ ಸಂಸ್ಥೆ ಸಮೂಹ ವತಿಯಿಂದ ಬಿಜಿಎಸ್ ಹೆಲ್ತ್ ಸಿಟಿಯಲ್ಲಿ ಆಯೋಜಿಸಲಾಗಿದ್ದ 14ನೇ ಸಂಸ್ಥಾಪಕರ ದಿನಾಚರಣೆ ಹಾಗೂ ಬಿಜಿಎಸ್ ಉತ್ಸವ್-2022 ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಸಾಧ್ಯವೆಂಬುದು ಮನದಲ್ಲಿ ಅಡಗಿರುವ ನಕಾರಾತ್ಮಕ ಭಾವನೆಯಷ್ಟೆ. ದಿಟ್ಟ ನಿರ್ಧಾರದೊಂದಿಗೆ ಮುಂದಡಿಯಿಟ್ಟರೆ ಯಾವುದೇ ಕಾರ್ಯ ಅಸಾಧ್ಯವಲ್ಲ ಎಂದರು.

ಬಿಜಿಎಸ್ ಹೆಲ್ತ್ ಸಿಟಿಯಲ್ಲಿ ಆಯೋಜಿಸಲಾಗಿದ್ದ 14ನೇ ವರ್ಷದ ಬಿಜಿಎಸ್ ಸಂಸ್ಥಾಪಕರ ದಿನಾಚರಣೆ ಹಾಗೂ ಬಿಜಿಎಸ್ ಉತ್ಸವ್–2022 ಕಾರ್ಯಕ್ರಮವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ನಿರ್ಮಲಾನಂದನಾಥ ಸ್ವಾಮೀಜಿ, ಡಾ.ಪ್ರಕಾಶನಾಥ ಸ್ವಾಮೀಜಿ, ಸಚಿವರಾದ ಆರ್ ಅಶೋಕ, ಎಸ್ ಟಿ.ಸೋಮಶೇಖರ್, ಶಾಸಕ ರಾಜೂಗೌಡ, ಮಾಜಿ ಸಂಸದೆ ರಮ್ಯಾ ಇದ್ದರು.

ಆದಿ ಚುಂಚನಗಿರಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, 'ಹಣದಿಂದ, ಕರ್ಮದಿಂದ ಮುಕ್ತಿ ಪಡೆಯಲು ಸಾಧ್ಯವಿಲ್ಲ. ಪ್ರತಿಫಲಾಪೇಕ್ಷೆಯಿಲ್ಲದೆ ಮಾಡುವ ಕೆಲಸ, ದಾನಗಳಿಂದ ಭಗವಂತನನ್ನು ಕಾಣಲು ಸಾಧ್ಯ' ಎಂದು ಹೇಳಿದರು.

'ಹಲವು ದಶಕಗಳಿಂದ ಆದಿಚುಂಚನಗಿರಿ ಮಠದೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದೇನೆ. ಬಿಜಿಎಸ್ ಶಿಕ್ಷಣ ಸಂಸ್ಥೆಯಿಂದ ಲಕ್ಷಾಂತರ ವಿದ್ಯಾರ್ಥಿಗಳು ಬದುಕು ಕಟ್ಟಿಕೊಂಡಿದ್ದಾರೆ. ಹಲವಾರು ದೃಷ್ಟಿ ಹೀನ ಮಕ್ಕಳ ಬಾಳಿಗೂ ಬಿಜಿಎಸ್ ಶಿಕ್ಷಣ ಸಂಸ್ಥೆಯು ಬೆಳಕಾಗಿದೆ' ಎಂದು ಕಂದಾಯ ಸಚಿವ ಆರ್. ಅಶೋಕ ಶ್ಲಾಘಿಸಿದರು.

ನಟಿ ಹಾಗೂ ಮಾಜಿ ಸಂಸದೆ ರಮ್ಯ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. 'ಮದುವೆಗೆ ಪ್ರೀತಿ ಕಾರಣವಾಗಿರಬೇಕು. ಒತ್ತಡದಿಂದ ವಿವಾಹ ಬಂಧನಕ್ಕೆ ಒಳಗಾಗುವುದು ನೆಮ್ಮದಿ ತರುವುದಿಲ್ಲ' ಎಂದು ತಿಳಿಸಿದರು.

ಇದೇ ವೇಳೆಯಲ್ಲಿ ಬಿಜಿಎಸ್ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ ಸಿಬ್ಬಂದಿಗೆ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಬಿಜಿಎಸ್ ಸಮೂಹ ಶಿಕ್ಷಣ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಡಾ. ಪ್ರಕಾಶ ನಾಥ ಸ್ವಾಮೀಜಿ. ಸಹಕಾರ ಸಚಿವ ಎಸ್.ಟಿ.ಸೋಮಶೇಖರ್. ಶಾಸಕ ರಾಜೂಗೌಡ ಮತ್ತಿತರರು ಉಪಸ್ಥಿತರಿದ್ದರು.

ಆರೆಸ್ಸೆಸ್ ಕಚೇರಿಗೆ ಬೊಮ್ಮಾಯಿ ಭೇಟಿ: ಪ್ರಮುಖರ ಜೊತೆ ಚರ್ಚೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ರಾಜ್ಯ ಕಚೇರಿ ಕೇಶವಶಿಲ್ಪಕ್ಕೆ ಗುರುವಾರ ಸಂಜೆ ಭೇಟಿ ಕೊಟ್ಟು ಸುಮಾರು ಎರಡು ಗಂಟೆ ಸಂಘದ ಪ್ರಮುಖರ ಜತೆ ಸಮಾಲೋಚನೆ ನಡೆಸಿದರು.

ಸಚಿವರಾದ ಆರ್. ಅಶೋಕ, ಸಿ.ಎನ್. ಅಶ್ವತ್ಥನಾರಾಯಣ, ಡಾ.ಕೆ. ಸುಧಾಕರ್, ಮುನಿರತ್ನ ಅವರ ಜತೆಗೂಡಿ ಸಂಘದ ಕಚೇರಿಗೆ ಮುಖ್ಯಮಂತ್ರಿ ತೆರಳಿದ್ದರು.

ಬೆಂಗಳೂರಿನಲ್ಲಿ ರಾಷ್ಟ್ರ ಮಟ್ಟದ ಕಾರ್ಯಕ್ರಮವೊಂದನ್ನು ಆರೆಸ್ಸೆಸ್ ಹಮ್ಮಿಕೊಳ್ಳಲಿದೆ. ಕಾರ್ಯಕ್ರಮದ ಪೂರ್ವ ಸಿದ್ಧತೆ, ಸರ್ಕಾರದ ಕಡೆಯಿಂದ ನೀಡಬೇಕಾದ ಸಹಕಾರ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು ಎಂದು ಗೊತ್ತಾಗಿದೆ.

ವಿಧಾನಸಭೆ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸಲು ಡಿಸೆಂಬರ್ ಎಂಟರ ಹೊತ್ತಿಗೆ ಕೇಂದ್ರ ಸರ್ಕಾರದ ಆರು ಸಚಿವರು ಕರ್ನಾಟಕಕ್ಕೆ ಭೇಟಿ ನೀಡಲಿದ್ದು, ಇಲ್ಲಿಯೇ ಮೊಕ್ಕಾಂ ಹೂಡುವ ಸಾಧ್ಯತೆ ಇದೆ. ಮುಂದಿನ ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲು ಹೆಣೆಯಬೇಕಾದ ಕಾರ್ಯತಂತ್ರಗಳ ಬಗ್ಗೆಯೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಂಘ ಪ್ರಮುಖರ ಸಲಹೆ ಪಡೆದರು.

ಸರ್ಕಾರ ಮತ್ತು ಪಕ್ಷದ ಸಮನ್ವಯ ಹೇಗಿರಬೇಕು, ಸಚಿವರ ಪಾಲ್ಗೊಳ್ಳುವಿಕೆಯ ಅಗತ್ಯದ ಬಗ್ಗೆಯೂ ಚರ್ಚೆ ನಡೆಯಿತು ಎಂದು ತಿಳಿಸಿದರು.

'ಈ ಭೇಟಿಯಲ್ಲಿ ವಿಶೇಷವೇನೂ ಇಲ್ಲ. ಸಂಘದ ಕಚೇರಿಗೆ ಆಗಾಗ್ಗೆ ಭೇಟಿ ನೀಡುವ ಮುಖ್ಯಮಂತ್ರಿ ಪ್ರಮುಖರ ಸಲಹೆ ಪಡೆಯುತ್ತಾರೆ. ಇದು ಕೂಡ ಔಪಚಾರಿಕ ಭೇಟಿಯಾಗಿತ್ತೇ ವಿನಃ ಮಹತ್ವದ ಚರ್ಚೆಗಳೇನೂ ನಡೆದಿಲ್ಲ. ಶುಕ್ರವಾರ (ನ.25) ಶಿವಮೊಗ್ಗದಲ್ಲಿ ಬಿಜೆಪಿಯ ಮೂರು ದಿನಗಳ ಪ್ರಶಿಕ್ಷಣ ವರ್ಗ(ಬೈಠಕ್) ಆರಂಭವಾಗಲಿದೆ. ಈ ಬಗ್ಗೆ ಸಲಹೆ ಪಡೆದಿದ್ದಾರೆ' ಎಂದು ಮುಖ್ಯಮಂತ್ರಿ ಸಚಿವಾಲಯದ ಮೂಲಗಳು ಹೇಳಿವೆ.

'ಬೃಹತ್, ಸಣ್ಣ ಕೈಗಾರಿಕೋದ್ಯಮಿಗಳ ಸಮಾವೇಶ'

ಬೆಂಗಳೂರು: ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಒಪ್ಪಂದ ಮಾಡಿಕೊಂಡಿರುವ ಬೃಹತ್ ಕೈಗಾರಿಕೆಗಳಿಗೆ ಅಗತ್ಯವಾದ ಬಿಡಿ ಭಾಗಗಳ ಪೂರೈಕೆಗೆ ಪೂರಕವಾಗಿ, ಜನವರಿಯಲ್ಲಿ ಬೆಂಗಳೂರಿನಲ್ಲಿ ಬೃಹತ್ ಮತ್ತು ಸಣ್ಣ ಕೈಗಾರಿಕೋದ್ಯಮಿಗಳ ಸಮಾವೇಶ ಆಯೋಜಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ವಿಧಾನಸೌಧದಲ್ಲಿ ಇಲಾಖೆಯ ಅಧಿಕಾರಿಗಳ ಸಭೆ ಗುರುವಾರ ನಡೆಸಿದ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವ ಎಂಟಿಬಿ ನಾಗರಾಜು ಈ ವಿಷಯ ತಿಳಿಸಿದರು.

'ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ರಾಜ್ಯದಲ್ಲಿ ₹ 9.81 ಲಕ್ಷ ಕೋಟಿ ಹೂಡಿಕೆಯ ಒಪ್ಪಂದ ಮಾಡಿಕೊಂಡಿ ರುವ ಬೃಹತ್ ಉದ್ದಿಮೆಗಳಿಗೆ ಭಾರಿ ಪ್ರಮಾಣದಲ್ಲಿ ಬಿಡಿಭಾಗಗಳ ಅಗತ್ಯವಿದೆ. ಅದಕ್ಕಾಗಿ ಮತ್ತಷ್ಟು ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳ ಸ್ಥಾಪನೆ ಆಗಬೇಕಿದೆ. ಈ ಕಾರಣಕ್ಕೆ ಬೃಹತ್ ಮತ್ತು ಸಣ್ಣ ಉದ್ದಿಮೆದಾರರನ್ನು ಒಂದೆಡೆ ಸೇರಿಸಿ ಸಮಾವೇಶ ನಡೆಸಲಾಗುವುದು' ಎಂದರು.

'ನೆಲಮಂಗಲ ಕೈಗಾರಿಕಾ ವಸಾಹತುವಿಗೆ ನಾಲ್ಕು ಪಥದ ರಸ್ತೆ ನಿರ್ಮಾಣ, ವಿದ್ಯುತ್ ಸಬ್ ಸ್ಟೇಷನ್ ಹಾಗೂ ತ್ಯಾಜ್ಯ ಸಂಸ್ಕರಣಾ ಘಟಕ ಆರಂಭಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದರು.

ಕೈಗಾರಿಕಾ ಇಲಾಖೆ ಕಾರ್ಯದರ್ಶಿ ಪಂಕಜ್ ಕುಮಾರ್ ಪಾಂಡೆ, ಕೆಎಸ್‌ಎಸ್‌ಐಡಿಸಿ ವ್ಯವಸ್ಥಾಪಕ ನಿರ್ದೇಶಕ ಎಸ್. ಜೆ. ಸೋಮಶೇಖರ್, ಕಾಸಿಯಾ ಅಧ್ಯಕ್ಷ ಕೆ.ಎನ್. ನರಸಿಂಹ ಮೂರ್ತಿ, ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಎಚ್. ಮಂಜುನಾಥ್ ಹಾಗೂ ಕೈಗಾರಿಕೆ, ಲೋಕೋಪಯೋಗಿ, ವಿದ್ಯುತ್, ಗೃಹ ಮಂಡಳಿ ಹಿರಿಯ ಅಧಿಕಾರಿಗಳು ಇದ್ದರು.

'ಸಿದ್ದರಾಮಯ್ಯ ಅವರನ್ನು ವಜಾಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಮಾಹಿತಿ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಅವರು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಮತ್ತು ಕಾಂಗ್ರೆಸ್ ಮುಖಂಡರಿಗೆ ಪ್ರಶ್ನೆಗಳನ್ನು ಕೇಳಿದ್ದಾರೆ.

'ಚಿಲುಮೆ ಸಂಸ್ಥೆಯನ್ನು 2017ರಲ್ಲಿ ಕಾನೂನುಬಾಹಿರವಾಗಿ ನೇಮಿಸಿಕೊಂಡಿದ್ದು ಯಾರು ಸಿದ್ದರಾಮಯ್ಯನವರೇ? ಮತದಾರರ ಪಟ್ಟಿ ಪರಿಷ್ಕರಣೆ ಕೆಲಸಕ್ಕೂ, ಸರ್ಕಾರಕ್ಕೂ ಸಂಬಂಧವಿಲ್ಲ ಎಂಬ ಜ್ಞಾನವಿಲ್ಲವೇ ಕಾಂಗ್ರೆಸ್ ನಾಯಕರೇ? ಮತದಾರರ ಪಟ್ಟಿ ಪರಿಷ್ಕರಣೆ ಮಾಡುವುದು ಚುನಾವಣಾ ಆಯೋಗದ ಕೆಲಸ ಎಂಬ ಸಣ್ಣ ವಿಷಯವು ತಿಳಿಯುವುದಿಲ್ಲ' ಎಂದು ಪ್ರಶ್ನಿಸಿದ್ದಾರೆ.

'ಅಕ್ರಮ ನಡೆದಿದ್ದರೆ ಸಿದ್ದರಾಮಯ್ಯ ಅವರೇ ಮಾಡಿರುವ ಅಕ್ರಮ ನೇಮಕಾತಿಗಳ ಫಲವಾಗಿದೆ. ಅಂದರೆ, ಕಿಂಗ್‌ಪಿನ್ ಸಿದ್ದರಾಮಯ್ಯನವರೇ ಅಲ್ಲವೇ' ಎಂದು ಅವರು ಪ್ರಶ್ನೆ ಮಾಡಿದ್ದಾರೆ.

'ಅಕ್ರಮದ ಮಾಹಿತಿ ಬಂದ ತಕ್ಷಣ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಲಾಗುತ್ತಿದೆ. ತನಿಖೆಯಲ್ಲಿ ಸಿದ್ದರಾಮಯ್ಯ ಅವರ ಮತ್ತು ಚಿಲುಮೆ ಸಂಸ್ಥೆಯ ಅಕ್ರಮಗಳು ಬೆಳಕಿಗೆ ಬರುತ್ತಿವೆ. ಅದಕ್ಕೆ ಅಲ್ಲವೇ ನಿಮಗೆ ಈ ತಳಮಳವಾಗುತ್ತಿದೆ' ಎಂದು ಹೇಳಿದರು.

'ರಣದೀಪ್ ಸುರ್ಜೇವಾಲಾ ಅವರೇ, ನೈತಿಕತೆಯಿದ್ದರೆ ವಿರೋಧಪಕ್ಷದ ನಾಯಕ ಸ್ಥಾನದಿಂದ ಸಿದ್ದರಾಮಯ್ಯ ಅವರನ್ನು ವಜಾಗೊಳಿಸಿ' ಎಂದು ರವಿಕುಮಾರ್ ಆಗ್ರಹಿಸಿದ್ದಾರೆ.

ಶೇ 10 ಇಡಬ್ಲ್ಯುಎಸ್ ಮೀಸಲಾತಿ ಜಾರಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂ ಕೋರ್ಟ್‌ನ ಇತ್ತೀಚಿನ ತೀರ್ಪಿನ ಅನ್ವಯ, ಕೇಂದ್ರ ಸರ್ಕಾರದಂತೆ ರಾಜ್ಯದಲ್ಲಿಯೂ ಬ್ರಾಹ್ಮಣ ಸಮುದಾಯಕ್ಕೆ ಶೇ 10 ಇಡಬ್ಲ್ಯುಎಸ್ ಮೀಸಲಾತಿಯನ್ನು ಶೀಘ್ರವಾಗಿ ಜಾರಿಮಾಡುವಂತೆ ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಎಚ್.ಎಸ್. ಸಚ್ಚಿದಾನಂದ ಮೂರ್ತಿ ನೇತೃತ್ವದಲ್ಲಿ ಬುಧವಾರ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಲಾಯಿತು.

ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಮುಖ್ಯಮಂತ್ರಿ, ಈ ಕುರಿತು ಹಾಜರಿದ್ದ ತಮ್ಮ ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಮಂಡಳಿಯ ನಿರ್ದೇಶಕರಾದ ಸುಬ್ರಾಯ ಹೆಗಡೆ ಗೌರೀಬಣ್ಣಿಗೆ, ವತ್ಸಲಾ ನಾಗೇಶ, ಜಗನ್ನಾಥ ಕುಲಕರ್ಣಿ, ಪವನಕುಮಾರ, ಜಗದೀಶ ಹುನಗುಂದ, ವಿಶ್ವ ವಿಪ್ರತ್ರಯೀ ಪರಿಷತ್ತಿನ ಪದಾಧಿಕಾರಿಗಳು, ವಿವಿಧ ಬ್ರಾಹ್ಮಣ ಸಂಘಟನೆಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಇದ್ದರು.

ಸುಧಾ, ಮಯೂರ ಓದಿರಿ

BANGALORE TURF CLUB LTD.
Post Box No. 5038, Race Course Road, Bangalore - 560 001.
Phone: 22281763, EPABX: 2226391/2/3 Extn: 240/227/228
CIN : U99999KA1962PLC001449

TENDER NOTICE - 22-11-2022

Sealed Tenders duly superscribed are invited for providing bituminous concrete for Road at Club premises. Closing time for receipt of Tender 03.00 PM on Wednesday, 30th November 2022.

Details are available in our website: **www.bangaloreraces.com**

Date: 22-11-2022 Sd/-
Place: Bangalore. CEO & Secretary

ಯೂಕೊ ಬ್ಯಾಂಕ್
(ಭಾರತ ಸರ್ಕಾರದ ಒಂದು ಉದ್ಯಮ)
ವಲಯ ಕಛೇರಿ, ಬೆಂಗಳೂರು

ಯೂಕೊ ಬ್ಯಾಂಕ್ ತನ್ನ ಶಾಖೆಗಳಿಗೆ ಚಿನ್ನದ ಮೌಲ್ಯಮಾಪಕರ ಹೆಸರು ಸೇರ್ಪಡೆ ಮಾಡಲಿರುವುದು, ಆಸಕ್ತಿಯುಳ್ಳ ಚಿನ್ನದ ಮೌಲ್ಯಮಾಪಕರು ಸಮೀಪದ ಯೂಕೊ ಬ್ಯಾಂಕ್ ಶಾಖೆಯನ್ನು ಅಥವಾ ವಲಯ ಕಛೇರಿಯನ್ನು ಸಂಪರ್ಕಿಸಬಹುದು.

ಸಂಪರ್ಕಿಸಿ : ಬಸವರಾಜ್ ಮೇಟಿ – 961142105

ದಿನಾಂಕ : 23.11.2022 ಮುಖ್ಯ ವ್ಯವಸ್ಥಾಪಕರು
ಸ್ಥಳ : ಬೆಂಗಳೂರು ಯೂಕೊ ಬ್ಯಾಂಕ್

ಜಾಹೀರಾತು

ಪಿರಮಿಡ್ ವ್ಯಾಲಿಯಲ್ಲಿ ಸಂಗೀತ ಧ್ಯಾನ ಹಬ್ಬ–2022

ಧರೆಗಿಳಿಯಲಿರುವ ಗಾನಗಂಧರ್ವ ನಾದಲೋಕ

ಪಿರಮಿಡ್ ಸಂಗೀತ ಧ್ಯಾನ ಹಬ್ಬವು (ಪಿರಮಿಡ್ ಮ್ಯೂಸಿಕ್ ಮೆಡಿಟೇಶನ್ ಫೆಸ್ಟ್) ಬೆಂಗಳೂರು – ಕನಕಪುರ ರಸ್ತೆಯಲ್ಲಿನ ಹಾರೋಹಳ್ಳಿ ಬಳಿ ಇರುವ ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್‌ನಲ್ಲಿ 2022ರ ನವೆಂಬರ್ 25, 26, 27ರಂದು ನಡೆಯಲಿದೆ. ಇದು ಪ್ರಶಾಂತ, ಹಸಿರು ತುಂಬಿದ ಆವರಣದಲ್ಲಿ 3 ದಿನಗಳ ಕಾಲ ನಡೆಯುವ ಸಂಗೀತ ಉತ್ಸವವಾಗಿದೆ. ಅಂತಾರಾಷ್ಟ್ರೀಯ ಧ್ಯಾನ ಕೇಂದ್ರದಲ್ಲಿ ನಡೆಯುವ ಈ ವಿಶೇಷ ಕಾರ್ಯಕ್ರಮವು ಧ್ಯಾನದತ್ತ ಮರಳುವಿಕೆ (ರಿಟ್ರೀಟ್) ಆಗಿದ್ದು, ನಗರದ ಜಂಜಾಟದಿಂದ ಮುಕ್ತಗೊಂಡು ಭಾರತೀಯ ಶಾಸ್ತ್ರೀಯ ಸಂಗೀತ, ಧ್ಯಾನ ಮತ್ತು ಪಾರಂಪರಿಕ ವಿಶಿಷ್ಟತೆಗಳ ಅಪರೂಪದ ಸಂಯೋಜನೆಯನ್ನು ಅನುಭವಿಸಲು ಒಂದು ಉತ್ತಮ ಅವಕಾಶವಾಗಿದೆ. ಆಸಕ್ತರೆಲ್ಲರೂ ಸಹ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಪಿರಮಿಡ್ ವ್ಯಾಲಿ ಇಂಟರ್ ನ್ಯಾಷನಲ್ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟೀ ಡಾ.ಸಾಯಿಕೃಪಾ ಸಾಗರ್ ಮತ್ತು ಪಿ.ಎಂ.ಎಂ. ಅಕಾಡೆಮಿಯ ಅಧ್ಯಕ್ಷರಾದ ವಿದ್ವಾನ್ ಎಸ್.ಪಿ.ಗಣೇಶ್ ಕುಮಾರ್ ವಿನಂತಿಸಿದ್ದಾರೆ.

ಮೂರು ದಿನಗಳ ಕಾಲ ಪ್ರತಿನಿತ್ಯ 5 ಸಂಗೀತ ಕಚೇರಿಗಳು ಇರಲಿವೆ – ಮುಂಜಾನೆ 6 ರಿಂದ ರಾತ್ರಿ 8ರ ವರೆಗೆ ಗಾಯನ / ವಾದ್ಯ ಸಂಗೀತ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಈ ಸಂಗೀತ ಹಬ್ಬದಲ್ಲಿ 60ಕ್ಕೂ ಹೆಚ್ಚಿನ ಖ್ಯಾತ ಕಲಾವಿದರು, ವಿಶಿಷ್ಟ ಸಂಗೀತಗಾರರು ತಮ್ಮ ಕಲಾಪ್ರದರ್ಶನ ನೀಡುತ್ತಿದ್ದಾರೆ. ಜನಪ್ರಿಯ ಕಲಾವಿದರಲ್ಲಿ ಪಂಡಿತ್ ಪ್ರವೀಣ್ ಗೋಡ್ಖಿಂಡಿ (ಬಾನ್ಸುರಿ / ಕೊಳಲು), ವಿದ್ವಾನ್ ಅಭಿಷೇಕ್ ರಘುರಾಮ್ (ಗಾಯನ), ವಿದ್ವಾನ್ ಪತ್ರಿ ಸತೀಶ್ ಕುಮಾರ್ (ಮೃದಂಗಂ), ಕಲಾಶ್ರೀ ಅನೂರು ಅನಂತ ಕೃಷ್ಣ ಶರ್ಮಾ (ವಾದ್ಯ ಸಂಯೋಜನೆ). ಈ ಸಂಗೀತ ಕಚೇರಿಗಳು ಕರ್ನಾಟಕ ಮತ್ತು ಹಿಂದೂಸ್ತಾನಿ. ಗಾಯನ ಮತ್ತು ವಾದ್ಯಗಳನ್ನು ಒಳಗೊಂಡಿವೆ. ವಾದ್ಯ ಸಂಗೀತ ಕಚೇರಿಗಳಲ್ಲಿ ಪಿಟೀಲು, ಸೇಹನಾಯಿ, ಸಾರಂಗಿ, ಸಂತೂರ್ + ಅಂಗ್‌ಕ್ಲುಂಗ್ ಜುಗಲ್‌ಬಂದಿ, ಕೊಳಲು ಮತ್ತು ಶ್ರೀ ಮೃದಂಗಮ್ ಸೇರಿವೆ.

ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಆರಂಭಿಕ ಸಂಗೀತ–ಗೋಷ್ಠಿಯಲ್ಲಿ ಸುಮಾರು 500 ಜನರು ಪಂಚರತ್ನ ಕೃತಿಗಳನ್ನು ಹಾಡಲಿದ್ದಾರೆ.

ಈ ಕಾರ್ಯಕ್ರಮವನ್ನು ಪಿರಮಿಡ್ ಮ್ಯೂಸಿಕ್ ಮೆಡಿಟೇಶನ್ ಅಕಾಡೆಮಿ (ಪಿಎಂಎಂಎ) ಪ್ರಸ್ತುತಪಡಿಸುತ್ತಿದೆ. ಮತ್ತು ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್ ಆಯೋಜಿಸಿದೆ. ಈ ವರ್ಷ ಪಿಎಂಎಂಎ ಪ್ರಶಸ್ತಿಗಳನ್ನು ವಿದ್ವಾನ್ ಶೇಷಯ್ಯ ಶಾಸ್ತ್ರಿ, ವಿದ್ವಾನ್ ಎಚ್.ಎಸ್.ವೇಣುಗೋಪಾಲ್, ಕರ್ನಾಟಕ ಕಲಾಶ್ರೀ ತಿರುಮಲೆ ಶ್ರೀನಿವಾಸ್, ಡಾ.ಕೆ.ವರದರಂಗನ್, ವಿದ್ವಾನ್ ಟಿ.ಎಸ್. ಕೃಷ್ಣಮೂರ್ತಿ ಮತ್ತು ವಿದುಷಿ ನಳಿನಾ ಮೋಹನ್ ಅವರಂತಹ ಖ್ಯಾತ ಸಂಗೀತ ದಿಗ್ಗಜರಿಗೆ ನೀಡಲಾಗುತ್ತಿದೆ.

ಧ್ಯಾನಕ್ಕಾಗಿ ನಿರ್ಮಿಸಲಾದ ಅತಿದೊಡ್ಡ ಪಿರಮಿಡ್ ಒಂದು ವಿಶಿಷ್ಟ ಶಕ್ತಿಗೋಪುರವಾಗಿದೆ. ಇದರಲ್ಲಿ ಸಂಗೀತ ಧ್ಯಾನ ಮಾಡುವುದು ಒಂದು ವಿಶಿಷ್ಟ ಅನುಭವವಾಗಲಿದೆ. ಬೆಂಗಳೂರಿನಿಂದ ಕನಕಪುರಕ್ಕೆ ಹೋಗುವ ರಸ್ತೆಯಲ್ಲಿನ ಹಾರೋಹಳ್ಳಿಗೂ ಸ್ವಲ್ಪ ಮೊದಲು, ಕೆಬ್ಬೆದೊಡ್ಡಿ ಕ್ರಾಸ್ ಬಳಿ ಈ ಬೃಹತ್ ಪಿರಮಿಡ್ ಧ್ಯಾನ ಕೇಂದ್ರವಿದೆ. ಈ ಕಾರ್ಯಕ್ರಮಕ್ಕೆ ಪ್ರವೇಶ ಉಚಿತ.

ಹೆಚ್ಚಿನ ಮಾಹಿತಿಗಾಗಿ: https://pyramidvalley.org/musicfest.
ಮೊ: +91 8147093627

ಆರಂಭದಲ್ಲೇ ರೋಗ ಪತ್ತೆ ಹಚ್ಚಿ ಚಿಕಿತ್ಸೆ ನೀಡಿದರೆ ಗುಣ ಮುಖವಾಗುವುದರ ಜೊತೆ ಉತ್ತಮ ಫಲಿತಾಂಶ ಪಡೆಯಬಹುದು

ಭಾರತದಲ್ಲಿ ಕ್ಯಾನ್ಸರ್ ಪ್ರಕರಣಗಳು ಸಂಖ್ಯೆಯಲ್ಲಿ ತೀವ್ರ ಹೆಚ್ಚಳವಾಗಿದೆ. ಆತಂಕಕಾರಿ ವಿಷಯವೆಂದರೆ ಭಾರತವು ಈಗ ವಿಶ್ವದ ಮೂರನೇ ಅತೀ ಹೆಚ್ಚು ಕ್ಯಾನ್ಸರ್ ರೋಗಿಗಳನ್ನ ಹೊಂದಿದೆ. ಈ ಅಂಕಿಅಂಶಗಳು ಕಳವಳಕ್ಕೆ ಕಾರಣವಾಗುವುದರ ಜೊತೆ ಇದು ನಮಗೆ ಎಚ್ಚರಿಕೆಯ ಗಂಟೆ. **ಡಾ. ನಿತೀನ್ ಯಶಸ್ ಮೂರ್ತಿ, ವೈದ್ಯಕೀಯ ತಜ್ಞರು, ಅಂಕಾಲಜಿಸ್ಟ್. ಮಣಿಪಾಲ್ ಆಸ್ಪತ್ರೆ,** ಇವರು ಕ್ಯಾನ್ಸರ್ ರೋಗವನ್ನ ಹೇಗೆ ಪತ್ತೆಹಚ್ಚಬಹುದು ಮತ್ತು ಹೇಗೆ ಚಿಕಿತ್ಸೆ ನೀಡಿ ಗುಣಪಡಿಸಬಹುದು ಎಂಬುದನ್ನ ದಿವ್ಯಶ್ರೀ ರವರಿಗೆ ಚಾಟ್ ಮಾಡುವ ಮೂಲಕ ವಿವರಿಸಿದ್ದಾರೆ.

ಭಾರತದಲ್ಲಿ ಕ್ಯಾನ್ಸರ್ ಎಷ್ಟು ಸಾಮಾನ್ಯವಾಗಿದೆ?

ಗ್ಲೋಬೊಕಾನ್ 2020 ಡೇಟಾ ಪ್ರಕಾರ, ಭಾರತದಲ್ಲಿ ಪ್ರತಿವರ್ಷ 13ಲಕ್ಷ ಕ್ಕೂ ಹೆಚ್ಚು ಜನ ಕ್ಯಾನ್ಸರ್ ರೋಗದಿಂದ ನರಳುತ್ತಿದ್ದಾರೆ. ಮಹಿಳೆಯರಲ್ಲಿ ಕಂಡು ಬರುವ ರೋಗವೆಂದರೆ ಸ್ತನ ಕ್ಯಾನ್ಸರ್, ಗರ್ಭಕಂಠದ ಕ್ಯಾನ್ಸರ್ ಮತ್ತು ಅಂಡಾಶಯದ ಕ್ಯಾನ್ಸರ್, ಇದು ಅತ್ಯಂತ ಸಾಮಾನ್ಯವಾಗಿದೆ, ಪುರುಷರಲ್ಲಿ ಕ್ಯಾನ್ಸರ್, ಬಾಯಿಯ ಕುಹರ, ಶ್ವಾಸಕೋಶ ಮತ್ತು ಹೊಟ್ಟೆಯ ಕ್ಯಾನ್ಸರ್. ಇದಲ್ಲದೆ, ಭಾರತದಲ್ಲಿನ ಹೆಚ್ಚಿನ ಕ್ಯಾನ್ಸರ್ ರೋಗಿಗಳಲ್ಲಿ ರೋಗ ಉಲ್ಬಣಗೊಂಡು ಮುಂದುವರಿದ ಹಂತದಲ್ಲಿದ್ದಾರೆ, ಮತ್ತು ಇದು ಆರಂಭಿಕ ಹಂತಕ್ಕಿಂತ ಮೊದಲು ಸ್ಥಳಿಯವಾಗಿ ಹರಡುವಲ್ಲಿಯೂ ಕೂಡ ಪ್ರಧಾನ ಪಾತ್ರ ವಹಿಸುತ್ತದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ನೀವು ಯಾವಾಗ ಕೀಮೋಥೆರಪಿಯನ್ನು ನೀಡುತ್ತೀರಿ

ಕೀಮೋಥೆರಪಿ ಎನ್ನುವುದು ರಾಸಾಯನಿಕಗಳೊಂದಿಗಿನ ಔಷಧವಾಗಿದ್ದು ಅದು ಸಾಮಾನ್ಯವಾಗಿ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಜೀವಕೋಶಗಳನ್ನ ನಾಶಪಡಿಸುತ್ತವೆ. ಆದ್ದರಿಂದ, ಕಿಮೊಥೆರಪಿಯನ್ನು ಕ್ಯಾನ್ಸರ್‌ಗೆ ಚಿಕಿತ್ಸೆ ನೀಡಲು ಬಳಸಲಾಗುತ್ತದೆ ಏಕೆಂದರೆ ಕ್ಯಾನ್ಸರ್ ಕೋಶಗಳು ದೇಹದ ಉಳಿದ ಜೀವಕೋಶಗಳಿಗಿಂತ ಗಮನಾರ್ಹವಾಗಿ ವೇಗವಾಗಿ ಬೆಳೆಯುತ್ತವೆ ಮತ್ತು ದೇಹದ ಉಳಿದ ಜೀವಕೋಶಗಳಿಗಿಂತ ಗಮನಾರ್ಹವಾಗಿ ವೇಗವಾಗಿ ಹರಡುತ್ತದೆ ಕಳೆದ ಕೆಲವು ವರ್ಷಗಳಿಂದ, ಕೆಲವು ಕ್ಯಾನ್ಸರ್‌ಗಳಲ್ಲಿ ಶಸ್ತ್ರಚಿಕಿತ್ಸೆಯ ಮೊದಲು ಕೀಮೋಥೆರಪಿಯನ್ನು ಹೆಚ್ಚಾಗಿ ಬಳಸಲಾಗುತ್ತಿದೆ, ಇದು ಗೆಡ್ಡೆಯನ್ನು ಕರಗಿಸಲು ಉತ್ತಮ ಶಸ್ತ್ರಚಿಕಿತ್ಸೆಗೆ ಕಾರಣವಾಗುತ್ತದೆ.

ಉತ್ತಮ ಫಲಿತಾಂಶಗಳು: ಉದಾಹರಣೆಗೆ, ಸ್ತನ ಕ್ಯಾನ್ಸರ್‌ನ ಗಂಭೀರತೆಯನ್ನು ಅವಲಂಬಿಸಿ ಕೀಮೋಥೆರಪಿ ಮಾತ್ರ ಅಥವಾ ಟಾರ್ಗೆಟೆಡ್ ಥೆರಪಿ ಚಿಕಿತ್ಸೆಯೊಂದಿಗೆ ಉತ್ತಮ ಗೆಡ್ಡೆ ಕರಗುವಿಕೆಗೆ ಕಾರಣವಾಗಬಹುದು ಮತ್ತು 50-60 ಪ್ರತಿಶತ ರೋಗಿಗಳಲ್ಲಿ ಸಂಪೂರ್ಣ ಪ್ರತಿಕ್ರಿಯೆಯನ್ನು ಉಂಟುಮಾಡಬಹುದು ಮತ್ತು ನಂತರ ಶಸ್ತ್ರಚಿಕಿತ್ಸೆಗೆ ಮುಂದುವರಿಯುತ್ತಾರೆ. ದೇಹದಲ್ಲಿ ಇನ್ನೂ ಸೂಕ್ಷ್ಮವಾಗಿರಬಹುದಾದ ಯಾವುದೇ ಉಳಿದ ಕ್ಯಾನ್ಸರ್ ಕೋಶಗಳನ್ನು ತೆಗೆದುಹಾಕಲು ನಾವು ಶಸ್ತ್ರಚಿಕಿತ್ಸೆಯ ನಂತರ ಕಿಮೊಥೆರಪಿಯನ್ನು ನೀಡುತ್ತೇವೆ. ಹಂತ-4 ಸೆಟ್ಟಿಂಗ್‌ನಲ್ಲಿಯೂ ಸಹ, ರೋಗದ ತೀವ್ರತೆಯನ್ನು ಕಡಿಮೆ ಮಾಡಲು ಮತ್ತು ರೋಗಲಕ್ಷಣ ಗಳನ್ನು ಸುಧಾರಿಸಲು ಕೀಮೋಥೆರಪಿ ಚಿಕಿತ್ಸೆಯನ್ನು ನೀಡಲಾಗುತ್ತದೆ.

ಇಲ್ಲಿ ಕ್ಯಾನ್ಸರ್ ಚಿಕಿತ್ಸಾ ತಂತ್ರಜ್ಞಾನ ಎಷ್ಟು ಮುಂದುವರೆದಿದೆ?

ಮಣಿಪಾಲ್ ಆಸ್ಪತ್ರೆಯು ದೇಶದ ಪ್ರಮುಖ ಸಮಗ್ರ ಕ್ಯಾನ್ಸರ್ ಚಿಕಿತ್ಸಾ ಸೌಲಭ್ಯಗಳಲ್ಲಿ ಒಂದಾಗಿದೆ. ಅತ್ಯಾಧುನಿಕ ತಂತ್ರಜ್ಞಾನದ ಹೊರತಾಗಿ, ನಮ್ಮಲ್ಲಿ ಬಹು-ಶಿಸ್ತಿನ ಟ್ಯೂಮರ್ ಬೋರ್ಡ್ ಇದೆ, ಅಲ್ಲಿ ಹಿರಿಯ ಮತ್ತು ಅನುಭವಿ ಆಂಕೊಲಾಜಿಸ್ಟ್‌ಗಳು ಪ್ರಕರಣಗಳ ಬಗ್ಗೆ ಚರ್ಚಿಸುತ್ತಾರೆ ಮತ್ತು ಸೂಕ್ತವಾದ ಚಿಕಿತ್ಸಾ ವಿಧಾನಗಳ ಶಿಫಾರಸುಗಳನ್ನ ಮಾಡುತ್ತಾರೆ ನಾವು ಇಮ್ಯುನೊಥೆರಪಿ ಮತ್ತು ಟಾರ್ಗೆಟೆಡ್ ಚಿಕಿತ್ಸಾ ವಿಧಾನಗಳಲ್ಲಿ ಹಲವು ಪ್ರಗತಿಗಳನ್ನು ಹಲವು ವರ್ಷಗಳಿಂದ ಜಾರಿಗೆ ತಂದಿದ್ದೇವೆ

ಇಮ್ಯುನೊಥೆರಪಿ ಎನ್ನುವುದು ಕ್ಯಾನ್ಸರ್ ಕೋಶಗಳ ವಿರುದ್ಧ ಹೋರಾಡಲು ದೇಹದ ಪ್ರತಿರಕ್ಷಣಾ ವ್ಯವಸ್ಥೆಯನ್ನು ನಿಶ್ಯಸ್ತ್ರಗೊಳಿಸುವ ಚಿಕಿತ್ಸೆಯ ಒಂದು ರೂಪವಾಗಿದೆ. ಕಿಡ್ನಿ ಕ್ಯಾನ್ಸರ್, ಶ್ವಾಸಕೋಶದ ಕ್ಯಾನ್ಸರ್ ಮತ್ತು ತಲೆ ಮತ್ತು ಕುತ್ತಿಗೆಯ ಕ್ಯಾನ್ಸರ್‌ನಂತಹ ಕ್ಯಾನ್ಸರ್ ಹೊಂದಿರುವ ಹಂತ-4 ರೋಗಿಗಳಲ್ಲಿ ಇದು ಹೆಚ್ಚಾಗಿದ್ದು ಚಿಕಿತ್ಸಾ ಸಾಮರ್ಥ್ಯವನ್ನು ಹೊಂದಿದೆ, ಇಲ್ಲಿ ಚಿಕಿತ್ಸೆಗೆ ಪ್ರತಿಕ್ರಿಯಿಸುವ ರೋಗಿಗಳ ಪ್ರಮಾಣವು ದೀರ್ಘಾವಧಿಯ ಬದುಕುಳಿಯುವಿಕೆಯನ್ನು ಹೊಂದಿರುತ್ತದೆ. ಉದಾಹರಣೆಗೆ, ಹಂತ-4 ಕಿಡ್ನಿ ಕ್ಯಾನ್ಸರ್ ಹೊಂದಿರುವ ನಮ್ಮ ರೋಗಿಗಳಲ್ಲಿ ಒಬ್ಬರು ಮೂಳೆಗಳು ಮತ್ತು ಲಿವರ್ ದುಗ್ಧರಸ ಗ್ರಂಥಿಗಳಿಗೆ ಹರಡುವ ಪರಿಣಾಮಗಳನ್ನು ಇಮ್ಯುನೊಥೆರಪಿ ಚಿಕಿತ್ಸೆಯ ನಂತರ ರೋಗಿಯು ಸ್ಪಂದಿಸುತ್ತ ಐದು ವರ್ಷಗಳಿಗಿಂತಲೂ ಹೆಚ್ಚು ಕಾಲ ಚೇತರಿಸಿಕೊಂಡಿದ್ದಾರೆ.

ಉದ್ದೇಶಿತ ಚಿಕಿತ್ಸೆಯೊಂದಿಗೆ ಕ್ಯಾನ್ಸರ್‌ಗೆ ಟಾರ್ಗೆಟೆಡ್ ಥೆರಫಿ ನೀಡಲಾಗುತ್ತದೆ. ಕ್ಯಾನ್ಸರ್ ಕೋಶಗಳು ಬದುಕಲು ಮತ್ತು ಬೆಳೆಯಲು ಸಹಾಯ ಮಾಡುವ ಕೆಲವು ಜೀನ್‌ಗಳು, ಗ್ರಾಹಕಗಳು ಅಥವಾ ಪ್ರೋಟೀನ್‌ಗಳನ್ನು ಗುರಿಯಾಗಿಸಲು ಈ ರೂಪವು ಔಷಧಿಗಳನ್ನು ಬಳಸುತ್ತದೆ. ಈ ರೂಪಾಂತರಗಳನ್ನು ಗುರುತಿಸಲು ಮತ್ತು ಸೂಕ್ತವಾದ ಉದ್ದೇಶಿತ ಚಿಕಿತ್ಸೆಯನ್ನು ಆಯ್ಕೆ ಮಾಡಲು ನಾವು ಅತ್ಯಾಧುನಿಕ ಆಣ್ವಿಕ ಪರೀಕ್ಷೆಗಳನ್ನು ಬಳಸುತ್ತೇವೆ, ಅದು ಮೌಖಿಕ ಮಾತ್ರೆಗಳು ಅಥವಾ IV ಚುಚ್ಚುಮದ್ದಿನ ರೂಪದಲ್ಲಿರಬಹುದು, ಶ್ವಾಸಕೋಶದ ಕ್ಯಾನ್ಸರ್‌ನಲ್ಲಿ ಇದು ಉತ್ತಮ ಸಹಾಯವಾಗಿದೆ, ವಿಶೇಷವಾಗಿ ಧೂಮಪಾನಿಗಳಲ್ಲದವರೂ ಶ್ವಾಸ ಕೋಶ ಕ್ಯಾನ್ಸ್‌ರ್‌ಗೆ ಒಳಗಾದರೆ ಟಾರ್ಗೆಟೆಡ್ ಓರಲ್ ಥೆರಪಿ ಮತ್ತು ಮಾತ್ರೆಗಳ ಮುಖಾಂತರ ಅವರಿಗೆ ಚಿಕಿತ್ಸೆ ನೀಡಬಹುದು.

ಕ್ಯಾನ್ಸರ್ ಬಗ್ಗೆ ನಮ್ಮಲ್ಲಿ ಸಾಕಷ್ಟು ಅಂತೆ–ಕಂತೆಗಳ ಸಂದೇಹಗಳಿವೆಯಲ್ಲ...

ನಾವು ಎದುರಿಸುವ ಅತ್ಯಂತ ಸಾಮಾನ್ಯ ಸಂದೇಹವೆಂದರೆ ಕ್ಯಾನ್ಸರ್ ಗುಣಪಡಿಸಲು ಸಾಧ್ಯವಿಲ್ಲ ಮತ್ತು ಅದು ಯಾವಾಗಲೂ ಒಂದು ಟರ್ಮಿನಲ್ ಕಾಯಿಲೆಯಾಗಿದೆ. ಇದು ನಿಜವಲ್ಲ. ಇದನ್ನು ಗುಣಪಡಿಸಬಹುದು, ವಿಶೇಷವಾಗಿ ಆರಂಭಿಕವಾಗಿ ಪತ್ತೆಯಾದರೆ, ಮತ್ತು ವ್ಯಕ್ತಿಯು ಒಮ್ಮೆ ಗುಣಮುಖನಾದ ನಂತರ ಸಾಮಾನ್ಯ ಜೀವನ ನಡೆಸಬಹುದು.

ಸಾಮಾನ್ಯ ಕ್ಯಾನ್ಸರ್‌ಗಳಲ್ಲಿ ಗರ್ಭಕಂಠ ಮತ್ತು ಬ್ರೆಸ್ಟ್ ಕ್ಯಾನ್ಸರ್, ಕರುಳಿನ ಕ್ಯಾನ್ಸರ್‌ಗಾಗಿ ಸ್ಕ್ರೀನಿಂಗ್ ಪರೀಕ್ಷೆಗಳನ್ನು ಮಾಡುವುದು ಮುಖ್ಯ. ಇದು ಆರಂಭಿಕ ಪತ್ತೆಹಚ್ಚುವಿಕೆ ಮತ್ತು ಗುಣಪಡಿಸುವ ಉತ್ತಮ ಅವಕಾಶಗಳನ್ನು ಶಕ್ತಗೊಳಿಸುತ್ತದೆ.

ಮತ್ತೊಂದು ಮಿಥ್ಯೆಯೆಂದರೆ ಕ್ಯಾನ್ಸರ್ ಒಂದು ಪಾರಂಪರಿಕ ಕಾಯಿಲೆಯಾಗಿದೆ, ಆದರೆ ಕೇವಲ 15-20 ಪ್ರತಿಶತದಷ್ಟು ಕ್ಯಾನ್ಸರ್ ಪ್ರಕರಣಗಳು ಮಾತ್ರ ಪಾರಂಪರಿಕವಾಗಿವೆ. ಉಳಿದವುಗಳು ತಂಬಾಕು ಮತ್ತು ಆಲ್ಕೋಹಾಲ್ ಬಳಕೆ, ರಾಸಾಯನಿಕಗಳಿಗೆ ಒಡ್ಡಿಕೊಳ್ಳುವುದು, ದೈಹಿಕ ಚಟುವಟಿಕೆಯ ಕೊರತೆ, ಬೊಜ್ಜು, ಅನುಚಿತ ಆಹಾರ, ಅಥವಾ ಹ್ಯೂಮನ್ ಪಾಪಿಲ್ಲೋಮಾ ವೈರಸ್ (HPV) ಮತ್ತು ಹೆಪಟೈಟಿಸ್ ಬಿ ವೈರಸ್ ನಂತಹ ಕೆಲವು ಕ್ಯಾನ್ಸರ್ ಉಂಟುಮಾಡುವ ವೈರಸ್ ಗಳೊಂದಿಗಿನ ಸೋಂಕಿನಂತಹ ವಿವಿಧ ಅಪಾಯದ ಅಂಶಗಳಿಂದ ಉಂಟಾಗುತ್ತವೆ.

ಹೆಚ್ಚಿನ ಕ್ಯಾನ್ಸರ್ ಚಿಕಿತ್ಸೆಗಳ ಬೆನ್ನೆಲುಬಾಗಿರುವ ಕೀಮೋಥೆರಪಿಗೆ ಅನೇಕ ಜನರು ಭಯಪಡುತ್ತಾರೆ. ಕೀಮೋಥೆರಪಿಯ ಉಲ್ಲೇಖದ ಮೇರೆಗೆ ಡೇ ಕೇರ್‌ನಲ್ಲೇ ಚಿಕಿತ್ಸೆ ನೀಡುವ ಮುಖೇನ ಬೆಳಗ್ಗೆ ಚಿಕಿತ್ಸೆ ನೀಡಿ ಸಂಜೆ ಕಳುಹಿಸುತ್ತೇವೆ. ಮತ್ತು ಕೀಮೋಥೆರಪಿಗಿಂತ ಹೆಚ್ಚಾಗಿ ವೈದ್ಯರು ಸೂಚಿಸುವ ಮಾತ್ರೆಗಳ ರೂಪದಲ್ಲಿ ಸುಧಾರಿತ ಚಿಕಿತ್ಸೆ ನೀಡಲಾಗುತ್ತದೆ. ಕಿಮೊಥೆರಪಿ ಸಮಯದಲ್ಲಿ ಉಂಟಾಗುವ ಕೂದಲು ಉದುರುವಿಕೆ, ರುಚಿಯ ನಷ್ಟದಂತಹ ಅಡ್ಡಪರಿಣಾಮಗಳು ತಾತ್ಕಾಲಿಕ ಎಂದು ಜನರು ಅರ್ಥಮಾಡಿಕೊಳ್ಳಬೇಕು. ಕೆಲವು ಜನರು ಕೀಮೋಥೆರಪಿಯ ಅಪಾಯವನ್ನು ಹೊಂದಿರಬಹುದು, ಇದು ಬೆಳವಣಿಗೆಯ ಅಂಶಗಳು ಅಥವಾ ವರ್ಗಾವಣೆಗಳೊಂದಿಗೆ ನಿರ್ವಹಿಸಲ್ಪಡುತ್ತದೆ, ಇದು ಅವರ ರಕ್ತದ ಕಣಗಳ ಸಂಖ್ಯೆಯಲ್ಲಿ ಕುಸಿತವನ್ನ ಉಂಟುಮಾಡುತ್ತದೆ. ಕೀಮೋಥೆರಪಿ ಖಂಡಿತವಾಗಿಯೂ ಪರಿಣಾಮಕಾರಿ ಮತ್ತು ಹಾನಿಕಾರಕವಲ್ಲ ಎಂದು ವಿವರಿಸಲು ನಾವು ಕ್ಯಾನ್ಸರ್ ಅನ್ನು ಜಯಿಸಿದ ಪ್ರಮುಖ ನಟಿಯರ ಮತ್ತು ಕ್ರಿಕೆಟಿಗರ ಕಥೆಗಳನ್ನು ಉಲ್ಲೇಖಿಸುತ್ತೇವೆ. ಇತರೆ ಕ್ಯಾನ್ಸರ್‌ನಿಂದ ಬದುಕುಳಿದ ಸಾಮಾನ್ಯ ಜನರು ಮತ್ತು ಪ್ರೋತ್ಸಾಹ ನೀಡಿ ಸಕಾರಾತ್ಮಕ ಸ್ಪಂದಿಸುವ ಗುಂಪುಗಳೊಂದಿಗೆ ಸೇರುವುದು, ಮಾತನಾಡುವುದರ ಮೂಲಕ ಭರವಸೆ ಹಾಗೂ ಧೈರ್ಯ ತಾಳುತ್ತಾರೆ. ಇದರಿಂದ ಪರಿಪೂರ್ಣ ಚಿಕಿತ್ಸೆಗೆ ಮುಂದುವರಿಯಲು ಸಹಾಯ ಮಾಡುತ್ತದೆ.

ಡಾ.ನಿತೀನ್ ಅವರನ್ನ ಭೇಟಿ ಮಾಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

एसटीपीआई STPI | Ministry of Electronics and Information Technology, Government of India | G20

Furthering Innovation, Promoting Entrepreneurship in Karnataka

"Ranging from Startup India to Smart India Hackathon, IN-SPACe to Indian Semiconductor Mission, our constant impetus is on bringing together the best minds through innovative institutions and promoting the spirit of collective efforts."

Inauguration of
Software Technology Parks of India Davanagere Centre, Karnataka

Benefits for the IT companies & startups of the region

- Ready to use incubation space
- Employment opportunities to local youth
- Promotion of software exports
- Boost investment
- Nurture tech startup ecosystem
- High speed internet facility
- Data centre and cloud services
- Modern conference hall & meeting room

November 25, 2022

Venue:
Software Technology Parks of India (STPI)
KSOU Regional Center, J.H Patel Layout, Behind Shamanur, Naganur Raod, Davanagere-577602
For more details visit: www.stpi.in

ಕೆಎಸ್‌ಆರ್‌ಟಿಸಿ ಬಸ್ ಚಕ್ರ ಹರಿದು ಸವಾರ ಸಾವು

ಆರೀಸ್

ಬೆಂಗಳೂರು: ಜೀವನ್‌ಬಿಮಾನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಕೆಎಸ್ ಆರ್‌ಟಿಸಿ ಬಸ್ ಹಾಗೂ ಬೈಕ್ ನಡುವೆ ಬುಧವಾರ ಅಪಘಾತ ಸಂಭವಿಸಿದ್ದು, ಸವಾರ ಆರೀಸ್ (26) ಮೃತಪಟ್ಟಿದ್ದಾರೆ.

'ಹೊಸನಗರ ತಾಲ್ಲೂಕಿನ ಮೂಡು ಗೊಪ್ಪದ ಆರೀಸ್, ಹಲವು ವರ್ಷಗಳಿಂದ ನಗರದಲ್ಲಿ ನೆಲೆಸಿದ್ದರು. ಅವರು ಬುಧವಾರ ಸಂಜೆ 6.50ರ ಸುಮಾರಿಗೆ ಬಜಾಜ್ ಪಲ್ಸರ್ ಬೈಕ್‌ನಲ್ಲಿ ಹೊರಟಿದ್ದಾಗ ಅವಘಡ ಸಂಭವಿಸಿದೆ' ಎಂದು ಸಂಚಾರ ಪೊಲೀಸರು ಹೇಳಿದರು.

'ಎಚ್‌ಎಎಲ್ ಕಡೆಯಿಂದ ಐಎಸ್‌ಆರ್‌ಒ ಕಡೆಗೆ ಕೆಎಸ್‌ಆರ್‌ಟಿಸಿ ಬಸ್ ಹೊರಟಿತ್ತು. ಚಾಲಕ, ಅತಿ ವೇಗವಾಗಿ ನಿರ್ಲಕ್ಷ್ಯದಿಂದ ಬಸ್ ಚಲಾಯಿಸಿದ್ದ. ಇದೇ ರಸ್ತೆಯಲ್ಲಿ ಹೊರಟಿದ್ದ ಆರೀಸ್ ಬೈಕ್‌ಗೆ ಬಸ್ ಡಿಕ್ಕಿ ಹೊಡೆದಿತ್ತು.'

'ಬೈಕ್ ಸಮೇತ ರಸ್ತೆಯಲ್ಲಿ ಬಿದ್ದಿದ್ದ ಆರೀಸ್ ತಲೆ ಮೇಲೆ ಬಸ್ಸಿನ ಮುಂಭಾಗದ ಬಲ ಚಕ್ರ ಹರಿದಿತ್ತು. ತೀವ್ರ ಗಾಯಗೊಂಡ ಆರೀಸ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ಬಸ್ ಚಾಲಕನ ನಿರ್ಲಕ್ಷ್ಯದಿಂದಲೇ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಬಸ್ ಜಪ್ತಿ ಮಾಡಿ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ' ಎಂದರು.

ವಿಮಾನ ನಿಲ್ದಾಣ ರೈಲು ಪ್ರಯಾಣಕ್ಕೆ ನಿರಾಸಕ್ತಿ • ಸಿಟಿಜನ್ ಫಾರ್ ಸಿಟಿಜನ್‌ನಿಂದ ಸರ್ವೆ

6 ಮೆಮು, 18 ಪ್ರಯಾಣಿಕರು!

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳುವ ಪ್ರಯಾಣಿಕರ ಅನುಕೂಲಕ್ಕಾಗಿ ನಿರ್ಮಿಸಿದ ರೈಲು ನಿಲುಗಡೆ ತಾಣ ಪ್ರಯಾಣಿಕರ ಕೊರತೆ ಎದುರಿಸುತ್ತಿದೆ. ಈ ಮಾರ್ಗದಲ್ಲಿ ದಿನಕ್ಕೆ ಆರು ಮೆಮು ರೈಲುಗಳು ಸಂಚರಿಸುತ್ತಿದ್ದು, ಅಷ್ಟೂ ರೈಲುಗಳಲ್ಲಿ ದಿನಕ್ಕೆ ಸರಾಸರಿ 18 ಜನ ಪ್ರಯಾಣ ಮಾಡುತ್ತಿದ್ದಾರೆ!

ಸಿಟಿಜನ್ ಫಾರ್ ಸಿಟಿಜನ್ (ಸಿ4ಸಿ) ಸಂಘಟನೆ ಮಾಡಿರುವ ಸರ್ವೆಯಿಂದ ಈ ಅಂಶ ಬೆಳಕಿಗೆ ಬಂದಿದೆ. ಬೆಂಗಳೂರಿನಿಂದ ವಿಮಾನ ನಿಲ್ದಾಣದ ಕಡೆಗೆ ಸರಾಸರಿ 18 ಜನ ಮತ್ತು ವಿಮಾನ ನಿಲ್ದಾಣದ ಕಡೆಯಿಂದ ಬೆಂಗಳೂರಿಗೆ 14 ಜನರಷ್ಟೇ ಪ್ರಯಾಣ ಮಾಡುತ್ತಿದ್ದಾರೆ.

ಈ ಮಾರ್ಗದಲ್ಲಿ ಎಂಟು ರೈಲುಗಳ ಸಂಚರಿಸುತ್ತಿದ್ದು, ಎರಡು ಡೆಮು ರೈಲುಗಳು ಚಿಕ್ಕಬಳ್ಳಾಪುರ ತನಕ ಹೋಗಿ ಬರುತ್ತಿವೆ. ಚಿಕ್ಕಬಳ್ಳಾಪುರದ ತನಕ ಹೋಗುವ ರೈಲುಗಳಲ್ಲಿ ಜನ ಪ್ರಯಾಣಿಸುತ್ತಿದ್ದಾರೆ. ದೇವನಹಳ್ಳಿ ತನಕ ಹೋಗಿ ಬರುವ ಮೆಮು ರೈಲುಗಳು ಪ್ರಯಾಣಿಕರ ಕೊರತೆ ಎದುರಿತ್ತಿದ್ದು, ಖಾಲಿ ತಿರುಗುತ್ತಿವೆ. 'ಕೆಲವು ದಿನ ಒಬ್ಬರೂ ಪ್ರಯಾಣಿಕರಿಲ್ಲದೆ ರೈಲು ಸಂಚರಿಸಿದ ಉದಾಹರಣೆಯೂ ಇದೆ' ಎನ್ನುತ್ತಾರೆ ಸಿ4ಸಿ ಸಂಸ್ಥಾಪಕ ರಾಜ್‌ಕುಮಾರ್ ದುಗಾರ್.

ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಪ್ರಯಾಣಿಕರ ಸೇವೆಗೆ ಸಿದ್ಧಗೊಂಡಿರುವ ಕೆಂಪೇಗೌಡ ಹಾಲ್ಟ್ ರೈಲ್ವೆ ಸ್ಟೇಷನ್ – ಪ್ರಜಾವಾಣಿ ಚಿತ್ರ

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರದ (ಬಿಐಎಎಲ್) ಜತೆ ಸಮಾಲೋಚನೆ ನಡೆಸಿ ಅವರ ಸಲಹೆಯಂತೆ 2019–20ರಲ್ಲಿ ವಿಮಾನ ನಿಲ್ದಾಣದ ಬಳಿ ನಿಲುಗಡೆ ತಾಣ ನಿರ್ಮಿಸಲಾಯಿತು. 2022ರ ಸೆಪ್ಟೆಂಬರ್ 29ರಂದು ಎಂಟು ರೈಲುಗಳ ಸಂಚಾರ ಆರಂಭಿಸಲಾಯಿತು. ಈ ನಿಲಗಡೆ ತಾಣದಲ್ಲಿ ಇಳಿಯುವ ಪ್ರಯಾಣಿಕರನ್ನು ಕರೆದೊಯ್ಯಲು ಬಸ್‌ಗಳ ವ್ಯವಸ್ಥೆಯನ್ನೂ ಬಿಐಎಎಲ್ ಮಾಡಿದೆ. ಆದರೂ, ಪ್ರಯಾಣಿಕರ ರೈಲುಗಳನ್ನು ಹತ್ತಲು ಹಿಂದೇಟು ಹಾಕುತ್ತಿದ್ದಾರೆ.

ರೈಲು ಇಳಿದು ಬಸ್ ಹತ್ತಿ ಹೋಗುವುದು ಪ್ರಯಾಣಿಕರಿಗೆ ಕಿರಿಕಿರಿ ಎನಿಸುತ್ತಿದೆ. ಆದ್ದರಿಂದಲೇ ವಿಮಾನ ನಿಲ್ದಾಣದಲ್ಲಿ ಕೆಲಸ ಮಾಡುವ ಉದ್ಯೋಗಿಗಳೂ ರೈಲುಗಳನ್ನು ಬಳಕೆ ಮಾಡುತ್ತಿಲ್ಲ ಎಂದು ದುಗಾರ್ ಹೇಳುತ್ತಾರೆ.

ಏರ್‌ಪೋರ್ಟ್‌ಗೆ ಬೇಕು ಜೋಡಿ ಮಾರ್ಗ: ರೈಲ್ವೆ ಹೋರಾಟಗಾರರು

ಈಗಿರುವ ರೈಲು ಮಾರ್ಗವನ್ನು ಜೋಡಿ ಮಾರ್ಗವಾಗಿ ಪರಿವರ್ತಿಸಲು ರೈಲ್ವೆ ಇಲಾಖೆ ಮುಂದಾಗಿದೆ. ಆದರೆ, ಅದು ವಿಮಾನ ನಿಲ್ದಾಣದ ಟರ್ಮಿನಲ್ ತನಕ ನಿರ್ಮಾಣವಾದರೆ ಸೂಕ್ತ ಎಂಬುದು ರೈಲ್ವೆ ಹೋರಾಟಗಾರರ ಅಭಿಪ್ರಾಯ.

ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಇತ್ತೀಚೆಗೆ ನಗರಕ್ಕೆ ಭೇಟಿ ನೀಡಿದ್ದ ವೇಳೆ ವಿಮಾನ ನಿಲ್ದಾಣ ರೈಲು ಮಾರ್ಗವನ್ನು ಜೋಡಿ ಮಾರ್ಗವಾಗಿ ಪರಿವರ್ತಿಸಲು ಕೂಡಲೇ ಪ್ರಸ್ತಾವನೆ ಸಲ್ಲಿಸಲು ತಿಳಿಸಿದ್ದರು. ತರಾತುರಿಯಲ್ಲಿ ಸರ್ವೆ ನಡೆಸಿರುವ ಅಧಿಕಾರಿಗಳು, ಈಗಿರುವ ದೇವನಹಳ್ಳಿ ಮಾರ್ಗವನ್ನೇ ಜೋಡಿ ಮಾರ್ಗವಾಗಿ ಪರಿವರ್ತಿಸಲು ಮುಂದಾಗಿದ್ದಾರೆ ಎಂದು ರಾಜ್‌ಕುಮಾರ್ ಹೇಳಿದರು.

'ಹೀಗೆ ಮಾಡುವುದರಿಂದ ಪ್ರಯಾಣಿಕರಿಗೆ ಯಾವ ಉಪಯೋಗವೂ ಆಗುವುದಿಲ್ಲ. ಈ ಕುರಿತು ರೈಲ್ವೆ ವಿಭಾಗೀಯ ವ್ಯವಸ್ಥಾಪಕರಿಗೆ ಪತ್ರವನ್ನೂ ಗುರುವಾರ ಬರೆದಿದ್ದೇನೆ' ಎಂದರು.

'ಯಲಹಂಕದಿಂದ ವಿಮಾನ ನಿಲ್ದಾಣಕ್ಕೆ 20 ಕಿಲೋ ಮೀಟರ್ ದೂರ ಇದೆ. ದೊಡ್ಡ ಜಾಲ ತನಕ 15 ಕಿಲೋ ಮೀಟರ್‌ನಲ್ಲಿ ಈಗಾಗಲೇ ಒಂದು ಮಾರ್ಗ ಇದೆ. ಅದನ್ನು ಜೋಡಿ ಮಾರ್ಗವಾಗಿ ಪರಿವರ್ತಿಸಬೇಕು, ಅಲ್ಲಿಂದ ವಿಮಾಣ ನಿಲ್ದಾಣಕ್ಕೆ 5 ಕಿಲೋ ಮೀಟರ್ ಮಾತ್ರ ಹೊಸ ಜೋಡಿ ಮಾರ್ಗ ನಿರ್ಮಿಸಬೇಕು ಎಂಬುದು ನಮ್ಮ ಸಲಹೆ' ಎಂದು ಹೇಳಿದರು.

'ಈಗ ಎಂಟು ರೈಲುಗಳಿದ್ದರೂ ಜನ ಪ್ರಯಾಣಿಸುತ್ತಿಲ್ಲ. ಈ ಮಾರ್ಗದಲ್ಲೇ ಇನ್ನೂ 800 ರೈಲುಗಾಡಿಗಳನ್ನು ಓಡಿಸಿದರೂ ವಿಮಾನ ಪ್ರಯಾಣಿಕರು ರೈಲು ಹತ್ತುವುದಿಲ್ಲ. ಸ್ವಲ್ಪ ಪ್ರಾಯೋಗಿಕವಾಗಿ ಯೋಚನೆ ಮಾಡಿ ವಿಮಾನ ನಿಲ್ದಾಣದ ಟರ್ಮಿನಲ್ ಬಳಿಗೇ ರೈಲುಗಳ ಹೋಗುವಂತೆ ಮಾಡಿದರೆ ಎಲ್ಲರಿಗೂ ಅನುಕೂಲ' ಎಂದು ವಿವರಿಸಿದರು.

ಸುದ್ದಿ 2 ನಿಮಿಷ

ಮೊಬೈಲ್ ಕಳವು: 'ಚಿಕನ್ ಕಬಾಬ್' ವ್ಯಾಪಾರಿ ಬಂಧನ

ಬೆಂಗಳೂರು: ನಗರದ ಹಲವೆಡೆ ಮೊಬೈಲ್ ಕಳ್ಳತನ ಮಾಡಿದ್ದ ಆರೋಪದಡಿ ಮೊಹಮ್ಮದ್ ಇಮ್ರಾನ್ ಅಲಿಯಾಸ್ ಗೂಡೂಸ್ (35) ಎಂಬುವರನ್ನು ವಿಲ್ಸನ್ ಗಾರ್ಡನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಚಾಮರಾಜಪೇಟೆ ಟಿಪ್ಪುನಗರ ನಿವಾಸಿ ಇಮ್ರಾನ್, ಮೈಸೂರು ರಸ್ತೆಯಲ್ಲಿ ಚಿಕನ್ ಕಬಾಬ್ ಮಳಿಗೆ ಇಟ್ಟುಕೊಂಡಿದ್ದ. ಇದರ ಜೊತೆಯಲ್ಲೇ ಮೊಬೈಲ್ ಕಳ್ಳತನ ಮಾಡುತ್ತಿದ್ದ. ಕೆಲ ಪುರಾವೆಗಳನ್ನು ಆಧರಿಸಿ ಇಮ್ರಾನ್‌ನನ್ನು ಬಂಧಿಸಲಾಗಿದ್ದು, ₹ 1.10 ಲಕ್ಷ ಮೌಲ್ಯದ 18 ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ವ್ಯಾಪಾರ ಸ್ಥಳ, ಮಾರುಕಟ್ಟೆ ಹಾಗೂ ವಿವಿಧೆಡೆ ಸಂಚರಿಸುತ್ತಿದ್ದ ಆರೋಪಿ ಜನರ ಗಮನ ಬೇರೆಡೆ ಸೆಳೆದು ಮೊಬೈಲ್ ಕದಿಯುತ್ತಿದ್ದ. ಇತ್ತೀಚೆಗಷ್ಟೇ ಕದ್ದ ಮೊಬೈಲ್‌ಗಳನ್ನು ಮನೆಯಲ್ಲಿಟ್ಟುಕೊಂಡಿದ್ದ. ಅವುಗಳನ್ನು ಮಾರಲು ಯತ್ನಿಸುತ್ತಿದ್ದ. ಮನೆ ಮೇಲೆ ದಾಳಿ ಮಾಡಿ ಮೊಬೈಲ್ ಜಪ್ತಿ ಮಾಡಲಾಗಿದೆ. ಆರೋಪಿ, ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದ ಮಾಹಿತಿ ಇದೆ' ಎಂದು ಹೇಳಿದರು.

'ಆರೋಗ್ಯ ಸೌಲಭ್ಯ ಕೊರತೆ ಬಹಿರಂಗಪಡಿಸಿದ ಕೋವಿಡ್'

ಬೆಂಗಳೂರು: 'ಆರೋಗ್ಯ ವಿಪತ್ತುಗಳನ್ನು ಎದುರಿಸುವ ಕೊರತೆಯನ್ನು ಕೋವಿಡ್–19 ಪಿಡುಗು ಬಹಿರಂಗಪಡಿಸಿತು' ಎಂದು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಕೇಂದ್ರದ (ಐಸೆಕ್) ಆಡಳಿತ ಮಂಡಳಿಯ ಸದಸ್ಯ ಮತ್ತು ಮಾಜಿ ನಿರ್ದೇಶಕ ಪ್ರೊ. ಆರ್.ಎಸ್. ದೇಶಪಾಂಡೆ ಅವರು ಹೇಳಿದರು.

ಐಸೆಕ್ ಆಯೋಜಿಸಿದ್ದ 'ವಲಸೆ ಮತ್ತು ಅಸಂಘಟಿತ ವಲಯದ ಕಾರ್ಮಿಕರ ಮೇಲೆ ಕೋವಿಡ್-19 ಪರಿಣಾಮ' ಕುರಿತ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿದ ಅವರು, ಈ ಸಾಂಕ್ರಾಮಿಕ ಕಾಯಿಲೆ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಹತ್ತು ರೋಗಿಗಳಲ್ಲಿ ಆರು ಮಂದಿ ಮೃತಪಟ್ಟರು. ಆದರೆ, ಮನೆಯಲ್ಲಿದ್ದ 10 ಮಂದಿಯಲ್ಲಿ ಮೂವರು ಮಾತ್ರ ಸಾವಿಗೀಡಾಗಿದ್ದಾರೆ. ವೈಜ್ಞಾನಿಕ ಅಥವಾ ವೈದ್ಯಕೀಯ ವೈಫಲ್ಯಗಳ ಕಾರಣಕ್ಕೆ ಆಸ್ಪತ್ರೆಯಲ್ಲೇ ಹೆಚ್ಚು ಮಂದಿ ಸಾವಿಗೀಡಾಗಿರಬಹುದು. ಹೀಗಾಗಿ, ಸಾರ್ವಜನಿಕ ಆರೋಗ್ಯ ಸೌಲಭ್ಯಗಳನ್ನು ಹೆಚ್ಚಿಸಲು ಈಗ ಸಕಾಲವಾಗಿದೆ' ಎಂದು ವಿಶ್ಲೇಷಿಸಿದರು.

ಐಸೆಕ್ ಆಡಳಿತ ಮಂಡಳಿಯ ಅಧ್ಯಕ್ಷ ಪ್ರೊ. ಸುಖದೇವ್ ಥೋರಾಟ್, ನಿರ್ದೇಕ ಪ್ರೊ. ಡಿ. ರಾಜಶೇಖರ್, ಸಹಾಯಕ ಪ್ರಾಧ್ಯಾಪಕಿ ಡಾ. ಮಾಲಿನಿ ತಂತ್ರಿ, ಡಾ. ಎಸ್. ಮಾನಸಿ ಇದ್ದರು.

ಜಯ ಕರ್ನಾಟಕ ಸಂಘಟನೆಯಿಂದ ಆಯೋಜನೆ

ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್ ಅವರಿಂದ ಸಮ್ಮೇಳನ ಉದ್ಘಾಟನೆ. ಸಂಜೆ 6ಕ್ಕೆ ಶಮಿತಾ ಮಲ್ನಾಡ್ ತಂಡದವರಿಂದ ಕಾರ್ಯಕ್ರಮ

26ಕ್ಕೆ ವಿಶ್ವ ಕನ್ನಡಿಗರ ಸಮ್ಮಿಲನ

ಬೆಂಗಳೂರು: ಜಯ ಕರ್ನಾಟಕ ಸಂಘಟನೆಯು ಇದೇ ಶನಿವಾರ ಬೆಳಿಗ್ಗೆ 10 ಗಂಟೆಗೆ ಅರಮನೆ ಮೈದಾನದ ಶೀಷ ಮಹಲ್‌ನಲ್ಲಿ ವಿಶ್ವ ಕನ್ನಡಿಗರ ಸಮ್ಮೇಳನ ಹಮ್ಮಿಕೊಂಡಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘಟನೆಯ ರಾಜ್ಯಾಧ್ಯಕ್ಷ ಬಿ.ಎನ್. ಜಗದೀಶ್, 'ಸಂಜೆ 4 ಗಂಟೆಗೆ ವೇದಿಕೆ ಮತ್ತು ಸಾಧಕರ ಸಮ್ಮಿಲನ ಕಾರ್ಯಕ್ರಮ ನಡೆಯಲಿದೆ. ಈ ಕಾರ್ಯಕ್ರಮವನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ಉದ್ಘಾಟಿಸಲಿದ್ದಾರೆ' ಎಂದರು.

'ಸಾಹಿತಿ ನರೇಂದ್ರ ರೈ ದೇರ್ಲ, ರಾಜ್ಯ ಸಭೆ ಸದಸ್ಯ ಜಿ.ಸಿ. ಚಂದ್ರಶೇಖರ್, ವೈದ್ಯ ಡಾ. ಅಂಜನಪ್ಪ, ವಕೀಲ ಸುಬ್ಬಾರೆಡ್ಡಿ, ತಾಂತ್ರಿಕ ಸಲಹೆಗಾರ ಎಚ್. ರಾಜ ಸಿಂಹ, ಗೋಕುಲ್‌ದಾಸ್ ಎಕ್ಸ್‌ಪೋರ್ಟ್ಸ್‌ನ ಮಾಜಿ ಉಪಾಧ್ಯಕ್ಷ ಲಕ್ಷ್ಮಣ್ ಪೂಜಾರಿ, ಶಿಕ್ಷಣ ತಜ್ಞ ನಿರಂಜನಾರಾಧ್ಯ ವಿ.ಪಿ., ಚಿತ್ರ ಸಾಹಿತಿ ವಿ. ನಾಗೇಂದ್ರ ಪ್ರಸಾದ್, ಕೃಷಿ ಉದ್ಯಮಿ ಕವಿತಾ ಮಿಶ್ರಾ, ಸಾಹಿತ್ಯ ಮತ್ತು ಪ್ರಾಚೀನ ಇತಿಹಾಸ ಪ್ರಚಾರಕ ಧರ್ಮೇಂದ್ರ ಕುಮಾರ್, ಪತ್ರಕರ್ತೆ ವಿಜಯಲಕ್ಷ್ಮೀ ಶಿಬರೂರು, ಸಮಾಜ ಸೇವಕಿ ನಕ್ಷತ್ರಾ, ಕರ್ನಾಟಕ ಜನಸೇನಾ ಟ್ರಸ್ಟ್ ಸಂಸ್ಥಾಪಕ ಪ್ರಶಾಂತ್ ಚಕ್ರವರ್ತಿ, ಹವ್ಯಾಸಿ ಸಾಹಸ ಕ್ರೀಡಾಪಟು ಜ್ಯೋತಿ ರಾಜ್, ಇನ್ಸಾನಿಯತ್ ಚಾರಿಟಬಲ್ ಟ್ರಸ್ಟ್‌ನ ಅಯೂಬ್ ಅಹ್ಮದ್ ಮತ್ತು ಸಮಾಜ ಸೇವಕಿ, ಕನ್ನಡತಿ ಅನು ಅವರಿಗೆ 'ಸೇವಾರತ್ನ ಪ್ರಶಸ್ತಿ' ಪ್ರದಾನ ಮಾಡಲಾಗುವುದು' ಎಂದರು.

ಮೈಸೂರು–ಚೆನ್ನೈ ನಡುವಿನ ಮಾರ್ಗ: ವೇಗ ಹೆಚ್ಚಳಕ್ಕೆ ಅಧ್ಯಯನ

ವಂದೇ ಭಾರತ್ ರೈಲಿಗೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು–ಚೆನ್ನೈ ನಡುವೆ ಸಂಚರಿಸುತ್ತಿರುವ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಪ್ರಯಾಣಕ್ಕೆ ದಿನದಿಂದ ದಿನಕ್ಕೆ ಬೇಡಿಕೆ ಹೆಚ್ಚಾಗುತ್ತಿದ್ದು, ಈ ನಡುವೆ ವೇಗವನ್ನು ಇನ್ನಷ್ಟು ಹೆಚ್ಚಿಸಲು ಕಾರ್ಯಾ ಸಾಧ್ಯತಾ ಅಧ್ಯಯವನ್ನು ನೈರುತ್ಯ ರೈಲ್ವೆ ಆರಂಭಿಸಿದೆ.

ವಂದೇ ಭಾರತ್ ರೈಲು ಚೆನ್ನೈನಿಂದ ಮೈಸೂರಿಗೆ 6 ಗಂಟೆ 30 ನಿಮಿಷದಲ್ಲಿ ತಲುಪುತ್ತಿದ್ದು, ಶತಾಬ್ದಿ ರೈಲು ಸಂಚಾರಕ್ಕೆ 7 ಗಂಟೆ ಬೇಕಾಗುತ್ತಿದೆ. ಅದೇ ರೀತಿ ಮೈಸೂರಿನಿಂದ ಚೆನ್ನೈಗೆ ವಂದೇ ಭಾರತ್ ರೈಲು 6.25 ನಿಮಿಷಕ್ಕೆ ತೆರಳುತ್ತಿದ್ದು, ಶತಾಬ್ದಿ ರೈಲು 7 ಗಂಟೆ 15 ನಿಮಿಷ ತೆಗೆದುಕೊಳ್ಳುತ್ತಿದೆ.

'ಸದ್ಯ ಮೈಸೂರು, ಚೆನ್ನೈ ನಡುವೆ ಇರುವ ರೈಲು ಹಳಿಯಲ್ಲಿ ಗಂಟೆಗೆ 100ರಿಂದ 110 ಕಿಲೋ ಮೀಟರ್ ವೇಗದಲ್ಲಿ ಮಾತ್ರ ಸಂಚರಿಸಲು ಸಾಧ್ಯವಿದೆ. ಅದನ್ನು 130 ಕಿಲೋ ಮೀಟರ್‌ಗೆ ಹೆಚ್ಚಿಸಲು ಸಾಧ್ಯವೇ ಎಂಬುದರ ಬಗ್ಗೆ ಅಧ್ಯಯನ ನಡೆಸಲಾಗುತ್ತಿದೆ. ಕಾರ್ಯಸಾಧ್ಯತಾ ವರದಿ ಆಧರಿಸಿ ಬದಲಾವಣೆ ಮಾಡಬೇಕಾಗುತ್ತದೆ' ಎಂದು ನೈರುತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಅನಿಶ್ ಹೆಗಡೆ 'ಪ್ರಜಾವಾಣಿ'ಗೆ ಹೇಳಿದರು.

ವಂದೇ ಭಾರತ್ ರೈಲು

ಇದರ ನಡುವೆಯೂ ವಂದೇ ಭಾರತ್ ರೈಲು ಪ್ರಯಾಣಕ್ಕೆ ಜನರ ಬೇಡಿಕೆ ಹೆಚ್ಚುತ್ತಿದೆ. ನ.12ರಿಂದ 22ರ ನಡುವೆ ಚೆನ್ನೈನಿಂದ ಮೈಸೂರಿಗೆ ವಂದೇ ಭಾರತ್ ಎಕ್ಸ್‌ಪ್ರೆಸ್‌ನ ಎಕ್ಸಿಕ್ಯುಟಿವ್ ಕ್ಲಾಸ್‌ನಲ್ಲಿ(ಇ.ಸಿ) ಶೇ 147 ಮತ್ತು ಚೇರ್‌ಕಾರ್ ಬೋಗಿಯಲ್ಲಿ(ಸಿ.ಸಿ) ಶೇ 115 ಪ್ರಯಾಣ ಬಯಸಿದ್ದರು. ಇದೇ ಅವಧಿಯಲ್ಲಿ ಶತಾಬ್ದಿ ಎಕ್ಸ್‌ಪ್ರೆಸ್‌ನಲ್ಲಿ ಕ್ರಮವಾಗಿ ಶೇ 64(ಇ.ಸಿ) ಮತ್ತು 85(ಸಿ.ಸಿ) ಜನ ಪ್ರಯಾಣಿಸಿದ್ದಾರೆ.

ಮೈಸೂರಿನಿಂದ ಚೆನ್ನೈಗೆ ವಂದೇ ಭಾರತ್ ಎಕ್ಸ್‌ಪ್ರೆಸ್‌ನಲ್ಲಿ ಶೇ 125(ಇ.ಸಿ) ಮತ್ತು ಶೇ 97(ಸಿ.ಸಿ) ಜನ ಪ್ರಯಾಣ ಬಯಸಿದ್ದರು. ಶತಾಬ್ದಿಯಲ್ಲಿ ಶೇ 75(ಇ.ಸಿ) ಮತ್ತು ಶೇ 98(ಸಿ.ಸಿ) ಜನ ಪ್ರಯಾಣಿಸಿದ್ದಾರೆ. ಸುಖಾಸೀನ ಮತ್ತು ವೇಗದ ಪ್ರಯಾಣಕ್ಕೆ ಜನ ಆಕರ್ಷಿತರಾಗುತ್ತಿದ್ದಾರೆ ಎಂದು ಅನೀಶ್ ಹೆಗಡೆ ಹೇಳಿದರು.

ವೇಗಕ್ಕೆ ಹಳಿಯೇ ಅಡ್ಡಿ

ಗಂಟೆಗೆ ಗರಿಷ್ಠ 180 ಕಿಲೋ ಮೀಟರ್ ವೇಗದಲ್ಲಿ ಸಂಚರಿಸುವ ಸಾಮರ್ಥ್ಯ ವಂದೇ ಭಾರತ್ ರೈಲಿಗಿದ್ದರೂ ಇರುವ ರೈಲು ಮಾರ್ಗ ಅದಕ್ಕೆ ಹೊಂದಾಣಿಕೆಯಾಗುತ್ತಿಲ್ಲ. ಇದು ವಂದೇ ಭಾರತ್ ರೈಲಿನ ವೇಗಕ್ಕೆ ಅಡ್ಡಿಯಾಗಿದೆ.

ಇತ್ತೀಚೆಗೆ ನಡೆಸಿರುವ ಪರೀಕ್ಷಾರ್ಥ ಸಂಚಾರದಲ್ಲೂ ಇದು ಬೆಳಕಿಗೆ ಬಂದಿದೆ. ಜೋಲ್ಸಾರಪೇಟೆ–ಮೈಸೂರು ನಡುವೆ ಕಡಿಮೆ ವೇಗದಲ್ಲಿ (ಗಂಟೆಗೆ 73 ಕಿಲೋ ಮೀಟರ್) ವಂದೇ ಭಾರತ್ ಸಂಚರಿಸಿದ್ದರೆ, ಜೋಲ್ಸಾರಪೇಟೆಯಿಂದ 80 ಕಿ.ಮೀ. ವೇಗದಲ್ಲಿ ಕ್ರಮಿಸಿದೆ. ಮೂರ್ನಾಲ್ಕು ಕಡೆಗಳಲ್ಲಿ ಮಾತ್ರ ಗಂಟೆಗೆ 100 ಕಿಲೋ ಮೀಟರ್ ವೇಗವನ್ನು ರೈಲು ದಾಟಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಸ್ಟಡ್ ಫಾರಂ: ಜಾಗತಿಕ ಟೆಂಡರ್

ಪ್ರಜಾವಾಣಿ ವಾರ್ತೆ

ಕುಣಿಗಲ್: ಕುಣಿಗಲ್ ಕುದುರೆ ಸಾಕಾಣಿಕಾ ಕೇಂದ್ರ (ಸ್ಟಡ್ ಫಾರಂ) ಉಳಿಸುವತ್ತ ಸರ್ಕಾರ ಸಕಾರಾತ್ಮಕ ನಿರ್ಧಾರ ತೆಗೆದುಕೊಳ್ಳಲಿದೆ ಎಂದು ಪಶು ಸಂಗೋಪನಾ ಸಚಿವ ಪ್ರಭು ಚವ್ಹಾಣ್ ತಿಳಿಸಿದರು.

ಕುಣಿಗಲ್ ಸ್ಟಡ್ ಫಾರಂ ಜಾಗತಿಕ ಮಟ್ಟದ ಟೆಂಡರ್ ಪ್ರಕ್ರಿಯೆ ಪ್ರಾರಂಭವಾದ ಹಿನ್ನೆಲೆಯಲ್ಲಿ ಸ್ಥಳ ಪರಿಶೀಲನೆಗಾಗಿ ಅವರು ಇಲ್ಲಿಗೆ ಭೇಟಿ ನೀಡಿದ್ದರು. ಫಾರಂ ನಿರ್ವಹಣೆಯನ್ನು 30 ವರ್ಷ ಅವಧಿಗೆ ಮಲ್ಯ ಒಡೆತನದ ಯುನೈಟೆಡ್ ರೇಸಿಂಗ್ ಅಂಡ್ ಬ್ಲಡ್ ಸ್ಟಾಕ್ ಬ್ರೀಡರ್ಸ್ ಲಿಮಿಟೆಡ್‌ಗೆ ಗುತ್ತಿಗೆ ನೀಡಲಾಗಿತ್ತು. ಇದೇ ಸೆಪ್ಟೆಂಬರ್ 22ಕ್ಕೆ ಗುತ್ತಿಗೆ ಅವಧಿ ಮುಗಿದಿದೆ.

8 ಲಕ್ಷ ಮಂದಿ, ₹40 ಕೋಟಿ ವಹಿವಾಟು

ಕಡಲೆಕಾಯಿ ಪರಿಷೆಗೆ ಸಂಭ್ರಮದ ತೆರೆ • 13 ವರ್ಷಗಳ ನಂತರ ನೆರವೇರಿದ ತೆಪ್ಪೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿ ಕಡಲೆಕಾಯಿ ಪರಿಷೆಗೆ ಗುರುವಾರ ಅಧಿಕೃತ ತೆರೆಬಿದ್ದಿದ್ದು, ಒಂದು ವಾರದಿಂದ ಸುಮಾರು 8 ಲಕ್ಷ ಮಂದಿ ಸೇರಿದ್ದರು. ₹40 ಕೋಟಿಗೂ ಹೆಚ್ಚು ವಹಿವಾಟು ನಡೆದಿದೆ ಎಂದು ಅಂದಾಜಿಸಲಾಗಿದೆ.

ಕೋವಿಡ್ ನಂತರ ಮುಕ್ತವಾಗಿ ಈ ಬಾರಿ ಕಡಲೆಕಾಯಿ ಪರಿಷೆ ನಡೆಯಿತು. ಮಾಸ್ಕ್ ಹಾಗೂ ಇತರೆ ನಿರ್ಬಂಧಗಳಿಲ್ಲದೆ ಜನರು ಭಾಗವಹಿಸಿದ್ದರು. ಕಾರ್ತೀಕ ಮಾಸದ ಕೊನೆ ಸೋಮವಾರ ನಡೆಯುವ ಈ ಪರಿಷೆಗೆ ನ.20ರ ಭಾನುವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದ್ದರು. ಗುರುವಾರ ಪರಿಷೆಗೆ ತೆರೆ ಎಳೆಯಲಾಯಿತು.

ಭಾನುವಾರ ಸಂಜೆ ಚಾಲನೆ ಸಿಕ್ಕಿದ್ದರೂ ನ.17ರಿಂದಲೇ ಬಸವನಗುಡಿ ಮುಖ್ಯರಸ್ತೆಯಲ್ಲಿ ಪರಿಷೆಯ ಸಂಭ್ರಮ ಮನೆಮಾಡಿತ್ತು. ರಸ್ತೆಯ ಇಕ್ಕೆಲಗಳಲ್ಲಿ ಕಡಲೆಕಾಯಿ ಸೇರಿ ಎಲ್ಲ ರೀತಿಯ ಸಾಮಗ್ರಿಗಳ ಮಾರಾಟವಿತ್ತು. ಗುರುವಾರ ಸಂಜೆಯೂ ಸಾಕಷ್ಟು ಜನರು ಸೇರಿದ್ದರು.

ಬಸವನಗುಡಿಯ ದೊಡ್ಡ ಬಸವಣ್ಣ ದೇವಸ್ಥಾನದ ಮುಂದೆ ಕಡಲೆಕಾಯಿ ಪರಿಷೆ ಸಂದರ್ಭದಲ್ಲಿ ಸೇರಿದ್ದ ಜನಸ್ತೋಮ. –ಪ್ರಜಾವಾಣಿ ಚಿತ್ರ

'ಕಡಲೆಕಾಯಿ ಪರಿಷೆಗೆ ಈ ಬಾರಿ ಹೆಚ್ಚಿನ ಜನರು ಸೇರಿದ್ದರು. ಬಸವನಗುಡಿ ಮುಖ್ಯರಸ್ತೆಯ 1.5 ಕಿ.ಮೀ. ಹಾಗೂ ಸುತ್ತಮುತ್ತಲಿನ ರಸ್ತೆ ಸೇರಿ ಸುಮಾರು 3 ಕಿ.ಮೀ. ರಸ್ತೆ ಜನರಿಂದ ತುಂಬಿಹೋಗಿತ್ತು. ಒಂದು ವಾರದಲ್ಲಿ ಸುಮಾರು 8 ಲಕ್ಷ ಜನರು ಇಲ್ಲಿಗೆ ಬಂದಿರಬಹುದು ಎಂದು ಅಂದಾಜು ಮಾಡಲಾಗಿದೆ. ಇದು ಹೊಸ ದಾಖಲೆ. ಗುರುವಾರ ಸಂಜೆ ಹೆಚ್ಚಿನ ಜನರಿದ್ದರೂ ಪರಿಷೆಯನ್ನು ಅಧಿಕೃತವಾಗಿ ಮುಕ್ತಾಯಗೊಳಿಸಲಾಯಿತು' ಎಂದು ಬಸವನಗುಡಿ ಶಾಸಕ ರವಿ ಸುಬ್ರಹ್ಮಣ್ಯ ಅವರು ತಿಳಿಸಿದರು.

ತೆಪ್ಪೋತ್ಸವಕ್ಕೆ ಜನಸಾಗರ: ಕೆಂಪಾಂಬುಧಿ ಕೆರೆಯಲ್ಲಿ ಕಡಲೆಕಾಯಿ ಪರಿಷೆ ಅಂಗವಾಗಿ ನಡೆದ ನಂದಿ ತೆಪ್ಪೋತ್ಸವಕ್ಕೆ 25 ಸಾವಿರಕ್ಕೂ ಹೆಚ್ಚು ಮಂದಿ ಸೇರಿದ್ದರು. 13 ವರ್ಷಗಳ ನಂತರ ನಡೆದ ತೆಪ್ಪೋತ್ಸವ ಈ ಬಾರಿ ಪರಿಷೆಯ ಪ್ರಮುಖ ಆಕರ್ಷಣೆಯಾಗಿತ್ತು ಎಂದರು.

₹40 ಕೋಟಿ ವಹಿವಾಟು: 'ಕಡಲೆಕಾಯಿ ಪರಿಷೆಗೆ 1700ಕ್ಕೂ ಹೆಚ್ಚು ವ್ಯಾಪಾರಿಗಳು ನೋಂದಣಿ ಮಾಡಿಕೊಂಡಿದ್ದರು. ಇದಲ್ಲದೆ ನಗರದ ಹಲವು ಭಾಗಗಳಿಂದ ಇನ್ನೂ ಹೆಚ್ಚಿನ ವ್ಯಾಪಾರಿಗಳು ಒಂದು ವಾರ ವಹಿವಾಟು ನಡೆಸಿದ್ದಾರೆ. ಸುಮಾರು ₹40 ಕೋಟಿಯಷ್ಟು ವಹಿವಾಟು ಆಗಿರಬಹುದು ಎಂದು ಅಂದಾಜಿಸಲಾಗಿದೆ' ಎಂದು ಬಿಬಿಎಂಪಿ ದಕ್ಷಿಣ ವಲಯದ ವಿಶೇಷ ಆಯುಕ್ತ ಜಯರಾಮ್ ರಾಯಪುರ ಅವರು ಹೇಳಿದರು.

ಗಡಿ ವಿವಾದ: ಫಡಣವೀಸ್ ಹೇಳಿಕೆಗೆ ಕಸಾಪ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ–ಮಹಾರಾಷ್ಟ್ರ ಗಡಿವಿಚಾರದಲ್ಲಿ ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ನೀಡಿರುವ ಹೇಳಿಕೆಯನ್ನು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಖಂಡಿಸಿದೆ.

'ನಾಡಿನ ನೆಲ, ಜಲ, ಗಡಿ ರಕ್ಷಣೆ ವಿಚಾರದಲ್ಲಿ ಕನ್ನಡಿಗರು ಹಾಗೂ ನಮ್ಮ ಸರ್ಕಾರ ಸನ್ನದ್ಧವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ರಾಜ್ಯ ಸರ್ಕಾರದ ಬೆಂಬಲಕ್ಕೆ ನಿಂತುಕೊಳ್ಳಲಿದೆ. ಮಹಾರಾಷ್ಟ್ರದಲ್ಲಿರುವ ಕನ್ನಡ ಭಾಷಿಕ ಪ್ರದೇಶಗಳಾದ ಸೊಲ್ಲಾಪುರ, ಜತ್ತ, ಅಕ್ಕಲಕೋಟೆಯು ಕರ್ನಾಟಕಕ್ಕೆ ಸೇರಬೇಕು ಎನ್ನುವುದು ನಮ್ಮ ಆಗ್ರಹ' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಹೇಳಿದ್ದಾರೆ.

'ಕನ್ನಡ ನಾಡಿನ ಭಾಗಗಳಾದ ಕಾಸರಗೋಡು, ಹೊಸೂರು ಸೇರಿ ಹಲವು ಕನ್ನಡಿಗರ ಪ್ರಾಂತ್ಯಗಳನ್ನು ನಮ್ಮ ನಾಡಿಗೆ ಸೇರಿಸಿಕೊಳ್ಳಬೇಕು. ಗಡಿ ಪ್ರದೇಶದ ಹೊರನಾಡಿನಲ್ಲಿರುವ ಕನ್ನಡಿಗರು ನಮ್ಮ ನಾಡು ಸೇರುವ ತವಕದಲ್ಲಿದ್ದಾರೆ. ಕಳೆದ ಆರು ದಶಕಗಳಿಂದ ಕನ್ನಡ ನಾಡಿಗೆ ಸೇರುವ ಕನಸು ಕಾಣುತ್ತಿದ್ದಾರೆ. ಹೊರನಾಡ ಕನ್ನಡಿಗರ ಅಂತರಂಗದ ಭಾವನೆಯನ್ನು ಅರ್ಥ ಮಾಡಿಕೊಂಡು, ಅವರಿರುವ ನೆಲವನ್ನು ನಮ್ಮ ನಾಡಿಗೆ ಸೇರಿಸಿಕೊಳ್ಳಬೇಕು' ಎಂದು ಅವರು ತಿಳಿಸಿದ್ದಾರೆ.

ಪುಣೆ: ಬೊಮ್ಮಾಯಿ ಹೇಳಿಕೆ ಖಂಡಿಸಿ ಕರ್ನಾಟಕ ಬಸ್‌ಗಳ ಮೇಲೆ ಬರಹ

ಪುಣೆ (ಪಿಟಿಐ): ಗಡಿ ವಿವಾದಕ್ಕೆ ಸಂಬಂಧಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೀಡಿರುವ ಹೇಳಿಕೆಯನ್ನು ಖಂಡಿಸಿ ಮರಾಠ ಮಹಾಸಂಘದ ಕಾರ್ಯಕರ್ತರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್‌ಗಳ ಮೇಲೆ 'ಜೈ ಮಹಾರಾಷ್ಟ್ರ', 'ಖಂಡನೆ' ಎಂಬುದಾಗಿ ಬರೆದು ಗುರುವಾರ ಪ್ರತಿಭಟನೆ ವ್ಯಕ್ತಪಡಿಸಿದರು.

ಪುಣೆ ಜಿಲ್ಲೆಯ ದೌಂಡ್‌ನ ಬಸ್ ನಿಲ್ದಾಣದಲ್ಲಿ ನಿಪ್ಪಾಣಿ–ಔರಂಗಾಬಾದ್ ಬಸ್ ಮೇಲೆ ಕೇಸರಿ ಹಾಗೂ ಕಪ್ಪು ಬಣ್ಣಗಳಿಂದ ಈ ಖಂಡನಾ ವಾಕ್ಯಗಳನ್ನು ಬರೆದಿದ್ದಾರೆ. ಮುಖ್ಯಮಂತ್ರಿ ಬೊಮ್ಮಾಯಿ ಅವರ ವಿರುದ್ಧವೂ ಪ್ರತಿಭಟನಕಾರರು ಘೋಷಣೆಗಳನ್ನು ಕೂಗಿದರು.

'ಗಡಿಗೆ ಹೊಂದಿಕೊಂಡಿರುವ ಗ್ರಾಮಗಳಲ್ಲಿ ನೀರಿನ ಸಮಸ್ಯೆ ಇದೆ. ಹೀಗಾಗಿ ಈ ಗ್ರಾಮಗಳನ್ನು ಕರ್ನಾಟಕದೊಂದಿಗೆ ವಿಲೀನಗೊಳಿಸಬೇಕು ಎಂದು ಸಾಂಗ್ಲಿ ಜಿಲ್ಲೆ ಜತ್ ತಾಲ್ಲೂಕಿನ ಕೆಲ ಗ್ರಾಮ ಪಂಚಾಯಿತಿಗಳು ಇತ್ತೀಚೆಗೆ ನಿರ್ಣಯ ಅಂಗೀಕರಿಸಿದ್ದವು' ಎಂಬುದಾಗಿ ಬೊಮ್ಮಾಯಿ ಅವರು ಹೇಳಿದ್ದರು.

ಆಧಾರ್ ಸ್ವೀಕರಿಸುವ ಮುನ್ನ ಪರಿಶೀಲಿಸಿ

ನವದೆಹಲಿ: 'ಆಧಾರ್ ಕಾರ್ಡ್‌ನ ಮೂಲ ಅಥವಾ ಎಲೆಕ್ಟ್ರಾನಿಕ್ ಪ್ರತಿ ಸ್ವೀಕರಿಸುವಾಗ ಅದರ ಅಸಲಿಯತೆಯನ್ನು ಪರಿಶೀಲಿಸಿ' ಎಂದು ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರವು (ಯುಐಡಿಎಐ) ರಾಜ್ಯ ಸರ್ಕಾರಗಳು ಹಾಗೂ ಇತರೆ ಸಂಸ್ಥೆಗಳಿಗೆ ಗುರುವಾರ ಸೂಚಿಸಿದೆ.

'ಸಮಾಜ ವಿರೋಧಿ ಶಕ್ತಿಗಳು ಆಧಾರ್ ಕಾರ್ಡ್ ದುರ್ಬಳಕೆ ಮಾಡಿಕೊಳ್ಳುವುದನ್ನು ತಡೆಯುವ ಉದ್ದೇಶದಿಂದ ಈ ನಿರ್ದೇಶನ ನೀಡಲಾಗಿದೆ' ಎಂದು ಯುಐಡಿಎಐ ಹೇಳಿದೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಕೃಷ್ಣಯ್ಯರ್ ಅವರ ಜನ್ಮ ಶತಮಾನೋತ್ಸವ ಸಮಾರಂಭ

'ಪಕ್ಷಕ್ಕಾಗಿ ದುಡಿದವರಿಗಿಲ್ಲ ಸ್ಥಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ರಾಜಕೀಯ ಪಕ್ಷಗಳಿಗೆ ದುಡಿದ ಎಷ್ಟೋ ಜನರು ಯಾವ ಸ್ಥಾನಮಾನವೂ ಇಲ್ಲದೆ ತೆರೆಗೆ ಸರಿದಿದ್ದಾರೆ. ಅಧಿಕಾರ ಪಡೆಯುವ ನಾಯಕರು ಅಂಥವರ ಬಗ್ಗೆ ಕಾಳಜಿ ವಹಿಸಬೇಕಿದೆ ಎಂದು ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ ಹೇಳಿದರು.

ನಗರದಲ್ಲಿ ಗುರುವಾರ 'ದಿ ನ್ಯಾಶನಲ್ ಕೋ ಆಪರೇಟಿವ್ ಬ್ಯಾಂಕ್' ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಮಾಜಿ ಸಚಿವ ದಿ.ವಿ.ಎಸ್. ಕೃಷ್ಣಯ್ಯರ್ ಅವರ ಜನ್ಮ ಶತಮಾನೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

ಮಾಜಿ ಸಚಿವ ಕೃಷ್ಣಯ್ಯರ್ ಅವರು ಕಾಂಗ್ರೆಸ್‌ನ ನಿಷ್ಠಾವಂತ ಮುಖಂಡರಾಗಿದ್ದರು. ಅವರ ಜೀವಿತಾವಧಿಯಲ್ಲಿ ಸಚಿವರಾಗುವ ಅವಕಾಶ ಸಿಕ್ಕಿದ್ದು ನಾಲ್ಕೇ ತಿಂಗಳು. ವಹಿಸಿದ ಕೆಲಸವನ್ನು ನಿಷ್ಠೆ, ಪ್ರಾಮಾಣಿಕತೆಯಿಂದ ಮಾಡುತ್ತಿದ್ದರು ಎಂದು ಸ್ಮರಿಸಿದರು.

ಆರೋಗ್ಯ ಸಮಸ್ಯೆಯಿಂದ ಖಾಸಗಿ ಆಸ್ಪತ್ರೆಗೆ ದಾಖಲಾದಾಗ ಚಿಕಿತ್ಸೆಗೂ ಅವರ ಬಳಿ ಹಣವಿರಲಿಲ್ಲ. ಅಂದು ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಅವರು ₹13 ಲಕ್ಷ ಭರಿಸಿದ್ದರು. ಅಂತಹ ನಾಯಕನ ಜೀವನ ಚರಿತ್ರೆ ಪಠ್ಯವಾಗಬೇಕು ಎಂದು ಅವರು ಹೇಳಿದರು.

ಕೃಷ್ಣಯ್ಯರ್ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಮಾಜಿ ಸಚಿವರಾದ ಪಿ.ಜಿ.ಆರ್. ಸಿಂಧ್ಯಾ, ಸುಮಿತ್ರಾ ಕೃಷ್ಣಯ್ಯರ್, ಸಚಿವ ವಿ.ಸೋಮಣ್ಣ ಪುಷ್ಪ ನಮನ ಸಲ್ಲಿಸಿದರು–ಪ್ರಜಾವಾಣಿ ಚಿತ್ರ.

ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್, ಕೃಷ್ಣಯ್ಯರ್ ಅವರ ಜತೆಗಿನ ರಾಜಕೀಯ ಒಡನಾಟದ ಘಟನೆಗಳನ್ನು ಮೆಲುಕು ಹಾಕಿದರು.

ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಚ್.ಸಿ.ಕೃಷ್ಣ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕರ್ನಾಟಕ ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್. ಶಂಕರ್, ಶಾಸಕರಾದ ಎಲ್.ಎ.ರವಿ ಸುಬ್ರಹ್ಮಣ್ಯ, ಯು.ಬಿ.ವೆಂಕಟೇಶ್, ಅ.ದೇವೇಗೌಡ ಉಪಸ್ಥಿತರಿದ್ದರು.

ಕೆ.ಆರ್. ಪುರದಲ್ಲಿ ಅಗೆದ ಗುಂಡಿ ಮುಚ್ಚಿದ ಪೊಲೀಸರು

ಪೊಲೀಸರಿಗೂ ಸ್ಪಂದಿಸದ ಬಿಬಿಎಂಪಿ...

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಸ್ತೆಯಲ್ಲಿ ದೊಡ್ಡ ಗುಂಡಿ ಬಿದ್ದಿದೆ... ಇದನ್ನು ಸರಿಪಡಿಸಿ' ಎಂದು ಸಂಚಾರ ಪೊಲೀಸರು ಬಿಬಿಎಂಪಿ ಅಧಿಕಾರಿಗಳು, ಎಂಜಿನಿಯರ್‌ಗಳಿಗೆ ಕರೆ ಮಾಡಿದರೂ ಸ್ಪಂದನೆ ಸಿಕ್ಕಿಲ್ಲ. ಹೀಗಾಗಿ ಕೊನೆಗೆ ಪೊಲೀಸರೇ ಬೃಹತ್ ಗುಂಡಿಯನ್ನು ತಾತ್ಕಾಲಿಕವಾಗಿ ಮುಚ್ಚಿದ್ದಾರೆ.

ಕೆ.ಆರ್. ಪುರದಲ್ಲಿ ಹೂಡಿ ಅಯ್ಯಪ್ಪನಗರ ಮುಖ್ಯರಸ್ತೆಯಲ್ಲಿ ದೊಡ್ಡ ಗುಂಡಿಯನ್ನು ತೆಗೆದು, ಮುಚ್ಚದೆ ಬಿಡಲಾಗಿತ್ತು. ಇದರಿಂದ ಗುರುವಾರ ಸಂಚಾರಕ್ಕೆ ಸಮಸ್ಯೆ ಉಂಟಾಯಿತು. ಪೊಲೀಸರು ಮಹದೇವಪುರ ವಲಯದ ಜಂಟಿ ಆಯುಕ್ತರು, ಮುಖ್ಯ ಎಂಜಿನಿಯರ್ ಸೇರಿ ಎಲ್ಲರನ್ನೂ ಸಂಪರ್ಕಿಸಲು ಪ್ರಯತ್ನಿಸಿದರು. ಯಾರೂ ಸಿಕ್ಕಿಲ್ಲ. ಹೀಗಾಗಿ ಸಂಚಾರಕ್ಕೆ ಅನುವಾಗಲು ಜೆಸಿಬಿ ತರಿಸಿ ಗುಂಡಿ ಮುಚ್ಚಿದ್ದಾರೆ.

'ಬಿಬಿಎಂಪಿಯಿಂದ ಯಾರೊಬ್ಬರೂ ನಮ್ಮ ಕರೆಗೆ ಸ್ಪಂದಿಸುತ್ತಿಲ್ಲ. ದಯವಿಟ್ಟು ಯಾರನ್ನಾದರೂ ಈ ದೊಡ್ಡ ಗುಂಡಿಯನ್ನು ಮುಚ್ಚಲು ಕಳುಹಿಸಿ' ಎಂದು ಕೆ.ಆರ್. ಪುರ ಸಂಚಾರ ಪೊಲೀಸರು ಬಿಬಿಎಂಪಿ ಆಯುಕ್ತರನ್ನು ಟ್ಯಾಗ್ ಮಾಡಿ ಗುರುವಾರ ಬೆಳಿಗ್ಗೆ 10.02ಕ್ಕೆ ಟ್ವೀಟ್ ಮಾಡಿದರು.

'ನಾವೇ ಹೇಗೋ ತಾತ್ಕಾಲಿಕವಾಗಿ ಗುಂಡಿಯನ್ನು ಮುಚ್ಚಿದ್ದೇವೆ. ಇದನ್ನು ಪೂರ್ಣವಾಗಿ ಹಾಗೂ ಶಾಶ್ವತವಾಗಿ ಮುಚ್ಚಲು ಕಾಂಕ್ರೀಟ್ ಹಾಕಬೇಕಿದೆ' ಎಂದು 10.54ಕ್ಕೆ ಸಂಚಾರ ಪೊಲೀಸರು ಮತ್ತೆ ಟ್ವೀಟ್ ಮಾಡಿದರು. ಇದು ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಹರಿದಾಡಿದೆ.

ಕೆ.ಆರ್. ಪುರ ಸಂಚಾರ ಪೊಲೀಸರು ಮಾಡಿದ್ದ ಟ್ವೀಟ್‌ಗಳು

ನಗರದಲ್ಲಿ ರಸ್ತೆ ಸಂಚಾರ ಹಾಗೂ ಸಮಸ್ಯೆಗಳ ನಿವಾರಣೆಗೆ ಎಲ್ಲ ಇಲಾಖೆಗಳು ಸಮನ್ವಯ ಸಾಧಿಸಬೇಕು ಎಂದು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿಯವರಿಂದ ಮುಖ್ಯ ಕಾರ್ಯದರ್ಶಿಯವರೂ ಸೂಚನೆ ನೀಡಿದ್ದಾರೆ. ಆದರೂ ಪೊಲೀಸರ ಕರೆಗೂ ಬಿಬಿಎಂಪಿ ಓಗೊಟ್ಟಿಲ್ಲ.

'ಗುರುವಾರ ಮಧ್ಯಾಹ್ನ ರಸ್ತೆಯನ್ನು ಅನಧಿಕೃತವಾಗಿ ಅಗೆದಿರುವುದು ನಮ್ಮ ಗಮನಕ್ಕೆ ಬಂದಿದೆ. ಒಎಫ್‌ಸಿ ಹಾಕಲು ಕೆಲವೆಡೆ ಅಗೆದಿದ್ದಾರೆ. ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಮುಖ್ಯ ಎಂಜಿನಿಯರ್‌ಗೆ ಸೂಚಿಸಲಾಗಿದೆ' ಎಂದು ಮಹದೇವಪುರ ವಲಯದ ವಿಶೇಷ ಆಯುಕ್ತ ಡಾ. ತ್ರಿಲೋಕ್ ಚಂದ್ರ ಹೇಳಿದರು.

ಅರಮನೆ ಮೈದಾನದಲ್ಲಿ ಚಾಲನೆ • ಮಹಿಳಾ ಸಬಲೀಕರಣಕ್ಕೆ ಒತ್ತು • ಹೊಸ ಉದ್ಯಮಿಗಳನ್ನು ಸೆಳೆದ ಮೇಳ

ಆಧುನಿಕತೆಗೆ ತೆರೆದುಕೊಂಡ ಅಗರಬತ್ತಿ ಉದ್ಯಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಮನೆ ಮೈದಾನದಲ್ಲಿ ಗುರುವಾರ ಆರಂಭವಾದ ಭಾರತದ ಅತಿದೊಡ್ಡ ಅಗರಬತ್ತಿ ಮೇಳ ಮೊದಲ ದಿನವೇ ಹೆಚ್ಚಿನ ಸಂಖ್ಯೆಯ ನವೋದ್ಯಮಿಗಳನ್ನು ಸೆಳೆಯುವಲ್ಲಿ ಯಶಸ್ವಿಯಾಯಿತು.

ಇದುವರೆಗೂ ಸಾಂಪ್ರದಾಯಿಕ ತಯಾರಿಕೆಗೆ ಹೆಸರಾಗಿದ್ದ ಅಗರಬತ್ತಿ ಉದ್ಯಮ, ಆಧುನಿಕ ತಂತ್ರಜ್ಞಾನಕ್ಕೆ ತೆರೆದುಕೊಳ್ಳುತ್ತಾ ಹೊಸರೂಪ ಪಡೆಯುತ್ತಿದೆ. ಮನೆಗಳಲ್ಲಿ ಗೃಹಿಣಿಯರು ಕೆಲಸದ ಬಿಡುವಿನ ಮಧ್ಯೆ ಕೈಯಿಂದ ತಯಾರಿಸುತ್ತಿದ್ದ ಅಗರಬತ್ತಿಗಳು, ಈಗ ಯಂತ್ರಗಳ ಸದ್ದಿನೊಂದಿಗೆ ಸಿದ್ಧವಾಗುತ್ತಿವೆ. ಅರೆಕಾಲಿಕ ಕೆಲಸ ಮಾಡುತ್ತಿದ್ದ ಮಹಿಳೆಯರು ಪೂರ್ಣ ಪ್ರಮಾಣದ ಉದ್ಯೋಗಿಗಳಾಗಿದ್ದಾರೆ.

ಈ ಎಲ್ಲ ಬೆಳವಣಿಗೆಗಳ ಮಧ್ಯೆ ಉದ್ಯಮವನ್ನು ವಿಸ್ತಾರಗೊಳಿಸುವ, ಹೊಸ ಉದ್ಯಮಿಗಳನ್ನು ಸೆಳೆಯುವ, ಸಾಂಪ್ರದಾಯಿಕ ಅಗರಬತ್ತಿ ತಯಾರಕರನ್ನು ಆಧುನಿಕತೆಯತ್ತ ತಿರುಗಿಸುವ, ಉದ್ಯೋಗದ ಅವಕಾಶಗಳನ್ನು ಹೆಚ್ಚಿಸುವ ಸಂಕಲ್ಪದೊಂದಿಗೆ ಅಖಿಲ ಭಾರತ ಅಗರಬತ್ತಿ ಉತ್ಪಾದಕರ ಸಂಘ ಎರಡು ದಶಕಗಳ ನಂತರ ಇಂತಹ ಮೇಳ ಆಯೋಜಿಸಿದೆ.

ಅಗರಬತ್ತಿ ತಯಾರಿಕೆಯ ವೈವಿಧ್ಯಮಯ ಯಂತ್ರಗಳು, ಬಳಸುವ ಸಾಮಗ್ರಿಗಳು, ಅಗರಬತ್ತಿಗೆ ಲೇಪಿಸುವ ಭಾರತೀಯರ ಅಪೇಕ್ಷೆಯ ತರಹೇವಾರಿ ಸುಗಂಧ ದ್ರವ್ಯಗಳು, ಆಕರ್ಷಕ ಪ್ಯಾಕಿಂಗ್ ಸೌಲಭ್ಯಗಳು, ಚಿಲ್ಲರೆ ಮಾರಾಟದ ಅವಕಾಶಗಳನ್ನು ಮೇಳದಲ್ಲಿಅನಾವರಣಗೊಳಿಸಲಾಗಿದೆ.

200ಕ್ಕೂ ಹೆಚ್ಚು ತಯಾರಕರು, ಪೂರೈಕೆದಾರರು, ಚಿಲ್ಲರೆ ವ್ಯಾಪಾರಿಗಳು ಮೇಳದಲ್ಲಿ ಉತ್ಪನ್ನಗಳನ್ನು ಪ್ರದರ್ಶಿಸಿದರು. ಪರಸ್ಪರ ಕಲೆತು ಚರ್ಚಿಸಿದರು. ಉದ್ಯಮ ಆರಂಭಿಸುವ ಕನಸು ಹೊತ್ತು ಬಂದ ಹೊಸ ಉದ್ಯಮಿಗಳಿಗೆ ಬೆಳಕಿನ ದಾರಿ ತೋರಿದರು.

‘ಮೊದಲು ಪೂಜಾ ವಿಧಿವಿಧಾನಗಳಿಗೆ ಸೀಮಿತವಾಗಿದ್ದ ಅಗರಗತ್ತಿ ಇಂದು ಜನರ ಜೀವನ ಶೈಲಿಯ ಒಂದು ಭಾಗವಾಗಿದೆ. ದೇಶದಲ್ಲಿ ಐದು ಲಕ್ಷ ಜನರು ಕೆಲಸ ಮಾಡುತ್ತಿದ್ದಾರೆ. ದೇಶದ ಉತ್ಪಾದನೆಯಲ್ಲಿ ಶೇ 60ರಷ್ಟು ಕರ್ನಾಟಕದ ಕೊಡುಗೆ ಇದೆ. ರಾಜ್ಯ 3 ಲಕ್ಷ ಮಹಿಳೆಯರಿಗೆ ಉದ್ಯೋಗ ನೀಡಿದೆ. ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕೂ ಆದ್ಯತೆ ನೀಡಲಾಗಿದೆ. ಅವರಿಗೆ ತರಬೇತಿ ನೀಡಲಾಗುತ್ತಿದೆ. ಸ್ವಸಹಾಯ ಗುಂಪುಗಳು ಯಂತ್ರಗಳನ್ನು ಖರೀದಿ ಮಾಡುತ್ತಿವೆ. ಒಬ್ಬ ಮಹಿಳೆ ದಿನಕ್ಕೆ ಕನಿಷ್ಠ ₹ 500 ದುಡಿಯುತ್ತಿದ್ದಾರೆ’ ಎಂದು ಎಐಎಎಂಎ ಅಧ್ಯಕ್ಷ ಅರ್ಜುನ್ ರಂಗಾ ವಿವರ ನೀಡಿದರು.

ನಗರದಲ್ಲಿ ಗುರುವಾರ ನಡೆದ ಅಗರಬತ್ತಿ ಪ್ರದರ್ಶನ ಮೇಳದಲ್ಲಿ ಅಗರಬತ್ತಿ ವೈವಿಧ್ಯಗಳನ್ನು ವೀಕ್ಷಿಸಿದ ಯುವತಿಯರು – ಪ್ರಜಾವಾಣಿ ಚಿತ್ರ

ಉದ್ಯಮಕ್ಕೆ ಕರ್ನಾಟಕದ್ದೇ ಸಿಂಹಪಾಲು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಮೈಸೂರು ಸಂಸ್ಥಾನ ಸೇರಿ ರಾಜ್ಯವನ್ನು ಆಳಿದ ಅರಸರು ಶ್ರೀಗಂಧ, ಮಲ್ಲಿಗೆ ಸುವಾಸನೆಗಳ ಅಗರಬತ್ತಿಗಳ ತಯಾರಿಕೆಗೆ ಪ್ರೋತ್ಸಾಹ ನೀಡಿದ್ದರು. ಹಾಗಾಗಿಯೇ, ಭಾರತದ ಬಹುತೇಕ ಮಾರುಕಟ್ಟೆ ಕರ್ನಾಟಕವನ್ನೇ ಅವಲಂಬಿಸಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಅಗರಬತ್ತಿ ಮೇಳ ಉದ್ಘಾಟಿಸಿ ಮಾತನಾಡಿದ ಅವರು, ‘ಕರ್ನಾಟಕದಲ್ಲಿ ತಯಾರಾಗುವ ಅಗರಬತ್ತಿಗಳನ್ನು 150ಕ್ಕೂ ಹೆಚ್ಚಿನ ದೇಶಗಳಿಗೆ ರಫ್ತು ಮಾಡಲಾಗುತ್ತಿದೆ. ಕಚ್ಚಾ ಸಾಮಗ್ರಿಗಳ ಸಂಗ್ರಹಣೆಯಲ್ಲಿ ಹಲವು ಸವಾಲುಗಳನ್ನು ಎದುರಿಸುತ್ತಿದ್ದೇವೆ. ರೈತ ಉತ್ಪಾದಕ ಸಂಸ್ಥೆಗಳ(ಎಫ್‌ಪಿಒ) ಮೂಲಕ ಬಿದಿರು ಮತ್ತು ಜಿಗಟ್‌ಗಳನ್ನು ಸ್ಥಳೀಯವಾಗಿ ನೆಟ್ಟು ಬೆಳೆಸಲು ಸರ್ಕಾರ ಬೆಂಬಲ ನೀಡುತ್ತಿದೆ. ಅದಕ್ಕಾಗಿ ಅರಣ್ಯ ನಿಯಮಗಳನ್ನು ಸರಳೀಕರಣಗೊಳಿಸಲಾಗುವುದು. ಉದ್ಯಮಕ್ಕೆ ಎಲ್ಲ ರೀತಿಯ ಸಹಕಾರ ನೀಡಲಾಗುವುದು’ ಎಂದರು.

ಮುಖ್ಯಾಂಶಗಳು

- ರಾಜ್ಯದಲ್ಲಿ ಮೂರು ಲಕ್ಷ ಮಹಿಳೆಯರಿಗೆ ಉದ್ಯೋಗ
- 200ಕ್ಕೂ ಹೆಚ್ಚು ತಯಾರಕರು ಮೇಳದಲ್ಲಿ ಭಾಗಿ

ಹಣ ಪಡೆದು ವಂಚಿಸಿದ್ದ ಆರೋಪಿ ಬಂಧನ

ಆರೋಪಿ ಲೋಕೇಶ್, ಒಂದೇ ನಿವೇಶನವನ್ನು ಹಲವರಿಗೆ ಮಾರಾಟ ಮಾಡಿ ₹5 ಕೋಟಿಗೂ ಹೆಚ್ಚು ಹಣ ಪಡೆದು ವಂಚಿಸಿರುವ ಮಾಹಿತಿ ಪೊಲೀಸರಿಗೆ ಲಭ್ಯ.

ಒಂದೇ ನಿವೇಶನ ಹಲವರಿಗೆ ಮಾರಾಟ

ಬೆಂಗಳೂರು: ತಂದೆ ಹೆಸರಿನಲ್ಲಿದ್ದ ನಿವೇಶನವನ್ನು ಹಲವರಿಗೆ ಮಾರಾಟ ಮಾಡಿ ಹಣ ಪಡೆದು ವಂಚಿಸಿದ್ದ ಆರೋಪದಡಿ ಲೋಕೇಶ್ (41) ಎಂಬುವರನ್ನು ಗೋವಿಂದಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ವಿಜಯನಗರದ ನಿವಾಸಿ ಆರ್. ರಘು ಎಂಬುವರು ವಂಚನೆ ಬಗ್ಗೆ ದೂರು ನೀಡಿದ್ದರು. ಇದರನ್ವಯ ಪ್ರಕರಣ ದಾಖಲಿಸಿಕೊಂಡು ಲೋಕೇಶ್‌ನನ್ನು ಬಂಧಿಸಲಾಗಿದೆ. ಸದ್ಯ ಈತ ನ್ಯಾಯಾಂಗ ಬಂಧನದಲ್ಲಿದ್ದಾನೆ. ಈತನ ಪತ್ನಿ ಪ್ರತಿಭಾ ಹಾಗೂ ಪರಿಚಯಸ್ಥ ಶಿವಾರೆಡ್ಡಿ ಅವರನ್ನೂ ಆರೋಪಿಯನ್ನಾಗಿ ಮಾಡಲಾಗಿದ್ದು, ಇವರ ವಿಚಾರಣೆ ನಡೆಯುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿ ಲೋಕೇಶ್ ಅವರ ತಂದೆಯ ಹೆಸರಿನಲ್ಲಿ, ಬೆಂಗಳೂರು ಉತ್ತರ ತಾಲ್ಲೂಕಿನ ಕಸಬಾ ಹೋಬಳಿ ನಾಗವಾರ ಗ್ರಾಮದ ಬಿಬಿಎಂಪಿ ಖಾತೆ ಸಂಖ್ಯೆ 190/ಎ/129ರಲ್ಲಿ 5,000 ಚದರ ಅಡಿ ನಿವೇಶನವಿದೆ. 2010ರಲ್ಲಿ ತಂದೆಯಿಂದ ದಾನಪತ್ರ ಮಾಡಿಸಿಕೊಂಡಿದ್ದ ಲೋಕೇಶ್, 2,000 ಚದರ ಅಡಿ ನಿವೇಶನವನ್ನು ದಾನಪತ್ರದ ಮೂಲಕ ಪತ್ನಿಗೆ ನೀಡಿದ್ದ. ಈ ವಿಷಯ ಮುಚ್ಚಿಟ್ಟು 5,000 ಚದರ ಅಡಿ ನಿವೇಶನವನ್ನು ಶಿವಾರೆಡ್ಡಿ ಎಂಬುವರಿಗೆ ಮಾರಿದ್ದ.’

‘ಸ್ನೇಹಿತರೇ ಆಗಿದ್ದ ದೂರುದಾರ ರಘು ಅವರನ್ನು ಸಂಪರ್ಕಿಸಿದ್ದ ಲೋಕೇಶ್, ತಮ್ಮ ನಿವೇಶನ ಮಾರುವುದಾಗಿ ಹೇಳಿದ್ದ. ಅದನ್ನು ನಂಬಿದ್ದ ರಘು ನಿವೇಶನ ಖರೀದಿಸಲು ಒಪ್ಪಿದ್ದರು. ರಘು ಹೆಸರಿನಲ್ಲಿ ₹ 3.50 ಕೋಟಿ ಎಲ್‌ಐಸಿ ಸಾಲ ಪಡೆದಿದ್ದ ಲೋಕೇಶ್, ಅದನ್ನು ತಾನೇ ಇಟ್ಟುಕೊಂಡಿದ್ದ. ಆದರೆ, ನಿವೇಶನ ವರ್ಗಾವಣೆ ಮಾಡಿರಲಿಲ್ಲ. ಹೊರದೇಶದಲ್ಲಿದ್ದ ರಘು, ಹಲವು ಬಾರಿ ವಿಚಾರಿಸಿದರೂ ಆರೋಪಿ ಸ್ಪಂದಿಸಿರಲಿಲ್ಲ. ಇತ್ತೀಚೆಗೆ ರಘು ಅವರ ಪತ್ನಿ, ಉಪ ನೋಂದಣಾಧಿಕಾರಿ ಕಚೇರಿಗೆ ಹೋಗಿ ಮಾಹಿತಿ ಸಂಗ್ರಹಿಸಿದಾಗ ವಂಚನೆ ಗಮನಕ್ಕೆ ಬಂದಿತ್ತು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಇತ್ತೀಚೆಗೆ ತಂದೆಯಿಂದ ಹೊಸದಾಗಿ ದಾನಪತ್ರ ಮಾಡಿಸಿಕೊಂಡಿದ್ದ ಲೋಕೇಶ್, ಮತ್ತೊಬ್ಬರಿಗೆ ನಿವೇಶನ ಮಾರಲು ಸಿದ್ಧತೆ ಮಾಡಿಕೊಂಡಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದೂ ಹೇಳಿವೆ.

ರಾಜಕಾಲುವೆಯಲ್ಲಿ ಬೈಕ್: ಆತಂಕ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಬನಶಂಕರಿ 6ನೇ ಹಂತದ ಬಿಡಿಎ ಲೇಔಟ್‌ನ ರಾಜಕಾಲುವೆಯಲ್ಲಿ ಬುಧವಾರ ರಾತ್ರಿ ಬೈಕ್ ಪತ್ತೆಯಾಗಿದ್ದರಿಂದ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಗುರುವಾರ ಸಂಜೆ ಬೈಕ್ ಮಾಲೀಕರ ಸುಳಿವು ಸಿಗುತ್ತಿದ್ದಂತೆ ಆತಂಕ ದೂರವಾಯಿತು.

‘ರಾಜಕಾಲುವೆಯಲ್ಲಿ ಬೈಕ್ ನೋಡಿ ಮಾಹಿತಿ ನೀಡಿದ್ದ ಸ್ಥಳೀಯರು, ‘ಯಾರೋ ಸವಾರ ಬೈಕ್ ಸಮೇತ ಕಾಲುವೆಯಲ್ಲಿ ಬಿದ್ದಿದ್ದಾರೆ. ಬೈಕ್ ಮಾತ್ರ ಕಾಣಿಸುತ್ತಿದ್ದು, ಸವಾರ ನಾಪತ್ತೆಯಾಗಿದ್ದಾರೆ’ ಎಂದಿದ್ದರು. ಅಗ್ನಿಶಾಮಕ ದಳದ ಸಿಬ್ಬಂದಿ ಸಮೇತ ಸ್ಥಳಕ್ಕೆ ಹೋಗಿ ಗುರುವಾರ ಇಡೀ ದಿನ ಕಾರ್ಯಾಚರಣೆ ನಡೆಸಲಾಯಿತು’ ಎಂದು ತಲಘಟ್ಟಪುರ ಪೊಲೀಸರು ಹೇಳಿದರು.

‘ಬೈಕ್ ಹೊರಗೆ ತೆಗೆದು, ಸವಾರನಿಗಾಗಿ ಹುಡುಕಾಟ ಮುಂದುವರಿಸಲಾಗಿತ್ತು. ಸಂಜೆ ಠಾಣೆಗೆ ಬಂದಿದ್ದ ವ್ಯಕ್ತಿಯೊಬ್ಬರು, ತಮ್ಮ ಬೈಕ್ ಕಳ್ಳತನವಾಗಿರುವುದಾಗಿ ಹೇಳಿದ್ದರು. ಅವರನ್ನು ಸ್ಥಳಕ್ಕೆ ಕರೆಸಿ ಬೈಕ್ ತೋರಿಸಿದಾಗ, ತಮ್ಮದೇ ಬೈಕ್ ಎಂಬುದಾಗಿ ಒಪ್ಪಿಕೊಂಡರು’ ಎಂದು ತಿಳಿಸಿದರು.

ಕಾಲುವೆಗೆ ಬೈಕ್ ತಳ್ಳಿದ್ದ ಅಪರಿಚಿತರು: ‘ರಾಜಕಾಲುವೆ ಸಮೀಪದಲ್ಲಿ ವಾಸವಿರುವ ಸವಾರ, ಮನೆ ಎದುರು ಬೈಕ್ ನಿಲ್ಲಿಸಿದ್ದರು. ಅಪರಿಚಿತರು ಬೈಕ್ ಕಾಲುವೆಗೆ ತಳ್ಳಿದ್ದರು. ನಂತರ, ಬೈಕ್ ತೇಲಿಕೊಂಡು ದೂರಕ್ಕೆ ಹೋಗಿತ್ತು. ಅದನ್ನೇ ಸ್ಥಳೀಯರು ನೋಡಿ ಠಾಣೆಗೆ ಮಾಹಿತಿ ನೀಡಿದ್ದರು. ಸವಾರ ಸಿಕ್ಕ ನಂತರ, ಎಲ್ಲರ ಆತಂಕ ದೂರವಾಯಿತು’ ಎಂದು ಪೊಲೀಸರು ಹೇಳಿದರು.

ಸ್ಥಳೀಯರು, ‘ರಾಜಕಾಲುವೆಯ ತಡೆಗೋಡೆ ಕುಸಿದಿದೆ. ಸ್ಥಳೀಯರು ಭಯದಲ್ಲಿ ಬದುಕುತ್ತಿದ್ದಾರೆ. ಇದೇ ಕಾರಣಕ್ಕೆ, ಬೈಕ್ ಸಮೇತ ಯಾರಾದರೂ ಬಿದ್ದಿರಬಹುದೆಂದು ಅಂದುಕೊಂಡಿದ್ದೆವು’ ಎಂದರು.

ಬನಶಂಕರಿ 6ನೇ ಹಂತದ ಬಿಡಿಎ ಲೇಔಟ್‌ನ ರಾಜಕಾಲುವೆಯಲ್ಲಿ ಪತ್ತೆಯಾಗಿದ್ದ ಬೈಕ್

₹34.50 ಲಕ್ಷ ನಗದು, 106 ಗ್ರಾಂ ಚಿನ್ನಾಭರಣ ಜಪ್ತಿ

ವಂಚನೆ: ಉಡುಪಿಯಲ್ಲಿ ದಂಪತಿಯ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಡಿಮೆ ಬೆಲೆಗೆ ಚಿನ್ನಾಭರಣ ಮಾರಾಟ ಹಾಗೂ ವಿಮಾನ ನಿಲ್ದಾಣದಲ್ಲಿ ಉದ್ಯೋಗ ಕೊಡಿಸುವ ಆಮಿಷವೊಡ್ಡಿ ವಂಚಿಸಿದ್ದ ಆರೋಪದಡಿ ದಂಪತಿಯನ್ನು ಈಶಾನ್ಯ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

‘ಧನುಷ್ಯಾ ಅಲಿಯಾಸ್ ರಾಚೆಲ್ ಹಾಗೂ ಅವರ ಪತಿ ದರ್ಬಿನ್ ದಾಸ್ ಅಲಿಯಾಸ್ ಮೋಹನ್ ದಾಸ್ ಬಂಧಿತರು. ದೇವನಹಳ್ಳಿ ಹಾಗೂ ಕೊಡಿಗೇಹಳ್ಳಿ ಠಾಣೆ ವ್ಯಾಪ್ತಿಯ ನಿವಾಸಿಗಳನ್ನು ವಂಚಿಸಿ ಪರಾರಿಯಾಗಿದ್ದ ಈ ದಂಪತಿಯನ್ನು ಉಡುಪಿಯಲ್ಲಿ ಬಂಧಿಸಿ ನಗರಕ್ಕೆ ಕರೆತರಲಾಗಿದೆ’ ಎಂದು ಪೊಲೀಸರು ಹೇಳಿದರು.

‘ವಂಚನೆಯನ್ನೇ ವೃತ್ತಿ ಮಾಡಿಕೊಂಡಿದ್ದ ದಂಪತಿ, ಪದೇ ಪದೇ ಊರು ಬದಲಾಯಿಸುತ್ತಿದ್ದರು. ವಾಸವಿದ್ದ ಸ್ಥಳಗಳಲ್ಲಿ ಜನರನ್ನು ಪರಿಚಯ ಮಾಡಿಕೊಂಡು ವಂಚಿಸಿ ಪರಾರಿಯಾಗುತ್ತಿದ್ದರು. ಇವರಿಂದ ಸದ್ಯ ₹34.50 ಲಕ್ಷ ನಗದು ಹಾಗೂ 106 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಧನುಷ್ಯಾ

ದರ್ಬಿನ್ ದಾಸ್

ಅಕಾಡೆಮಿ ಸೇರಿ ₹ 68 ಲಕ್ಷ ವಂಚನೆ: ‘ದೂರುದಾರರಾದ ಸ್ನೇಹಾ ಭಗವತ್, ಇಂದಿರಾನಗರದಲ್ಲಿ ನೈಲ್‌ಬಾಕ್ಸ್ ಅಕಾಡೆಮಿ ನಡೆಸುತ್ತಿದ್ದಾರೆ. ಅಕಾಡೆಮಿಗೆ ಪ್ರವೇಶ ಪಡೆದಿದ್ದ ಧನುಷ್ಯಾ, ತನ್ನ ಪತಿ ದರ್ಬಿನ್ ದಾಸ್ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಯೆಂದು ಹೇಳಿಕೊಂಡಿದ್ದಳು. ಜಪ್ತಿ ಮಾಡಿರುವ ಚಿನ್ನಾಭರಣವನ್ನು ಕಡಿಮೆ ಬೆಲೆಗೆ ಕೊಡಿಸುವುದಾಗಿ ಆಮಿಷವೊಡ್ಡಿದ್ದಳು’ ಎಂದು ಪೊಲೀಸರು ಹೇಳಿದರು.

‘ಆರೋಪಿ ಮಾತು ನಂಬಿದ್ದ ಸ್ನೇಹಾ, ಹಂತ ಹಂತವಾಗಿ ₹ 68 ಲಕ್ಷ ನೀಡಿದ್ದರು. ಹಣ ಪಡೆದಿದ್ದ ಆರೋಪಿಗಳು, ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಪರಾರಿಯಾಗಿದ್ದರು. ಸ್ನೇಹಾ ನೀಡಿದ್ದ ದೂರಿನಡಿ ಕೊಡಿಗೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು’ ಎಂದರು.

ಉದ್ಯೋಗ ಆಮಿಷ

‘ದೇವನಹಳ್ಳಿಯ ಶಾಲೆಯೊಂದರ ಶಿಕ್ಷಕಿ ಶ್ವೇತಾ ಎಂಬುವವರನ್ನು ಪರಿಚಯ ಮಾಡಿಕೊಂಡಿದ್ದ ಆರೋಪಿಗಳು, ವಿಮಾನ ನಿಲ್ದಾಣದಲ್ಲಿ ಉದ್ಯೋಗ ಕೊಡಿಸುವುದಾಗಿ ಹೇಳಿ ₹ 96,750 ಪಡೆದಿದ್ದರು. ನಂತರ, ಉದ್ಯೋಗ ಕೊಡಿಸದೇ ಪರಾರಿಯಾಗಿದ್ದರು. ಈ ಬಗ್ಗೆ ಶಿಕ್ಷಕಿ ಶ್ವೇತಾ, ದೇವನಹಳ್ಳಿ ಠಾಣೆಗೆ ದೂರು ನೀಡಿದ್ದರು’ ಎಂದು ಪೊಲೀಸರು ಹೇಳಿದರು.

‘ಕಡಿಮೆ ಬೆಲೆಗೆ ಐ–ಫೋನ್, ಲ್ಯಾಪ್‌ಟಾಪ್ ಮಾರುವುದಾಗಿಯೂ ಆರೋಪಿಗಳು ಹೇಳುತ್ತಿದ್ದರು. ಅಕಾಡೆಮಿ ಕೆಲಸಗಾರರು, ಶಾಲಾ ಶಿಕ್ಷಕರು, ಮಕ್ಕಳ ಪೋಷಕರು, ನೆರೆ ಮನೆಗಳ ನಿವಾಸಿಗಳು ಸೇರಿ ಹಲವರನ್ನು ಆರೋಪಿಗಳು ವಂಚಿಸಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ತಿಳಿಸಿದರು.

ಎ.ಸಿ ಘಟಕ ಕದ್ದು ಮಾರಾಟ: ಬಂಧನ

ಬೆಂಗಳೂರು: ಹವಾನಿಯಂತ್ರಿತ (ಎ.ಸಿ) ಘಟಕ ಹಾಗೂ ನೀರಿನ ಮೋಟರ್ ಪಂಪ್ ಕದ್ದಿದ್ದ ಆರೋಪದಡಿ ಸೈಯದ್ ಸುಹೇಲ್ (28) ಎಂಬುವರನ್ನು ವಿಲ್ಸನ್ ಗಾರ್ಡನ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಈತನಿಂದ ₹1.60 ಲಕ್ಷ ಮೌಲ್ಯದ ಎ.ಸಿ ಘಟಕ ಹಾಗೂ ಮೋಟರ್ ಪಂಪ್ ಜಪ್ತಿ ಮಾಡಿದ್ದಾರೆ.

‘ಮೇಕೆದಾಟು: ಮತ್ತೆ ಹೋರಾಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೇಕೆದಾಟು ಯೋಜನೆ ಜಾರಿಗೆ ಆಗ್ರಹಿಸಿ ನಾವು ಹೋರಾಟ ಮಾಡಿದ ಬಳಿಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಜೆಟ್‌ನಲ್ಲಿ ಈ ಯೋಜನೆಗೆ ₹ 1 ಸಾವಿರ ಕೋಟಿ ಮೀಸಲಿಟ್ಟಿದ್ದರು. ಆದರೆ, ಅದು ಕೇವಲ ಘೋಷಣೆಯಾಗಿಯೇ ಉಳಿದಿದೆ’ ಎಂದು ಕೆಪಿಸಿಸಿ ವಕ್ತಾರ ರಮೇಶ್ ಬಾಬು ಹೇಳಿದರು.

ಪಕ್ಷದ ಮತ್ತೊಬ್ಬ ವಕ್ತಾರ ಎಂ. ಲಕ್ಷ್ಮಣ್ ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈ ವಿಚಾರವಾಗಿ ಪಕ್ಷ ಕಾನೂನಾತ್ಮಕವಾಗಿ ಮತ್ತು ಬೆಳಗಾವಿ ಅಧಿವೇಶನದಲ್ಲಿ ಹೋರಾಟ ಮಾಡಲಿದೆ’ ಎಂದರು.

‘ರಾಜ್ಯದ ಪಾಲಿಗೆ ಹಂಚಿಕೆಯಾದ ಕಾವೇರಿ ನೀರನ್ನು ನಾವು ಬಳಸಿಕೊಳ್ಳುವುದಕ್ಕೆ ಯಾವುದೇ ಅಡಚಣೆಯಿಲ್ಲ ಎಂದು ಸುಪ್ರೀಂ ಕೋರ್ಟ್ 2018ರಲ್ಲಿ ತೀರ್ಪು ನೀಡಿದೆ. ಆದರೂ ಈ ವಿಚಾರದಲ್ಲಿ ತಮಿಳುನಾಡು ಗೊಂದಲ ಸೃಷ್ಟಿಸುತ್ತಿದೆ. ಇದಕ್ಕೆ ಅಲ್ಲಿನ ಬಿಜೆಪಿ ಘಟಕದ ಅಧ್ಯಕ್ಷ ಅಣ್ಣಾಮಲೈ ಪ್ರಮುಖ ಕಾರಣ’ ಎಂದು ದೂರಿದರು.

‘ಮೇಕೆದಾಟು ಯೋಜನೆ ವಿರೋಧಿಸಿ ಇದೇ 21ರಂದು ತಮಿಳುನಾಡು, ಸುಪ್ರೀಂ ಕೋರ್ಟ್‌ನಲ್ಲಿ ಪ್ರಮಾಣಪತ್ರ ಸಲ್ಲಿಸಿದೆ. ಆದರೆ, ನಮ್ಮ ಸರ್ಕಾರ ನಿದ್ದೆ ಮಾಡುತ್ತಿದೆ’ ಎಂದರು.

‘ಕೇಂದ್ರ ಹಾಗೂ ರಾಜ್ಯದಲ್ಲಿ ಬಿಜೆಪಿಯ ಡಬಲ್ ಎಂಜಿನ್ ಸರ್ಕಾರವಿದೆ. ಕಾವೇರಿ ನಿರ್ವಹಣಾ ಪ್ರಾಧಿಕಾರ ಅವರ ಕೈಯಲ್ಲಿದೆ. ಆದರೂ, ಕಾವೇರಿ ನೀರು ನಿರ್ವಹಣಾ ಸಮಿತಿಯ ಸಭೆಯಲ್ಲಿ ಚರ್ಚೆ ಮಾಡಲು ಅವಕಾಶ ನೀಡುತ್ತಿಲ್ಲ’ ಎಂದೂ ಆರೋಪಿಸಿದರು.

ತುಷಾರ್ ಅಮಾನತಿಗೆ ಆಗ್ರಹ

ಬೆಂಗಳೂರು: ‘ಮತದಾರರ ದತ್ತಾಂಶ ಕಳವು ಪ್ರಕರಣದಲ್ಲಿ ಚಿಲುಮೆ ಸಂಸ್ಥೆ ನಕಲಿ ಬಿಎಲ್‌ಒ ಗುರುತಿನ ಚೀಟಿ ವಿತರಿಸಲು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಕಾರಣ’ ಎಂದು ರಮೇಶ್‌ಬಾಬು ದೂರಿದರು.

‘ಬೆಂಗಳೂರು ವ್ಯಾಪ್ತಿಗೆ ಸಂಬಂಧಿಸಿದಂತೆ 28 ಕ್ಷೇತ್ರಗಳಿಗೆ ತುಷಾರ್ ಗಿರಿನಾಥ್ ಚುನಾವಣಾಧಿಕಾರಿ. ಹೀಗಾಗಿ, ಅವರನ್ನು ಚುನಾವಣಾಧಿಕಾರಿ ಜವಾಬ್ದಾರಿಯಿಂದ ಕೇಂದ್ರ ಚುನಾವಣಾ ಆಯೋಗ ಬಿಡುಗಡೆ ಮಾಡಬೇಕು. ಅಲ್ಲದೆ ಅವರನ್ನು ಅಮಾನತು ಮಾಡುವಂತೆ ಆಗ್ರಹಿಸಿ ಕೇಂದ್ರ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದೇನೆ’ ಎಂದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

ಕರ್ನಾಟಕ ರಾಜ್ಯ ಮಹಿಳಾ ಆಯೋಗ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾನ್ಯ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ ಹಾಗೂ ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಸಚಿವರಾದ ಶ್ರೀ ಆಚಾರ್ ಹಾಲಪ್ಪ ಬಸಪ್ಪ ರವರು ಭಾಗವಹಿಸಿರುವುದು.

ರಜತ ಮಹೋತ್ಸವ ಕಾರ್ಯಕ್ರಮ

ದಿನಾಂಕ: 25 ಮತ್ತು 26ನೇ ನವೆಂಬರ್ 2022
ಸಮಯ: ಬೆಳಗ್ಗೆ 10.30 ಗಂಟೆಗೆ
ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಂಗಳೂರು



ಉದ್ಘಾಟನೆ
ಶ್ರೀ ಬಸವರಾಜ ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಘನ ಉಪಸ್ಥಿತಿ
ಶ್ರೀಮತಿ ನಿರ್ಮಲಾ ಸೀತಾರಾಮನ್ – ಮಾನ್ಯ ಹಣಕಾಸು ಮತ್ತು ಕಾರ್ಪೋರೇಟ್ ವ್ಯವಹಾರಗಳ ಕೇಂದ್ರ ಸಚಿವರು, ಭಾರತ ಸರ್ಕಾರ
ಕು|| ಶೋಭಾ ಕರಂದ್ಲಾಜೆ – ಮಾನ್ಯ ಕೃಷಿ ಮತ್ತು ರೈತರ ಕಲ್ಯಾಣ ರಾಜ್ಯ ಸಚಿವರು, ಭಾರತ ಸರ್ಕಾರ
ಶ್ರೀ ಎಂ. ರಾಜೀವ್ ಚಂದ್ರಶೇಖರ್ – ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು, ಭಾರತ ಸರ್ಕಾರ

ಮಹಿಳಾ ಸಾಧಕರಿಗೆ ಪುರಸ್ಕಾರ
ಶ್ರೀ ಆಚಾರ್ ಹಾಲಪ್ಪ ಬಸಪ್ಪ – ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷತೆ
ಶ್ರೀ ರಿಜ್ವಾನ್ ಅರ್ಷದ್ – ಮಾನ್ಯ ಶಾಸಕರು, ಶಿವಾಜಿನಗರ ವಿಧಾನಸಭಾ ಕ್ಷೇತ್ರ

ಮುಖ್ಯ ಅತಿಥಿಗಳು
ಶ್ರೀ ಸಿದ್ದರಾಮಯ್ಯ – ಮಾನ್ಯ ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನಸಭೆ ಹಾಗೂ ಮಾಜಿ ಮುಖ್ಯಮಂತ್ರಿಗಳು
ಶ್ರೀ ಆರ್. ಅಶೋಕ್ – ಮಾನ್ಯ ಕಂದಾಯ ಸಚಿವರು ಕರ್ನಾಟಕ ಸರ್ಕಾರ
ಶ್ರೀ ವಿ. ಸೋಮಣ್ಣ – ಮಾನ್ಯ ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ
ಡಾ. ಸಿ.ಎನ್. ಅಶ್ವಥ್ ನಾರಾಯಣ – ಮಾನ್ಯ ಉನ್ನತ ಶಿಕ್ಷಣ, ಐ.ಟಿ. ಮತ್ತು ಬಿ.ಟಿ. ಹಾಗೂ ವಿಜ್ಞಾನ-ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಎಸ್.ಟಿ. ಸೋಮಶೇಖರ್ – ಮಾನ್ಯ ಸಹಕಾರ ಸಚಿವರು ಕರ್ನಾಟಕ ಸರ್ಕಾರ
ಶ್ರೀ ಬಿ.ಎ. ಬಸವರಾಜು (ಭೈರತಿ) – ಮಾನ್ಯ ನಗರಾಭಿವೃದ್ಧಿ ಸಚಿವರು ಕರ್ನಾಟಕ ಸರ್ಕಾರ
ಶ್ರೀ ಕೆ. ಗೋಪಾಲಯ್ಯ – ಮಾನ್ಯ ಅಬಕಾರಿ ಸಚಿವರು ಕರ್ನಾಟಕ ಸರ್ಕಾರ
ಶ್ರೀ ಮುನಿರತ್ನ – ಮಾನ್ಯ ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಎನ್. ನಾಗರಾಜು (ಎಂ.ಟಿ.ಬಿ) – ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಎಂ. ಸತೀಶ್ ರೆಡ್ಡಿ – ಮಾನ್ಯ ಆಡಳಿತ ಪಕ್ಷದ ಮುಖ್ಯ ಸಚೇತಕರು ವಿಧಾನಸಭೆ ಹಾಗೂ ಶಾಸಕರು, ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ
ಡಾ. ವೈ.ಎ. ನಾರಾಯಣಸ್ವಾಮಿ – ಮಾನ್ಯ ಸರ್ಕಾರದ ಮುಖ್ಯ ಸಚೇತಕರು, ವಿಧಾನ ಪರಿಷತ್
ಶ್ರೀ ಎಂ. ಕೃಷ್ಣಪ್ಪ – ಮಾನ್ಯ ಅಧ್ಯಕ್ಷರು, ಒಕ್ಕಲಿಗರ ಅಭಿವೃದ್ಧಿ ನಿಗಮ ಹಾಗೂ ಶಾಸಕರು, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ
ಶ್ರೀ ಬಿ.ಕೆ. ಹರಿಪ್ರಸಾದ್ – ಮಾನ್ಯ ವಿರೋಧ ಪಕ್ಷದ ನಾಯಕರು ಕರ್ನಾಟಕ ವಿಧಾನ ಪರಿಷತ್
ಶ್ರೀ ಎಸ್.ಆರ್. ವಿಶ್ವನಾಥ್ – ಮಾನ್ಯ ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಶಾಸಕರು, ಯಲಹಂಕ ವಿಧಾನಸಭಾ ಕ್ಷೇತ್ರ
ಶ್ರೀ ಪ್ರಕಾಶ್ ಕೆ. ರಾಥೋಡ್ – ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು, ವಿಧಾನ ಪರಿಷತ್
ಶ್ರೀಮತಿ ಕೆ. ಪೂರ್ಣಿಮಾ – ಮಾನ್ಯ ಅಧ್ಯಕ್ಷರು, ವಿಧಾನ ಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ ಹಾಗೂ ಶಾಸಕರು, ಹಿರಿಯೂರು ವಿಧಾನಸಭಾ ಕ್ಷೇತ್ರ

ವಿಶೇಷ ಆಹ್ವಾನಿತರು
ಶ್ರೀಮತಿ ರೇಖಾ ಶರ್ಮಾ – ಮಾನ್ಯ ಅಧ್ಯಕ್ಷರು, ರಾಷ್ಟ್ರೀಯ ಮಹಿಳಾ ಆಯೋಗ

ಉಪಸ್ಥಿತಿ
ಶ್ರೀಮತಿ ಪ್ರಮೀಳಾ ನಾಯ್ಡು ಆರ್. – ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ

ಕರ್ನಾಟಕ ರಾಜ್ಯ ಮಹಿಳಾ ಆಯೋಗ

- ಮಹಿಳೆಯರ ರಕ್ಷಣೆ ಮತ್ತು ಸಮಾನತೆ, ಅಭಿವೃದ್ಧಿ, ಕುಂದು-ಕೊರತೆಗಳ ಬಗ್ಗೆ ಕಾನೂನಾತ್ಮಕ ರೀತಿಯಲ್ಲಿ ಸಮಸ್ಯೆಗಳನ್ನು ಇತ್ಯರ್ಥಗೊಳಿಸಲು ಬದ್ಧವಾಗಿರುತ್ತದೆ.
- ವಿವಿಧ ಮಾಧ್ಯಮಗಳಲ್ಲಿ ವರದಿಯಾಗುವ ಗಂಭೀರ ಪ್ರಕರಣಗಳಿಗೆ ಸಂಬಂಧಿಸಿದಂತೆ, ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಂಡು, ನೊಂದ ಮಹಿಳೆಯರಿಗೆ ಸೂಕ್ತ ನ್ಯಾಯ ಹಾಗೂ ರಕ್ಷಣೆಯನ್ನು ದೊರಕಿಸಿ ಕೊಡಲಾಗುತ್ತಿದೆ.
- ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ಅಧಿನಿಯಮ 2013 ರನ್ವಯ 10 ಮತ್ತು 10ಕ್ಕಿಂತ ಹೆಚ್ಚು ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರಿ / ಖಾಸಗಿ ಕಛೇರಿಗಳು / ಕಾರ್ಖಾನೆಗಳಲ್ಲಿ ಆಂತರಿಕ ದೂರು ಸಮಿತಿಯ ರಚನೆ ಕಡ್ಡಾಯ. ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲೆಗಳಲ್ಲಿ ಸ್ಥಳೀಯ ದೂರುಗಳ ಸಮಿತಿಯನ್ನು ರಚಿಸಿರುತ್ತಾರೆ.
- ಕೌಟುಂಬಿಕ ನ್ಯಾಯಾಲಯಗಳಲ್ಲಿ ಮಹಿಳಾ ಸಹಾಯ ವೇದಿಕೆ ಮೂಲಕ ಸೂಕ್ತ ಸಲಹೆ ಮತ್ತು ಸಹಾಯಗಳನ್ನು ನೀಡಲಾಗುತ್ತಿದೆ.
- ಕೌಟುಂಬಿಕ ಸಮಸ್ಯೆಯಿಂದ ಬಳಲುತ್ತಿರುವ ಮಹಿಳೆಯರ ಸಮಸ್ಯೆಯನ್ನು ಆಲಿಸಿ, ಪತಿ-ಪತ್ನಿ ಇಬ್ಬರನ್ನೂ ಆಪ್ತ ಸಮಾಲೋಚನೆಗೆ ಒಳಪಡಿಸಿ, ಉತ್ತಮ ರೀತಿಯಲ್ಲಿ ಜೀವನ ನಡೆಸಲು ಸಲಹೆ ನೀಡಲಾಗುತ್ತಿದೆ.

ರಾಷ್ಟ್ರೀಯ ತುರ್ತು ಸಹಾಯವಾಣಿ
ಸಂಯೋಜಿತ ತುರ್ತು ಸಹಾಯವಾಣಿ 112
ದೇಶದಾದ್ಯಂತ ಕಾರ್ಯನಿರ್ವಹಿಸುತ್ತಿದ್ದು ಸಾರ್ವಜನಿಕರು ತುರ್ತು ಸಂದರ್ಭದಲ್ಲಿ ಕರೆ ಮಾಡಿ ನೆರವು ಪಡೆಯಬಹುದಾಗಿದೆ.

ಈ ಕಾರ್ಯಕ್ರಮದಲ್ಲಿ ಮಾನ್ಯ ಲೋಕಸಭಾ ಹಾಗೂ ರಾಜ್ಯಸಭಾ ಸಂಸದರು, ವಿಧಾನಸಭೆ / ವಿಧಾನ ಪರಿಷತ್ ಮಾನ್ಯ ಸದಸ್ಯರು ಹಾಗೂ ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು ಭಾಗವಹಿಸಲಿದ್ದಾರೆ

ಡಾ|| ಮಂಜುಳ ಎನ್. ಭಾ.ಆ.ಸೇ – ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಬೆಂಗಳೂರು
ಡಾ|| ಅನುರಾಧ ಕೆ.ಎನ್. ಭಾ.ಆ.ಸೇ – ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು
ಶ್ರೀಮತಿ ಶೋಭಾ ಟಿ.ಆರ್. ಕ.ಆ.ಸೇ – ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಹಿಳಾ ಆಯೋಗ

ಸಾರ್ವಜನಿಕರ ಆಸ್ತಿಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.
ಸರ್ವರಿಗೂ ಆದರದ ಸುಸ್ವಾಗತ
ಕಡ್ಡಾಯವಾಗಿ ಮಾಸ್ಕ್ ಧರಿಸಿ | ಕೈಗಳ ಸ್ವಚ್ಛತೆಯನ್ನು ಕಾಪಾಡಿಕೊಳ್ಳಿ | ದೈಹಿಕ ಅಂತರವನ್ನು ಪಾಲಿಸಿ

ಏಕರೂಪ ಪದಬಳಕೆ, ಇಂಗ್ಲಿಷ್‌ನಲ್ಲಿ ಅಕ್ಷರ ನಿರ್ಧರಿಸಲು ಒತ್ತಾಯ

ಕನ್ನಡೀಕರಣಗೊಳ್ಳದ ಊರ ಹೆಸರು

• ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯದ ಗ್ರಾಮ, ಪಟ್ಟಣ, ನಗರ, ಪ್ರದೇಶಗಳ ಹೆಸರು ಕನ್ನಡವಾಗಿರಲಿ... ಕನ್ನಡ ಉಚ್ಚಾರಣೆಯಂತೆಯೇ ಇಂಗ್ಲಿಷ್‌ನಲ್ಲಿ ಅದನ್ನು ಬರೆಯುವಂತಾಗಲಿ ಎಂಬ ಬಹು ವರ್ಷದ ಬೇಡಿಕೆ ಇನ್ನೂ ಈಡೇರಿಲ್ಲ.

ರಾಜ್ಯದ 12 ನಗರಗಳ ಹೆಸರನ್ನು ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಹೇಗೆ ಬರೆಯಬೇಕು ಎಂಬುದನ್ನು ಅಧಿಕೃತಗೊಳಿಸಿ 2014ರಲ್ಲಿ ರಾಜ್ಯೋತ್ಸವದ ಸಂದರ್ಭದಲ್ಲಿ ಸರ್ಕಾರ ಅಧಿಸೂಚನೆ ಹೊರಡಿಸಿತ್ತು. ಇದಾದ ನಂತರ, ರಾಜ್ಯದ ಎಲ್ಲ ನಗರ, ಪಟ್ಟಣ ಹಾಗೂ ಗ್ರಾಮಗಳ ಹೆಸರನ್ನೂ ಇದೇ ರೀತಿ ಅಧಿಕೃತಗೊಳಿಸಬೇಕು ಎಂಬ ಒತ್ತಾಯ ಕೇಳಿಬರುತ್ತಿದೆ. ಆದರೆ, ಈವರೆಗೆ ಯಾವುದೇ ಕ್ರಮವಾಗಿಲ್ಲ.

ಇಂಗ್ಲಿಷ್‌ನಲ್ಲಿ ಮಾತ್ರವಲ್ಲ ಕನ್ನಡದಲ್ಲೂ ಹಳ್ಳಿ, ಪಟ್ಟಣ, ಪ್ರದೇಶಗಳ ಹೆಸರನ್ನು ಸಾಕಷ್ಟು ಬಾರಿ ತಪ್ಪಾಗಿ ಬರೆಯಲಾಗುತ್ತಿದೆ. ಉದಾಹರಣೆಗೆ ರಾಣೆಬೆನ್ನೂರು– ರಾಣಿಬೆನ್ನೂರು, ಹೊನ್ನಾಳಿ–ಹೊನ್ನಳ್ಳಿ, ಗುರುಮಿಟಕಲ– ಗುರ್‌ಮಿಟ್ಕಲ್, ಗುರಮಿಟ್ಕಲ್, ಮಸ್ಕಿ– ಮಾಸ್ಕಿ, ಪಿರಿಯಾಪಟ್ಟಣ– ಪೆರಿಯಾಪಟ್ಟಣ, ಲಕ್ಷ್ಮೇಶ್ವರ– ಲಕ್ಷ್ಮೀಶ್ವರ, ಅಣ್ಣಿಗೇರಿ– ಅಣ್ಣೇಗೇರಿ, ಅನ್ನೀಗೆರೆ, ಇಟ್ಟಮಡು– ಇಟ್ಟುಮಡು, ಹುಲ್ಲಾಳು–ಉಲ್ಲಾಳ, ಹುಲ್ಲಾಳ, ಕಣಿಮಿಣಿಕೆ– ಕಣ್ಮಿಣಿಕೆ, ಸೊಣ್ಣೇನಹಳ್ಳಿ– ಸೊನ್ನೇಹಳ್ಳಿ... ಹೀಗೆ ಹಲವು ರೀತಿಯಲ್ಲಿ ಬಳಸಲಾಗುತ್ತಿದೆ. ಸ್ಥಳೀಯ ಸಂಸ್ಥೆಗಳಲ್ಲೇ ಬಳಕೆ ವಿಭಿನ್ನವಾಗಿರುತ್ತದೆ. ಇನ್ನು ನಾಮಫಲಕಗಳಲ್ಲಿ ಪ್ರದೇಶಗಳ ಹೆಸರು ಒಂದೊಂದು ಕಡೆ ಒಂದೊಂದು ರೀತಿ ಇರುತ್ತದೆ. ಇಂಗ್ಲಿಷ್‌ನಲ್ಲಿ ಬರೆದಿರುವುದು ಬೇರೆ ಅರ್ಥವೇ ಬರುವಂತಾಗಿದೆ. ಊರು–ನಗರಗಳ ಹೆಸರು ಅಪಾರ್ಥಕ್ಕೆ ಎಡೆ ಮಾಡಿಕೊಡದಂತೆ ನಿರ್ದಿಷ್ಟ ಹೆಸರನ್ನೇ ಬಳಸುವಂತೆ ಸರ್ಕಾರ ಆದೇಶ ಹೊರಡಿಸಬೇಕು ಎಂಬ ಆಗ್ರಹಕ್ಕೆ ಬೆಲೆ ಸಿಕ್ಕಿಲ್ಲ.

ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಪ್ರದೇಶಗಳ ಹೆಸರನ್ನು ಮನಸೋಇಚ್ಛೆ ಬರೆಯಲಾಗಿರುತ್ತದೆ. ಕಾಗುಣಿತ ತಪ್ಪಾಗಿ ಊರಿನ ಹೆಸರಿನ ಬಗ್ಗೆ ಅಪಹಾಸ್ಯ ಮಾಡುವಂತಹ ಸಂದರ್ಭಗಳೂ ಘಟಿಸಿವೆ. ಸ್ಥಳೀಯ ಸಂಘ–ಸಂಸ್ಥೆಗಳು ಪ್ರತಿಭಟಿಸಿ, ಫಲಕಗಳಿಗೆ ಮಸಿ ಬಳಿದ ಪ್ರಕರಣಗಳೂ ಸಾಕಷ್ಟಾಗಿವೆ.

ಒಂದು ಗ್ರಾಮ ಅಥವಾ ಪ್ರದೇಶಕ್ಕೆ ಹೆಸರಿಸಬೇಕೆಂದರೆ ಅದಕ್ಕೆ ಹಲವು ಹಿನ್ನೆಲೆ ಇರುತ್ತದೆ. ಆದರೆ, ಅದನ್ನು ಸರ್ಕಾರಿ ದಾಖಲೆಗಳಲ್ಲೇ ಬೇರೆಬೇರೆ ರೀತಿ ಬರೆಯಲಾಗುತ್ತಿದೆ. ಪದಬಳಕೆ ವಿಭಿನ್ನವಾಗಿರುತ್ತದೆ. ಉಚ್ಚಾರಣೆಯಂತೆ ಕೆಲವು ಬಾರಿ ಬರೆಯಲಾಗುತ್ತದೆ. ಆದ್ದರಿಂದ ರಾಜ್ಯದ ಎಲ್ಲ ಪ್ರದೇಶಗಳ ಹೆಸರನ್ನು ಕಂದಾಯ ದಾಖಲೆಗಳನ್ನು ಪರಿಶೀಲಿಸಿ ಒಂದೇ ರೀತಿಯಲ್ಲಿ ಬರೆಯುವಂತಾಗಬೇಕು. ಭಾಷೆ ಬಳಕೆ ಸ್ವಚ್ಛವಾಗಬೇಕು. ಜೊತೆಗೆ, ಇಂಗ್ಲಿಷ್‌ನಲ್ಲಿ ಅದನ್ನು ಹೇಗೆ ಬರೆಯಬೇಕು ಎಂಬುದನ್ನು ಸರ್ಕಾರವೇ ಅಧಿಕೃತಗೊಳಿಸಬೇಕೆಂಬ ಆಗ್ರಹ ಕನ್ನಡಪರ ಸಂಘಟನೆಗಳದ್ದಾಗಿದೆ.

ಕನ್ನಡತನ ಬೆಳೆಯುತ್ತದೆ...

‘ಬೆಂಗಳೂರು, ಮೈಸೂರು, ಮಂಗಳೂರು... ಹೀಗೇ ಬರೆಯಬೇಕು ಎಂದು ಅಧಿಕೃತವಾದ ಮೇಲೆ ಬ್ಯಾಂಗ್ಲೋರ್, ಮೈಸೋರ್, ಮ್ಯಾಂಗ್ಲೋರ್ ಎಂದೆಲ್ಲ ಬರೆಯುವುದು, ಹೇಳುವುದು ಬದಲಾಗಿದೆ. ಇದೇ ರೀತಿ ರಾಜ್ಯದ ಎಲ್ಲ ಗ್ರಾಮ, ನಗರ, ಪಟ್ಟಣಗಳ ಹೆಸರೂ ಒಂದೇ ರೀತಿ ಕನ್ನಡದಲ್ಲೇ ಇರಬೇಕು. ಕನ್ನಡದ ಉಚ್ಚಾರಣೆ ರೀತಿಯಲ್ಲೇ ಇಂಗ್ಲಿಷ್‌ನಲ್ಲಿ ಬರೆಯಬೇಕು. ಇದರಿಂದ ಕನ್ನಡತನವೂ ಬೆಳೆಯುತ್ತದೆ.ಇದು ಕನ್ನಡ ಸಾಹಿತ್ಯ ಪರಿಷತ್‌ನ ಕೆಲಸವೂ ಹೌದು. ಈ ಬಗ್ಗೆ ಪರಿಷತ್ ಕೆಲಸ ಮಾಡಲಿದೆ’ ಎಂದು ಕಸಾಪ ಅಧ್ಯಕ್ಷ ಮಹೇಶ್ ಜೋಶಿ ಹೇಳಿದರು.

ಕನ್ನಡದ ಒಲವಿರುವ ಅಧಿಕಾರಿಗಳು ಬೇಕು...

‘ರಾಜ್ಯದಲ್ಲಿರುವ ಊರು, ನಗರ, ಪಟ್ಟಣಗಳ ಹೆಸರನ್ನು ಕನ್ನಡ ಭಾಷೆಯಲ್ಲಿ ಒಂದೇ ರೀತಿ ಬರೆಯಬೇಕು. ಈ ಬಗ್ಗೆ ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳು, ನಗರಪಾಲಿಕೆ ಆಯುಕ್ತರಿಗೆ ಪ್ರಾಧಿಕಾರದಿಂದ ಪತ್ರ ಬರೆಯಲಾಗಿತ್ತು. ಸರ್ಕಾರ ಸಾಕಷ್ಟು ಆದೇಶ ಮಾಡಿದೆ. ಆದರೆ ಅದು ಅನುಷ್ಠಾನವಾಗಿಲ್ಲ. ಅಧಿಕಾರಿಗಳು ಮನಸ್ಸು ಮಾಡಿದರೆ ಇವೆಲ್ಲ ಒಂದು ದಿನದ ಕೆಲಸ. ಕನ್ನಡದ ಬಗ್ಗೆ ಒಲವುಳ್ಳ ಅಧಿಕಾರಿಗಳಿದ್ದರೆ ಇವೆಲ್ಲ ಸಾಧ್ಯವಾಗುತ್ತದೆ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಟಿ.ಎಸ್. ನಾಗಾಭರಣ ಹೇಳಿದರು.

ಏಕರೂಪ ನಾಗರಿಕ ಸಂಹಿತೆ ಜಾರಿಗೆ ಬದ್ಧ: ಅಮಿತ್ ಶಾ

ನವದೆಹಲಿ (ಪಿಟಿಐ): ಏಕರೂಪ ನಾಗರಿಕ ಸಂಹಿತೆಯನ್ನು (ಯುಸಿಸಿ) ಜಾರಿಗೆ ತರಲು ಬಿಜೆಪಿ ಬದ್ಧವಾಗಿದೆ. ಆದರೆ ಅದನ್ನು ಜಾರಿಗೆ ತರುವಾಗ ಪ್ರಜಾಸತ್ತಾತ್ಮಕವಾದ ಎಲ್ಲ ಪ್ರಕ್ರಿಯೆ ಪಾಲಿಸಲಾಗುವುದು, ಅದರ ಕುರಿತು ಚರ್ಚೆ ನಡೆಸಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಗುರುವಾರ ಹೇಳಿದ್ದಾರೆ.

ಭಾರತೀಯ ಜನಸಂಘದ ಕಾಲದಿಂದಲೇ ಏಕರೂಪ ನಾಗರಿಕ ಸಂಹಿತೆ ಜಾರಿಯು ಬಿಜೆಪಿಯ ಭರವಸೆಗಳಲ್ಲಿ ಒಂದಾಗಿದೆ ಎಂದು ಅವರು ತಿಳಿಸಿದ್ದಾರೆ.

‘ಏಕರೂಪ ನಾಗರಿಕ ಸಂಹಿತೆ ಜಾರಿಯಾಗಬೇಕು ಎಂಬ ಬಯಕೆ ಬಿಜೆಪಿಗೆ ಮಾತ್ರ ಇರುವುದಲ್ಲ. ಸೂಕ್ತ ಸಮಯದಲ್ಲಿ ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರಬೇಕು ಎಂದು ಸಂವಿಧಾನ ರಚನಾ ಸಭೆಯು ಸಂಸತ್ತು ಮತ್ತು ರಾಜ್ಯಗಳಿಗೆ ಸಲಹೆ ನೀಡಿತ್ತು. ಆದರೆ, ಸಂವಿಧಾನ ರಚನಾ ಸಭೆಯ ಬದ್ಧತೆಯು ಕ್ರಮೇಣ ಮರೆತು ಹೋಯಿತು’ ಎಂದು ಶಾ ಹೇಳಿದ್ದಾರೆ.

‘ಬಿಜೆಪಿಯನ್ನು ಬಿಟ್ಟರೆ ಬೇರೆ ಯಾವ ಪಕ್ಷವೂ ಏಕರೂಪ ನಾಗರಿಕ ಸಂಹಿತೆ ಜಾರಿಯ ಪರವಾಗಿ ಇಲ್ಲ. ಅವರು ಈ ಕುರಿತು ಮಾತು ಕೂಡ ಆಡುವುದಿಲ್ಲ. ನೀವು ಅದನ್ನು ಜಾರಿಗೆ ತನ್ನಿ, ನಾವು ನಿಮ್ಮ ಜೊತೆಗೆ ಇದ್ದೇವೆ ಎಂದೂ ಈ ಪಕ್ಷಗಳು ಹೇಳುತ್ತಿಲ್ಲ. ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದ್ದೇವೆ. ಪ್ರಜಾಪ್ರಭುತ್ವದಲ್ಲಿ ಆರೋಗ್ಯಕರ ಚರ್ಚೆ ಅಗತ್ಯ. ಏಕರೂಪ ನಾಗರಿಕ ಸಂಹಿತೆ ಕುರಿತು ಮುಕ್ತ ಮತ್ತು ಆರೋಗ್ಯಕರ ಚರ್ಚೆ ಆಗಬೇಕಾಗಿದೆ’ ಎಂದು ಶಾ ಹೇಳಿದ್ದಾರೆ.

ಬಿಜೆಪಿ ಆಳ್ವಿಕೆ ಇರುವ ರಾಜ್ಯಗಳಾದ ಹಿಮಾಚಲ ಪ್ರದೇಶ, ಉತ್ತರಾಖಂಡ ಮತ್ತು ಗುಜರಾತ್‌ನಲ್ಲಿ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದ ಸಮಿತಿಗಳನ್ನು ರಚಿಸಲಾಗಿದೆ. ಎಲ್ಲ ಗುಂಪುಗಳು ಮತ್ತು ವಿವಿಧ ಧರ್ಮಗಳ ಜನರು ತಮ್ಮ ಅಭಿಪ್ರಾಯಗಳನ್ನು ಈ ಸಮಿತಿಯ ಮುಂದಿಡಲಿದ್ದಾರೆ ಎಂದು ಶಾ ಹೇಳಿದ್ದಾರೆ.

‘ಈ ಪ್ರಕ್ರಿಯೆಯಲ್ಲಿ ಬಂದ ಸಲಹೆಗಳ ಆಧಾರದಲ್ಲಿ ಕ್ರಮ ಕೈಗೊಳ್ಳಲಾಗುವುದು. ಎಲ್ಲ ರೀತಿಯ ಚರ್ಚೆಗಳ ಬಳಿಕವೇ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತರಲು ಬಿಜೆಪಿ ಬದ್ಧವಾಗಿದೆ’ ಎಂದಿದ್ದಾರೆ.

ಮೊರ್ಬಿ ದುರಂತ: ಸರ್ಕಾರಕ್ಕೆ ಹೈಕೋರ್ಟ್ ಚಾಟಿ

ಅಹಮದಾಬಾದ್: ಸಾರ್ವಜನಿಕ ಬಳಕೆ ನಿರ್ಬಂಧಿತ ಮೊರ್ಬಿ ತೂಗು ಸೇತುವೆ ನಿರ್ವಹಣೆಯನ್ನು ಟೆಂಡರ್ ಪ್ರಕ್ರಿಯೆ ಅನುಸರಿಸದೇ, ಯಾವುದೇ ಒಡಂಬಡಿಕೆಯನ್ನೂ ಮಾಡಿಕೊಳ್ಳದೆ ಒರೆವಾ ಸಮೂಹದ ಖಾಸಗಿ ಸಂಸ್ಥೆಗೆ ಐದು ವರ್ಷ ಗುತ್ತಿಗೆ ನೀಡಿರುವುದಕ್ಕೆ ಗುಜರಾತ್ ಹೈಕೋರ್ಟ್ ಗುರುವಾರ ರಾಜ್ಯ ಸರ್ಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡಿದೆ.

ಮೊರ್ಬಿ ಪುರಸಭೆ ಆಡಳಿತದ ವಿರುದ್ಧ ಕ್ರಮ ಕೈಗೊಳ್ಳದಿರುವುದಕ್ಕೂ ಸರ್ಕಾರಕ್ಕೆ ಬಿಸಿ ಮುಟ್ಟಿಸಿರುವ ಕೋರ್ಟ್, ಡಿಸೆಂಬರ್ 12ರಂದು ನಡೆಯಲಿರುವ ಮುಂದಿನ ವಿಚಾರಣೆಯೊಳಗೆ ವಿವರಣೆ ನೀಡುವಂತೆ ಆದೇಶ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಅರವಿಂದ್ ಕುಮಾರ್ ನೇತೃತ್ವದ ವಿಭಾಗೀಯ ಪೀಠವು, ಮೃತರ ಜಾತಿವಾರು ಪಟ್ಟಿ ಸಿದ್ಧಪಡಿಸಿರುವುದನ್ನು ಕಟುವಾಗಿ ಪ್ರಶ್ನಿಸಿತು. ಸೇತುವೆ ಕುಸಿಯಲು ಕಾರಣವೇನೆಂದು ತನಿಖೆ ನಡೆಸಿದ ವಿಶೇಷ ತನಿಖಾ ತಂಡದ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಪೀಠವು ಸೂಚಿಸಿತು. ಅ.30ರಂದು ಮೊರ್ಬಿ ತೂಗು ಸೇತುವೆ ಕುಸಿದ ದುರಂತದಲ್ಲಿ 135 ಜನರು ಮೃತಪಟ್ಟಿದ್ದರು.

ಹೃದಯಾಘಾತ: ಬ್ಯಾಂಕ್ ಅಧಿಕಾರಿ ಸಾವು

ಠಾಣೆ,ಮಹಾರಾಷ್ಟ್ರ (ಪಿಟಿಐ): ನಗರ ರೈಲು ನಿಲ್ದಾಣದಲ್ಲಿ ರೈಲಿನಿಂದ ಇಳಿಯುವಾಗ ಹೃದಯಾಘಾತವಾಗಿ ಸುಧಾಕರ್ ಟಿ.ಅಂಚನ್ (52) ಎಂಬುವವರು ಗುರುವಾರ ಮೃತಪಟ್ಟಿದ್ದಾರೆ.

ಅವರು ಮುಂಬೈ ಎಕ್ಸ್‌ಪ್ರೆಸ್ ಮೂಲಕ ಕರ್ನಾಟಕದಿಂದ ಮರಳಿದ್ದರು. ಭಾರತ್ ಬ್ಯಾಂಕ್‌ನಲ್ಲಿ ಸಹಾಯಕ ವ್ಯವಸ್ಥಾಪಕರಾಗಿದ್ದ ಅವರು, ಮುಂಬೈ ಬಿಲ್ಲವ ಸಂಘದ ಸದಸ್ಯರಾಗಿದ್ದರು.

ಲಾಲ್‌ಬಾಗ್.. ಸಮಸ್ಯೆಗಳ ಮೆರವಣಿಗೆ

‘ಜನಸ್ಪಂದನ’ ನಡೆಸಿ, ಲಾಲ್‌ಬಾಗ್‌ನಲ್ಲಿನ ಸಮಸ್ಯೆಗಳ ಕುರಿತು ಜನರಿಗೆ ಪರಿಹಾರ ಒದಗಿಸಬಹುದೆಂಬ ‘ಪ್ರಜಾವಾಣಿ’ಯ ವಿನಂತಿಗೆ ತೋಟಗಾರಿಕಾ ಸಚಿವ ಮುನಿರತ್ನ ಒಪ್ಪಿಗೆ ನೀಡಲಿಲ್ಲ. ಅಂತಹ ಜನದನಿಗೆ ಪತ್ರಿಕೆಯು ಈ ಮೂಲಕ ವೇದಿಕೆ ಒದಗಿಸಿದೆ.

‘ಹೂವೇ ಇಲ್ಲದ ಕಮಲದ ಕೊಳ’

ದಶಕಗಳ ಹಿಂದೆ ಲಾಲ್‌ಬಾಗ್‌ನಲ್ಲಿ ಕಮಲದ ಕೊಳ(ಲೋಟಸ್ ಪಾಂಡ್) ಇತ್ತು. ಇದು ಪ್ರಮುಖ ಆಕರ್ಷಣೆಯ ಕೇಂದ್ರವಾಗಿತ್ತು. ಈಗ ಕಮಲದ ಹೂವುಗಳಿಲ್ಲದೆ ಬರಿ ಕೊಳವಷ್ಟೇ ಉಳಿದಿದೆ. ಈ ಕೊಳದಲ್ಲಿ ಕಮಲದ ಹೂವುಗಳನ್ನು ಬೆಳೆಯಲು ಕ್ರಮ ಕೈಗೊಳ್ಳಬೇಕು. ಮತ್ಸ್ಯಾಗಾರ ಮತ್ತು ಮಿನಿ ಮೃಗಾಲಯ ಮಕ್ಕಳ ಅತ್ಯುತ್ತಮ ಆಕರ್ಷಕ ತಾಣವಾಗಿತ್ತು. ಈ ಕಟ್ಟಡ ಪಕ್ಷಿಗಳು ಮತ್ತು ಮೀನುಗಳಿಲ್ಲದ ಕೇವಲ ಮರುಭೂಮಿಯಾಗಿ ವಿನಾಶದ ಅಂಚಿನಲ್ಲಿದೆ. ಗತವೈಭವವನ್ನು ಮರುಸ್ಥಾಪಿಸಬೇಕಾಗಿದೆ. ಕತ್ತರಿಸುವ ಹುಲ್ಲಿನ ರಾಶಿಯನ್ನು ಅಲ್ಲಿಯೇ ಇರಿಸಿ ದುರ್ವಾಸನೆಗೆ ಕಾರಣವಾಗುತ್ತದೆ. ಹಾಳಾಗಿರುವ ರಸ್ತೆಗಳನ್ನು ಕೂಡಲೇ ಸರಿಪಡಿಸಬೇಕು. ಗಾಜಿನ ಮನೆಯೊಳಗೆ ಸಾಕಷ್ಟು ಹೊಂಡಗಳಿದ್ದು, ಇದರಿಂದ ನಡೆದಾಡಲು ಕಷ್ಟವಾಗುತ್ತಿದೆ. ಆದ್ದರಿಂದ ಗಾಜಿನ ಮನೆಯ ಸೂಕ್ತ ನಿರ್ವಹಣೆ ಅಗತ್ಯ. ಪ್ರವಾಸಿಗಳ ವಸ್ತುಗಳನ್ನು ಇಡಲು ಮುಖ್ಯ ಗೇಟ್ ಬಳಿ ಲಾಕರ್ ಸೌಲಭ್ಯ ಕಲ್ಪಿಸಬೇಕು. ವಿದ್ಯುತ್ ದೀಪಗಳ ಮತ್ತು ಸ್ವಿಚ್‌ಗಳ ನಿರ್ವಹಣೆ ಮಾಡಬೇಕು. ವಸ್ತುಗಳನ್ನು ಹಿಡಿದು ತಿರುಗುವ ವ್ಯಾಪಾರಿಗಳ ಸಂಖ್ಯೆ ವಾರಾಂತ್ಯದಲ್ಲಿ ಹೆಚ್ಚುತ್ತಿದ್ದು, ಮುಜುಗರ ಹೆಚ್ಚುಸುತ್ತಿದೆ. ಇದಕ್ಕೆ ತಪ್ಪಿಸಬೇಕು. ಉದ್ಯಾನದಲ್ಲಿ ಇನ್ನಷ್ಟು ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕು. ಕುಡಿಯುವ ನೀರಿನ ಘಟಕಗಳ ನಿರ್ವಹಣೆ ಮತ್ತು ಶುಚಿತ್ವಕ್ಕೆ ಗಮನ ಹರಿಸಬೇಕು.

ಪ್ರೊ.ಎಂ.ಆರ್.ದೊರೆಸ್ವಾಮಿ, ಶಿಕ್ಷಣ ಸುಧಾರಣೆಗಳ ಸಲಹೆಗಾರ

‘ಮಧುರ ಸಂಗೀತದ ವ್ಯವಸ್ಥೆ ಮಾಡಿ’

ಲಾಲ್‌ಬಾಗ್‌ನಲ್ಲಿ ಸುಮಧುರ ಸಂಗೀತ ಕೇಳುವ ವ್ಯವಸ್ಥೆ ಮಾಡಬೇಕು. ಎಲ್ಲ ದಿಕ್ಕಿನಲ್ಲಿ ನಡೆದಾಡುವ ದಾರಿಯಲ್ಲಿ ಸ್ಪೀಕರ್‌ಗಳನ್ನು ಅಳವಡಿಸಬೇಕು. ಎಲ್ಲರೂ ಸಂಗೀತ ಕೇಳುವಂತಾಗಬೇಕು. ನಡುನಡುವೆ ಆಕಾಶವಾಣಿಯಿಂದ ಪ್ರಸಾರವಾಗುವ ಕನ್ನಡ ವಾರ್ತೆಗಳನ್ನು ಕೇಳುವಂತಾಗಬೇಕು. ಇದರಿಂದ ಕನ್ನಡಕ್ಕೆ ಹೆಚ್ಚು ಆದ್ಯತೆ ಕೊಟ್ಟಂತೆ ಆಗಲಿದೆ. ಕನ್ನಡೇತರರು ಕನ್ನಡ ಕಲಿಯಲು ಪ್ರೇರಣೆ ದೊರಕಿದಂತೆ ಆಗಲಿದೆ. ಕನ್ನಡ ರಾಜ್ಯೋತ್ಸವದ ಈ ಸಂದರ್ಭದಲ್ಲಿ ಇದನ್ನು ಅನುಷ್ಠಾನ ಮಾಡಬೇಕು.

ಡಾ. ಎಸ್.ಟಿ. ರಾಮಚಂದ್ರ, ಪ್ರೆಸ್ಟೀಜ್ ಫಾಲ್ಕಾನ್ ಸಿಟಿ, ಕೋಣನಕುಂಟೆ ಕ್ರಾಸ್

‘ಮಕ್ಕಳಿಂದಲೂ ಸಚಿವರಿಗೆ ಹಿಡಿಶಾಪ’

ಲಾಲ್‌ಬಾಗ್ ಸಮಸ್ಯೆಯನ್ನು ಜನತೆಯ ಮುಂದಿರಿಸಿ ಸರ್ಕಾರದ ಕಿವಿಹಿಂಡುವ ಕೆಲಸ ಮಾಡಿರುವ ‘ಪ್ರಜಾವಾಣಿ’ ಬಳಗಕ್ಕೆ ಅಭಿನಂದನೆಗಳು. ಲಾಲ್‌ಬಾಗ್ ಹೊರತುಪಡಿಸಿದರೆ ದೊಡ್ಡ ಪಾರ್ಕ್ ಎಂದರೆ ಮತ್ತಿಕೆರೆಯ ಜೆ.ಪಿ. ಪಾರ್ಕ್. ಎರಡು ದಶಕಗಳಿಂದಲೂ ನಾಗರಿಕರಿಗೆ ಉಪಯುಕ್ತವಾಗಿತ್ತು. ಮೂರು–ನಾಲ್ಕು ವರ್ಷಗಳಿಂದ ಮಕ್ಕಳ ಪಾರ್ಕ್ ಬಂದ್ ಮಾಡಲಾಗಿದೆ. ಮಕ್ಕಳೆಲ್ಲರೂ ಶಾಸಕ ಮುನಿರತ್ನ ಅವರಿಗೆ ಶಾಪ ಹಾಕುತ್ತಿದ್ದಾರೆ. ಮೆಟ್ರೊ ರೈಲು ಮಾರ್ಗಕ್ಕೆ ಹಾಕುವ ರೀತಿಯ ಕಂಬಗಳನ್ನು ಉದ್ಯಾನದೊಳಗೆ ನಿರ್ಮಿಸಲಾಗುತ್ತಿದೆ. ವಾಯುವಿಹಾರ ಈಗ ದುಸ್ತರವಾಗಿದೆ. ಜೆ.ಪಿ. ಪಾರ್ಕ್ ಕಡೆಗೂ ಸರ್ಕಾರದ ಗಮನ ಸೆಳೆಯಬೇಕು.

ಪಾಂಡುರಂಗ ಕೊಣ್ಣೂರ, ಮತ್ತಿಕೆರೆ

ಪ್ರಜಾವಾಣಿ@75

ಲಾಲ್‌ಬಾಗ್‌ನಲ್ಲಿ ನೀವು ಕಂಡ, ಅನುಭವಿಸಿದ ಸಮಸ್ಯೆಗಳ ಕುರಿತು ಸಂಕ್ಷಿಪ್ತವಾಗಿ ಬರೆದು ನಮಗೆ ವಾಟ್ಸ್‌ಆ್ಯಪ್ ಮಾಡಿ. ಜೊತೆಗೆ ನಿಮ್ಮ ಪೂರ್ಣ ವಿಳಾಸ ಹಾಗೂ ಪಾಸ್‌ಪೋರ್ಟ್ ಅಳತೆಯ ಫೋಟೊವನ್ನು ‘ಪ್ರಜಾವಾಣಿ’ಗೆ ಕಳಿಸಿ. ಆಯ್ದ ಅನುಭವಗಳು ಪ್ರಕಟವಾಗಲಿವೆ.

9606038256

ಅರೆಬೆತ್ತಲೆ ಉರುಳು ಸೇವೆ: ರೈತರ ಆಕ್ರೋಶ

ಪ್ರಜಾವಾಣಿ ವಾರ್ತೆ

ಕಬ್ಬಿನ ಎಫ್‌ಆರ್‌ಪಿ ದರ ಹೆಚ್ಚಿಸಲು ಒತ್ತಾಯಿಸಿ ರೈತರು ಗುರುವಾರ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದ ಎದುರಿನ ಮುಖ್ಯರಸ್ತೆಯಲ್ಲಿ ಉರುಳು ಸೇವೆ ಮಾಡಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಕಬ್ಬಿನ ಎಫ್‌ಆರ್‌ಪಿ ದರ ಹೆಚ್ಚಿಸಬೇಕು’ ಎಂದು ಒತ್ತಾಯಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟಿಸುತ್ತಿರುವ ರೈತರು, ಉದ್ಯಾನ ಎದುರಿನ ಮುಖ್ಯರಸ್ತೆಯಲ್ಲಿ ಗುರುವಾರ ಅರೆಬೆತ್ತಲೆ ಉರುಳು ಸೇವೆ ಮಾಡಿ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದರು.

ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘ ನೇತೃತ್ವದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಯುತ್ತಿದೆ. ವಿವಿಧ ಜಿಲ್ಲೆಗಳಿಂದ ಸರದಿ ಪ್ರಕಾರ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುತ್ತಿರುವ ರೈತರು, ಬೇಡಿಕೆ ಈಡೇರಿಕೆಗಾಗಿ ಆಗ್ರಹಿಸುತ್ತಿದ್ದಾರೆ.

ಮುಖ್ಯಮಂತ್ರಿ ಮನೆ ಎದುರು ಪ್ರತಿಭಟನೆ ನಡೆಸಲು ರೈತರು ತೀರ್ಮಾನಿಸಿದ್ದರು. ಆದರೆ, ಅದಕ್ಕೆ ಅನುಮತಿ ಸಿಕ್ಕಿರಲಿಲ್ಲ. ಹೀಗಾಗಿ, ಉದ್ಯಾನದಲ್ಲಿ ಪ್ರತಿಭಟನೆ ಮುಂದುವರಿಸಿದ್ದಾರೆ.

ರೈತರ ಬೇಡಿಕೆ ಈಡೇರಿಸುವ ವಿಷಯದಲ್ಲಿ ಸರ್ಕಾರ ನಿರ್ಲಕ್ಷ್ಯ ತಾಳಿದೆ ಎಂದು ಆರೋಪಿಸಿದ ರೈತರು, ಅಂಗಿಗಳನ್ನು ಬಿಚ್ಚಿ ಅರೆಬೆತ್ತಲಾಗಿ ಗುರುವಾರ ಮಧ್ಯಾಹ್ನ ರಸ್ತೆಗೆ ಇಳಿದು ಉರುಳು ಸೇವೆ ಮಾಡಿದರು. ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಸ್ಥಳದಲ್ಲಿದ್ದ ಪೊಲೀಸರು, ರೈತರನ್ನು ರಸ್ತೆಯಲ್ಲೇ ತಡೆದು ನಿಲ್ಲಿಸಿದರು. ಮುಖ್ಯಮಂತ್ರಿ ಮನೆಗೆ ಹೋಗಬೇಕು ಎಂದು ರೈತರು ಪಟ್ಟು ಹಿಡಿದಿದ್ದರು. ಸಾರ್ವಜನಿಕರ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿದ್ದಂತೆ ಬಿಎಂಟಿಸಿ ಬಸ್‌ಗಳನ್ನು ಸ್ಥಳಕ್ಕೆ ಕರೆಸಿಕೊಂಡಿದ್ದ ಪೊಲೀಸರು, ಪ್ರತಿಭಟನಾನಿರತರನ್ನು ವಶಕ್ಕೆ ಪಡೆಯಲು ಮುಂದಾಗಿದ್ದರು. ಈ ವೇಳೆ ಮಾತಿನ ಚಕಮಕಿಯೂ ನಡೆಯಿತು.

ರೈತರನ್ನು ಸಮಾಧಾನಪಡಿಸಿದ ಪೊಲೀಸ್ ಅಧಿಕಾರಿಗಳು, ವಶಕ್ಕೆ ಪಡೆಯುವುದನ್ನು ಕೈಬಿಟ್ಟು ವಾಪಸ್ ಪ್ರತಿಭಟನೆ ಸ್ಥಳಕ್ಕೆ ಕಳುಹಿಸಿ ಪರಿಸ್ಥಿತಿ ತಿಳಿಗೊಳಿಸಿದರು. ನಂತರ, ಉದ್ಯಾನದಲ್ಲಿರುವ ಪೆಂಡಾಲ್‌ನಲ್ಲಿ ರೈತರು ಪ್ರತಿಭಟನೆ ಮುಂದುವರೆಸಿದರು.

‘ಎಫ್‌ಆರ್‌ಪಿ ದರ ಹೆಚ್ಚಿಸಲು ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿದೆ. ದರ ಹೆಚ್ಚಳ ಬೇಡಿಕೆ ಈಡೇರಿಸುವವರೆಗೂ ಉದ್ಯಾನ ಬಿಟ್ಟು ಹೋಗುವುದಿಲ್ಲ’ ಎಂದು ಪ್ರತಿಭಟನಾನಿರತರು ಹೇಳಿದರು.

ಚರ್ಚೆಗೆ ಗ್ರಾಸವಾದ ‘ಇನ್‌ಸ್ಟಾಗ್ರಾಂ ಪೋಸ್ಟ್’

ಕುಕ್ಕರ್ ಬಾಂಬ್ ಸ್ಫೋಟ: ದೇವಸ್ಥಾನ ಗುರಿ?

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ನಾಗುರಿ ಬಳಿ ನ.19ರಂದು ಆಟೊರಿಕ್ಷಾದಲ್ಲಿ ನಡೆದ ಕುಕ್ಕರ್ ಬಾಂಬ್ ಸ್ಫೋಟವನ್ನು ತಾವೇ ಮಾಡಿದ್ದಾಗಿ ಇಸ್ಲಾಮಿಕ್ ರೆಸಿಸ್ಟೆನ್ಸ್ ಕೌನ್ಸಿಲ್ (ಐಆರ್‌ಸಿ) ಹೆಸರಲ್ಲಿ ಇನ್‌ಸ್ಟಾಗ್ರಾಂನಲ್ಲಿ ಆಗಿದೆ ಎನ್ನಲಾದ ಪೋಸ್ಟ್ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು. ಇದು ಮತ್ತಷ್ಟು ಆತಂಕಕ್ಕೆ ಕಾರಣವಾಯಿತು.

ಈ ಪೋಸ್ಟ್‌ನಲ್ಲಿ ‘ನಮ್ಮ ಟಾರ್ಗೆಟ್ ಕದ್ರಿ ದೇವಸ್ಥಾನ ಆಗಿತ್ತು. ಆದರೆ, ಬಾಂಬ್ ಅಲ್ಲಿಗೆ ತಲುಪುವ ಮೊದಲೇ ಬ್ಲಾಸ್ಟ್ ಆಗಿತ್ತು’ ಎಂಬ ಉಲ್ಲೇಖದ ಜತೆಗೆ, ಕಾನೂನು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಅವರನ್ನು ಕುರಿತಾಗಿ, ‘ನಿಮ್ಮ ಸಂಭ್ರಮ ಕ್ಷಣಿಕವಾದದ್ದು. ತಕ್ಕ ಪರಿಣಾಮ ಸದ್ಯದಲ್ಲೇ ಎದುರಿಸಲಿದ್ದೀರಿ’ ಎಂದು ಎಚ್ಚರಿಕೆ ನೀಡಿದೆ. ಮೊದಲು ಉರ್ದು ಭಾಷೆಯಲ್ಲಿ ನಂತರ, ಇಂಗ್ಲಿಷ್‌ನಲ್ಲಿ ಬರಹ ಇದೆ.

ಇದರ ಬೆನ್ನಲ್ಲೇ ಪೊಲೀಸರು ನಗರದ ಪ್ರಮುಖ ಧಾರ್ಮಿಕ ಕ್ಷೇತ್ರಗಳಾದ ಕದ್ರಿ ಮಂಜುನಾಥ ದೇವಸ್ಥಾನ, ಕುದ್ರೋಳಿ ಗೋಕರ್ಣನಾಥ ದೇವಸ್ಥಾನ, ಮಂಗಳಾದೇವಿ ದೇವಸ್ಥಾನ ಹಾಗೂ ಇತ್ತೀಚೆಗೆ ಸಂಘ ಪರಿವಾರದ ಸಂಘಟನೆಗಳು ಕನ್ನಡ ಹಬ್ಬ ಆಯೋಜಿಸಿದ್ದ ‘ಸಂಘ ನಿಕೇತನ’ ಆರ್‌ಎಸ್‌ಎಸ್ ಕಚೇರಿಯ ಮೇಲೆ ವಿಶೇಷ ನಿಗಾವಹಿಸಿದ್ದಾರೆ.

ಕದ್ರಿ ದೇವಸ್ಥಾನಕ್ಕೆ ನಗರ ಸಶಸ್ತ್ರ ಮೀಸಲು ಪಡೆ ಪೊಲೀಸರು ಗುರುವಾರ ಭೇಟಿ ನೀಡಿ ತಪಾಸಣೆ ನಡೆಸಿದರು. ‘ಈ ಸಂಘಟನೆಯ ಹೆಸರು ಕೇಳಿಲ್ಲ. ಇದು ನಕಲಿ ಪೋಸ್ಟ್ ಆಗಿರುವ ಸಾಧ್ಯತೆ ಇದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಈ ನಡುವೆ ಕಳೆದ ಒಂದು ವಾರದಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ 2–3 ಕಡೆಗಳಲ್ಲಿ ಸೆಟ್‌ಲೈಟ್ ಫೋನ್ ಸದ್ದು ಮಾಡಿದೆ ಎಂಬ ಬಗ್ಗೆ ಕೂಡ ಪೊಲೀಸರು ಮಾಹಿತಿ ಕಲೆ ಹಾಕುತ್ತಿದ್ದಾರೆ ಎನ್ನಲಾಗಿದೆ.

ಶಾರಿಕ್ ಆರೋಗ್ಯದಲ್ಲಿ ಚೇತರಿಕೆ: ಸ್ಫೋಟದ ಆರೋಪಿ ಶಾರಿಕ್‌ಗೆ ಮಂಗಳೂರಿನ ಫಾದರ್ ಮುಲ್ಲರ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಶೇ 45ರಷ್ಟು ಸುಟ್ಟ ಗಾಯಗಳಿಂದ ಬಳಲುತ್ತಿರುವ ಆತ ಚಿಕಿತ್ಸೆಗೆ ಸ್ಪಂದಿಸುತ್ತಿದ್ದು, ಆತನ ಆರೋಗ್ಯದಲ್ಲಿ ಕೊಂಚ ಚೇತರಿಕೆ ಕಂಡುಬಂದಿದೆ ಎಂದು ಪೊಲೀಸ್ ಮೂಲಗಳು ದೃಢಪಡಿಸಿವೆ.

‘ಮಾಹಿತಿ ಹಂಚಿಕೆಗೆ ಆ್ಯಪ್’

ಮಂಗಳೂರಿನ ಗೋಡೆ ಬರಹದ ಆರೋಪಿಗಳಾದ ತೀರ್ಥಹಳ್ಳಿಯ ಅರಾಫತ್ ಅಲಿ, ಅಬ್ದುಲ್ ಮತೀನ್, ನಾಗುರಿ ಸಮೀಪ ನಡೆದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಮಾಸ್ಟರ್ ಮೈಂಡ್ ಎನ್ನಲಾಗಿದೆ. ಅರಾಫತ್ ಅಲಿ, ಅಬ್ದುಲ್ ಮತೀನ್, ಶಾರೀಕ್ ಹಾಗೂ ನ್ಯಾಯಾಂಗ ಬಂಧನದಲ್ಲಿರುವ ಮಾಝ್ ಇವರು ಡಾರ್ಕ್‌ವೆಬ್, ಸಿಗ್ನಲ್, ಟೆಲಿಗ್ರಾಂ ಆ್ಯಪ್‌ಗಳನ್ನು ವಿಡಿಯೊ ಮತ್ತು ಮಾಹಿತಿ ಹಂಚಿಕೆಗೆ ಬಳಸಿಕೊಳ್ಳುತ್ತಿದ್ದರು. ಈ ಬಗ್ಗೆಯೂ ತನಿಖೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

‘ಶಾರಿಕ್ ಬಳಿ ಸಿಕ್ಕ ಮೊಬೈಲ್‌ನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ. ಆತ ಈ ಮೊದಲು ಮಂಗಳೂರಿಗೆ ಭೇಟಿ ನೀಡಿದ್ದ ವೇಳೆ ಮಣ್ಣಗುಡ್ಡೆ ಸುತ್ತಮುತ್ತ ಓಡಾಡಿರುವುದನ್ನು ಮೊಬೈಲ್ ಸಿಗ್ನಲ್ ಮೂಲಕ ಪೊಲೀಸರು ಪತ್ತೆ ಮಾಡಿದ್ದಾರೆ. ತನ್ನ ಬಗ್ಗೆ ಅನುಮಾನ ಬರಬಾರದೆಂದು ಶಾರಿಕ್ ಹೆಗಲಿಗೆ ಕೇಸರಿ ಶಾಲು ಕೂಡ ಹಾಕಿಕೊಳ್ಳುತ್ತಿದ್ದ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

‘ಎನ್‌ಐಎಗೆ ಹಸ್ತಾಂತರ’

ಮಂಗಳೂರು ಕಂಕನಾಡಿ ಪೊಲೀಸ್ ಠಾಣೆ ವ್ಯಾಪ್ತಿಯ ನಾಗುರಿ ಬಳಿ ನಡೆದ ಆಟೊರಿಕ್ಷಾದಲ್ಲಿ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣವನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ)ಗೆ ವರ್ಗಾಯಿಸಿದೆ.

‘ಪ್ರಾಥಮಿಕ ತನಿಖೆಯಲ್ಲಿ ಸಂಗ್ರಹಿಸಲಾದ, ಸಾಕ್ಷ್ಯ ಹಾಗೂ ಇತರ ಮಾಹಿತಿಗಳ ಆಧಾರದ ಮೇಲೆ, ರಾಜ್ಯ ಸರ್ಕಾರ ನಿರ್ಧಾರ ಕೈಗೊಂಡು, ಕಾನೂನು ಬಾಹಿರ ಚಟುವಟಿಕೆ ತಡೆ ಕಾಯ್ದೆ (ಯುಎಪಿಎ) ಅನ್ವಯ ತನಿಖೆಯನ್ನು ನಡೆಸಲು ಶಿಫಾರಸು ಮಾಡಲಾಗಿದೆ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಆಗಿದೆ ಎನ್ನಲಾದ ಬರಹ ಹಾಗೂ ಈ ಹೆಸರಿನ ಸಂಘಟನೆಯ ಸತ್ಯಾಸತ್ಯತೆಯನ್ನು ಪರಿಶೀಲಿಸಲಾಗುತ್ತಿದೆ.

ಅಲೋಕ್‌ಕುಮಾರ್, ಎಡಿಜಿಪಿ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Multiple Locations

VILLA PLOTS
Mysore - 799/Sft
Chickballapur - 650/Sft
Hubli - 650/Sft
(Onwards)
80%* Bank Loan
100% Released
YESH - 9538885500
www.yeshdevelopers.Com

Hosur Road

SALE 1575 Sqft Sites at Begur. North Facing. 1km from Hosur Road Metro Station. Bank Loans: 7204020070

Kempegowda Layout

KEMPEGOWDA LAYOUT sale 30x40 North facing site 7th block I sector, Near Ranganathaswamy Temple. 9481455837.

Vishweshwariah Layout

VISHWESHWARIAH LAYOUT BDA 2nd Block 30x40 North 80' Road Parallel and 6th Block Attach 40x40 BBMP A Katha Corner: 9964971895

Commercial Land

Mysore

COMMERCIAL PROPERTY For Sale-30492 Sq. Ft., Mysore-Madikeri Main National Highway Road, 3 Kms. from Ring Road Circle, Before Yelwala, Mysuru. Contact: 9844393578

RENTAL PROPERTIES

Accommodation Available

Industrial And Factory

RENT: PRIME LOCATION For Industry/ Warehouse Doddaballapura 20,000 Sqft. 1st Floor Ready2move, All RCC: 9845750111/ 9986085690

Commercial

FOR RENT in Davanagere on Old P.B. Road near Srigandha Lodge, Basement-3900, Ground- 800, 1st floor- 3900, 2nd floor: 3900, Rooftop: 3900/ sqft. Contact: 9448028103.

REAL ESTATE BUYING

General

General

WE DO Agriculture Land Conversions, Change of Land Use,Phodi, Property Documentation Services and Marketable Title.Call Verna Developers, Barton Centre, MG-Road, Bengaluru. 9916310226/ 9620253180. www.vernadevelopers.com

BUSINESS

Business Offers

General

SUYAMB MANAGEMENT, A Genuine Share Market Trading Company offers Genuine and Principle Safe Returns for your investment. 6% a Month Fixed Returns. Office in Koramangla. Successful 5th Year. All Investments supported with Legal Document. For Details call 9070990709

Finance

WANTED BUSINESS Partner Veg Hotel 3 Lakhs Investment Monthly Income 1 Lakhs Contact: 8892501007/ 9606701007

AUTOMOTIVE

Four Wheelers Selling

Hyundai

ACCIDENT DAMAGED Hyundai`I20Asta (O)CRDI-2019 Diesel KA-02.MQ 1156`at Trident Motors Yeshwantpur Quote after inspection`for with`&`without RC`to Sampat,Surveyor 9900182098

EDUCATIONAL

Admission

ONE SITTING. BCA/BBA/ BSc/BCom/MA/MSc/MBA. Distance Education from Tamilnadu's Prestigious University.Limited Seats, LAST CHANCE. Asha Academy, Bangalore. Call: 9448460103/ 7093438248

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Multiple Vacancy

IMMEDIATE APPOINTMENT HRD,Administration,Accounts,Manager, Supervisor, Software,Hardware,Electronics,Mechanical,Electrical Engineers 7676760299/7676760399

Teachers/ Professors

WANTED TEACHERS with BA/MA (Eng and SS) with BEd, Salary 14000 to 25000. Contact Sidhartha International School, Peenya, Dasarahalli. Contact Nos. 9620100046/ 9964670328

PERSONAL

Change of Name

CHANGE OF NAME
I, **SHRIMATHI RAJ** Spouse of Ex-14603736L, Rank: CFN Late. Rajasimha K.M, have changed my name to **SHRIMATHI** & my D.O.B is mentioned in the service record as 26.09.1968 correct D.O.B is 25.11.1968, vide affidavit dated 23.11.2022, before notary M.S. Satish Bangalore. Henceforth I shall be called **SHRIMATHI** only.

I SAVITA G Spouse of No. 169105F Rank Ex POR(TEL) name Rama Murthy have changed by name from G Savita Murthy to Savita G my D.O.B is wrongly mentioned in the service record as 22 yrs, 3 months. The correct D.O.B is 12.11.1980 vide affidavit dated 23.11.2022 before advocate S.T. Thipppeswamy, Bangalore.

CHANGE OF NAME
I, **NISHA MALAGE,** W/o. MALAGE VISWANATHA residing at Gokul Dwellington Apartment, Flat No 304 'B' Block, Ramaiah Road, Gokula, Mathikere, Bangalore - 560054, declare that all **"NISHA VISWANATHA MALAGE", "NISHA VISHWANATH MALAGE", "NISHA MALAGE", "NISHA MALAGI", "NISHA V. MALAGE", "JAYASHRI TENGINAKAI"** and **"NISHA MALIGI"** names pertains to me only, vide affidavit dated 17/11/2022, before notary S.R. Paramashivaiah, Bangalore. Henceforth I shall be called **NISHA MALAGE** only.

I NISHANTH LUNIA R/a, #85, Coles road, Frazer Town, Bangalore- 05 Have Changed my Name To NISHANTH DINESHKUMAR LUNIA Vide Affidavit Dated 22/11/2022 before Notary Hegde Ganapati Venkatraman Bangalore

MEETLASH DEVI, Wife/o, JC672567K, SUB, MAHIPAL, Vill- Siha, Khattla, Hodal, Palwal, Haryana changed name MEETLASH DEVI to MITLESH 22/11/2022 Notary K.V. Mani Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD ಪ್ರಜಾವಾಣಿ

BOOK YOUR CLASSIFIEDS ADVERTISEMENT

DECCAN HERALD & PRAJAVANI CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	80	125	95	150

CD Per Sqcm	Single Col	Double Col	Multi Col
	535	500	515

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

conditions apply*

For More Details Contact:
Ph: 080- 45557160 | 163 | 164 |
9845114560 | 9731810277 | 9901641752 | 9886213331
dhclassifieds@deccanherald.co.in www.dhclassifieds.com

ವಿದ್ಯಾರ್ಥಿನಿ ಅಪಹರಣ: ಶಿಕ್ಷಕ ಬಂಧನ

ಪ್ರಜಾವಾಣಿ ವಾರ್ತೆ

ಪಾಲೇಶ ಕಲ್ಲೂರು

ಸಿರವಾರ (ರಾಯಚೂರು ಜಿಲ್ಲೆ): ತಾಲ್ಲೂಕಿನ ಗ್ರಾಮವೊಂದರ ಶಾಲೆಯ ವಿದ್ಯಾರ್ಥಿನಿಯನ್ನು ಅಪಹರಿಸಿದ ಆರೋಪದ ಮೇಲೆ ಅದೇ ಶಾಲೆಯ ಅತಿಥಿ ಶಿಕ್ಷಕ ಪಾಲೇಶ ಕಲ್ಲೂರು (31) ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

ವಿದ್ಯಾರ್ಥಿನಿಯ ಅಪಹರಣಕ್ಕೆ ಸಂಬಂಧಿಸಿದಂತೆ ಗ್ರಾಮಸ್ಥರು ನೀಡಿದ ದೂರನ್ನು ಆಧರಿಸಿ ಆರೋಪಿಯ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ವಿದ್ಯಾರ್ಥಿನಿಯನ್ನು ಪೋಷಕರಿಗೆ ಒಪ್ಪಿಸಲಾಗಿದೆ ಎಂದು ಸಿರವಾರ ಠಾಣೆಯ ಪಿಎಸ್ಐ ಗೀತಾಂಜಲಿ ಸಿಂಧೆ ತಿಳಿಸಿದ್ದಾರೆ.

‘ಗಡಿ ವಿವಾದ: ಸರ್ವಪಕ್ಷ ಸಭೆ ಶೀಘ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗಡಿ ವಿವಾದಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್‌ನಲ್ಲಿ ನಡೆಸಬೇಕಾದ ಕಾನೂನು ಹೋರಾಟ ಹಾಗೂ ಮಾತುಕತೆ ಮೂಲಕ ವಿವಾದ ಇತ್ಯರ್ಥಪಡಿಸಿಕೊಳ್ಳುವ ಮಹಾರಾಷ್ಟ್ರದ ಇಂಗಿತ ಸೇರಿದಂತೆ ಎಲ್ಲ ವಿಷಯವನ್ನೂ ಚರ್ಚಿಸಲು ಮುಂದಿನ ವಾರ ಸರ್ವಪಕ್ಷಗಳ ಸಭೆ ಕರೆಯಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ಮಹಾರಾಷ್ಟ್ರ ಮುಖ್ಯಮಂತ್ರಿ ಸಭೆ ನಡೆಸಿರುವುದು ಹಾಗೂ ಮಾತುಕತೆ ಮೂಲಕ ವಿವಾದ ಬಗೆಹರಿಸಿಕೊಳ್ಳುವ ಬಗ್ಗೆ ಚಿಂತನೆ ಇದೆ ಎಂದು ಹೇಳಿರುವುದು ಗಮನಕ್ಕೆ ಬಂದಿದೆ. ಸರ್ವಪಕ್ಷಗಳ ಸಭೆಯಲ್ಲಿ ಎಲ್ಲ ನಾಯಕರ ಜತೆ ಸಮಾಲೋಚನೆ ನಡೆಸಿ, ರಾಜ್ಯದ ಹಿತಕ್ಕೆ ಪೂರಕವಾದ ನಿರ್ಣಯ ಕೈಗೊಳ್ಳಲಾಗುವುದು ಎಂದರು.

ಮಹಾರಾಷ್ಟ್ರ ಗಡಿ ವಿವಾದವೇ ಮುಗಿದು ಹೋಗಿದೆ. ಗ್ರಾಮ ಪಂಚಾಯತಿಗಳ ನಿರ್ಣಯ ಹಾಗೂ ಪೂರಕ ವರದಿಗಳೆಲ್ಲವೂ ಕರ್ನಾಟಕದ ಪರವಾಗಿಯೇ ಇವೆ. ಹಾಗಿದ್ದರೂ, ಆ ರಾಜ್ಯದವರು ಮತ್ತೆ ವಿವಾದ ಎಬ್ಬಿಸಿದ್ದಾರೆ. ಮುಂದಿನ ದಿನಗಳಲ್ಲಿ ಈ ಎಲ್ಲ ವಿಷಯಗಳ ಬಗ್ಗೆ ಸುಪ್ರೀಂಕೋರ್ಟ್‌ನಲ್ಲಿ ಚರ್ಚೆಯಾಗಲಿದೆ ಎಂದರು.

‘ಕರ್ನಾಟಕದ ಪರವಾಗಿ ವಾದ ಮಂಡಿಸಲು ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ. ನಮ್ಮ ವಾದಕ್ಕೆ ಗಟ್ಟಿಯಾದ ದಾಖಲೆಗಳು ಹಾಗೂ ಆಧಾರಗಳೂ ಇವೆ’ ಎಂದು ಬೊಮ್ಮಾಯಿ ಪ್ರತಿಪಾದಿಸಿದರು.

ಸುಪ್ರೀಂ ಕೋರ್ಟ್‌ನಲ್ಲಿ ಅವರು ದಾವೆ ಹೂಡಿದ್ದಾರೆ. ಮಹಾರಾಷ್ಟ್ರದ ವಾದವನ್ನು ಹೇಗೆ ಎದುರಿಸಬೇಕು ಎಂಬ ಬಗ್ಗೆ ಈ ಹಿಂದೆಯು ಸರ್ವಪಕ್ಷ ಸಭೆಯಲ್ಲಿ ಹಾಗೂ ಗಡಿ ಅಭಿವೃದ್ಧಿ ಪ್ರಾಧಿಕಾರದೊಂದಿಗೆ ಚರ್ಚಿಸಿ ನಿರ್ಣಯ ಕೈಗೊಳ್ಳಲಾಗಿತ್ತು ಎಂದರು.

ಮಾತುಕತೆ ಮೂಲಕ ಇತ್ಯರ್ಥ: ಏಕನಾಥ ಶಿಂಧೆ ಇಂಗಿತ

ಬೆಳಗಾವಿ: ‘ಕರ್ನಾಟಕ- ಮಹಾರಾಷ್ಟ್ರ ಗಡಿ ವಿವಾದವನ್ನು ಮಾತುಕತೆಯ ಮೂಲಕ ಸರ್ವಸಮ್ಮತದಿಂದ ಬಗೆಹರಿಸಿಕೊಳ್ಳುವುದು ನಮ್ಮ ನಿಲುವು’ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂಧೆ ಹೇಳಿದರು.

ಮುಂಬೈನಲ್ಲಿ ಗುರುವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ‘ಗಡಿ ಸಮಸ್ಯೆ ಕುರಿತ ನಮ್ಮ ದಾವೆ ಸುಪ್ರೀಂಕೋರ್ಟ್‌ನಲ್ಲಿದೆ. ಕಾನೂನು ವ್ಯಾಪ್ತಿಯ ಚರ್ಚೆ ಅಲ್ಲಿ ನಡೆಯಲಿದೆ. ಕೇಂದ್ರ ಸರ್ಕಾರ ಹಾಗೂ ಎರಡೂ ರಾಜ್ಯಗಳ ನಡುವೆ ಮಾತುಕತೆ ಮೂಲಕ ಈ ವಿವಾದ ಬಗೆಹರಿಸಿಕೊಳ್ಳುವುದು ಸೂಕ್ತ’ ಎಂದರು.

‘ಗಡಿ ಜನರ ಜೀವನ ಸುಧಾರಣೆ ಕುರಿತು ಈಚೆಗೆ ನಡೆದ ಎರಡೂ ರಾಜ್ಯಗಳ ರಾಜ್ಯಪಾಲರ ಸಮನ್ವಯ ಸಭೆ ಯಶಸ್ವಿಯಾಗಿದೆ. ಇದೇ ರೀತಿಯ ಸಭೆ ಗಡಿ ವಿಚಾರದಲ್ಲಿಯೂ ನಡೆಯಬೇಕಿದೆ. ಕೇಂದ್ರ ಸರ್ಕಾರ ಕೂಡ ನಮ್ಮ ನಿಲುವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದೆ’ ಎಂದು ತಿಳಿಸಿದರು.

‘ಮಹಾರಾಷ್ಟ್ರ ಸರ್ಕಾರದಿಂದ ಗಡಿಭಾಗದ ಮರಾಠಿಗರಿಗೆ ಈ ಹಿಂದೆ ನೀಡುತ್ತಿದ್ದ ಯೋಜನೆಗಳ ಲಾಭವನ್ನೇ ನಾವು ಹೆಚ್ಚಿಸಿದ್ದೇವೆ. ಸ್ವಾತಂತ್ರ್ಯ ಹೋರಾಟಗಾರರ ಪಿಂಚಣಿ ₹10 ಸಾವಿರದಿಂದ ₹20 ಸಾವಿರಕ್ಕೆ ಹೆಚ್ಚಿಸಿದ್ದೇವೆ. ‘ಮುಖ್ಯಮಂತ್ರಿ ಧರ್ಮಾದಾಯ ಸಹಾಯ ನಿಧಿ’ ಬಂದ್ ಆಗಿತ್ತು. ಅದನ್ನು ಮತ್ತೆ ಶುರು ಮಾಡಿದ್ದೇವೆ. ಗಡಿಭಾಗದ ಮರಾಠಿಗರಿಗಷ್ಟೇ ಆರೋಗ್ಯ ಸೌಲಭ್ಯ ನೀಡಲು ‘ಮಹಾತ್ಮ ಜ್ಯೋತಿಬಾ ಫುಲೆ ಯೋಜನೆ’ ನೀಡಲು ನಿರ್ಣಯ ತೆಗೆದುಕೊಂಡಿದ್ದೇವೆ. ಈ ವಿಷಯವಾಗಿ ಎರಡೂ ರಾಜ್ಯಗಳ ಮಧ್ಯೆ ಗೊಂದಲ ಸೃಷ್ಟಿಯಾಗಬಾರದು. ಕುಳಿತು ಮಾತನಾಡುವುದು ನಮ್ಮ ಇಚ್ಛೆ’ ಎಂದೂ ಹೇಳಿದ್ದಾರೆ.

> ಗಡಿ ವಿವಾದವನ್ನು ಮುಂದುವರಿಸುವುದು ಸರಿಯಲ್ಲ. ದೇಶದೊಳಗೆ ಇರುವ ಕಾರಣಕ್ಕೆ ಬೆಳಗಾವಿ ಪ್ರದೇಶಗಳು ಸುರಕ್ಷಿತವಾಗಿವೆ. ಗಡಿವಿವಾದವನ್ನು ರಾಜಕೀಯಗೊಳಿಸುವುದು ಸಹ ಸರಿಯಲ್ಲ.
>
> **ಸಿ.ಟಿ.ರವಿ**
> ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

ಸುದ್ದಿ 2 ನಿಮಿಷ

ವೀರೇಂದ್ರ ಹೆಗ್ಗಡೆಗೆ 75: ಸರಳ ಆಚರಣೆ ಇಂದು

ಧರ್ಮಸ್ಥಳ (ಉಜಿರೆ): ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ನ.25ರಂದು 75ನೇ ವರ್ಷಕ್ಕೆ ಕಾಲಿಡುತ್ತಿದ್ದು, ಸರಳ ರೀತಿಯಲ್ಲಿ ಜನ್ಮದಿನ ಆಚರಿಸಿಕೊಳ್ಳಲು ನಿರ್ಧರಿಸಿದ್ದಾರೆ.

ದೇವಳದ ನೌಕರರು, ಊರಿನ ನಾಗರಿಕರು, ಭಕ್ತರು ಹಾಗೂ ಅಭಿಮಾನಿಗಳು ಹೆಗ್ಗಡೆ ಅವರಿಗೆ ಶುಭಾಶಯ ಅರ್ಪಿಸುವರು.

1948ರ ನವೆಂಬರ್ 25ರಂದು ಅಂದಿನ ಧರ್ಮಾಧಿಕಾರಿ ರತ್ನವರ್ಮ ಹೆಗ್ಗಡೆ ಮತ್ತು ರತ್ನಮ್ಮ ದಂಪತಿಯ ಹಿರಿಯ ಮಗನಾಗಿ ಜನಿಸಿದ ವೀರೇಂದ್ರ ಕುಮಾರ್, 1968ರ ಅಕ್ಟೋಬರ್ 24 ರಂದು ತಮ್ಮ 21ನೇ ವಯಸ್ಸಿನಲ್ಲಿ ಧರ್ಮಸ್ಥಳದ 21ನೇ ಧರ್ಮಾಧಿಕಾರಿಯಾಗಿ ನೆಲ್ಯಾಡಿ ಬೀಡಿನ ಸಂಪ್ರದಾಯದಂತೆ ಪಟ್ಟಕ್ಕೆ ಏರಿದ್ದರು. ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಕಾರಣರಾಗಿದ್ದಾರೆ.

ಕಬ್ಬಿಣದ ಗೇಟು ಬಿದ್ದು ಬಾಲಕ ಸಾವು

ಹರಪನಹಳ್ಳಿ (ವಿಜಯನಗರ ಜಿಲ್ಲೆ): ಪಟ್ಟಣದ ಬಿಎಸ್‌ಎನ್‌ಎಲ್ ಕಚೇರಿ ಆವರಣದಲ್ಲಿ ಗುರುವಾರ ಆಟವಾಡುತ್ತಿದ್ದ ಬಾಲಕ ಗೌತಮ್ (7) ಎಂಬಾತನ ಮೇಲೆ ಕಾಂಪೌಂಡ್‌ನ ಕಬ್ಬಿಣದ ಗೇಟು ಉರುಳಿಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಬಾಗಳಿ ಗ್ರಾಮದ ಮಲ್ಲೇಶ್ ಮತ್ತು ವೀಣಾ ದಂಪತಿ ಆಧಾರ್ ಕಾರ್ಡ್ ಮಾಡಿಸಲು ಪುತ್ರನನ್ನು ಕರೆದುಕೊಂಡು ಪಟ್ಟಣಕ್ಕೆ ಬಂದಿದ್ದರು. ಈ ವೇಳೆ ಬಿಎಸ್‌ಎನ್‌ಎಲ್ ಕಚೇರಿ ಆವರಣದಲ್ಲಿ ಆಟವಾಡುತ್ತಿದ್ದ ಬಾಲಕನ ಮೇಲೆ ಕಬ್ಬಿಣದ ಗೇಟು ಏಕಾಏಕಿ ಬಿದ್ದು ಈ ಅವಘಡ ಸಂಭವಿಸಿದೆ ಎನ್ನಲಾಗಿದೆ. ಸ್ಥಳೀಯ ಠಾಣೆಯಲ್ಲಿ ದೂರು ದಾಖಲಾಗಿದೆ.

ಬಾಲಕನ ಸಾವು ಖಂಡಿಸಿ ತಾಲ್ಲೂಕು ಕೊರಚ ಸಮಾಜದ ಮುಖಂಡರು ಪ್ರತಿಭಟನೆ ನಡೆಸಿ, ಕಚೇರಿಯ ಸಿಬ್ಬಂದಿ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

‘ಅಧಿಕಾರಿಗಳ ನಿರ್ಲಕ್ಷ್ಯದಿಂದಲೇ ಬಾಲಕ ಸಾವನ್ನಪ್ಪಿದ್ದಾನೆ. ಅವರ ವಿರುದ್ಧ ಪ್ರಕರಣ ದಾಖಲಿಸಿ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು. ಕಡುಬಡವರಾಗಿರುವ ಬಾಲಕನ ಕುಟುಂಬಕ್ಕೆ ತಕ್ಷಣವೇ ಪರಿಹಾರ ಕೊಡಬೇಕು’ ಎಂದು ತಾಲ್ಲೂಕು ಕೊರಚ ಸಮಾಜದ ಅಧ್ಯಕ್ಷ ಕೆ.ಅಶೋಕ ಒತ್ತಾಯಿಸಿದ್ದಾರೆ.

‘ಭಾರತ ಜೋಡೊ, ಸಂವಿಧಾನ ಬಚಾವೋ’

ಬೆಂಗಳೂರು: ಕೆಪಿಸಿಸಿಯ ಮುಂಚೂಣಿ ಒಂಬತ್ತು ಘಟಕಗಳು ಒಟ್ಟಿಗೆ ಇದೇ 28ರಿಂದ ಐದು ದಿನ 10 ಜಿಲ್ಲೆಗಳಲ್ಲಿ ‘ಭಾರತ ಜೋಡೊ– ಸಂವಿಧಾನ ಬಚಾವೋ’ ಪಾದಯಾತ್ರೆ ಹಮ್ಮಿಕೊಳ್ಳಲು ನಿರ್ಧರಿಸಿವೆ. ಪ್ರತಿ ಜಿಲ್ಲೆಯಲ್ಲಿ 10 ಕಿ.ಮೀ ಪಾದಯಾತ್ರೆಯ ನೇತೃತ್ವವನ್ನು ಪಕ್ಷದ ಪರಿಶಿಷ್ಟ ಜಾತಿ ವಿಭಾಗ ವಹಿಸಲಿದೆ.

ಸುದ್ದಿಗೋಷ್ಠಿಯಲ್ಲಿ ಗುರುವಾರ ಈ ಬಗ್ಗೆ ಮಾಹಿತಿ ನೀಡಿದ ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ಮುಖ್ಯಸ್ಥ ಆರ್.ಧರ್ಮಸೇನ, ‘ರಾಜೀವ್ ಗಾಂಧಿ ಗ್ರಾಮೀಣಾಭಿವೃದ್ಧಿ ವಿಭಾಗ, ಕಿಸಾನ್ ವಿಭಾಗ, ಅಸಂಘಟಿತ ಕಾರ್ಮಿಕ, ಕಾರ್ಮಿಕ, ಅಲ್ಪಸಂಖ್ಯಾತ, ಹಿಂದುಳಿದ, ಪರಿಶಿಷ್ಟ ಜಾತಿ ಹಾಗೂ ಪಂಗಡದ ವಿಭಾಗಗಳಿಗೆ ಕಾರ್ಯಕ್ರಮ ಜವಾಬ್ದಾರಿಯನ್ನು ಎಐಸಿಸಿ ನೀಡಿದೆ. ಈ ಎಲ್ಲ ಸಮುದಾಯದ ಜನರಿಗೆ ಸಂವಿಧಾನ ರಕ್ಷಣೆ ನೀಡಿದೆ. ಹೀಗಾಗಿ, ಅದರ ರಕ್ಷಣೆಗಾಗಿ ಹೋರಾಟ ಹಮ್ಮಿಕೊಂಡಿದ್ದೇವೆ’ ಎಂದರು.

‘ಚಿತ್ರದುರ್ಗದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಯಾತ್ರೆ ಉದ್ಘಾಟಿಸುವರು. ಅಂದು 10 ಕಿ.ಮೀ ಯಾತ್ರೆ ನಡೆಯಲಿದೆ. ಮಧ್ಯಾಹ್ನದ ನಂತರ ದಾವಣಗೆರೆಯಲ್ಲಿ, ಮರುದಿನ ಬೆಳಿಗ್ಗೆ ಹಾವೇರಿ, ಮಧ್ಯಾಹ್ನ ಗದಗ, ಮೂರನೇ ದಿನ ಬೆಳಿಗ್ಗೆ ಹುಬ್ಬಳ್ಳಿ, ನಂತರ ಧಾರವಾಡ ಗ್ರಾಮೀಣ, ನಾಲ್ಕನೇ ದಿನ ಬೆಳಿಗ್ಗೆ ಬೆಳಗಾವಿ, ಮಧ್ಯಾಹ್ನ ಚಿಕ್ಕೋಡಿಯಲ್ಲಿ ತಲಾ 10 ಕಿ.ಮೀ ನಂತೆ ಯಾತ್ರೆ ಸಾಗಲಿದೆ. ಕೊನೆಯ ದಿನ ಹುಬ್ಬಳ್ಳಿಯ ಮಹಾತ್ಮಗಾಂಧಿ ಪ್ರತಿಮೆ ಬಳಿ ಸಮಾವೇಶ ಆಯೋಜಿಸಲಾಗುವುದು’ ಎಂದರು.

‘ಮುಂದಿನ ವರ್ಷದ ಜನವರಿಯಲ್ಲಿ ಪರಿಶಿಷ್ಟರ ಸಮಾವೇಶ ಆಯೋಜಿಸಲಿದ್ದು, ಜಿ.ಪರಮೇಶ್ವರ ಅವರ ನೇತೃತ್ವದಲ್ಲಿ ಸಭೆ ಮಾಡಿದ್ದೇವೆ’ ಎಂದರು.

ಗ್ರಾಮೀಣಾಭಿವೃದ್ಧಿ ಘಟಕದ ಮುಖ್ಯಸ್ಥ ನಾರಾಯಣಸ್ವಾಮಿ ಅವರು, ‘ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಪ್ರಧಾನಿ ಸಂವಿಧಾನಿಕ ಸಂಸ್ಥೆಗಳಾದ ಇಡಿ, ಸಿಬಿಐಯನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ’ ಎಂದು ದೂರಿದರು. ‘ಭಾರತ ಜೋಡೊ ಯಾತ್ರೆ ಸಾಗದ ಜಿಲ್ಲೆಗಳಲ್ಲಿ ಈ ಯಾತ್ರೆ ನಡೆಯಲಿದೆ’ ಎಂದು ಕಾರ್ಮಿಕ ವಿಭಾಗದ ಮುಖ್ಯಸ್ಥ ಪುಟ್ಟಸ್ವಾಮಿ ಹೇಳಿದರು.

ಬಹುಪತ್ನಿತ್ವ: ವಿಚಾರಣೆಗೆ ಹೊಸ ಪೀಠ

ನವದೆಹಲಿ: ಮುಸ್ಲಿಮರಲ್ಲಿ ಆಚರಣೆಯಲ್ಲಿರುವ ನಿಕಾ ಹಲಾಲ ಹಾಗೂ ಬಹುಪತ್ನಿತ್ವದ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಗೆ ಐವರು ನ್ಯಾಯಮೂರ್ತಿಗಳ ಪೀಠವನ್ನು ಹೊಸದಾಗಿ ರಚಿಸಲು ಸುಪ್ರೀಂ ಕೋರ್ಟ್ ಗುರುವಾರ ಸಮ್ಮತಿಸಿದೆ. ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಈ ಸಂಬಂಧ ನ್ಯಾಯಾಲಯಕ್ಕೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿದ್ದರು.

ಅಕಾಲಿಕ ಮಳೆ, ಶೀತಗಾಳಿ • ಇಳುವರಿ ಕುಂಠಿತವಾಗುವ ಭೀತಿಯಲ್ಲಿ ಕೃಷಿಕರು

ಮಾವು ಫಸಲಿಗೆ ಮಳೆ ಆತಂಕ

• ಆರ್. ಜಿತೇಂದ್ರ

ರಾಮನಗರ: ಮಾವು ಹೂ ಬಿಡುವ ಹಂತದಲ್ಲಿ ಸುರಿಯುತ್ತಿರುವ ಅಕಾಲಿಕ ಮಳೆ ಮತ್ತು ಬೀಸುತ್ತಿರುವ ಶೀತಗಾಳಿ ಮಾವು ಇಳುವರಿಗೆ ಮಾರಕವಾಗಿ ಪರಿಣಮಿಸುವ ಸಾಧ್ಯತೆ ಇದೆ.

ಜಿಲ್ಲೆಯಲ್ಲಿ ಎರಡು ದಿನದಿಂದ ನಿರಂತರ ಸುರಿಯುತ್ತಿರುವ ಮಳೆ ಮಾವು ಋತುವಿನ ಆರಂಭದಲ್ಲೇ ಬೆಳೆಗಾರರಿಗೆ ಆತಂಕ ತಂದೊಡ್ಡಿದೆ. ಮಳೆ ಮುಂದುವರಿದಷ್ಟೂ ಹೂ ಬಿಡುವ ಹಂತದಲ್ಲಿರುವ ಮಾವಿನ ಹೂ ಕಚ್ಚುವ ಪ್ರಕ್ರಿಯೆ ನಿಧಾನವಾಗಲಿದ್ದು, ಇಳುವರಿ ಕುಸಿಯುವ ಆತಂಕವಿದೆ.

ಜಿಲ್ಲೆಯ ಅನೇಕ ಬೆಳೆಗಾರರು ಈಗಾಗಲೇ ತೋಟಗಳಿಗೆ ಮೊದಲ ಸುತ್ತಿನ ಔಷಧ ಸಿಂಪಡಿಸಿದ್ದಾರೆ. ಇದೀಗ ಮಳೆಯಾಗುತ್ತಿರುವ ಕಾರಣ ಈ ಔಷಧ ಫಲ ನೀಡುವುದು ಅನುಮಾನ.

ರಾಜ್ಯದಲ್ಲಿ ಮೊದಲು ಮಾವು ಉತ್ಪನ್ನ ಮಾರುಕಟ್ಟೆಗೆ ಬರುವುದು ರಾಮನಗರದಿಂದ. ಇಲ್ಲಿನ 30 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತಿದ್ದು, ಜಿಲ್ಲೆಯಲ್ಲಿ ರಾಗಿ ನಂತರದ ಪ್ರಮುಖ ಬೆಳೆ ಇದಾಗಿದೆ. ಜಿಲ್ಲೆಯ ವಿವಿಧ ತೋಟಗಳಲ್ಲಿ ಈಗಾಗಲೇ ಮಾವು ಹೂವು ಬಿಡಲು ಆರಂಭಿಸಿದೆ. ಇಂತಹ ಸಂದರ್ಭದಲ್ಲಿ ಮುಂಜಾನೆ ತಣ್ಣನೆಯ ಇಬ್ಬನಿ ಹಾಗೂ ಹಗಲು ಹೊತ್ತಿನಲ್ಲಿ ಬಿಸಿಲು ಇದ್ದಷ್ಟು ಹೂವು ಹೆಚ್ಚಾಗಲಿದ್ದು, ಫಸಲು ಉತ್ತಮವಾಗಿರುತ್ತದೆ. ಆದರೆ ಅಕಾಲಿಕ ಮಳೆಯಿಂದಾಗಿ ಈ ಲೆಕ್ಕಾಚಾರ ತಲೆಕೆಳಕಾಗುತ್ತಿದೆ.

ರಾಮನಗರ ತಾಲ್ಲೂಕಿನ ಬಿಳಗುಂಬ ಗ್ರಾಮದ ಬಳಿಯ ಹೊಲವೊಂದರಲ್ಲಿ ಹೂ ಬಿಡುವ ಹಂತದಲ್ಲಿರುವ ಮಾವಿನ ಮರ

ಮುಖ್ಯಾಂಶಗಳು

- 30 ಸಾವಿರ ಹೆಕ್ಟೇರ್‌ನಲ್ಲಿ ಮಾವು ಕೃಷಿ
- ಹೂ ಕಚ್ಚುವ ಪ್ರಕ್ರಿಯೆ ಆರಂಭ

‘ಶೀತ ಹೆಚ್ಚಾದಷ್ಟು ಹೂ ಬಿಡುವ ಪ್ರಕ್ರಿಯೆ ನಿಧಾನವಾಗಲಿದೆ. ಜೊತೆಗೆ ಹೊಸ ಚಿಗುರು ಸಹ ಕಾಣಿಸಿಕೊಳ್ಳಲಿದೆ. ನಾನಾ ಬಗೆಯ ಕೀಟಬಾಧೆಯೂ ಹೆಚ್ಚಾಗಲಿದೆ. ಸದ್ಯಕ್ಕೆ ಹೆಚ್ಚು ಆತಂಕವಿಲ್ಲ. ಆದರೆ ಇನ್ನೂ ನಾಲ್ಕೈದು ದಿನ ಇದೇ ಪರಿಸ್ಥಿತಿ ಮುಂದುವರಿದರೆ ಆಗ ಖಂಡಿತ ಮಾವು ಬೆಳೆಗಾರರಿಗೆ ಕಷ್ಟವಾಗಲಿದೆ’ ಎನ್ನುತ್ತಾರೆ ಮೈಸೂರಿನ ತೋಟಗಾರಿಕೆ ವಿಜ್ಞಾನಗಳ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ರಾಮೇಗೌಡ.

‘ಮಾವಿಗೆ ಕೀಟಬಾಧೆ ಆರಂಭ ಆಗಿದ್ದಲ್ಲಿ ಸದ್ಯ ನೈಸರ್ಗಿಕ ವಿಧಾನಗಳಿಂದ ಅದನ್ನು ನಿಯಂತ್ರಿಸಬೇಕು. ರೋಗ ಹೆಚ್ಚಿದ್ದಲ್ಲಿ ಕೃಷಿ ವಿಜ್ಞಾನಿಗಳ ಸಲಹೆಯಂತೆ ಆರಂಭದಲ್ಲೇ ಅಗತ್ಯ ಔಷಧೋಪಚಾರ ಮಾಡಬೇಕು. ಇಲ್ಲವಾದಲ್ಲಿ ಇಳುವರಿ ಕೈ ತಪ್ಪುವ ಸಾಧ್ಯತೆ ಇದೆ’ ಎನ್ನುವುದು ಅವರ ಸಲಹೆ.

ಉತ್ತಮ ಇಳುವರಿ ನಿರೀಕ್ಷೆ: ಕಳೆದ ವರ್ಷ ಅತಿವೃಷ್ಟಿಯ ಕಾರಣಕ್ಕೆ ಮಾವಿನ ಫಸಲು ಉತ್ತಮವಾಗಿರಲಿಲ್ಲ. ಶೇ 20–25ರಷ್ಟು ಫಸಲು ಮಾತ್ರ ಸಿಕ್ಕಿದ್ದು, ಬೆಳೆಗಾರರು ನಷ್ಟ ಅನುಭವಿಸಿದ್ದರು. ಈ ಬಾರಿ ಉತ್ತಮ ಫಸಲು ಸಿಗುವ ನಿರೀಕ್ಷೆಯೊಂದಿಗೆ ರೈತರು ಮರಗಳ ಆರೈಕೆಯಲ್ಲಿ ತೊಡಗಿಸಿಕೊಂಡಿದ್ದಾರೆ.

> ಬಿಸಿಲು ಹೆಚ್ಚಿದ್ದಷ್ಟು ಮಾವಿನ ಹೂವು ಬಿಡುವ ಪ್ರಕ್ರಿಯೆ ಉತ್ತಮವಾಗಿರುತ್ತದೆ. ಮಳೆ ಮುಂದುವರಿದಲ್ಲಿ ಮರಗಳಲ್ಲಿ ಚಿಗುರು ಕಾಣಿಸಿಕೊಳ್ಳಲಿದ್ದು, ರೋಗಬಾಧೆಯೂ ಹೆಚ್ಚಾಗುತ್ತದೆ.
>
> **ರಾಮೇಗೌಡ**
> ಸಹಾಯಕ ಪ್ರಾಧ್ಯಾಪಕ, ಮೈಸೂರು ತೋಟಗಾರಿಕೆ ಕಾಲೇಜು

> ನಿರಂತರ ಮಳೆಯಿಂದಾಗಿ ಈ ಬಾರಿಯೂ ಮಾವಿನ ಇಳುವರಿ ವ್ಯತ್ಯಾಸ ಆಗುವ ಸಾಧ್ಯತೆ ಇದೆ. ಅಗತ್ಯ ಔಷಧ ಪೂರೈಕೆಗೆ ಮಾವು ಮಂಡಳಿಗೆ ಪ್ರಸ್ತಾವ ಸಲ್ಲಿಸಿದ್ದೇವೆ.
>
> **ಮುನೇಗೌಡ**
> ಉಪನಿರ್ದೇಶಕ, ತೋಟಗಾರಿಕೆ ಇಲಾಖೆ

ಹೆಜ್ಜೇನು ದಾಳಿ: ವ್ಯಕ್ತಿ ಸಾವು

ಕೆ.ಆರ್.ನಗರ (ಮೈಸೂರು ಜಿಲ್ಲೆ): ತಾಲ್ಲೂಕಿನ ಹೊಸಹಳ್ಳಿಯಲ್ಲಿ ಗುರುವಾರ ನಡೆದ ಹೆಜ್ಜೇನು ದಾಳಿಗೆ ಗ್ರಾಮದ ನಿವಾಸಿ ಬಸವರಾಜು (58) ಮೃತಪಟ್ಟಿದ್ದಾರೆ. ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಇದ್ದಾರೆ.


ಬಸವರಾಜು

ಹೊಸಹಳ್ಳಿಯ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ನೌಕರರಾಗಿದ್ದ ಅವರು, ಎಂದಿನಂತೆ ಗುರುವಾರ ಹಸುಗಳಿಗೆ ಕೃತಕ ಗರ್ಭಧಾರಣೆಯ ಲಸಿಕೆ ನೀಡಲು ಬೈಕ್‌ನಲ್ಲಿ ತೆರಳುತ್ತಿದ್ದಾಗ ಹೆಜ್ಜೇನು ದಾಳಿ ನಡೆಸಿವೆ. ಇದರಿಂದ ಕಂಗಾಲಾಗಿ ಮನೆಗೆ ಹಿಂದಿರುಗಿದ್ದಾರೆ. ಮನೆ ತಲುಪುವವರೆಗೂ ದಾಳಿ ನಡೆಸಿವೆ. ತೀವ್ರ ಅಸ್ವಸ್ಥರಾಗಿ ಕೆಲವೇ ಕ್ಷಣಗಳಲ್ಲಿ ಮೃತಪಟ್ಟರು ಎಂದು ಕುಟುಂಬದವರು ತಿಳಿಸಿದ್ದಾರೆ.

ಬುಧವಾರವೂ ಮಹಿಳೆಯೊಬ್ಬರ ಮೇಲೆ ಹೆಜ್ಜೇನು ದಾಳಿ ಮಾಡಿದ್ದವು. ಅವರು ಇಲ್ಲಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮನೆಗೆ ಮರಳುವಷ್ಟರಲ್ಲಿ ಮತ್ತೊಂದು ಘಟನೆ ನಡೆದಿರುವುದು ಸಾರ್ವಜನಿಕರಲ್ಲಿ ಆತಂಕ ಸೃಷ್ಟಿಸಿದೆ.

ಸಿನಿಮಾ ಪುರವಣಿ

ಆಶಿಕಾ ಲವ್‌ಸ್ಟೋರಿ...

ಆಶಿಕಾ ರಂಗನಾಥ್

ನಟಿ ಆಶಿಕಾ ರಂಗನಾಥ್ ಅವರಿಗಿಂದು ಡಬಲ್ ಧಮಾಕ! ತಮಿಳಿನ ಅವರ ಚೊಚ್ಚಲ ಚಿತ್ರದ ಜೊತೆಗೆ ಕನ್ನಡದ 'ರೇಮೊ' ಸಿನಿಮಾ ಕೂಡಾ ಇಂದು ತೆರೆ ಕಾಣುತ್ತಿದೆ. ಲವ್‌ಸ್ಟೋರಿಗಳನ್ನು ಇಷ್ಟಪಡುವ ಆಶಿಕಾ 'ಸಿನಿಮಾ ಪುರವಣಿ' ಜೊತೆ ಮಾತಿಗಿಳಿದು ಹೀಗೆಂದರು...

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಅಭಿಲಾಷ್ ಪಿ.ಎಸ್.

● ಆಶಿಕಾಗೆ ಇಂದು ಡಬಲ್ ಧಮಾಕ ಅಲ್ಲವೇ?

ಖಂಡಿತವಾಗಿಯೂ... ತಮಿಳಿನ ನನ್ನ ಚೊಚ್ಚಲ ಚಿತ್ರ ಹಾಗೂ ಕನ್ನಡದಲ್ಲಿನ ನನ್ನ ಬಹುನಿರೀಕ್ಷಿತ ಸಿನಿಮಾ 'ರೇಮೊ' ಪ್ರೇಕ್ಷಕರೆದುರಿಗಿದೆ. ನನ್ನ ಸಿನಿಪಯಣದಲ್ಲಿ ಹಿಂದೆಂದೂ ಒಂದೇ ದಿನ ನನ್ನ ಎರಡು ಸಿನಿಮಾಗಳು ತೆರೆಕಂಡಿರಲಿಲ್ಲ. ಎಲ್ಲರಿಗೂ ಈ ಅವಕಾಶ ಸಿಗುವುದಿಲ್ಲ. ಕೋವಿಡ್ ಮೊದಲೇ 'ರೇಮೊ' ಶೂಟಿಂಗ್ ಆರಂಭಿಸಿದ್ದೆವು. ಆದರೆ ಕೋವಿಡ್ ಕಾರಣದಿಂದ ಬಿಡುಗಡೆ ಮುಂದಕ್ಕೆ ಹೋಗುತ್ತಲೇ ಇತ್ತು.

● 'ರೇಮೊ' ಎದುರಿಗೆ ನಿಂತ 'ಮೋಹನ' ಯಾರು?

ಇಲ್ಲಿಯವರೆಗೂ ನನ್ನನ್ನು ಒಂದೊಂದು ಪಾತ್ರದಲ್ಲಿ ನೋಡಿ ಜನ ಇಷ್ಟಪಟ್ಟಿದ್ದರು. ಅತಿಥಿ ಪಾತ್ರದಲ್ಲಾಗಿರಲಿ, 'ಪಟಾಕಿ ಪೋರಿ'ಯಂಥ ಹಾಡಿರಲಿ ಹೀಗೆ ಒಂದು ದೃಶ್ಯದಲ್ಲೇ ನಾನು ಇದ್ದರೂ ಜನ ನನ್ನನ್ನು ಪ್ರೀತಿಯಿಂದ ಒಪ್ಪಿಕೊಂಡಿದ್ದರು. ಎಂಟ್ಹತ್ತು ದೃಶ್ಯಗಳಷ್ಟೇ ಅಲ್ಲ, ತೆರೆ ತುಂಬಾ ನೀವೇ ಕಾಣಿಸಿಕೊಳ್ಳುವುದು ಯಾವಾಗ ಎನ್ನುವ ಪ್ರಶ್ನೆಯೂ ಅವರದ್ದಾಗಿತ್ತು. ಈ ಆಸೆ ನನ್ನೊಳಗೂ ಇತ್ತು. 'ರ್‍ಯಾಂಬೊ-2' ಸಿನಿಮಾದಲ್ಲಿ ಇಂತಹ ಅವಕಾಶ ನನಗೆ ಲಭಿಸಿತ್ತು. ಬಹಳ ದಿನಗಳ ನಂತರ 'ರೇಮೊ' ಮೂಲಕ ನಾನು ಮತ್ತೆ ಪೂರ್ಣ ಪ್ರಮಾಣದಲ್ಲಿ ತೆರೆ ಆವರಿಸಿಕೊಳ್ಳಲಿದ್ದೇನೆ. ಇಲ್ಲಿ ಗ್ಲ್ಯಾಮರ್‌ಗಷ್ಟೇ ಮಹತ್ವ ಇಲ್ಲ. 'ಮೋಹನ' ಎನ್ನುವ ನನ್ನ ಪಾತ್ರಕ್ಕೆ ಹೀರೊನ ಪಾತ್ರದಷ್ಟೇ ಪ್ರಾಮುಖ್ಯ ಇದೆ. ಇಲ್ಲಿ ಆಕೆಯ ಎರಡು ಶೇಡ್ಸ್ ನೋಡಬಹುದು. ಇಲ್ಲಿ ಗ್ಲ್ಯಾಮರಸ್ ಆಗಿರೋ ಆಶಿಕಾಳನ್ನೂ ನೋಡಬಹುದು. ಜೊತೆಗೆ ಹಾಡುಗಾರ್ತಿಯಾಗಿರುವ ಆಶಿಕಾಳನ್ನೂ ಕಣ್ತುಂಬಿಕೊಳ್ಳಬಹುದು. ಮ್ಯೂಸಿಕಲ್ ಲವ್‌ಸ್ಟೋರಿ ಕಥಾಹಂದರದ 'ರೇಮೊ' ಸಿನಿಮಾದಲ್ಲಿ ನನ್ನ ಪಾತ್ರ ಮುಗ್ಧತೆ-ದಿಟ್ಟತೆಯ ಮಿಶ್ರಣ. ಹಿಂದೆಂದಿಗಿಂತ ಹೆಚ್ಚು ಬೋಲ್ಡ್ ಆಗಿ ಈ ಸಿನಿಮಾದಲ್ಲಿ ನಾನು ಕಾಣಿಸಿಕೊಂಡಿದ್ದೇನೆ.

● ನಿಮ್ಮೊಂದು ಕನಸು ನನಸಾದ ಬಗ್ಗೆ...

ಖಂಡಿತವಾಗಿ. ತಮಿಳಿನಲ್ಲಿ ಸಿದ್ಧಾರ್ಥ್ ಅವರ ಜೊತೆಗೊಂದು ಸಿನಿಮಾ ಮಾಡುತ್ತಿದ್ದೇನೆ. ಸದ್ಯಕ್ಕೆ ಅದೇ ಸಿನಿಮಾದ ಚಿತ್ರೀಕರಣದಲ್ಲಿದ್ದೇನೆ. ಇಂದಿಗೂ ಅವರ ಮುಂದೆ ಹೋಗಿ ನಿಂತಾಗ, ಇದು ನಿಜವೇ ಕನಸೇ ಎನ್ನುವ ಭಾವನೆ. 'ಅಪ್ಪು' ಸಿನಿಮಾ ನೋಡಿದ ಬಳಿಕ ಪುನೀತ್ ಅವರ ಜೊತೆ ಸಿನಿಮಾ ಮಾಡಬೇಕು ಎನ್ನುವ ಆಸೆ ಹುಟ್ಟಿತ್ತು. ಅದೇ ರೀತಿ 'ಬೊಮ್ಮರಿಲ್ಲು' ಸಿನಿಮಾ ನೋಡಿದ ಬಳಿಕ ಸಿದ್ಧಾರ್ಥ್ ಅವರ ಪಾತ್ರ ನನ್ನನ್ನು ಕಾಡಿತ್ತು. ಅವರ ಜೊತೆ ನಟಿಸಬೇಕು ಎನ್ನುವ ಆಸೆಯನ್ನೂ ಹುಟ್ಟಿಸಿತ್ತು. ಒಂದಷ್ಟು ದಿನ ಸಿದ್ಧಾರ್ಥ್ ಅವರು ಸಿನಿಮಾ ಕ್ಷೇತ್ರದಿಂದಲೇ ದೂರ ಉಳಿದಿದ್ದರು. ಈ ನಡುವೆ ನನಗೆ ಅವರ ಜೊತೆ ನಟಿಸುವ ಅವಕಾಶ ದೊರಕಿತ್ತು. ಅವರೇ ಹೀರೋನಾ ಎಂದು ಮತ್ತೆ ಮತ್ತೆ ಕೇಳಿದ್ದೆ.



ಸಿದ್ಧಾರ್ಥ್, ಆಶಿಕಾ

● ಟ್ರೈಲರ್ ನೋಡಿದರೆ ತೆರೆ ತುಂಬಾ ಆಶಿಕಾ ತುಂಬಿಕೊಂಡಿದ್ದಾರೆ...

ದಶಕದ ಹಿಂದೆ ನಾಯಕಿಗೆ ಪ್ರಾಮುಖ್ಯ ನೀಡುವ ಕಥಾಹಂದರದ ಸಿನಿಮಾಗಳನ್ನು ನೋಡುತ್ತಿದ್ದೆವು. ಉದಾಹರಣೆಗೆ ರಮ್ಯಾ, ರಕ್ಷಿತಾ, ರಾಧಿಕಾ ಪಂಡಿತ್ ಅವರ ಸಿನಿಮಾಗಳು. ಇತ್ತೀಚಿನ ದಿನಗಳಲ್ಲಿ ಇಂಥ ಸಿನಿಮಾಗಳು ಬಂದಿರಲಿಲ್ಲ. 'ರೇಮೊ' ಮತ್ತೆ ಇಂಥ ಅವಕಾಶವನ್ನು ಒದಗಿಸಿದೆ. ತೆರೆ ತುಂಬಾ ನಾವೇ ಕಾಣಿಸಿಕೊಳ್ಳಬೇಕು ಎನ್ನುವ ಆಸೆ ಪ್ರತಿಯೊಬ್ಬ ಕಲಾವಿದನ ಬದುಕಲ್ಲಿ ಇರುತ್ತದೆ. 'ರೇಮೊ'ದಲ್ಲಿ ತೆರೆ ಮೇಲೆ ಸಿನಿಮಾ ಅವಧಿಯ ಶೇ80-90 ಭಾಗ ನಾನಿರಲಿದ್ದೇನೆ. ಏಕೆಂದರೆ ನನ್ನ ಪಾತ್ರ ಚಿತ್ರಕಥೆಗೆ ಅಷ್ಟು ಅವಶ್ಯವಾಗಿದೆ. ಹೀಗಾಗಿ ಈ ಸಿನಿಮಾ ಬಗ್ಗೆ ಎಲ್ಲರಿಗಿಂತ ನಾನೇ ಹೆಚ್ಚು ಉತ್ಸುಕಳಾಗಿದ್ದೇನೆ.

ಪವನ್ ಒಡೆಯರ್ ಅವರಂಥ ಅನುಭವಿ ನಿರ್ದೇಶಕರು 'ರೇಮೊ' ಕಥೆ ಹೇಳಿದಾಗಲೇ ನಾನು ಒಪ್ಪಿಕೊಂಡೆ. ಏಕೆಂದರೆ ಇದೊಂದು ಪ್ರೇಮಕಥೆ. ಎಲ್ಲ ಕಲಾವಿದರಿಗೂ ಒಂದೊಂದು ಜಾನರ್ ಇಷ್ಟವಿರುತ್ತದೆ. ನನಗೆ ಲವ್‌ಸ್ಟೋರಿ, ರೊಮ್ಯಾನ್ಸ್-ಕಾಮಿಡಿ ಜಾನರ್ ಎಂದರೆ ಬಹಳ ಇಷ್ಟ. 'ರೇಮೊ' ಔಟ್ ಆ್ಯಂಡ್ ಔಟ್ ಲವ್‌ಸ್ಟೋರಿ.

● 'ಗೂಗ್ಲಿ'ಗೂ 'ರೇಮೊ'ಗೂ ಸಂಬಂಧ ಇದೆಯೇ?

ಲವ್‌ಸ್ಟೋರಿ ಎಂದಾಕ್ಷಣ ನನಗೆ ನೆನಪಾಗುವುದೇ ಪವನ್ ಒಡೆಯರ್ ಅವರ 'ಗೂಗ್ಲಿ' ಸಿನಿಮಾ. ಈ ಸಿನಿಮಾ ಆದ ಮೇಲೆ ಅವರು ಪೂರ್ಣ ಪ್ರಮಾಣದ ಲವ್‌ಸ್ಟೋರಿಯ ಸಿನಿಮಾವನ್ನು ಮಾಡಿರಲಿಲ್ಲ. 'ಗೂಗ್ಲಿ ಮಾಡಿರೋ ನಿರ್ದೇಶಕ ಇವರು' ಎಂದೇ ಪವನ್ ಅವರನ್ನು ಪ್ರೇಕ್ಷಕರು ಗುರುತಿಸುತ್ತಾರೆ. ಹೀಗಾಗಿ ಆ ಟ್ರೇಡ್ ಮಾರ್ಕ್ ಸಿನಿಮಾದ ಒಂದಿಷ್ಟು ಕ್ಲಾಸಿಕ್ ದೃಶ್ಯಗಳು ಇರಲೇಬೇಕಲ್ಲವೇ... ನಿರ್ದೇಶಕನಾಗಿ ತನ್ನ ಹಳೆಯ ಸಿನಿಮಾದ ಒಂದಿಷ್ಟು ಅಂಶಗಳನ್ನು ಬಳಸಿಕೊಳ್ಳುವ ಸ್ವಾತಂತ್ರ್ಯ ಅವರಿಗಿದೆ. ಹೀಗಾಗಿಯೇ 'ರೇಮೊ'ದಲ್ಲಿ ನಾಯಕ ನಾಯಕಿಯ ಕೆನ್ನೆಗೆ ಬಾರಿಸೋ ದೃಶ್ಯ 'ಗೂಗ್ಲಿ' ನೆನಪಿಸುತ್ತೆ. ಕಲಾವಿದನ ಬದುಕಿನಲ್ಲಾಗುವ ಏರಿಳಿತಗಳನ್ನು ಆಧಾರವಾಗಿಟ್ಟುಕೊಂಡು ಮಾಡಿರುವ ಈ ಸಿನಿಮಾ ಪ್ರತಿಯೊಬ್ಬರಿಗೂ ಕನೆಕ್ಟ್ ಆಗುತ್ತದೆ.

● ಇಶಾನ್ ಅವರ ಬಗ್ಗೆ...

'ರೇಮೊ' ಎಂಬ ಪಾತ್ರಕ್ಕೆ ಇಶಾನ್ ಅವರನ್ನು ಬಿಟ್ಟರೆ ಬೇರೆ ಯಾರೂ ಹೊಂದಿಕೊಳ್ಳಲು ಸಾಧ್ಯವೇ ಇಲ್ಲ. ಆ ದೈತ್ಯ ದೇಹ, ಕೆಂಚು ಗಡ್ಡ ಹೀಗೆ ಬಾಹ್ಯವಾಗಿ ಅವರನ್ನು ನೋಡಿದರೆ ಬಹಳ ಟಫ್ ಹುಡುಗ ಎಂದುಕೊಳ್ಳುವವರೇ ಹೆಚ್ಚು. ಆದರೆ ಅವರು ತುಂಬಾ ಮುಗ್ಧ ವ್ಯಕ್ತಿತ್ವದವರು.

● ಆಶಿಕಾ ಕೈಯಲ್ಲಿರುವ ಪ್ರಾಜೆಕ್ಟ್‌ಗಳು...

ಪಿಆರ್‌ಕೆ ಪ್ರೊಡಕ್ಷನ್ಸ್‌ನಲ್ಲಿ ನಿರ್ಮಾಣವಾಗಿರುವ 'O2' ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದೆ. ಇದೊಂದು ಮೆಡಿಕಲ್ ಥ್ರಿಲ್ಲರ್. ನನ್ನ ಪಾತ್ರವೇ ಇಲ್ಲಿ ಲೀಡ್. ಈ ಚಿತ್ರ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. 'ಸಿಂಪಲ್' ಸುನಿ ನಿರ್ದೇಶನದ 'ಗತವೈಭವ'ದ ಒಂದು ಹಂತದ ಚಿತ್ರೀಕರಣ ಪೂರ್ಣಗೊಂಡಿದ್ದು, ಇನ್ನೆರಡು ಶೆಡ್ಯೂಲ್ ಬಾಕಿ ಇದೆ. ನಂದಮೂರಿ ಕಲ್ಯಾಣ್ ರಾಮ್ ಅವರ ಜೊತೆಗಿನ ನನ್ನ ಮೊದಲ ತೆಲುಗು ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದ್ದು ಮುಂದಿನ ವರ್ಷ ಇದು ತೆರೆಕಾಣಲಿದೆ. ತಮಿಳಿನಲ್ಲಿ ಇನ್ನೊಂದು ಪ್ರಾಜೆಕ್ಟ್ ಚರ್ಚೆಯ ಹಂತದಲ್ಲಿದೆ. ❖

ಕೋಮಲ್‌ರ 'ಕಾಲಾಯ ನಮಃ'

ಆಸಿಯಾ ಫಿರ್ದೋಸಿ, ಕೋಮಲ್

ಚಿತ್ರರಂಗದಿಂದ ಕೆಲಕಾಲ ದೂರವಿದ್ದ ನಟ ಕೋಮಲ್ ಕುಮಾರ್ ಈಗ ಮತ್ತೆ ತೆರೆ ಮೇಲೆ ಕಾಣಿಸಿಕೊಳ್ಳುತ್ತಿದ್ದಾರೆ. 'ಕಾಲಾಯ ನಮಃ' ಅವರ ಹೊಸ ಚಿತ್ರದ ಹೆಸರು. ಚಿತ್ರೀಕರಣ ಭರದಿಂದ ಸಾಗಿದೆ. ಆಸಿಯಾ ಫಿರ್ದೋಸಿ ಚಿತ್ರದ ನಾಯಕಿ. ಮತಿವಣನ್ ಈ ಚಿತ್ರದ ನಿರ್ದೇಶಕರು.

'ಕಾಲಭೈರವ ದೇವರ ಭಕ್ತನಾದ ನನ್ನ ಸಿನಿಮಾ ಶೀರ್ಷಿಕೆ ಕೂಡ ಕಾಲದಿಂದಲೇ ಶುರುವಾಗುತ್ತಿದೆ. ಕಾಲ ನಿಲುವುದಿಲ್ಲ. ಕಾಲ ಯಾರಿಗೂ ಕಾಯುವುದಿಲ್ಲ. ಈ ರೀತಿ ಕಾಲದ ಬಗ್ಗೆ ನಮ್ಮ ಸಿನಿಮಾ ಸಾಗುತ್ತದೆ. ನನ್ನ ಪತ್ನಿ ಅನಸೂಯಾ ಈ ಚಿತ್ರದ ನಿರ್ಮಾಪಕರು. ಮತಿವಣನ್ ನಿರ್ದೇಶಿಸುತ್ತಿದ್ದಾರೆ. ನನ್ನ ಅಣ್ಣ ಜಗ್ಗೇಶ್ ಅವರ ಸಹಕಾರವಿದೆ. ಅಸಿಯಾ ಫಿರ್ದೋಸಿ, ಸುಚೇಂದ್ರ ಪ್ರಸಾದ್, ತಿಲಕ್ ಹಾಗೂ ನನ್ನ ಅಣ್ಣ ಜಗ್ಗೇಶ್ ಅವರ ಪುತ್ರ ಯತಿರಾಜ್ ಚಿತ್ರದ ಪ್ರಮುಖಪಾತ್ರದಲ್ಲಿ ನಟಿಸುತ್ತಿದ್ದಾರೆ. ನಾನು ನಟಿಸಿರುವ 2020 ಚಿತ್ರ ಕೂಡ ಸದ್ಯದಲ್ಲೇ ತೆರೆಗೆ ಬರುತ್ತಿದೆ' ಎಂದರು ಕೋಮಲ್ ಕುಮಾರ್.

'ನನಗೆ ಜ್ಯೋತಿಷ್ಯದ ಮೇಲೆ ನಂಬಿಕೆ ಇದೆ. ಕೆಲ ವರ್ಷಗಳ ಹಿಂದೆ ನನ್ನ ಅಣ್ಣ ಜಗ್ಗೇಶ್ ಜಾತಕ ನೋಡಿದರು. ನನಗೆ ಕೇತು ದೆಸೆ ನಡೆಯುತ್ತಿದೆ. ಹಾಗಾಗಿ ಹುಷಾರಾಗಿರಬೇಕು ಎಂದಿದ್ದರು. ಹಾಗಾಗಿ ಐದು ವರ್ಷಗಳ ಕಾಲ ಚಿತ್ರರಂಗದಿಂದ ದೂರವಿದ್ದೆ. ಊರಿನ ದೇವರಾದ ಕಾಲಭೈರವನ ಉಪಾಸನೆ ಮಾಡುತ್ತಿದ್ದೆ. ಈಗ 'ಕಾಲಾಯ ನಮಃ'ದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ' ಎಂದರು ಅವರು.

ನನ್ನ ಮಗ ಯತಿರಾಜ್ ಕೂಡ 'ಕಾಲಾಯ ನಮಃ'ದಲ್ಲಿ ಅಭಿನಯಿಸುತ್ತಿದ್ದಾನೆ. ಈ ತಂಡದಿಂದ ಒಳ್ಳೆಯ ಸಿನಿಮಾ ಬರುವ ವಿಶ್ವಾಸವಿದೆ. ಒಳ್ಳೆಯದಾಗಲಿ ಎಂದರು ಕೋಮಲ್ ಸಹೋದರ, ನಟ ಜಗ್ಗೇಶ್. ❖

ರಿಷಿಗೆ ಪ್ರಶಾಂತ್ ಆ್ಯಕ್ಷನ್ ಕಟ್

ಪ್ರಶಾಂತ್ ರಾಜಪ್ಪ ಹಾಗೂ ರಿಷಿ

'ಆಪರೇಷನ್ ಅಲಮೇಲಮ್ಮ' ಚಿತ್ರದ ಮುಖಾಂತರ ಸ್ಯಾಂಡಲ್‌ವುಡ್‌ಗೆ ಹೆಜ್ಜೆ ಇಟ್ಟಿದ್ದ ನಟ ರಿಷಿ ಅವರಿಗೆ ಆ್ಯಕ್ಷನ್ ಕಟ್ ಹೇಳಲು ಪ್ರಶಾಂತ್ ರಾಜಪ್ಪ ಸಜ್ಜಾಗಿದ್ದಾರೆ.

ಮೊದಲ ಚಿತ್ರದ ಬಳಿಕ ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರ ಹೊಂದಿದ್ದ ಹೇಮಂತ್ ರಾವ್ ನಿರ್ದೇಶನದ 'ಕವಲುದಾರಿ' ಚಿತ್ರದಲ್ಲಿ ಮಿಂಚಿದ್ದ ರಿಷಿ ಇತ್ತೀಚೆಗಷ್ಟೇ 'ನೋಡಿ ಸ್ವಾಮಿ ಇವನು ಇರೋದೆ ಹೀಗೆ' ಎಂಬ ಸಿನಿಮಾದಲ್ಲಿ ಕಾಣಿಸಿಕೊಂಡಿದ್ದರು. ಇದರ ಬಳಿಕ ಮತ್ತೊಂದು ಪ್ರಾಜೆಕ್ಟ್‌ಗೆ ರಿಷಿ ಹಸಿರು ನಿಶಾನೆ ನೀಡಿದ್ದಾರೆ. ಚಂದನವನದಲ್ಲಿ ಸಂಭಾಷಣೆಕಾರರಾಗಿ ಗುರುತಿಸಿಕೊಂಡಿರುವ ಪ್ರಶಾಂತ್ ಈ ಸಿನಿಮಾ ಮೂಲಕ ನಿರ್ದೇಶಕರಾಗಿ ಬಡ್ತಿ ಪಡೆಯಲಿದ್ದಾರೆ.

'ವಿಕ್ಟರಿ', 'ಅಧ್ಯಕ್ಷ', 'ರನ್ನ', 'ಪೊಗರು', 'ಹೊಂದಿಸಿ ಬರೆಯಿರಿ' ಸೇರಿದಂತೆ 25ಕ್ಕೂ ಹೆಚ್ಚು ಸಿನಿಮಾಗಳಿಗೆ ಸಂಭಾಷಣೆ ಬರೆದಿದ್ದಾರೆ ಪ್ರಶಾಂತ್ ರಾಜಪ್ಪ. ಖ್ಯಾತ ನಿರ್ದೇಶಕರ ಜೊತೆ ಸಹನಿರ್ದೇಶಕನಾಗಿ ಕೆಲಸ ಮಾಡಿದ ಅನುಭವ ಇವರಿಗಿದ್ದು, ಈ ಅನುಭವದಲ್ಲೇ ಡೈರೆಕ್ಟರ್ ಕ್ಯಾಪ್ ತೊಟ್ಟಿದ್ದಾರೆ. ಈ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆಯೂ ಇವರದ್ದೇ.

ಹಾಸ್ಯ ಮಿಶ್ರಿತ ಭಾವನಾತ್ಮಕ ಸಿನಿಮಾ ಇದಾಗಿದ್ದು, ಸಿನಿಮಾದ ಪ್ರಿಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ. ಡಿಸೆಂಬರ್‌ನಲ್ಲಿ ಸಿನಿಮಾ ಸೆಟ್ಟೇರಲಿದ್ದು, ಜನವರಿಯಲ್ಲಿ ಚಿತ್ರೀಕರಣ ಆರಂಭವಾಗಲಿದೆ. ಸದ್ಯದಲ್ಲೇ ಸಿನಿಮಾದ ಶೀರ್ಷಿಕೆ, ತಾರಾಬಳಗ ಎಲ್ಲವನ್ನೂ ತಿಳಿಸುತ್ತೇನೆ ಎಂದಿದ್ದಾರೆ ಪ್ರಶಾಂತ್ ರಾಜಪ್ಪ. ❖

ಜ.8ರಂದು ಗವಿಸಿದ್ದೇಶ್ವರ ಮಹಾರಥೋತ್ಸವ

ಕೊಪ್ಪಳ: ಇಲ್ಲಿನ ಗವಿಸಿದ್ದೇಶ್ವರ ಮಹಾರಥೋತ್ಸವ ಬರುವ ಜನವರಿ 8ರಂದು ನಡೆಯಲಿದೆ. ಜಾತ್ರಾ ಮಹೋತ್ಸವ ಕುರಿತ ಕರಪತ್ರ ಬಿಡುಗಡೆ ಮಾಡಲಾಗಿದ್ದು, ಜನವರಿ 4ರಂದು ಬಸವಪಟ ಮೂಲಕ ಮಹೋತ್ಸವಕ್ಕೆ ಚಾಲನೆ ದೊರೆಯಲಿದೆ.

ಜನವರಿ 5ರಂದು ತೆಪ್ಪೋತ್ಸವ, 6ರಂದು ಪಲ್ಲಕ್ಕಿ ಉತ್ಸವ ಮತ್ತು ದೇವಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಲಿವೆ. 7ರಂದು ಲಘು ರಥೋತ್ಸವ ಜರುಗಲಿದೆ. 8ರಂದು ಮಹಾರಥೋತ್ಸವ ಹಾಗೂ ಧಾರ್ಮಿಕ ಗೋಷ್ಠಿ ನಡೆಯಲಿದೆ.

9ರಂದು ಬಳಗಾನೂರಿನ ಶಿವಶಾಂತವೀರ ಸ್ವಾಮೀಜಿಯಿಂದ ದೀರ್ಘದಂಡ ನಮಸ್ಕಾರ ಮತ್ತು ರಾತ್ರಿ ಮದ್ದು ಸುಡುವ ಕಾರ್ಯಕ್ರಮ ನಡೆಯಲಿವೆ. 10ರಂದು ಸಮಾರೋಪ ಸಮಾರಂಭ ನಡೆಯಲಿದೆ.

ಕೋವಿಡ್ ಕಾರಣ ಎರಡು ವರ್ಷ ಜಾತ್ರೆ ಸರಳವಾಗಿ ಆಚರಿಸಲಾಗಿತ್ತು. ಈಗ ಕೋವಿಡ್ ನಿಯಮಗಳು ಇರದ ಕಾರಣ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ನೆರವೇರಲಿದೆ ಎಂಬ ನಿರೀಕ್ಷೆ ಭಕ್ತರು ಹೊಂದಿದ್ದಾರೆ.

ಮತದಾರರ ಮಾಹಿತಿ ಕಳವು • 'ಚಿಲುಮೆ' ಬಳಿ ಇದ್ದ 50 'ಬಿಎಲ್‌ಒ' ಗುರುತಿನ ಚೀಟಿ ಜಪ್ತಿ

ಗುರುತಿನ ಚೀಟಿ ಕೊಟ್ಟದ್ದೇ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಮನೆಗೆ ಹೋಗಿ ಮತದಾರರ ಮಾಹಿತಿ ಸಂಗ್ರಹಿಸುತ್ತಿದ್ದ 'ಚಿಲುಮೆ' ಸಂಸ್ಥೆಯ ಪ್ರತಿನಿಧಿಗಳಿಗೆ ಬಿಬಿಎಂಪಿಯ ಕೆಲ ಅಧಿಕಾರಿಗಳೇ 'ಮತಗಟ್ಟೆ ಹಂತದ ಅಧಿಕಾರಿ (ಬಿಎಲ್‌ಒ)' ಗುರುತಿನ ಚೀಟಿ ಮಾಡಿಕೊಟ್ಟಿದ್ದ ಸಂಗತಿ ತನಿಖೆಯಿಂದ ಗೊತ್ತಾಗಿದೆ. ಇದಕ್ಕೆ ಸಂಬಂಧಪಟ್ಟ ಪುರಾವೆಗಳೊಂದಿಗೆ ಪೊಲೀಸರು ಶೋಧ ಆರಂಭಿಸಿದ್ದಾರೆ.

'ಚಿಲುಮೆ' ಸಂಸ್ಥೆ ವಿರುದ್ಧ ಹಲಸೂರು ಗೇಟ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದ ಪ್ರಮುಖ ಆರೋಪಿ ರವಿಕುಮಾರ್ ಅವರನ್ನು ಬಂಧಿಸಿರುವ ಪೊಲೀಸರು, ಕಸ್ಟಡಿಗೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

'ದಾಬಸ್‌ಪೇಟೆಯ ರವಿಕುಮಾರ್, 2013ರಲ್ಲಿ ಚಿಲುಮೆ ಸಂಸ್ಥೆ ಸ್ಥಾಪಿಸಿದ್ದ. ಸಹೋದರ ಕೆಂಪೇಗೌಡ, ಪತ್ನಿ ಐಶ್ವರ್ಯ, ಸಂಬಂಧಿಕರೇ ಆದ ಪ್ರಜ್ವಲ್ ಹಾಗೂ ಇತರರ ಜೊತೆ ಸೇರಿ ಸಂಸ್ಥೆಯಿಂದ ನಾನಾ ಕೆಲಸ ಮಾಡುತ್ತಿದ್ದ. ಸಂಸ್ಥೆಯಿಂದಲೇ ನೂರಾರು ಕೋಟಿ ರೂಪಾಯಿ ಆಸ್ತಿ ಸಂಪಾದಿಸಿರುವ ಮಾಹಿತಿ ಇದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

50 ಗುರುತಿನ ಚೀಟಿ ಜಪ್ತಿ: 'ಚಿಲುಮೆ ಸಂಸ್ಥೆಯ ಕಚೇರಿಗಳು ಹಾಗೂ ಆರೋಪಿಗಳ ಮನೆ ಮೇಲೆ ದಾಳಿ ಮಾಡಲಾಗಿದೆ. 50ಕ್ಕೂ ಹೆಚ್ಚು 'ಬಿಎಲ್‌ಒ' ಗುರುತಿನ ಚೀಟಿಗಳು, ಮೊಬೈಲ್‌ಗಳು, ಲ್ಯಾಪ್‌ಟಾಪ್‌ಗಳು, ಕಂಪ್ಯೂಟರ್, ಹಾರ್ಡ್‌ಡಿಸ್ಕ್ ಹಾಗೂ ಇತರೆ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

'ಬಿಬಿಎಂಪಿ ವ್ಯಾಪ್ತಿಯ ಮತದಾರರ ಪಟ್ಟಿ ಪರಿಷ್ಕರಣೆ ಬಗ್ಗೆ ಜಾಗೃತಿ ಮೂಡಿಸಲು ಹಾಗೂ ಆಧಾರ್ ಸಂಖ್ಯೆ ಜೋಡಣೆ ಕೆಲಸ ಕೈಗೊಳ್ಳಲು ಚಿಲುಮೆ ಸಂಸ್ಥೆಗೆ ಅನುಮತಿ ನೀಡಲಾಗಿತ್ತು. ಅನುಮತಿ ಪತ್ರ ಆಧರಿಸಿ ಬಿಬಿಎಂಪಿಯ ಕೆಲ ಅಧಿಕಾರಿಗಳು, ಆರೋಪಿಗಳಿಗೆ ಬಿಎಲ್‌ಒ ಗುರುತಿನ ಚೀಟಿಗಳನ್ನು ಮಾಡಿಕೊಟ್ಟಿದ್ದರು. ಈ ಸಂಬಂಧ ಆರೋಪಿಗಳೇ ಹೇಳಿಕೆ ನೀಡಿದ್ದಾರೆ' ಎಂದು ಹೇಳಿದರು.

'ಅಧಿಕಾರಿಗಳು ಮಾಡಿಕೊಟ್ಟಿದ್ದ ಗುರುತಿನ ಚೀಟಿಗಳನ್ನು ಜಪ್ತಿ ಮಾಡಲಾಗಿದೆ. ಅದರಲ್ಲಿರುವ ಸಹಿ ಹಾಗೂ ಮೊಹರು ಅಸಲಿ ಎಂಬುದು ಪರಿಶೀಲನೆಯಿಂದ ಗೊತ್ತಾಗಿದೆ. ಉಳಿದಂತೆ ಕೆಲ ಗುರುತಿನ ಚೀಟಿಗಳನ್ನು ಆರೋಪಿಗಳೇ ಸೃಷ್ಟಿಸಿಕೊಂಡಿದ್ದರು. ಆರೋಪಿಗಳು ಅದೇ ಚೀಟಿಗಳನ್ನು ಬಳಸಿ, ಮನೆ ಮನೆಗೆ ಹೋಗಿ ಮತದಾರರ ಎಲ್ಲ ಮಾಹಿತಿ ಕಲೆಹಾಕಿದ್ದರು' ಎಂದು ಹೇಳಿದರು.

'ಗುರುತಿನ ಚೀಟಿ ನೀಡಿದ್ದ ಬಿಬಿಎಂಪಿ ಎಲ್ಲ ಅಧಿಕಾರಿಗಳ ವಿಚಾರಣೆ ನಡೆಸಲಾಗುತ್ತಿದೆ. ಹಿರಿಯ ಅಧಿಕಾರಿಗಳ ಆದೇಶಗಳಿಗೆ ಅನುಗುಣವಾಗಿ ಕೆಲಸ ಮಾಡಿರುವುದಾಗಿ ಕೆಲವರು ಹೇಳುತ್ತಿದ್ದಾರೆ. ಅವರ ಮೇಲಿನ ಆರೋಪಕ್ಕೆ ಸಂಬಂಧಪಟ್ಟಂತೆ ಸದ್ಯಕ್ಕೆ ನಿಖರ ಪುರಾವೆಗಳು ಸಿಕ್ಕಿಲ್ಲ. ಹೀಗಾಗಿ, ಕೃತ್ಯದಲ್ಲಿ ಅಧಿಕಾರಿಗಳ ಪಾತ್ರವೇನು ಎಂಬುದನ್ನು ಸದ್ಯಕ್ಕೆ ಹೇಳಲಾಗದು' ಎಂದು ಅವರು ತಿಳಿಸಿದರು.

ಮತದಾರರ ಸಮೀಕ್ಷೆ ಮಾಡಲು ಅನುಕೂಲವಾಗಲೆಂದು 'ಚಿಲುಮೆ' ಸಂಸ್ಥೆಯ ಸಿಬ್ಬಂದಿಗೆ ಬಿಬಿಎಂಪಿ ಹೆಸರಿನಲ್ಲಿ ನೀಡಿದ್ದ 'ಬಿಎಲ್‌ಒ' ಗುರುತಿನ ಚೀಟಿಗಳು

ಮತದಾರರ ಮಾಹಿತಿ ಕಳವು ಮಾಡಿದ ಆರೋಪ ಎದುರಿಸುತ್ತಿರುವ ಚಿಲುಮೆ ಸಂಸ್ಥೆಗೆ ಅವಕಾಶ ನೀಡಿದ್ದೇ ಸಿದ್ದರಾಮಯ್ಯ ಸರ್ಕಾರ. ಈಗ ನಮ್ಮ ಮೇಲೆ ಕಾಂಗ್ರೆಸ್‌ನವರು ಆರೋಪ ಮಾಡುತ್ತಿದ್ದಾರೆ.

ಸಿ.ಟಿ.ರವಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

'ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಿ'

ಬೆಂಗಳೂರು: 'ಮತದಾರರ ದತ್ತಾಂಶ ಕಳವು ಪ್ರಕರಣವನ್ನು ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ತಕ್ಷಣ ತನಿಖೆ ನಡೆಸಬೇಕು' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಪಡಿಸಿದ್ದಾರೆ.

'ಸರ್ಕಾರದ ಅಧೀನದಲ್ಲಿರುವ ಸಂಸ್ಥೆಗಳು ಮಾಡಿದರೆ ಅದು ಪಕ್ಷಪಾತದಿಂದ ಕೂಡಿರುತ್ತದೆ' ಎಂದೂ ಹೇಳಿದ್ದಾರೆ.

'ಚಿಲುಮೆ ಸಂಸ್ಥೆಯ ಅಕ್ರಮಗಳ ಹಿಂದಿನ ರೂವಾರಿಗಳ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ? ಇಷ್ಟು ದಿನವಾದರೂ ಈ ಅಕ್ರಮ ಸಂಸ್ಥೆಯ ಹಣಕಾಸಿನ ವಹಿವಾಟಿನ ಮೇಲೆ, ಈ ಸಂಸ್ಥೆಗೆ ಹಣ ನೀಡಿದವರ ಮೇಲೆ ಸಿಬಿಐ, ಐಟಿ, ಇ.ಡಿ ಯಾಕೆ ದಾಳಿ ನಡೆಸಿಲ್ಲ' ಎಂದು ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

'ಚಿಲುಮೆಗೆ ಮತದಾರರ ಪಟ್ಟಿ ಪರಿಷ್ಕರಣೆಗೆ ವಹಿಸಿರುವುದರ ಹಿಂದೆ ಬಿಬಿಎಂಪಿ, ಚುನಾವಣಾ ಆಯೋಗದ ಅಧಿಕಾರಿಗಳು ಇದ್ದಾರೆ. ಆಯೋಗದವರು ಬಿಬಿಎಂಪಿಗೆ ಈ ಬಗ್ಗೆ ಪತ್ರಗಳನ್ನೂ ಬರೆದಿದ್ದಾರೆ. ಆಯೋಗ ಈ ಅಕ್ರಮಕ್ಕೆ ಮೌನ ಸಮ್ಮತಿ ನೀಡಿದೆಯೇ? ಬೃಹತ್ ಹಗರಣ ನಡೆದಿದ್ದರೂ ಬಿಬಿಎಂಪಿ ಹಿರಿಯ ಅಧಿಕಾರಿಗಳು, ಚುನಾವಣಾ ಆಯೋಗದ ಅಧಿಕಾರಿಗಳ ಮೇಲೆ ಯಾಕೆ ಇನ್ನೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ? ಅಕ್ರಮದಲ್ಲಿ ನೇರವಾಗಿ ಭಾಗಿಯಾಗಿರುವ ಬಿಜೆಪಿ ಶಾಸಕರು, ಸಚಿವರ ಮೇಲೆ ಮತ್ತು ಬೆಂಗಳೂರು ಅಭಿವೃದ್ಧಿಯ ಉಸ್ತುವಾರಿ ಹೊತ್ತಿರುವ ಮುಖ್ಯಮಂತ್ರಿ ಮೇಲೆ ಏಕೆ ಯಾವುದೇ ಕ್ರಮ ವಹಿಸಿಲ್ಲ?' ಎಂದೂ ಪ್ರಶ್ನಿಸಿದ್ದಾರೆ.

'ಚಿಲುಮೆ' ಸಿಬ್ಬಂದಿ ಮನೆ ಮೇಲೆ ದಾಳಿ

ಬಂಧಿತ ರವಿಕುಮಾರ್ ನೀಡಿರುವ ಮಾಹಿತಿ ಆಧರಿಸಿ ಚಿಲುಮೆ ಸಂಸ್ಥೆಯ ಸಿಬ್ಬಂದಿಯಾದ ಮಾರುತಿ ಮನೆ ಮೇಲೆ ಪೊಲೀಸರು ದಾಳಿ ಮಾಡಿದ್ದು, ಎರಡು ಮೊಬೈಲ್ ಹಾಗೂ ಲ್ಯಾಪ್‌ಟಾಪ್ ಜಪ್ತಿ ಮಾಡಿದ್ದಾರೆ.

'ಸಂಸ್ಥೆಯ ದಾಖಲೆಗಳನ್ನು ಸಿಬ್ಬಂದಿಗಳ ಮನೆಯಲ್ಲಿಟ್ಟಿರುವ ಬಗ್ಗೆ ರವಿಕುಮಾರ್ ಹೇಳಿದ್ದ. ನ್ಯಾಯಾಲಯದ ವಾರಂಟ್ ಪಡೆದು ಗುರುವಾರ ಶೋಧ ನಡೆಸಲಾಯಿತು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ವಿ.ಅಣ್ಣಾಮಲೈಗೆ ಕುವೆಂಪು ಪುರಸ್ಕಾರ

ಶಿವಮೊಗ್ಗ: ಕುಪ್ಪಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ ನೀಡುವ 2022ನೇ ಸಾಲಿನ ಕುವೆಂಪು ರಾಷ್ಟ್ರೀಯ ಪುರಸ್ಕಾರಕ್ಕೆ ತಮಿಳು ಕವಿ ವಿ.ಅಣ್ಣಾಮಲೈ (ಇಮಯಮ್) ಆಯ್ಕೆಯಾಗಿದ್ದಾರೆ.

'ಇಮಯಮ್' ಎಂದೇ ಪರಿಚಿತರಾಗಿರುವ ಕವಿ ವಿ.ಅಣ್ಣಾಮಲೈ, ತಮಿಳು ಸಾಹಿತ್ಯದ ಶ್ರೀಮಂತಿಕೆ ಹಾಗೂ ಸತ್ವವನ್ನು ತಮ್ಮ ಕೃತಿಗಳ ಮೂಲಕ ಹೆಚ್ಚಿಸಿದ್ದಾರೆ. ಪ್ರಶಸ್ತಿಯು ₹ 5 ಲಕ್ಷ ಹಾಗೂ ಬೆಳ್ಳಿ ಪದಕ ಒಳಗೊಂಡಿದ್ದು, ಕುವೆಂಪು ಅವರ ಜನ್ಮದಿನವಾದ ಡಿಸೆಂಬರ್ 29ರಂದು ಕುಪ್ಪಳಿಯಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಬೆಂಗಳೂರಿನಲ್ಲಿ ನವೆಂಬರ್ 19ರಂದು ಪ್ರತಿಷ್ಠಾನದ ಹಂಗಾಮಿ ಅಧ್ಯಕ್ಷ ಬಿ.ಎಲ್.ಶಂಕರ್ ಅಧ್ಯಕ್ಷತೆಯಲ್ಲಿ ನಡೆದ ರಾಷ್ಟ್ರೀಯ ಪುರಸ್ಕಾರ ಆಯ್ಕೆ ಸಮಿತಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಸಭೆಯಲ್ಲಿ ಪ್ರೊ. ಹಂಪನಾ ಪಾಲ್ಗೊಂಡಿದ್ದರು. ಕ್ರೈಸ್ಟ್ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾ.ಕೃಷ್ಣಸ್ವಾಮಿ, ಮದ್ರಾಸ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ.ತಮಿಳ್ ಸೆಲ್ವಿ, ಕೇಂದ್ರ ಸಾಹಿತ್ಯ ಅಕಾಡೆಮಿ ನಿವೃತ್ತ ಕಾರ್ಯದರ್ಶಿ ಡಾ.ಅಗ್ರಹಾರ ಕೃಷ್ಣಮೂರ್ತಿ ತೀರ್ಪುಗಾರರಾಗಿದ್ದರು ಎಂದು ಪ್ರತಿಷ್ಠಾನದ ಸಹ ಕಾರ್ಯದರ್ಶಿ ಕಡಿದಾಳ್ ಪ್ರಕಾಶ್ ತಿಳಿಸಿದ್ದಾರೆ.

ಟಿಪ್ಪು ಸುಲ್ತಾನ್ ಅವಹೇಳನ; ಪ್ರಕರಣ ದಾಖಲು

ಕೊಟ್ಟೂರು (ವಿಜಯನಗರ ಜಿಲ್ಲೆ): ಟಿಪ್ಪು ಸುಲ್ತಾನ್ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಮಾಡಿದ ವ್ಯಕ್ತಿ ವಿರುದ್ಧ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾಲ್ಲೂಕಿನ ಹ್ಯಾಳ್ಯ ಗ್ರಾಮದ ಶಾಂತೇಶ್ ಸುರಪುರ ಎಂಬುವರು ಜಾಲತಾಣದಲ್ಲಿ 'ಟಿಪ್ಪು ಸುಲ್ತಾನ್ ಮೈಸೂರ್ ಟೈಗರ್ ಅಲ್ಲ ಲೇಡಿಸ್ ಟೈಲರ್' ಎಂದು ಪೋಸ್ಟ್ ಮಾಡಿದ್ದಾರೆ. ಉದ್ದೇಶಪೂರ್ವಕವಾಗಿ ಮಾನಹಾನಿಕರ ಪೋಸ್ಟ್ ಮಾಡಿದ್ದರಿಂದ ಬುಧವಾರ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

5 ಜಿಲ್ಲಾ ಕಾಂಗ್ರೆಸ್ ಘಟಕಗಳ ಅಧ್ಯಕ್ಷರ ನೇಮಕ

ನವದೆಹಲಿ: ಕರ್ನಾಟಕದ ಐದು ಜಿಲ್ಲಾ ಕಾಂಗ್ರೆಸ್ ಘಟಕಗಳಿಗೆ ನೂತನ ಅಧ್ಯಕ್ಷರನ್ನು ನೇಮಿಸಿ ಎಐಸಿಸಿ ಗುರುವಾರ ಆದೇಶ ಹೊರಡಿಸಿದೆ.

ಬೆಂಗಳೂರು ಗ್ರಾಮಾಂತರ–ಸಿ.ಆರ್. ಗೌಡ, ಯಾದಗಿರಿ–ಬಸರೆಡ್ಡಿ, ಕೊಡಗು–ಧರ್ಮಜ ಉತ್ತಪ್ಪ, ತುಮಕೂರು–ಚಂದ್ರಶೇಖರ ಗೌಡ, ಹಾಸನ–ಇ.ಎಚ್.ಲಕ್ಷ್ಮಣ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೊಪ್ಪಳ. ದೂರವಾಣಿ: 08539–220054

ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2022–23/3115 ದಿ:19–11–2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಯ 05 ಟೆಂಡರ ಕಾಮಗಾರಿಗಳಿಗಾಗಿ **4702–APB,4702-MOT,4702-TSP, 4702-SCP** ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಏಕಲಕೋಟೆ ಹಾಗೂ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ **ರೂ.40.49 ರಿಂದ ಮೊತ್ತ ರೂ.126.87 ಲಕ್ಷಗಳಿರುತ್ತದೆ.** ಟೆಂಡರಗಳನ್ನು ದಿನಾಂಕ: **23–11–2022 ರಿಂದ ದಿನಾಂಕ: 12–12–2022 ಸಂಜೆ.5.30 ಗಂಟೆಯವರೆಗೆ** ಸಲ್ಲಿಸಬಹುದು. ಪೂರ್ವಭಾವಿ ಸಭೆ ದಿನಾಂಕ : **07–12–2022 ರಂದು ಬೆಳಿಗ್ಗೆ 11.00 ಗಂಟೆಗೆ** ತೆಗೆದುಕೊಳ್ಳಲಾಗುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ: **14–12–2022 ರಂದು ಬೆಳಿಗ್ಗೆ 11.00 ಗಂಟೆಗೆ** ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ದಿನಾಂಕ: **16–12–2022 ರಂದು ಬೆಳಿಗ್ಗೆ 11.00 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು "ಇ–ಪ್ರಕ್ಯೂರ್‌ಮೆಂಟ್" ವೆಬ್‌ಸೈಟ್ http://eproc.karnataka.gov.in/e-portal/index.seam ನಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.
ವಾ.ಸಾ.ಇ./ಕೊಪ್ಪಳ/463/2022–23/ದೇಶಪಾಂಡೆ ಪಬ್ಲಿಸಿಟಿ

ತೋಟಗಾರಿಕೆ ಇಲಾಖೆ
ತೋಟಗಾರಿಕೆ ಉಪನಿರ್ದೇಶಕರ ಕಚೇರಿ, ಶ್ರೀ ಚಾಮರಾಜೇಂದ್ರ (ಕಬ್ಬನ್) ಉದ್ಯಾನವನ, ಬೆಂಗಳೂರು.

ಸಂಖ್ಯೆ:ತೋಇ/ತೋಉನಿ/ಕಉ/ಸುಕಉಪ್ರ/ವಿನಿ4/09/2022–23 ದಿನಾಂಕ: 21–11–2022

ಇ–ಟೆಂಡರ್ ಪ್ರಕಟಣೆ

ತೋಟಗಾರಿಕೆ ಉಪನಿರ್ದೇಶಕರು, ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್), ಬೆಂಗಳೂರು ರವರು **ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಪಾರ್ಕ್) ಅಧೀನದ ಇಂದಿರಾ ಗಾಂಧಿ ಸಂಗೀತ ಕಾರಂಜಿ ಉದ್ಯಾನವನ ಹಾಗೂ ಕಾರಂಜಿಯ ಸಾರ್ವಜನಿಕ ಪ್ರವೇಶ ಶುಲ್ಕ ವಸೂಲಾತಿ ಕಾರ್ಯಕ್ಕೆ** ದ್ವಿ–ವಾರ್ಷಿಕ ಇ-ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್: **http://eproc.karnataka.gov.in** ನಲ್ಲಿ ಹಾಗೂ ಈ ಕಛೇರಿಯಿಂದ (ಸರ್ಕಾರಿ ಕೆಲಸದ ದಿನಗಳಲ್ಲಿ ಕೆಲಸದ ಅವಧಿಯಲ್ಲಿ) ಪಡೆಯಬಹುದಾಗಿರುತ್ತದೆ.

1) ಟೆಂಡರ್‌ನ ಅಂದಾಜು ಮೊತ್ತ: **ರೂ. 34.00 ಲಕ್ಷಗಳು.** 2) ಅರ್ಜಿ ನಮೂನೆ ಶುಲ್ಕ: ಅರ್ಜಿ ಶುಲ್ಕವನ್ನು **e-Procurement Government of Karnataka,** ಬೆಂಗಳೂರು ರವರು ನಿರ್ದೇಶಿಸಿದಂತೆ ಪಾವತಿಸುವುದು. 3) ಇ.ಎಂ.ಡಿ: **ರೂ. 1,00,000/– ಗಳನ್ನು e-Procurement Government of Karnataka** ರವರ ಹೆಸರಿಗೆ ಸಲ್ಲಿಸುವುದು. 4) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **20–12–2022ರಂದು ಸಂಜೆ 5.30 ಗಂಟೆವರೆಗೆ. 5)** ಬಿಡ್ ಪೂರ್ವಭಾವಿ ಸಭೆ ದಿನಾಂಕ: **06–12–2022ರಂದು 11.00 – 1.00 ಗಂಟೆ. 6)** ತಾಂತ್ರಿಕ ಟೆಂಡರ್ ಫಾರಂ ತೆರೆಯುವ ದಿನಾಂಕ: **22–12–2022ರಂದು 11.00 ಗಂಟೆಗೆ. 7)** ಆರ್ಥಿಕ ಟೆಂಡರ್ ತೆರೆಯುವ ದಿನಾಂಕ: **26–12–2022ರಂದು 11.00 ಗಂಟೆಗೆ.** ಟೆಂಡರ್ ಅಂಗೀಕರಿಸುವ ಇಲ್ಲವೇ ತಿರಸ್ಕರಿಸುವ ಅಧಿಕಾರವನ್ನು ಟೆಂಡರ್ ಪ್ರಾಧಿಕಾರವು ಹೊಂದಿರುತ್ತದೆ.

ಸಹಿ/– ತೋಟಗಾರಿಕೆ ಉಪನಿರ್ದೇಶಕರು
ಶ್ರೀ ಚಾಮರಾಜೇಂದ್ರ (ಕಬ್ಬನ್) ಉದ್ಯಾನವನ, ಬೆಂಗಳೂರು
ವಾಸಾಸಂಇ/ವಾ.ಪ್ರ/3242/ಅಡ್ವರ್ಟೋ/2022–23

ಕೃಷ್ಣಾ ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
KARNATAKA NEERAVARI NIGAM LIMITED
(A Government of Karnataka Enterprise)
ಕಾರ್ಯನಿರ್ವಾಹಕ ಇಂಜನೀಯರರವರ ಕಛೇರಿ ಕನೀನಿನಿ ಘಎದಂಕಾ ವಿಭಾಗ ನಂ3 ಬೀಳಗಿ
Office : Executive Engineer, KNNL GLBC Dn No.3 Bilagi
Phone & Fax No: 08425-275228
e-mail: eeknnlglbcdn.3bilagi@gmail.com

ಸಂ:ಕನೀನಿನಿ:ಘಎದಂಕಾ:ವಿ3:ಡಿಬಿ:22–23/1678 ದಿನಾಂಕ:23.11.2022

ಅಲ್ಪಾವಧಿ ಶೇಕಡಾವಾರು ಟೆಂಡರ ಅಧಿಸೂಚನೆ (4701 ಕಾಮಗಾರಿಗಳು)
(ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಮೆ:ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ ಬೆಂಗಳೂರು ಇವರ ಪರವಾಗಿ ಈ ವಿಭಾಗದ ಅಡಿಯಲ್ಲಿ ಬರುವ ಲೈನಿಂಗ್ ಹಾಗೂ ರಸ್ತೆ ಕಾಮಗಾರಿಗಳಿಗೆ ಅರ್ಹ (KPWD Class-III & above) ಗುತ್ತಿಗೆದಾರರಿಂದ ಮೊಹರಾದ ಶೇಕಡವಾರು ದರದ ಅಲ್ಪಾವಧಿ ಟೆಂಡರನ್ನು ನಿಗದಿಪಡಿಸಿ ಕರೆಯಲಾಗಿದೆ.

ಸದರಿ ಕಾಮಗಾರಿಗಳು Two Cover System:KW3 ಇಂಡೆಂಟ್ ನಂ:KNNL/2022-23/CN/WORK_INDENT 34501
Two Cover System:KW4 ಇಂಡೆಂಟ್ ನಂ: KNNL/2022-23/RD/WORK_INDENT34476,
KNNL/2022-23/RD/WORK_INDENT34459,
KNNL/2022-23/RD/ WORK_INDENT34507,
KNNL/2022-23/RD/WORK_INDENT34509,
KNNL/2022-23/RD/ WORK_INDENT34470,
KNNL/2022-23/RD/WORK_INDENT34471

1) ಈ ಕಾಮಗಾರಿಗಳ ಅಂದಾಜು ಮೊತ್ತ ರೂ.59.29 ಲಕ್ಷದಿಂದ ರೂ.296.61 ಲಕ್ಷಗಳು ಇರುತ್ತದೆ. 2) ಪಾವತಿಸಬೇಕಾದ ಇಎಂಡಿ ಮೊತ್ತ ರೂ.1,40,000/– ದಿಂದ ರೂ.5,25,000/– ಇರುತ್ತದೆ. 3) ಈ ಕಛೇರಿಯಲ್ಲಿ ಪೂರ್ವಬಾವಿ ಬಿಡ್ ಸಭೆ ದಿನಾಂಕ:25.11.2022 ಬೆಳಿಗ್ಗೆ 11.00 ಘಂಟೆಗೆ 4) ಟೆಂಡರ್ ಆಕ್ಷೇಪಣೇಗಳಿಗಾಗಿ ನಿಗದಿಪಡಿಸಿದ ದಿನಾಂಕ :–28.11.2022 ಸಂಜೆ 5.00 ಘಂಟೆವರೆಗೆ. 5) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ:–30.11.2022 ಸಂಜೆ 5.00 ಘಂಟೆವರೆಗೆ. 6) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ:02.12.2022 ರ ಬೆಳಿಗ್ಗೆ 11.00 ಘಂಟೆಯ ನಂತರ 7) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: ತಾಂತ್ರಿಕ ಬಿಡ್‌ಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ.

ಗುತ್ತಿಗೆದಾರರ ಅರ್ಹತೆ/ ಟೆಂಡರ್ ನಿಯಮಗಳು/ ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರಗಳನ್ನು ಸ್ವೀಕರಿಸುವ/ ಯಾವುದೇ ಕಾರಣ ನೀಡದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ದೂರವಾಣಿ ಸಂಖ್ಯೆ: 08425–275228 ರಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

(ಶಿವಲಿಂಗಯ್ಯ, ಎಂ)
ಕಾರ್ಯನಿರ್ವಾಹಕ ಇಂಜನೀಯರರು
ಕನೀನಿನಿ ಘಎದಂಕಾ ವಿಭಾಗ ನಂ3 ಬೀಳಗಿ
ವಾ.ಸಾ.ಇ/ಬಾಗಲಕೋಟೆ/628/2022–23/ದೇಶಪಾಂಡೆಪಬ್ಲಿಸಿಟಿ

ಮಠ: ಸರ್ಕಾರದ ಮಧ್ಯಪ್ರವೇಶಕ್ಕೆ ಸಹಮತ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮಠಗಳ ಆಡಳಿತ ವ್ಯವಸ್ಥೆಯಲ್ಲಿ ಸರ್ಕಾರ ಮಧ್ಯಪ್ರವೇಶ ಮಾಡುವುದಕ್ಕೆ ಅಖಿಲ ಭಾರತ ವೀರಶೈವ ಮಹಾಸಭಾದ ಸಹಮತ ಇದೆ ಎಂದು ಮಹಾಸಭಾದ ಉಪಾಧ್ಯಕ್ಷ ಅಣಬೇರು ರಾಜಣ್ಣ ತಿಳಿಸಿದರು.

'ಮುರುಘಾ ಮಠಕ್ಕೆ ಆಡಳಿತಾಧಿಕಾರಿ ನೇಮಕ ಮಾಡಲು ಸರ್ಕಾರ ಮುಂದಾಗಿರುವ ಕುರಿತು ಮಹಾಸಭಾದ ನಿಲುವೇನು' ಎಂಬ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ಹೀಗೆ ಪ್ರತಿಕ್ರಿಯಿಸಿದರು.

'ಮಠಕ್ಕೆ ಉತ್ತರಾಧಿಕಾರಿ ನೇಮಕ ಮಾಡುವ ಮುನ್ನ ಸರ್ಕಾರದ ಅನುಮತಿ ಪಡೆಯಬೇಕು ಎಂಬ ನಿಯಮ ಪಾಲನೆಯಾಗುತ್ತಿಲ್ಲ. ಬಹುತೇಕ ಮಠಾಧೀಶರು ಏಕ ಸದಸ್ಯ ಟ್ರಸ್ಟ್ ರಚಿಸಿಕೊಂಡು ತಮ್ಮ ಬಳಿ ಅಧಿಕಾರ ಇಟ್ಟುಕೊಂಡಿದ್ದಾರೆ. ಮಠದ ವ್ಯವಸ್ಥೆಯಲ್ಲಿ ಸುಧಾರಣೆ ತರುವ ಬಗ್ಗೆ ಬಹಿರಂಗವಾಗಿ ಚರ್ಚೆ ನಡೆಯುವ ಅಗತ್ಯವಿದೆ' ಎಂದು ಅಭಿಪ್ರಾಯಪಟ್ಟರು.

'ಶಿಕ್ಷಣ ಹಾಗೂ ಅನ್ನದಾಸೋಹಕ್ಕೆ ಆದ್ಯತೆ ನೀಡಿದ್ದ ಮಠಗಳ ಬಗ್ಗೆ ಸಮಾಜದಲ್ಲಿ ಅನ್ಯ ಭಾವನೆ ಮೂಡುತ್ತಿದೆ. ಮಠದ ಆಸ್ತಿಯನ್ನು ಅನೇಕ ಪೀಠಾಧ್ಯಕ್ಷರು ತಮ್ಮ ಹೆಸರಿಗೆ ನೋಂದಣಿ ಮಾಡಿಕೊಂಡಿರುವುದು ಬೆಳಕಿಗೆ ಬಂದಿದೆ. ಮಠ ಭಕ್ತರ ಸ್ವತ್ತೇ ಹೊರತು ಪೀಠಾಧ್ಯಕ್ಷರದ್ದಲ್ಲ. ಮಠದ ವ್ಯವಸ್ಥೆ ಹಾಳಾಗಲು ಮಹಾಸಭಾ ಬಿಡುವುದಿಲ್ಲ. ಡಿ.23ರಿಂದ ಮೂರು ದಿನ ದಾವಣಗೆರೆಯಲ್ಲಿ ನಡೆಯುವ ಮಹಾಸಭಾದ ಅಧಿವೇಶನದಲ್ಲಿ ಈ ಬಗ್ಗೆ ಚರ್ಚಿಸಲಾಗುವುದು' ಎಂದರು.

ಧರ್ಮದ ಬೆಳಕಿನಲ್ಲಿ...

ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ ಲಕ್ಷ ದೀಪೋತ್ಸವವು ಗುರುವಾರ ನಸುಕಿನಲ್ಲಿ ಗೌರಿಮಾರುಕಟ್ಟೆ ಉತ್ಸವದೊಂದಿಗೆ ಸಮಾಪನಗೊಂಡಿತು. ವಿವಿಧೆಡೆಯಿಂದ ಬಂದ ಭಕ್ತರು ಶ್ರದ್ಧಾ ಭಕ್ತಿಯಿಂದ ಪಾಲ್ಗೊಂಡಿದ್ದರು

'ವಿನಯ ಸಾಮರಸ್ಯ' ಯೋಜನೆಗೆ ಡಿಸೆಂಬರ್‌ನಲ್ಲಿ ಚಾಲನೆ

ಬೆಂಗಳೂರು: 'ಅಸ್ಪೃಶ್ಯತೆ ನಿವಾರಣೆಗಾಗಿ ರೂಪಿಸಿರುವ 'ವಿನಯ ಸಾಮರಸ್ಯ' ಯೋಜನೆಯ ಸಮಾವೇಶವನ್ನು ಡಿಸೆಂಬರ್ ಎರಡನೇ ವಾರದಲ್ಲಿ ಬೆಂಗಳೂರು ಅಥವಾ ಕೊಪ್ಪಳದಲ್ಲಿ ಏರ್ಪಡಿಸಲಾಗುವುದು. ಶೀಘ್ರದಲ್ಲಿಯೇ ದಿನ ಮತ್ತು ಸ್ಥಳ ಅಂತಿಮಗೊಳಿಸಲಾಗುವುದು' ಎಂದು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

ಉಡುಪಿಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಚಿವರು, ಯೋಜನೆ ಕುರಿತು ಇಲಾಖೆ ಅಧಿಕಾರಿಗಳ ಜೊತೆ ಗುರುವಾರ ವಿಡಿಯೊ ಸಂವಾದ ಮೂಲಕ ಸಭೆ ನಡೆಸಿದರು. ಯೋಜನೆಗೆ ಮುಖ್ಯಮಂತ್ರಿ ಚಾಲನೆ ನೀಡಲಿದ್ದಾರೆ ಎಂದರು.

'ಅಸ್ಪೃಶ್ಯತೆಯಂಥ ಅನಿಷ್ಟ ಪದ್ಧತಿ ವಿರುದ್ಧ ಜಾಗೃತಿ ಮೂಡಿಸಬೇಕಿದೆ. ಪರಿಶಿಷ್ಟಯೇತರ ಸಮುದಾಯಗಳ ಧುರೀಣರು, ಮಠಾಧಿಪತಿಗಳು, ಧಾರ್ಮಿಕ ಮುಖಂಡರನ್ನೂ ಸಮಾವೇಶಕ್ಕೆ ಆಹ್ವಾನಿಸಬೇಕು. ಪ್ರತಿ ಗ್ರಾಮ ಪಂಚಾಯಿತಿ ಹಂತದಲ್ಲೂ ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಬೇಕಿದ್ದು ಸಿದ್ಧತೆ ಮಾಡಿಕೊಳ್ಳಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿ ಪಿ. ಮಣಿವಣ್ಣನ್, ಇಲಾಖೆ ಸಲಹೆಗಾರ ಇ. ವೆಂಕಟಯ್ಯ, ಆಯುಕ್ತ ಕೆ. ರಾಕೇಶ್‌ಕುಮಾರ್ ಇದ್ದರು.

2021 ಸೆಪ್ಟೆಂಬರ್‌ನಲ್ಲಿ ಕೊಪ್ಪಳ ಜಿಲ್ಲೆ ಮಿಯಾಪುರದಲ್ಲಿ ವಿನಯ್ ಹೆಸರಿನ ದಲಿತ ಬಾಲಕ, ಮಾರುತಿ ದೇವಸ್ಥಾನ ಪ್ರವೇಶಿಸಿದ್ದರಿಂದ ಗ್ರಾಮದ ಸವರ್ಣೀಯರು ಬಾಲಕನ ಪೋಷಕರಿಗೆ ₹ 25 ಸಾವಿರ ದಂಡ ವಿಧಿಸಿ ಬಹಿಷ್ಕರಿಸಿದ್ದರು. ಸುದ್ದಿ ತಿಳಿದ ಜಿಲ್ಲಾಡಳಿತ ಹಾಗೂ ಸಚಿವ ಕೋಟ ಶ್ರೀನಿವಾಸ ಪೂಜಾರಿ ಗ್ರಾಮಕ್ಕೆ ಭೇಟಿ ನೀಡಿ ಸಮಸ್ಯೆ ಬಗೆಹರಿಸಿದ್ದರು. ಈ ಹಿನ್ನೆಲೆಯಲ್ಲಿ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ವಿನಯ್ ಹೆಸರಿನಲ್ಲಿ ಅಸ್ಪೃಶ್ಯತೆ ನಿವಾರಣೆಯ 'ವಿನಯ ಸಾಮರಸ್ಯ' ಯೋಜನೆಯನ್ನು ಸರ್ಕಾರ ಘೋಷಿಸಿತ್ತು.

ಶೇ 12ರಷ್ಟು ಮೀಸಲಾತಿಗೆ ಒಕ್ಕಲಿಗರ ಪಟ್ಟು

ಒಂದನೇ ಪುಟದಿಂದ

ಕೆ.ಗೋಪಾಲಯ್ಯ, ಕೆ.ಸಿ. ನಾರಾಯಣಗೌಡ ಅವರನ್ನು ಸಭೆಗೆ ಆಹ್ವಾನಿಸಲಾಗಿದೆ. ಸಮುದಾಯದ ಹಾಲಿ ಮತ್ತು ಮಾಜಿ ಶಾಸಕರು, ಸಾಹಿತಿಗಳು, ಹೋರಾಟಗಾರರು, ಚಿತ್ರರಂಗ ಪ್ರಮುಖರು, ಸಂಘ–ಸಂಸ್ಥೆಗಳ ಮುಖಂಡರು ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಿರುವ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ಅದೇ ರೀತಿ ಒಕ್ಕಲಿಗ ಸಮುದಾಯದ ಮೀಸಲಾತಿ ಪ್ರಮಾಣ ಹೆಚ್ಚಿಸಬೇಕಾಗಿದೆ. ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಪ್ರವರ್ಗ 3ಎ ಮೀಸಲಾತಿಯನ್ನು ಸಮುದಾಯ ಪಡೆದುಕೊಳ್ಳುತ್ತಿದೆ. ಶೇ 16ಕ್ಕೂ ಹೆಚ್ಚಿರುವ ಸಮುದಾಯಕ್ಕೆ ಶೇ 4ರಷ್ಟು ಮಾತ್ರ ಮೀಸಲಾತಿ ಸಿಗುತ್ತಿದೆ' ಎಂದರು.

'ಆದ್ದರಿಂದ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವುದರ ಅನಿವಾರ್ಯತೆ ಇದೆ. ಈ ಸಂಬಂಧ ಹೋರಾಟದ ರೂಪುರೇಷೆ ಸಿದ್ಧಪಡಿಸಲು ಮಹತ್ವದ ನಿರ್ಣಯಗಳನ್ನು ಭಾನುವಾರದ ಸಭೆ ಕೈಗೊಳ್ಳಲಿದೆ' ಎಂದು ಬಾಲಕೃಷ್ಣ ಹೇಳಿದರು.

'ಇಡಬ್ಲ್ಯುಎಸ್ ಮೀಸಲಾತಿಯನ್ನೂ ಕೊಡಿ'

ಕೇಂದ್ರ ಸರ್ಕಾರ ಇತ್ತೀಚೆಗೆ ಜಾರಿಗೊಳಿಸಿರುವ ಶೇ 10ರಷ್ಟು ಇಡಬ್ಲ್ಯುಎಸ್ (ಆರ್ಥಿಕವಾಗಿ ಹಿಂದುಳಿದವರಿಗೆ) ಮೀಸಲಾತಿಯಡಿ ನಗರ ಪ್ರದೇಶದ ಒಕ್ಕಲಿಗರಿಗೂ ಅವಕಾಶ ಸಿಗಬೇಕು ಎಂದು ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಗಾನಂ ಶ್ರೀಕಂಠಯ್ಯ ಒತ್ತಾಯಿಸಿದರು.

ಕೇಂದ್ರ ಮೀಸಲಾತಿ ಪಟ್ಟಿಯಲ್ಲಿ ನಗರ ಪ್ರದೇಶದ ಒಕ್ಕಲಿಗರನ್ನು ಹೊರಗಿಡಲಾಗಿದೆ. ಗ್ರಾಮೀಣ ಪ್ರದೇಶದಿಂದ ವಲಸೆ ಬಂದು ನಗರಗಳಲ್ಲಿ ಕೂಲಿ ಮಾಡುತ್ತಿರುವ ಕುಟುಂಬಗಳಲ್ಲಿನ ಮಕ್ಕಳು ಮೀಸಲಾತಿ ಸೌಲಭ್ಯದಿಂದ ವಂಚಿತರಾಗುತ್ತಿದ್ದಾರೆ. ಇಡಬ್ಲ್ಯುಎಸ್ ಮೀಸಲಾತಿ ಪ್ರಮಾಣ ಶೇ 10ರಷ್ಟು ಇರುವುದರಿಂದ ಸಾಮಾನ್ಯ ವರ್ಗದ ಮೀಸಲಾತಿ ಪ್ರಮಾಣ ಕಡಿಮೆಯಾಗಿದೆ ಎಂದರು. 'ಕಾಂತರಾಜ್ ಅಧ್ಯಕ್ಷತೆಯಲ್ಲಿ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಸಿದ್ಧಪಡಿಸಿದ್ದ ಜಾತಿ ಸಮೀಕ್ಷೆ ಅವೈಜ್ಞಾನಿಕವಾಗಿದೆ. ಒಕ್ಕಲಿಗರ ಉಪಜಾತಿಗಳನ್ನು ಪರಿಗಣಿಸಿಲ್ಲ. ಒಕ್ಕಲಿಗರ ಜನಸಂಖ್ಯೆಯನ್ನು ಕಡಿಮೆ ನಮೂದಿಸಲಾಗಿದೆ. ಆದ್ದರಿಂದ ಆಯೋಗದ ಸಮೀಕ್ಷಾ ವರದಿ ರದ್ದುಪಡಿಸಬೇಕು' ಎಂದರು.

M.P. HOUSING & INFRASTRUCTURE DEVELOPMENT BOARD

SYSTEM TENDER NO :- 2022_MPHID_234068_1
NOTICE INVITING TENDER

Madhya Pradesh Housing & Infrastructure Development Board (MPHIDB) hereby invites online proposals through e-tendering mode from reputed consultants for "Selection of Consultant for Supervision and Quality Control (SQC) for various government facilities at Ratlam under Re-densification Policy of GoMP". Selection process would be as per RFP terms and conditions. Online bids are invited from interested bidders as per following details.

Name of Work	Cost of Tender Document	Earnest Money Deposit (EMD)
"Selection of Consultant for Supervision and Quality Control (SQC) for various government facilities at Ratlam under Re-densification Policy of GoMP". (Estimated cost of Government Facilities Rs. 74.54 Crore)	Rs. 15,000/-	Rs. 1,00,000/-

1. The bid documents can be purchased online only at **www.mptenders.gov.in** as per schedule : 28.11.2022 at 10:30 A.M. to 09.12.2022 at 05:30 Hrs.
2. Interested bidders can view the detailed NIT on website **https//www.mptenders.gov.in.**
3. Key Dates are available on e-tender website.
4. Amendments to NIT if any would be published on website only, and not in newspapers.
5. MPHIDB reserves the right to cancel the tender at any time without assigning any reason.

WEBSITE : www.mphousing.in
Email : dhchbujn@mp.gov.in
M.P. Madhyam/107403/2022
/mphidb
/mphidb
(Probodh Parate)
Dy. Housing Commissioner
Circle Ujjain, Mobile : 94252-11364

ಜಿಲ್ಲೆಗೊಂದರಂತೆ 31 ಗೋವು ದತ್ತು – ನಟ ಸುದೀಪ್

ಬೆಂಗಳೂರು: 'ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಸರ್ಕಾರಿ ಗೋಶಾಲೆಗಳಲ್ಲಿ ತಲಾ ಒಂದರಂತೆ 31 ಗೋವುಗಳನ್ನು ದತ್ತು ಪಡೆಯುತ್ತೇನೆ' ಎಂದು ಚಿತ್ರನಟ ಸುದೀಪ್ ಗುರುವಾರ ಹೇಳಿದರು.

ಪಶುಸಂಗೋಪನೆ ಸಚಿವ ಪ್ರಭು ಬಿ.ಚವ್ಹಾಣ ಅವರ ಜೊತೆ ತಮ್ಮ ನಿವಾಸದಲ್ಲಿ ಗೋಪೂಜೆ ನೆರವೇರಿಸಿದ ಅವರು, 'ಪುಣ್ಯಕೋಟಿ ದತ್ತು ಯೋಜನೆಯ ರಾಯಭಾರಿಯಾಗಿ ನನ್ನನ್ನು ನೇಮಿಸಿ ಸರ್ಕಾರ ಜವಾಬ್ದಾರಿ ಹೆಚ್ಚಿಸಿದೆ' ಎಂದರು.

'ಸಾರ್ವಜನಿಕರು, ಕಲಾವಿದರು, ಸಾರ್ವಜನಿಕ ಸಂಘ ಸಂಸ್ಥೆಗಳು ಗೋವುಗಳನ್ನು ದತ್ತು ಪಡೆಯಬೇಕು' ಎಂದು ಮನವಿ ಮಾಡಿದರು. ಸುದೀಪ್ ಅವರಿಗೆ ಪುಣ್ಯಕೋಟಿ ದತ್ತು ಯೋಜನೆ ರಾಯಭಾರಿ ನೇಮಕ, ಪತ್ರ ವಿತರಿಸಿ, ಸ್ಮರಣಿಕೆ ನೀಡಿ ಸಚಿವರು ಸನ್ಮಾನಿಸಿದರು.

'ಮುಖ್ಯಮಂತ್ರಿಯವರು ತಮ್ಮ ಜನ್ಮದಿನದಂದು 11 ಗೋವು ದತ್ತು ಪಡೆದು, ದತ್ತು ಯೋಜನೆ ಜಾರಿಗೆ ತಂದರು. ನಾನು ಕೂಡ 31 ಗೋವು ದತ್ತು ಪಡೆದಿದ್ದೇನೆ' ಎಂದು ಸಚಿವರು ಹೇಳಿದರು. ಆಗ 'ನಾನು ದತ್ತು ಪಡೆಯುತ್ತಿದ್ದೇನೆ' ಎಂದು ಸುದೀಪ್ ಪ್ರತಿಕ್ರಿಯಿಸಿದರು.

'ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೆ ತಂದ ನಂತರ 100 ಸರ್ಕಾರಿ ಗೋಶಾಲೆ ಸ್ಥಾಪಿಸಲಾಗುತ್ತಿದೆ. ಗೋಶಾಲೆಗಳನ್ನು ಆರ್ಥಿಕವಾಗಿ ಸದೃಢಗೊಳಿಸಿ, ಸಾರ್ವಜನಿಕರ ಸಹಕಾರದಿಂದ ಯಾವುದೇ ಅಡಚಣೆಯಿಲ್ಲದೆ ನಡೆಸುವುದು ಈ ಯೋಜನೆ ಉದ್ದೇಶ' ಎಂದು ಸಚಿವರು ಹೇಳಿದರು.

ಇಲಾಖೆಯ ಕಾರ್ಯದರ್ಶಿ ಡಾ. ಸಲ್ಮಾ ಕೆ. ಫಾಹೀಮ್, ಆಯುಕ್ತೆ ಎಸ್. ಅಶ್ವತಿ, ಹೆಚ್ಚುವರಿ ನಿರ್ದೇಶಕ ಡಾ.ಶ್ರೀನಿವಾಸ್ ಇದ್ದರು.

ಪ್ರಭು ಬಿ.ಚವ್ಹಾಣ ಅವರ ಜೊತೆ ಸುದೀಪ್ ಅವರು ತಮ್ಮ ನಿವಾಸದಲ್ಲಿ ಗುರುವಾರ ಗೋವಿಗೆ ಆಹಾರ ತಿನ್ನಿಸಿದರು.

ಬಾಬಾಬುಡನ್ ಸ್ವಾಮಿ ದರ್ಗಾ/ಪೀಠ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಾಗಿ ಹೇಮಂತ್ ಕುಮಾರ್ ಆಯ್ಕೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ತಾಲ್ಲೂಕಿನ ಶ್ರೀಗುರುದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾ/ಪೀಠದ ಸಂಯುಕ್ತ ಸಂಸ್ಥೆ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾಗಿ ಜಿ.ಎಚ್. ಹೇಮಂತಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಸಮಿತಿ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆದಿದೆ. ಸಮಿತಿಯ ಎಂಟು ಸದಸ್ಯರ ಪೈಕಿ ಏಳು ಮಂದಿ ಸಭೆಯಲ್ಲಿ ಹಾಜರಾಗಿದ್ದರು.

'ಸಮಿತಿಯ ಮುಸ್ಲಿಂ ಸದಸ್ಯ ಎಸ್.ಎಂ.ಭಾಷಾ ಅವರು ಸಭೆಗೆ ಗೈರು ಹಾಜರಾಗಿದ್ದರು. ಸಮಿತಿ ಅಧ್ಯಕ್ಷರನ್ನು ಆಯ್ಕೆ ಮಾಡಲಾಗಿದೆ. ಧಾರ್ಮಿಕ ದತ್ತಿ ಇಲಾಖೆ ಆಯುಕ್ತರು ಅನುಮೋದನೆ ನೀಡಿದ್ದಾರೆ' ಎಂದು ಜಿಲ್ಲಾಧಿಕಾರಿ ಕೆ.ಎನ್.ರಮೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

ಶ್ರೀಗುರುದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾ/ಪೀಠದ ಕಾರ್ಯನಿರ್ವಾಹಕ ಅಧಿಕಾರಿ ಶ್ರೀನಿವಾಸ್, ಧಾರ್ಮಿಕ ದತ್ತಿ ಇಲಾಖೆ ತಹಶೀಲ್ದಾರ್ ಯೋಗೀಶ್ ಇದ್ದರು.

ರಾಜ್ಯ ಸರ್ಕಾರವು ಇದೇ 18ರಂದು ವ್ಯವಸ್ಥಾಪನಾ ಸಮಿತಿ ರಚಿಸಿ ಆದೇಶ ಹೊರಡಿಸಿತ್ತು. ಸಭೆ ನಡೆಸಿ ಒಬ್ಬರನ್ನು ಸಮಿತಿ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ನಡವಳಿ ಸಲ್ಲಿಸುವಂತೆ ಆದೇಶದಲ್ಲಿ ತಿಳಿಸಲಾಗಿತ್ತು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಅರೆಬೆತ್ತಲೆ ಉರುಳು ಸೇವೆ: ಸರ್ಕಾರದ ವಿರುದ್ಧ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಬ್ಬಿನ ಎಫ್‌ಆರ್‌ಪಿ ದರ ಹೆಚ್ಚಿಸಬೇಕು' ಎಂದು ಒತ್ತಾಯಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟಿಸುತ್ತಿರುವ ರೈತರು, ಉದ್ಯಾನ ಎದುರಿನ ಮುಖ್ಯರಸ್ತೆಯಲ್ಲಿ ಗುರುವಾರ ಅರೆಬೆತ್ತಲೆ ಉರುಳು ಸೇವೆ ಮಾಡಿ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದರು.

ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘ ನೇತೃತ್ವದಲ್ಲಿ ಅನಿರ್ದಿಷ್ಟ ಪ್ರತಿಭಟನೆ ನಡೆಯುತ್ತಿದೆ. ವಿವಿಧ ಜಿಲ್ಲೆಗಳಿಂದ ಸರದಿ ಪ್ರಕಾರ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುತ್ತಿರುವ ರೈತರು, ಬೇಡಿಕೆ ಈಡೇರಿಕೆಗಾಗಿ ಆಗ್ರಹಿಸುತ್ತಿದ್ದಾರೆ.

ಮುಖ್ಯಮಂತ್ರಿ ಮನೆ ಎದುರು ಪ್ರತಿಭಟನೆ ನಡೆಸಲು ರೈತರು ತೀರ್ಮಾನಿಸಿದ್ದರು. ಆದರೆ, ಅದಕ್ಕೆ ಅನುಮತಿ ಸಿಕ್ಕಿರಲಿಲ್ಲ. ಹೀಗಾಗಿ, ಉದ್ಯಾನದಲ್ಲಿ ಪ್ರತಿಭಟನೆ ಮುಂದುವರಿಸಿದ್ದಾರೆ.

ರೈತರ ಬೇಡಿಕೆ ಈಡೇರಿಸುವ ವಿಷಯದಲ್ಲಿ ಸರ್ಕಾರ ನಿರ್ಲಕ್ಷ್ಯ ತಾಳಿದೆ ಎಂದು ಆರೋಪಿಸಿದ ರೈತರು, ಅಂಗಿಗಳನ್ನು ಬಿಚ್ಚಿ ಅರೆಬೆತ್ತಲಾಗಿ ಗುರುವಾರ ಮಧ್ಯಾಹ್ನ ರಸ್ತೆಗೆ ಇಳಿದು ಉರುಳು ಸೇವೆ ಮಾಡಿದರು. ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಸ್ಥಳದಲ್ಲಿದ್ದ ಪೊಲೀಸರು, ರೈತರನ್ನು ರಸ್ತೆಯಲ್ಲೇ ತಡೆದು ನಿಲ್ಲಿಸಿದರು. ಮುಖ್ಯಮಂತ್ರಿ ಮನೆಗೆ ಹೋಗಬೇಕು ಎಂದು ರೈತರು ಪಟ್ಟು ಹಿಡಿದಿದ್ದರು. ಸಾರ್ವಜನಿಕರ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿದ್ದಂತೆ ಬಿಎಂಟಿಸಿ ಬಸ್‌ಗಳನ್ನು ಸ್ಥಳಕ್ಕೆ ಕರೆಸಿಕೊಂಡಿದ್ದ ಪೊಲೀಸರು, ಪ್ರತಿಭಟನಾನಿರತರನ್ನು ವಶಕ್ಕೆ ಪಡೆಯಲು ಮುಂದಾಗಿದ್ದರು. ಈ ವೇಳೆ ಮಾತಿನ ಚಕಮಕಿಯೂ ನಡೆಯಿತು.

ರೈತರನ್ನು ಸಮಾಧಾನಪಡಿಸಿದ ಪೊಲೀಸ್ ಅಧಿಕಾರಿಗಳು, ವಶಕ್ಕೆ ಪಡೆಯುವುದನ್ನು ಕೈಬಿಟ್ಟು ವಾಪಸ್ ಪ್ರತಿಭಟನೆ ಸ್ಥಳಕ್ಕೆ ಕಳುಹಿಸಿ ಪರಿಸ್ಥಿತಿ ತಿಳಿಗೊಳಿಸಿದರು. ನಂತರ, ಉದ್ಯಾನದಲ್ಲಿರುವ ಪೆಂಡಾಲ್‌ನಲ್ಲಿ ರೈತರು ಪ್ರತಿಭಟನೆ ಮುಂದುವರೆಸಿದರು.

'ಎಫ್‌ಆರ್‌ಪಿ ದರ ಹೆಚ್ಚಿಸಲು ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿದೆ. ದರ ಹೆಚ್ಚಳ ಬೇಡಿಕೆ ಈಡೇರಿಸುವವರೆಗೂ ಉದ್ಯಾನ ಬಿಟ್ಟು ಹೋಗುವುದಿಲ್ಲ' ಎಂದು ಪ್ರತಿಭಟನಾನಿರತರು ಹೇಳಿದರು.

ವಿದ್ಯುತ್ ಉತ್ಪಾದಿಸಿ ಹಣ ಗಳಿಸುವ ಸಮಯ ಬಂದಿದೆ: ಪ್ರಧಾನಿ ಮೋದಿ

‘ವಿದ್ಯುತ್‌ನಿಂದ ಗಳಿಕೆ ಕಲೆ ಗೊತ್ತು’

ಗುಜರಾತ್‌ನ ಮೋಡಾಸಾದಲ್ಲಿ ಗುರುವಾರ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾಗಿಯಾಗಿದ್ದರು–ಪಿಟಿಐ ಚಿತ್ರ

ಮೋಡಾಸಾ (ಗುಜರಾತ್) (ಪಿಟಿಐ): ಗುಜರಾತ್ ಜನರಿಗೆ ಉಚಿತವಾಗಿ ವಿದ್ಯುತ್ ನೀಡುವುದಾಗಿ ಆಮ್ ಆದ್ಮಿ ಹಾಗೂ ಕಾಂಗ್ರೆಸ್ ಪಕ್ಷಗಳು ಪ್ರಕಟಿಸಿರುವುದನ್ನು ತೀವ್ರವಾಗಿ ವಿರೋಧಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, ‘ವಿದ್ಯುತ್ ಉಚಿತವಾಗಿ ಪಡೆಯುವ ಬದಲು, ವಿದ್ಯುತ್‌ನಿಂದ ಜನರು ಹಣ ಗಳಿಸುವ ಸಮಯ ಬಂದಿದೆ’ ಎಂದು ಹೇಳಿದ್ದಾರೆ.

ಮೋಡಾಸಾದಲ್ಲಿ ಗುರುವಾರ ನಡೆದ ಚುನಾವಣಾ ಪ್ರಚಾರ ಸಭೆ ಉದ್ದೇಶಿಸಿ ಮಾತನಾಡಿದ ಅವರು, ವಿದ್ಯುತ್ ಉತ್ಪಾದಿಸಿ ಹಣ ಗಳಿಸುವ ಕಲೆ ತಮಗೆ ಮಾತ್ರ ಗೊತ್ತಿದೆ ಎಂದು ಹೇಳಿದ್ದಾರೆ. ‘ಒಡೆದು ಆಳುವ ನೀತಿಯಲ್ಲಿ ಕಾಂಗ್ರೆಸ್ ಪಕ್ಷ ನಂಬಿಕೆ ಇರಿಸಿದ್ದು, ಅಧಿಕಾರದಲ್ಲಿ ಇರುವುದು ಹೇಗೆ ಎಂಬ ಬಗ್ಗೆಯೇ ಸದಾ ಗಮನ ಹರಿಸುತ್ತದೆ. ಉಚಿತ ವಿದ್ಯುತ್ ನೀಡುವ ತಂತ್ರವನ್ನು ಕರಗತ ಮಾಡಿಕೊಂಡ ಏಕೈಕ ರಾಜಕಾರಣಿ ತಾವು ಎಂದು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ಹಲವು ಬಾರಿ ಹೇಳಿದ್ದಾರೆ. ಉಚಿತ ವಿದ್ಯುತ್ ಪಡೆಯುವುದರ ಬದಲು, ಗುಜರಾತ್‌ನ ಜನರು ಸೌರ ಫಲಕಗಳನ್ನು ಅಳವಡಿಸಿಕೊಂಡು, ಅದರಲ್ಲಿ ಉತ್ಪತ್ತಿಯಾಗುವ ಹೆಚ್ಚುವರಿ ವಿದ್ಯುತ್ತನ್ನು ಮಾರಾಟ ಮಾಡಿ ಹಣ ಗಳಿಸುವುದನ್ನು ನಾನು ನೋಡಲು ಬಯಸುತ್ತೇನೆ’ ಎಂದು ಪ್ರಧಾನಿ ಹೇಳಿದ್ದಾರೆ.

‘ಮಹಾರಾಷ್ಟ್ರದ ಮೊಧೆರಾ ಗ್ರಾಮವು ಸೌರಶಕ್ತಿ ವ್ಯವಸ್ಥೆ ಅಳವಡಿಸಿಕೊಂಡಿದೆ. ಗ್ರಾಮದ ಜನರು ತಮಗೆ ಅಗತ್ಯವಿದ್ದಷ್ಟು ವಿದ್ಯುತ್ ಬಳಸಿಕೊಂಡು, ಉಳಿದದ್ದನ್ನು ಸರ್ಕಾರಕ್ಕೆ ಮಾರಾಟ ಮಾಡುತ್ತಾರೆ. ಇಡೀ ಗುಜರಾತ್‌ನಲ್ಲಿ ಈ ವ್ಯವಸ್ಥೆ ಬರಬೇಕು ಎಂಬುದು ನನ್ನ ಬಯಕೆಯಾಗಿದೆ. ರೈತರೂ ತಮ್ಮ ಜಮೀನುಗಳಲ್ಲಿ ಸೌರಫಲಕ ಅಳವಡಿಸಿ, ಹೆಚ್ಚುವರಿ ವಿದ್ಯುತ್ ಮಾರಾಟ ಮಾಡಬಹುದು’ ಎಂದು ಮೋದಿ ಹೇಳಿದರು.

ಗಾಂಧಿನಗರದ ದೆಹಗಾಂವ್ ಪಟ್ಟಣದಲ್ಲಿ ಮತ್ತೊಂದು ಸಭೆ ಉದ್ದೇಶಿಸಿ ಮಾತನಾಡಿದ ಅವರು, ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಬಿಜೆಪಿ ಸರ್ಕಾರ ಪರಿವರ್ತನೆ ತಂದಿದೆ ಎಂದು ಹೇಳಿದರು. ಗುಣಮಟ್ಟದ ಶಿಕ್ಷಣವನ್ನು ಚುನಾವಣಾ ವಿಷಯವನ್ನಾಗಿ ಮಾಡಿಕೊಂಡಿರುವ ಎಎಪಿಗೆ ಈ ಮೂಲಕ ತಿರುಗೇಟು ನೀಡಿದ್ದಾರೆ. ಗುಜರಾತ್‌ನ ಶೈಕ್ಷಣಿಕ ಬಜೆಟ್ ₹33 ಸಾವಿರ ಕೋಟಿಗೆ ತಲುಪಿದ್ದು, ಕೆಲವು ರಾಜ್ಯಗಳ ಒಟ್ಟಾರೆ ಬಜೆಟ್ ಸಹ ಇಷ್ಟು ದೊಡ್ಡದಾಗಿಲ್ಲ ಎಂದು ಅವರು ಹೇಳಿದ್ದಾರೆ.

ಪ್ರಜಾ ಮತ
ಜನತಂತ್ರದ ಹಬ್ಬ 2022

ಕಾಂಗ್ರೆಸ್ ಶಪಿಸುವುದನ್ನು ಬಿಡಿ: ಖರ್ಗೆ

ನವದೆಹಲಿ: ಗುಜರಾತ್ ಚುನಾವಣಾ ಪ್ರಚಾರದ ವೇಳೆ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ‘ಕಾಂಗ್ರೆಸ್ ಪಕ್ಷವನ್ನು ಶಪಿಸುವುದನ್ನು ನಿಲ್ಲಿಸಿ, ಗುಜರಾತ್‌ನಲ್ಲಿ ಬಿಜೆಪಿ ಸರ್ಕಾರದ ದುರಾಡಳಿತದ ಬಗ್ಗೆ ಮಾತನಾಡಲಿ’ ಎಂದು ಸಲಹೆ ನೀಡಿದ್ದಾರೆ.

‘ಕಾಂಗ್ರೆಸ್ ಪಕ್ಷ ವಂಶಾಡಳಿತ, ಮತಬ್ಯಾಂಕ್ ರಾಜಕಾರಣದಲ್ಲಿ ತೊಡಗಿದೆ’ ಎಂದಿದ್ದ ಪ್ರಧಾನಿ ಟೀಕೆಗೆ ತಿರುಗೇಟು ನೀಡಿರುವ ಖರ್ಗೆ, ಗುಜರಾತ್‌ನ ಪರಿಸ್ಥಿತಿಯ ಬಗ್ಗೆ ಮಾತನಾಡಿ ಎಂದಿದ್ದಾರೆ.

‘ಗುಜರಾತ್‌ನ ಮಕ್ಕಳ ಭವಿಷ್ಯವನ್ನು ಏಕೆ ನಾಶಪಡಿಸಲಾಯಿತು. ಕಡಿಮೆ ತೂಕದ ಹಾಗೂ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳು ಗುಜರಾತ್‌ನಲ್ಲಿ ಏಕೆ ಹೆಚ್ಚಿದ್ದಾರೆ. 30 ರಾಜ್ಯಗಳ ಶ್ರೇಯಾಂಕದಲ್ಲಿ ಗುಜರಾತ್ 29ನೇ ಸ್ಥಾನ ಪಡೆದಿರುವುದು ಏಕೆ. ನವಜಾತ ಶಿಶು ಮರಣದಲ್ಲಿ ರಾಜ್ಯ 19ನೇ ರ್‍ಯಾಂಕ್ ಪಡೆದಿರುವುದು ಏಕೆ’ ಎಂಬುದಕ್ಕೆ ಪ್ರಧಾನಿ ಉತ್ತರಿಸಲಿ ಎಂದಿದ್ದಾರೆ.

‘ಬಿಜೆಪಿಗೆ ಮತ ಹಾಕಬೇಡಿ’

ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿಗೆ ಮತ ಹಾಕಬಾರದು ಎಂದು ಗುಜರಾತ್‌ನ ಮಾಲಧಾರಿ ಸಮುದಾಯ ಕರೆ ಕೊಟ್ಟಿದೆ. ಗುಜರಾತ್ ಮಾಲಧಾರಿ ಮಹಾಪಂಚಾಯಿತಿಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ರಾಜ್ಯದಲ್ಲಿ ಸಮುದಾಯದ 60 ಲಕ್ಷ ಮತದಾರರಿದ್ದಾರೆ. ಒಂದೂವರೆ ವರ್ಷದಿಂದ ಸಮುದಾಯದ ಜನರ ಮೇಲೆ ಪ್ರಕರಣ ದಾಖಲಿಸಿ ಹಿಂಸೆ ನೀಡಲಾಗುತ್ತಿದೆ. ಹಲವು ಬೇಡಿಕೆಗಳು ಈಡೇರದೆ ಹಾಗೆಯೇ ಉಳಿದಿವೆ. ಈ ಬಾರಿ ಬಿಜೆಪಿಗೆ ಪಾಠ ಕಲಿಸುತ್ತೇವೆ’ ಎಂದು ಸಮುದಾಯದ ಮುಖಂಡ ನಾಗ್ಜಿ ದೇಸಾಯಿ ಹೇಳಿದ್ದಾರೆ.

ಗುಜರಾತ್ ಚುನಾವಣೆ– ಮೊದಲನೇ ಹಂತ



(ಆವರಣದಲ್ಲಿ ಇರುವುದು 2017ರ ಮೊದಲ ಹಂತದ ಚುನಾವಣೆಯ ಅಂಕಿ ಅಂಶ)
ಮೂಲ: ಅಸೋಸಿಯೇಷನ್ ಫಾರ್ ಡೆಮಾಕ್ರೆಟಿಕ್ ರಿಫಾರ್ಮ್ಸ್ (ಎಡಿಆರ್)

‘ತಿಹಾರ್ ಜೈಲಿನಲ್ಲಿ ಲೈಂಗಿಕ ಬಯಕೆ ಈಡೇರಿಸಲು ಸಹ ವ್ಯವಸ್ಥೆ ಇದೆ’

ನವದೆಹಲಿ (ಪಿಟಿಐ): ಇಲ್ಲಿನ ತಿಹಾರ್ ಜೈಲಿನಲ್ಲಿ ಜೈಲುಶಿಕ್ಷೆ ಅನುಭವಿಸುವ ಪ್ರಭಾವಿ ವ್ಯಕ್ತಿಗಳಿಗೆ ಲೈಂಗಿಕ ಬಯಕೆ ಈಡೇರಿಸುವ ಸೌಕರ್ಯ ಸೇರಿ ಹಲವಾರು ರೀತಿಯ ಸೌಕರ್ಯಗಳನ್ನು ಒದಗಿಸುವ ಅಕ್ರಮ ಸಂಪ್ರದಾಯ ಜಾರಿಯಲ್ಲಿದೆ ಎಂದು ಈ ಜೈಲಿನ ಮಾಜಿ ಅಧಿಕಾರಿಯೊಬ್ಬರು ಆರೋಪಿಸಿದ್ದಾರೆ.

ತಿಹಾರ್ ಜೈಲಿನಲ್ಲಿ ಶಿಕ್ಷೆ ಪಡೆಯುತ್ತಿರುವ ದೆಹಲಿ ಸಚಿವ ಸತ್ಯೇಂದರ್ ಜೈನ್ ಅವರಿಗೆ ಜೈಲಿನ ಕೊಠಡಿಯಲ್ಲಿ ಮಸಾಜ್ ಮಾಡುತ್ತಿದ್ದ ವಿಡಿಯೊವೊಂದು ಸೋರಿಕೆಯಾದ ಬಳಿಕ ಚರ್ಚೆಗಳು ನಡೆಯುತ್ತಿವೆ. ಇದೇ ವೇಳೆ, 1981ರಿಂದ 2016ರ ವರೆಗೆ ತಿಹಾರ್ ಜೈಲಿನ ಕಾನೂನು ಅಧಿಕಾರಿ ಮತ್ತು ವಕ್ತಾರರಾಗಿದ್ದ ಸುನಿಲ್ ಗುಪ್ತಾ ಅವರು ಈ ಹೇಳಿಕೆ ನೀಡಿದ್ದಾರೆ.

‘ಅಧಿಕಾರಿಗಳು ಅಥವಾ ಸಹ ಕೈದಿಗಳಿಂದ ಎಲ್ಲಾ ರೀತಿಯ ಸಹಾಯಗಳನ್ನು ಮತ್ತು ವಿಶೇಷ ಉಪಚಾರವನ್ನು ಜೈಲಿನ ಆವರಣದಲ್ಲಿ ಪ್ರಭಾವಿಗಳು ಪಡೆಯುತ್ತಾರೆ. ಈ ರೀತಿಯ ಘಟನೆಗಳು ನಡೆದಾಗ‌ಿನಾನು ಮೇಲಿನ ಅಧಿಕಾರಿಗಳಿಗೆ ವರದಿ ಮಾಡಿದ್ದೆ. ಕೆಲ ಪ್ರಕರಣಗಳಲ್ಲಿ ಕ್ರಮ ಜರುಗಿಸಲಾಗಿತ್ತು’ ಎಂದು ಹೇಳಿದ್ದಾರೆ.

ಸುನಿಲ್ ಅವರ ಆರೋಪದ ಕುರಿತು ಪ್ರತಿಕ್ರಿಯೆ ನೀಡಲು ಅದೇ ಜೈಲಿನ ವಕ್ತಾರ ಧೀರಜ್ ಮಾಥುರ್ ಅವರು ನಿರಾಕರಿಸಿದ್ದಾರೆ.

1993–1995ರ ಅವಧಿಯಲ್ಲಿ ಈ ಜೈಲಿನ ಪ್ರಧಾನ ನಿರ್ದೇಶಕರಾಗಿದ್ದ ಕಿರಣ್ ಬೇಡಿ ಅವರು ಈ ಬಗ್ಗೆ ಪ್ರತಿಕ್ರಿಯಿಸಿದ್ದು, ‘ನನ್ನ ಅಧಿಕಾರಾವಧಿಗೆ ಮುನ್ನ ಅಥವಾ ನಂತರದ ಅವಧಿಯ ಕುರಿತು ಸುನಿಲ್ ಮಾಹಿತಿ ನೀಡಿರಬಹುದು, ಅದು ಕೇವಲ ಅವರ ತಿಳಿವಳಿಕೆ ಮಾತ್ರ’ ಎಂದಿದ್ದಾರೆ. ಆದರೆ ಜೈಲಿನಲ್ಲಿ ನಡೆಯುವ ಹಲವಾರು ಅಕ್ರಮಗಳ ಕುರಿತು ತಮಗೆ ದೂರುಗಳು ಬರುತ್ತಿದ್ದುದಾಗಿ ಅವರು ಹೇಳಿದ್ದಾರೆ.

ಅಸ್ಸಾಂ ಗಡಿಯಲ್ಲಿ ಗಲಭೆ: ಪರಿಸ್ಥಿತಿ ಶಾಂತ

ಹಾಮ್ರೆನ್, ಅಸ್ಸಾಂ (ಪಿಟಿಐ): ‘ಅಸ್ಸಾಂ–ಮೇಘಾಲಯ ಗಡಿಯ ಮುಕ್ರೋಹ್‌ನಲ್ಲಿ ಘರ್ಷಣೆಯ ಬಳಿಕ ಇದೀಗ ಶಾಂತಿ ನೆಲೆಸಿದ್ದು, ಉದ್ವಿಗ್ನ ವಾತಾವರಣ ಮುಂದುವರಿದಿದೆ.

‘ಗಲಭೆ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯ ಭದ್ರತಾ ಪಡೆಯನ್ನು ನಿಯೋಜಿಸಲಾಗಿದೆ’ ಎಂದು ಹಿರಿಯ ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.

‘ಘರ್ಷಣೆ ನಡೆದ ಸ್ಥಳ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸೆಕ್ಷನ್ 144ರ ಅಡಿ ನಿಷೇಧಾಜ್ಞೆ ವಿಧಿಸಲಾಗಿದೆ. ಪರಿಸ್ಥಿತಿ ತಿಳಿಯಾಗುವವರೆಗೂ ಭದ್ರತಾ ಪಡೆಯನ್ನು ನಿಯೋಜಿಸಲಾಗುವುದು. ನಮ್ಮ ಹಿರಿಯ ಅಧಿಕಾರಿಗಳು ಪ್ರತಿ ದಿನ ಈ ಪ್ರದೇಶಕ್ಕೆ ಭೇಟಿ ನೀಡುತ್ತಿದ್ದಾರೆ’ ಎಂದೂ ಹೇಳಿದರು.

ಮಂಗಳವಾರ ಮುಂಜಾನೆ ಪಶ್ಚಿಮ ಕರ್ಬಿ ಆಂಗ್ಲಾಂಗ್ ಜಿಲ್ಲೆಯ ವಿವಾದಿತ ಗಡಿ ಪ್ರದೇಶದಲ್ಲಿ ಅಕ್ರಮವಾಗಿ ಮರಗಳನ್ನು ಸಾಗಿಸುತ್ತಿದ್ದ ಲಾರಿಯೊಂದನ್ನು ಅಸ್ಸಾಂನ ಅರಣ್ಯ ಸಿಬ್ಬಂದಿ ತಡೆದಾಗ ಘರ್ಷಣೆ ಸಂಭವಿಸಿ, ಆರು ಮಂದಿ ಮೃತಪಟ್ಟಿದ್ದರು.

ಗುರುವಾರ ಮೇಘಾಲಯದಲ್ಲಿ ಕನಿಷ್ಠ ಐದು ಸಾಮಾಜಿಕ ಸಂಘಟನೆಗಳು ಶಾಂತಿಯುತ ಪ್ರತಿಭಟನೆ ನಡೆಸಿದ್ದು, ಗಲಭೆಗೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಪಕ್ಷ ಒಡೆಯಲು ಯತ್ನಿಸಿದ್ದ ಸಚಿನ್ ಪೈಲಟ್: ರಾಜಸ್ಥಾನ ಸಿ.ಎಂ ಅಶೋಕ್ ಗೆಹಲೋತ್ ವಾಗ್ದಾಳಿ

‘ಪೈಲಟ್ ನಂಬಿಕೆದ್ರೋಹಿ, ಸಿಎಂ ಆಗಲಾರರು’

ನವದೆಹಲಿ (ಪಿಟಿಐ): ‘ಸಚಿನ್ ಪೈಲಟ್ ನಂಬಿಕೆದ್ರೋಹಿ. ಅವರು ನನ್ನ ಸ್ಥಾನ ತುಂಬಲಾರರು. 2020ರಲ್ಲಿ ಅವರು ಪಕ್ಷದ ವಿರುದ್ಧವೇ ಬಂಡಾಯ ಎದ್ದಿದ್ದರು. ತಮ್ಮ ಸರ್ಕಾರವನ್ನೇ ಉರುಳಿಸಲು ಯತ್ನಿಸಿದ್ದರು’ ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಗುರುವಾರ ವಾಗ್ದಾಳಿ ನಡೆಸಿದ್ದಾರೆ.

ಮುಂದಿನ ವರ್ಷ ವಿಧಾನಸಭೆ ಚುನಾವಣೆ ನಿಗದಿಯಾಗಿದೆ. ಪಕ್ಷದ ನಾಯಕ ರಾಹುಲ್ ಗಾಂಧಿ ಕೈಗೊಂಡಿರುವ ಭಾರತ್ ಜೋಡೊ ಯಾತ್ರೆಯು ಕೆಲ ದಿನಗಳಲ್ಲಿ ರಾಜ್ಯ ಪ್ರವೇಶಿಸಲಿದೆ. ಇಂತಹ ಸಮಯದಲ್ಲಿ ಗೆಹಲೋತ್ ಹೇಳಿಕೆ ನೀಡಿದ್ದಾರೆ.

ಎನ್‌ಡಿಟಿವಿ ಸುದ್ದಿವಾಹಿನಿ ಜೊತೆ ಮಾತನಾಡಿರುವ ಗೆಹಲೋತ್, ‘ಪೈಲಟ್ ಅವರ ಬಂಡಾಯದ ಹಿಂದೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಕೈವಾಡವಿತ್ತು. ಸರ್ಕಾರ ಕೆಡವುವ ಉದ್ದೇಶದಿಂದ ಪೈಲಟ್‌ಗೆ ನಿಷ್ಠರಾಗಿದ್ದ ಕೆಲ ಶಾಸಕರು ಗುರುಗ್ರಾಮದ ರೆಸಾರ್ಟ್‌ವೊಂದಕ್ಕೆ ತೆರಳಿದ್ದರು. ಸುಮಾರು ಒಂದು ತಿಂಗಳು ಅಲ್ಲಿದ್ದರು. ಆಗ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಬಂಡಾಯ ಶಾಸಕರನ್ನು ಭೇಟಿಯಾಗಿದ್ದರು. ಪೈಲಟ್ ಸೇರಿದಂತೆ ಸರ್ಕಾರದ ವಿರುದ್ಧ ಬಂಡಾಯವೆದ್ದಿದ್ದ ಎಲ್ಲಾ ಶಾಸಕರಿಗೂ ಬಿಜೆಪಿಯು ತಲಾ ₹10 ಕೋಟಿ ಮೊತ್ತ ನೀಡಿತ್ತು. ಇದಕ್ಕೆ ಸಂಬಂಧಪಟ್ಟ ದಾಖಲೆಗಳು ನನ್ನ ಬಳಿ ಇವೆ’ ಎಂದು ಹೇಳಿದ್ದಾರೆ.

‘ಪಕ್ಷವು ನನ್ನನ್ನು ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಸಲು ಬಯಸಿದ್ದೇ ಆದಲ್ಲಿ, ನನ್ನ ಸ್ಥಾನಕ್ಕೆ ಸಚಿನ್ ಪೈಲಟ್ ಅವರನ್ನು ಬಿಟ್ಟು ಹಾಲಿ ಇರುವ 102 ಶಾಸಕರ ಪೈಕಿ ಯಾರನ್ನಾದರೂ ಮುಖ್ಯಮಂತ್ರಿ ಮಾಡಲಿ. ಅದಕ್ಕೆ ಅಭ್ಯಂತರವೇನಿಲ್ಲ’ ಎಂದಿದ್ದಾರೆ.

‘ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿದ್ದವರೊಬ್ಬರು ತಮ್ಮ ಸರ್ಕಾರವನ್ನೇ ಕೆಡವಲು ಮುಂದಾಗಿದ್ದರ ಉದಾಹರಣೆಯೇ ಇಲ್ಲ. ಅಂತಹ ದ್ರೋಹಿಯನ್ನು ಮುಖ್ಯಮಂತ್ರಿ ಮಾಡಲು ಸಾಧ್ಯವೇ. ಅದನ್ನು ಪಕ್ಷದ ಶಾಸಕರು ಒಪ್ಪುತ್ತಾರೆಯೇ. ಪೈಲಟ್ ಅವರು ತಮ್ಮ ತಪ್ಪಿಗಾಗಿ ಶಾಸಕರ ಬಳಿ ಕ್ಷಮೆಯಾಚಿಸಿ ಅವರ ಮನಸ್ಸು ಗೆದ್ದಿದ್ದರೆ, ಆಗ ಪರಿಸ್ಥಿತಿಯೇ ಬೇರೆಯಾಗಿರುತ್ತಿತ್ತು. ಆದರೆ ಅವರು ಈವರೆಗೂ ಕ್ಷಮೆಯಾಚಿಸಿಲ್ಲ’ ಎಂದು ಹೇಳಿದ್ದಾರೆ.

ಕೆಸರು ಎರಚಿದ್ದರಿಂದ ಪ್ರಯೋಜನ ಇಲ್ಲ: ‘ಗೆಹಲೋತ್ ಅವರಂತಹ ಹಿರಿಯ ನಾಯಕರು ಇಂತಹ ಭಾಷೆ ಬಳಸಿ ಹೇಳಿಕೆ ನೀಡುವುದು ಸರಿಯಲ್ಲ, ಇಂತಹ ಕೆಸರೆರಚಾಟದಿಂದ ಯಾವ ಪ್ರಯೋಜನವೂ ಇಲ್ಲ. ರಾಜಸ್ಥಾನದಲ್ಲಿ ಮತ್ತೆ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರಲು ಪಕ್ಷದ ಸಂಘಟನೆಯನ್ನು ಬಲಪಡಿಸುವುದು ಪ್ರತಿಯೊಬ್ಬರ ಕರ್ತವ್ಯ’ ಎಂದು ಸಚಿನ್ ಪೈಲಟ್ ಪ್ರತಿಕ್ರಿಯಿಸಿದ್ದಾರೆ.

ಯಾತ್ರೆ: ರಾಹುಲ್ ಜೊತೆ ಹೆಜ್ಜೆ ಹಾಕಿದ ಪ್ರಿಯಾಂಕಾ, ವಾದ್ರಾ

ಮಧ್ಯಪ್ರದೇಶದ ಖಾಂಡ್ವಾದಲ್ಲಿ ಗುರುವಾರ ಸಾಗಿದ ಕಾಂಗ್ರೆಸ್‌ನ ‘ಭಾರತ್ ಜೋಡೊ ಯಾತ್ರೆ’ ವೇಳೆ ಪಕ್ಷದ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಪಕ್ಷದ ನಾಯಕ ರಾಹುಲ್ ಜೊತೆ ಹೆಜ್ಜೆ ಹಾಕಿದರು –ಪಿಟಿಐ ಚಿತ್ರ

ಬೊರ್ಗಾವ್, ಮಧ್ಯಪ್ರದೇಶ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ‘ಭಾರತ್ ಜೋಡೊ ಯಾತ್ರೆ’ಯಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ತಮ್ಮ ಪತಿ ಮತ್ತು ಮಗನ ಜೊತೆ ಗುರುವಾರ ಪಾಲ್ಗೊಂಡರು.

ಪ್ರಿಯಾಂಕಾ ಅವರು ಇದೇ ಪ್ರಥಮ ಬಾರಿಗೆ ಈ ಪಾದಯಾತ್ರೆಯಲ್ಲಿ ರಾಹುಲ್ ಜತೆಯಾಗಿದ್ದಾರೆ. ಸೆಪ್ಟೆಂಬರ್ 7ರಂದು ಕನ್ಯಾಕುಮಾರಿಯಿಂದ ಈ ಯಾತ್ರೆ ಆರಂಭವಾಗಿದೆ. ರಾಜಸ್ಥಾನ ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ಕೂಡಾ ಪ್ರಿಯಾಂಕಾ ಜೊತೆ ಹೆಜ್ಜೆ ಹಾಕಿದರು.

ಮಧ್ಯಪ್ರದೇಶದಲ್ಲಿ ಎರಡನೇ ದಿನದ ಯಾತ್ರೆಯು ಖಾಂಡ್ವಾ ಜಿಲ್ಲೆಯ ಬೊರ್ಗಾವ್‌ನಿಂದ ಆರಂಭವಾಯಿತು. ಕಾಂಗ್ರೆಸ್ ಬೆಂಬಲಿಗರು ಪ್ರಿಯಾಂಕಾ ಮತ್ತು ರಾಹುಲ್ ಅವರನ್ನು ಬೆಂಬಲಿಸಿ ಘೋಷಣೆಗಳನ್ನು ಕೂಗಿದರು. ಬೆಂಬಲಿಗರು ಅವರಿಬ್ಬರನ್ನು ಮುತ್ತಿಕೊಳ್ಳದಂತೆ ತಡೆಯಲು ಪೊಲೀಸರು ಹರಸಾಹಸ ಪಟ್ಟರು.

ಇಲ್ಲಿಯ ಗ್ರಾಮವೊಂದರಲ್ಲಿ ಯಾತ್ರೆ ಸಾಗುತ್ತಿದ್ದ ವೇಳೆ ರಾಹುಲ್ ಅವರನ್ನು ಭೇಟಿಯಾದ 63 ವರ್ಷದ ವೃದ್ಧೆಯೊಬ್ಬರು, ‘ಮಧ್ಯಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಬೇಕೆಂದರೆ ರಾಜ್ಯದ ರೈತರ ಸಾಲ ಮನ್ನಾ ಮಾಡುವ ಘೋಷಣೆ ಮಾಡಿ’ ಎಂದು ಸಲಹೆ ನೀಡಿದರು. ಜೊತೆಗೆ, ಅಡುಗೆ ಅನಿಲ ಮತ್ತು ರಾಸಾಯನಿಕ ಗೊಬ್ಬರಗಳ ಬೆಲೆ ಇಳಿಸುವುದಕ್ಕೆ ಪ್ರಯತ್ನಿಸುವಂತೆ ಹೇಳಿದರು.

ನಿರ್ಧಾರಕ್ಕೆ ವ್ಯಕ್ತವಾಗಿದ್ದ ವ್ಯಾಪಕ ಟೀಕೆ

ದೆಹಲಿ ಲೆಫ್ಟಿನೆಂಟ್ ಗವರ್ನರ್ ಮನವಿಯ ಬಳಿಕ ಯುವತಿಯರು ಮಸೀದಿ ಪ್ರವೇಶಿಸುವುದನ್ನು ನಿರ್ಬಂಧಿಸಿದ್ದ ಆದೇಶ ಹಿಂಪಡೆದಿದೆ ಜಾಮಾ ಮಸೀದಿ

ಯುವತಿಯರಿಗೆ ನಿರ್ಬಂಧ: ಆದೇಶ ಹಿಂಪಡೆದ ಮಸೀದಿ

ನವದೆಹಲಿ (ಪಿಟಿಐ): ಯುವತಿಯರು ಮಸೀದಿ ಪ್ರವೇಶಿಸುವುದನ್ನು ನಿರ್ಬಂಧಿಸಿದ್ದ ಜಾಮಾ ಮಸೀದಿ ಆಡಳಿತವು ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರ ಮನವಿಯ ಬಳಿಕ ತನ್ನ ಆದೇಶ ಹಿಂಪಡೆದಿದೆ.

‘ಲೆಫ್ಟಿನೆಂಟ್ ಗವರ್ನರ್ ಅವರು ದೂರವಾಣಿ ಕರೆ ಮಾಡಿ ಮಾತನಾಡಿದ್ದು, ಆದೇಶ ಹಿಂಪಡೆಯುವಂತೆ ಮನವಿ ಮಾಡಿದ್ದಾರೆ. ಹೀಗಾಗಿ ನಮ್ಮ ನಿರ್ಧಾರ ಬದಲಿಸಿದ್ದೇವೆ. ಮಸೀದಿಗೆ ಭೇಟಿ ನೀಡುವವರು ಪಾವಿತ್ರ್ಯ ಕಾಪಾಡಬೇಕು’ ಎಂದು ಮಸೀದಿಯ ಶಾಹಿ ಇಮಾಮ್ ಸೈಯದ್ ಅಹ್ಮದ್ ಬುಖಾರಿ ಗುರುವಾರ ಹೇಳಿದ್ದಾರೆ.

ಯುವತಿ ಅಥವಾ ಯುವತಿಯರ ಗುಂಪು ಮಸೀದಿ ಪ್ರವೇಶಿಸುವುದನ್ನು ನಿಷೇಧಿಸಿರುವುದಾಗಿ ಮಸೀದಿಯ ಮುಖ್ಯದ್ವಾರಗಳ ಮೇಲೆ ಸೂಚನಾ ಫಲಕ ಹಾಕಲಾಗಿತ್ತು. ಮಸೀದಿ ಆಡಳಿತದ ಈ ನಿರ್ಧಾರಕ್ಕೆ ಭಾರಿ ಟೀಕೆ ವ್ಯಕ್ತವಾಗಿತ್ತು.

ವಿವಾದದ ಬೆನ್ನಲ್ಲೇ ಈ ಕುರಿತು ಸ್ಪಷ್ಟನೆ ನೀಡಿದ್ದ ಬುಖಾರಿ, ‘ಪ್ರಾರ್ಥನೆ ಸಲ್ಲಿಸಲು ಮಸೀದಿಗೆ ಬರುವವರಿಗೆ ಈ ನಿರ್ಬಂಧ ಅನ್ವಯಿಸುವುದಿಲ್ಲ. ಮಸೀದಿಯ ಆವರಣದಲ್ಲಿ ಯುವತಿಯರು ರೀಲ್ಸ್, ಟಿಕ್‌ಟಾಕ್ ವಿಡಿಯೊ ಮಾಡುತ್ತಿದ್ದ ಕುರಿತು ವರದಿಗಳಾಗಿತ್ತು. ಹೀಗಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಮಸೀದಿಯು ಪ್ರಾರ್ಥನಾ ಸ್ಥಳ. ಅದಕ್ಕಾಗಿ ಬರುವವರಿಗೆ ಯಾವ ನಿರ್ಬಂಧವೂ ಇಲ್ಲ. ಆದರೆ ಸಂಗಾತಿಯ ಭೇಟಿಗಾಗಿ ಕಾಯುವವರಿಗೆ ಪ್ರವೇಶವಿಲ್ಲ’ ಎಂದಿದ್ದರು.

ಶ್ರದ್ಧಾ ವಾಲಕರ್ ಹತ್ಯೆ: ಆಫ್ತಾಬ್ ಫ್ಲ್ಯಾಟ್‌ನಲ್ಲಿ ಐದು ಚಾಕು ವಶ

ನವದೆಹಲಿ (ಪಿಟಿಐ): ಮುಂಬೈ ಮೂಲದ ಕಾಲ್‌ಸೆಂಟರ್ ಉದ್ಯೋಗಿ, ತನ್ನ ಸಹಜೀವನ ಸಂಗಾತಿ ಶ್ರದ್ಧಾ ವಾಲಕರ್ ಎಂಬ ಯುವತಿಯನ್ನು ಭೀಕರವಾಗಿ ಕೊಂದು, 35 ತುಂಡುಗಳಾಗಿ ಕತ್ತರಿಸಿ ಬಿಸಾಡಿದ್ದ ಆರೋಪಿ ಆಫ್ತಾಬ್ ಅಮೀನ್ ಪೂನಾವಾಲಾನ ಛತರ್‌ಪುರದಲ್ಲಿನ ಫ್ಲ್ಯಾಟ್‌ನಿಂದ ಐದು ಚಾಕುಗಳನ್ನು ದೆಹಲಿ ಪೊಲೀಸರು ಗುರುವಾರ ವಶಪಡಿಸಿಕೊಂಡಿದ್ದಾರೆ.

ಅಪರಾಧ ಕೃತ್ಯಕ್ಕೆ ಇವುಗಳನ್ನು ಬಳಸಲಾಗಿದೆಯೇ ಎಂಬುದನ್ನು ಪತ್ತೆಹಚ್ಚಲು, ಚಾಕುಗಳನ್ನು ವಿಧಿವಿಜ್ಞಾನ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್‌ಗೆ) ಪರೀಕ್ಷೆಗೆ ರವಾನಿಸಲಾಗಿದೆ. ಈ ಚಾಕುಗಳನ್ನು ಹತ್ಯೆಗೆ, ದೇಹ ತುಂಡರಿಸಲು ಬಳಸಿದ್ದರೆ ಅದು ಎಫ್‌ಎಸ್‌ಎಲ್ ಪರೀಕ್ಷೆಯಿಂದ ಮಾತ್ರ ದೃಢಪಡಲಿದೆ. ಇದಕ್ಕೆ ಸಮಯ ಬೇಕಾಗಲಿದೆ ಎಂದು ಪೊಲೀಸ್ ಇಲಾಖೆ ಮೂಲಗಳು ತಿಳಿಸಿವೆ.

ಆರೋಪಿಯು ಶ್ರದ್ಧಾ ದೇಹವನ್ನು ತುಂಡು ತುಂಡಾಗಿ ಕತ್ತರಿಸಲು ಬಳಸಿದ್ದಾನೆ ಎನ್ನಲಾದ ಗರಗಸ ಈವರೆಗೆ ಸಿಕ್ಕಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

ದಕ್ಷಿಣ ದೆಹಲಿಯ ಮಹ್ರೌಲಿಯ ತನ್ನ ಫ್ಲ್ಯಾಟ್‌ನಲ್ಲಿ ಆಫ್ತಾಬ್ ಅಮೀನ್ ಪೂನಾವಾಲಾ ಕಳೆದ ಮೇನಲ್ಲಿ ಶ್ರದ್ಧಾಳನ್ನು ಕತ್ತು ಹಿಸುಕಿ ಕೊಂದಿದ್ದ. ನಂತರ ಆಕೆಯ ದೇಹವನ್ನು 35 ತುಂಡುಗಳಾಗಿ ಕತ್ತರಿಸಿ, 300 ಲೀಟರ್ ಸಾಮರ್ಥ್ಯದ ಫ್ರಿಜ್‌ನಲ್ಲಿ ಸುಮಾರು ಮೂರು ವಾರಗಳವರೆಗೆ ಇರಿಸಿದ್ದ. ನಂತರ ಅವುಗಳನ್ನು ನಗರದ ವಿವಿಧೆಡೆ ಮತ್ತು ಛತರ್‌ಪುರ ಸಮೀಪದ ಅರಣ್ಯ ಪ್ರದೇಶದಲ್ಲಿ ಹಲವು ದಿನಗಳವರೆಗೆ ಒಂದೊಂದಾಗಿ ಬಿಸಾಡಿದ್ದ.

ಶ್ರದ್ಧಾ ಕೊಲೆಗಾರನಿಗೆ ಕಠಿಣ ಶಿಕ್ಷೆ ಖಚಿತ– ಅಮಿತ್ ಶಾ: ಶ್ರದ್ಧಾ ವಾಲಕರ್ ಕೊಲೆ ಪ್ರಕರಣದ ಆರೋಪಿಗಳಿಗೆ ದೆಹಲಿ ಪೊಲೀಸರು ಮತ್ತು ಪ್ರಾಸಿಕ್ಯೂಷನ್ ಶೀಘ್ರದಲ್ಲಿ ಕಠಿಣ ಶಿಕ್ಷೆ ಕೊಡಿಸಲಿವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಗುರುವಾರ ಹೇಳಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ‘ದೆಹಲಿ ಮತ್ತು ಮುಂಬೈ ಪೊಲೀಸರ ನಡುವೆ ಈ ಪ್ರಕರಣದ ತನಿಖೆಯಲ್ಲಿ ಸಮನ್ವಯದ ಕೊರತೆ ಇಲ್ಲ ಎಂದರು.

ಆಯುಕ್ತರ ನೇಮಕದಲ್ಲಿ ಆತುರವೇಕೆ?

ಅರುಣ್ ಗೋಯೆಲ್ ಕಡತ ಪರಿಶೀಲನೆ: ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಪ್ರಶ್ನೆ

ನವದೆಹಲಿ (ಪಿಟಿಐ): ಚುನಾವಣಾ ಆಯುಕ್ತ ಅರುಣ್ ಗೋಯಲ್ ನೇಮಕವನ್ನು ಸರ್ಕಾರವು ಆತುರವಾಗಿ ನಡೆಸಿದೆ. ಈ ಆತುರ ಏಕೆ ಎಂದು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.

ಚುನಾವಣಾ ಆಯುಕ್ತರ ನೇಮಕಾತಿಗೆ ಕೊಲಿಜಿಯಂ ಸ್ವರೂಪದ ವ್ಯವಸ್ಥೆ ಬೇಕು ಎಂದು ಕೋರಿದ್ದ ಅರ್ಜಿಗಳ ವಿಚಾರಣೆ ವೇಳೆ ಸಂವಿಧಾನ ಪೀಠವು ಹೀಗೆ ಹೇಳಿದೆ. ಅರುಣ್ ಗೋಯಲ್ ಅವರನ್ನು ತರಾತುರಿಯಲ್ಲಿ ನೇಮಕ ಮಾಡಲಾಗಿದೆ. ಅದರಲ್ಲಿ ಅಕ್ರಮ ಇರುವ ಸಾಧ್ಯತೆ ಇದೆ ವಕೀಲ ಪ್ರಶಾಂತ್ ಭೂಷಣ್ ಅವರು ಪೀಠದ ಗಮನ ಸೆಳೆದಿದ್ದರು. ಅದನ್ನು ಗಂಭೀರವಾಗಿ ಪರಿಗಣಿಸಿದ್ದ ಪೀಠವು, ಅರುಣ್ ಗೋಯಲ್ ಅವರ ನೇಮಕಾತಿಗೆ ಸಂಬಂಧಿಸಿದ ಕಡತಗಳನ್ನು ಸಲ್ಲಿಸುವಂತೆ ಸರ್ಕಾರಕ್ಕೆ ತಾಕೀತು ಮಾಡಿತ್ತು.

ಸರ್ಕಾರವು ಸಲ್ಲಿಸಿದ ಕಡತಗಳನ್ನು ಪರಿಶೀಲಿಸಿದ ಪೀಠವು, ‘ಮುಖ್ಯ ಚುನಾವಣಾ ಆಯುಕ್ತರ ಹುದ್ದೆಯು ಮೇ 15ರಂದು ತೆರವಾಗಿದೆ. ನವೆಂಬರ್ 18ರವರೆಗೆ ನೇಮಕಕ್ಕೆ ಸಂಬಂಧಿಸಿದಂತೆ ಯಾವ ಪ್ರಕ್ರಿಯೆಯೂ ನಡೆದಿಲ್ಲ. ಆದರೆ, ಅನಂತರ ಒಂದೇ ದಿನದಲ್ಲಿ ನೇಮಕಾತಿ ನಡೆದಿದೆ’ ಎಂದು ಪೀಠವು ಹೇಳಿದೆ.

‘ಅರುಣ್ ಗೋಯಲ್ ಅವರ ಸ್ವಯಂ ನಿವೃತ್ತಿಯನ್ನು ನವೆಂಬರ್ 18ರಂದು ಮಾನ್ಯ ಮಾಡಲಾಗಿದೆ. ಚುನಾವಣಾ ಆಯುಕ್ತರ ಹುದ್ದೆಗೆ ಅಂದೇ ಅರ್ಜಿ ಸಲ್ಲಿಕೆಯಾಗಿದೆ. ಒಂದೇ ದಿನದಲ್ಲಿ ಅವರ ನೇಮಕಾತಿ ನಡೆದಿದೆ. 24 ಗಂಟೆಗಳಲ್ಲಿ ಅವರ ಕಡತವು ಸಚಿವಾಲಯಗಳ ಮಧ್ಯೆ ಓಡಾಡಿದೆ. ಇಷ್ಟು ಮಿಂಚಿನ ವೇಗದಲ್ಲಿ ಅವರ ನೇಮಕಾತಿ ನಡೆದಿದೆ’ ಎಂದು ಪೀಠವು ಹೇಳಿದೆ.

ಇದಕ್ಕೆ ಪ್ರತಿಕ್ರಿಯೆ ನೀಡಿದ ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅವರು, ‘ದಶಕಗಳಿಂದಲೂ ಹೀಗೇ ನಡೆದುಕೊಂಡು ಬಂದಿದೆ. ನೇಮಕಾತಿಯಲ್ಲಿ ಅರ್ಹತೆಯನ್ನು ಪರಿಗಣಿಸಲಾಗಿದೆ’ ಎಂದು ಹೇಳಿದರು.

ಕಡತಗಳನ್ನು ಪರಿಶೀಲಿಸಿದ ಪೀಠವು, ‘ನೇಮಕಾತಿಗೆ ನೀವು ಅನುಸರಿಸಿದ ವಿಧಾನವನ್ನು ಪ್ರಶ್ನಿಸುತ್ತಿದ್ದೇವೆ. ಇಷ್ಟು ವೇಗವಾಗಿ ನೇಮಕಾತಿ ನಡೆಸುವಂತೆ ಸರ್ಕಾರವನ್ನು ಉತ್ತೇಜಿಸಿದ್ದು ಏನು? ಇಷ್ಟು ದಿನ ಇಲ್ಲದ ಆತುರ ಈಗೇಕೆ’ ಎಂದು ಪೀಠವು ಪ್ರಶ್ನಿಸಿದೆ.

‘ನ್ಯಾಯಮೂರ್ತಿ ಇದ್ದರೆ ಪಾರದರ್ಶಕತೆ ಬರುವುದಿಲ್ಲ’

ಚುನಾವಣಾ ಆಯೋಗದ ನೇಮಕಾತಿ ಸಮಿತಿಯಲ್ಲಿ ನ್ಯಾಯಾಂಗದ ಪ್ರತಿನಿಧಿಗಳು ಅಥವಾ ನ್ಯಾಯಮೂರ್ತಿಗಳು ಇದ್ದ ಮಾತ್ರಕ್ಕೆ, ನೇಮಕಾತಿಯಲ್ಲಿ ಪಾರದರ್ಶಕತೆ ಬರುವುದಿಲ್ಲ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದ್ದಾರೆ.

ಚುನಾವಣಾ ಆಯುಕ್ತರ ನೇಮಕಾತಿಯನ್ನು ಸಮಾಲೋಚನೆ ಮೂಲಕ ನಡೆಸಬೇಕು. ಸಮಾಲೋಚನಾ ಸಮಿತಿಯಲ್ಲಿ ಸುಪ್ರೀಂ ಕೋರ್ಟ್‌ನ ಮುಖ್ಯನ್ಯಾಯಮೂರ್ತಿ ಇರಬೇಕು ಎಂದು ಪೀಠವು ಬುಧವಾರದ ವಿಚಾರಣೆ ವೇಳೆ ಹೇಳಿತ್ತು. ಇದಕ್ಕೆ ಪ್ರತಿಕ್ರಿಯೆಯಾಗಿ ತುಷಾರ್ ಮೆಹ್ತಾ ಈ ಮಾತು ಹೇಳಿದ್ದಾರೆ.

‘ಪ್ರಧಾನಿಗೆ ಕಡತ ಕಳಿಸಿದ್ದೇಕೆ?’

ಅರುಣ್ ಗೋಯಲ್ ಅವರ ಕಡತವನ್ನು ಕಾನೂನು ಸಚಿವಾಲಯವು ಪ್ರಧಾನಿ ನರೇಂದ್ರ ಮೋದಿ ಅವರಿಗೆ ನೇರವಾಗಿ ಕಳುಹಿಸಿತ್ತು ಎಂಬುದನ್ನು ಪೀಠವು ಗಂಭೀರವಾಗಿ ಪರಿಗಣಿಸಿತು.

‘ಸಚಿವ ಸಂಪುಟಕ್ಕೆ ಮೊದಲು ಕಡತ ಕಳುಹಿಸಬೇಕಿತ್ತು. ಆದರೆ, ನೇರವಾಗಿ ಪ್ರಧಾನಿಗೆ ಕಳುಹಿಸಿದ್ದು ಏಕೆ’ ಎಂದು ಪೀಠವು ಪ್ರಶ್ನಿಸಿತು.

ಅದಕ್ಕೆ ಅಟಾರ್ನಿ ಜನರಲ್ ಅವರು, ‘ಕೆಲವು ಕಡತಗಳು ನೇರವಾಗಿ ಸಚಿವ ಸಂಪುಟಕ್ಕೆ ಹೋಗುತ್ತವೆ. ಕೆಲವು ಕಡತಗಳು ನೇರವಾಗಿ ಪ್ರಧಾನಿ ಹೋಗುತ್ತವೆ’ ಎಂದು ಹೇಳಿದರು.

ಎಸ್‌ಐಟಿ ತನಿಖೆ ಆದೇಶ ರದ್ದುಗೊಳಿಸಿದ ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತ ರಾಷ್ಟ್ರ ಸಮಿತಿ (ಈ ಹಿಂದಿನ ಟಿಆರ್‌ಎಸ್) ಪಕ್ಷದ ಶಾಸಕರ ಖರೀದಿ ಯತ್ನ ಪ್ರಕರಣದ ತನಿಖೆಯನ್ನು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ವಹಿಸಲು ಅನುಮತಿ ನೀಡಿದ್ದ ತೆಲಂಗಾಣ ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್ ಗುರುವಾರ ರದ್ದುಗೊಳಿಸಿದೆ.

ಹೈಕೋರ್ಟ್ ಆದೇಶ ಪ್ರಶ್ನಿಸಿ ಆರೋಪಿಯೊಬ್ಬರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಮತ್ತು ವಿಕ್ರಂ ನಾಥ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠ ‘ತೆಲಂಗಾಣ ಹೈಕೋರ್ಟ್‌ನ ವಿಭಾಗೀಯ ಪೀಠವು ನವೆಂಬರ್ 15ರಂದು ನೀಡಿದ್ದ ತೀರ್ಪು ಕಾನೂನಿನಡಿ ಸಮರ್ಥನೀಯವಲ್ಲ’ ಎಂದು ಹೇಳಿತು.

‘ಮುಂದಿನ ನಾಲ್ಕು ವಾರಗಳ ಒಳಗೆ ಪ್ರಕರಣದ ವಿಚಾರಣೆ ನಡೆಸಿ’ ಎಂದು ಪೀಠವು ಹೈಕೋರ್ಟ್‌ಗೆ ತಾಕೀತು ಮಾಡಿತು.

‘ಹೈಕೋರ್ಟ್‌ನ ಏಕಸದಸ್ಯ ನ್ಯಾಯಪೀಠವು ಪ್ರಕರಣದ ವಿಚಾರಣೆಯನ್ನು ನವೆಂಬರ್ 29ರಂದು ನಿಗದಿಪಡಿಸಿದೆ. ತನ್ನ ಈ ನಿರ್ಧಾರವನ್ನು ಮರು-ಪರಿಷ್ಕರಿಸಬೇಕು. ಈ ಪ್ರಕರಣದ ವಿಚಾರದಲ್ಲಿ ಏಕಸದಸ್ಯ ನ್ಯಾಯಪೀಠ ಕೈಗೊಂಡಿರುವ ನಿಲುವು ಅಸಮರ್ಥನೀಯವಾದುದು’ ಎಂದು ನ್ಯಾಯಪೀಠ ತನ್ನ ತೀರ್ಪಿನಲ್ಲಿ ತಿಳಿಸಿದೆ.

ಪ್ರಕರಣದ ಮೂವರು ಆರೋಪಿಗಳು ಶರಣಾಗತರಾಗಬೇಕು ಎಂದು ಹೈಕೋರ್ಟ್ ನಿರ್ದೇಶಿಸಿರುವುದಕ್ಕೆ ನ್ಯಾಯಪೀಠ ಅಸಮಾಧಾನ ವ್ಯಕ್ತಪಡಿಸಿತು.

‘ಏಕಸದಸ್ಯ ನ್ಯಾಯಪೀಠವು ತನ್ನ ತೀರ್ಪಿನ ವೇಳೆ 2014ರಲ್ಲಿ ಅರ್ನೇಶ್‌ಕುಮಾರ್ ಪ್ರಕರಣದಲ್ಲಿ ಆರೋಪಿಗಳನ್ನು ಬಂಧಿಸುವಂತೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದ್ದನ್ನು ಉಲ್ಲೇಖಿಸಿದೆ. ಆ ತೀರ್ಪನ್ನು ಈ ಪ್ರಕರಣಕ್ಕೆ ಅನ್ವಯಿಸಿರುವುದು ಅಸಮಂಜಸ. ಇಂತಹ ಉಲ್ಲೇಖ ಅನಗತ್ಯವಾದುದು’ ಎಂದೂ ಪೀಠ ತಿಳಿಸಿದೆ.

‘ರಾಮಚಂದ್ರ ಭಾರತಿ ಅಲಿಯಾಸ್ ವಿ.ಕೆ.ಶರ್ಮಾ ಸೇರಿದಂತೆ ಪ್ರಕರಣದ ಇತರೆ ಆರೋಪಿಗಳು 22 ದಿನಗಳಿಂದ ಜೈಲಿನಲ್ಲಿದ್ದಾರೆ. ಅವರ ಜಾಮೀನು ಅರ್ಜಿಯನ್ನು ಸಾಧ್ಯವಾದಷ್ಟು ಬೇಗ ಪರಿಗಣಿಸಿ’ ಎಂದು ಹೈಕೋರ್ಟ್ ಏಕಸದಸ್ಯ ನ್ಯಾಯಪೀಠಕ್ಕೆ ಸೂಚಿಸಿತು.

ಸಂತೋಷ್‌ಗೆ 2ನೇ ನೋಟಿಸ್

ಹೈದರಾಬಾದ್ (ಪಿಟಿಐ): ಭಾರತ ರಾಷ್ಟ್ರ ಸಮಿತಿಯ (ಬಿಆರ್‌ಎಸ್) ಶಾಸಕರನ್ನು ಖರೀದಿಸಲು ಯತ್ನಿಸಲಾಗಿತ್ತೆಂಬ ಪ್ರಕರಣದಲ್ಲಿ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರಿಗೆ ವಿಚಾರಣೆಗೆ ಹಾಜರಾಗುವಂತೆ ವಿಶೇಷ ತನಿಖಾ ತಂಡ (ಎಸ್‌ಐಟಿ) ಗುರುವಾರ ಎರಡನೇ ನೋಟಿಸ್ ಜಾರಿ ಮಾಡಿದೆ. ಈ ಪ್ರಕರಣದಲ್ಲಿ ಸಂತೋಷ್ ಜತೆಗೆ ಹೊಸದಾಗಿ ಕೇರಳದವರಾದ ಜಗ್ಗು ಸ್ವಾಮಿ ಮತ್ತು ತುಷಾರ್ ವೆಳ್ಳಾಪಳ್ಳಿ ಹಾಗೂ ಬಿ. ಶ್ರೀನಿವಾಸ್ ಇತರ ಮೂವರನ್ನು ಆರೋಪಿಗಳನ್ನಾಗಿ ಎಸ್‌ಐಟಿ ಹೆಸರಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈವರೆಗಿನ ತನಿಖೆಯ ವಿವರವನ್ನು ಎಸ್‌ಐಟಿಯು ಎಸಿಬಿ ನ್ಯಾಯಾಲಯಕ್ಕೆ ಸಲ್ಲಿಸಿದೆ.

ತೆಲಂಗಾಣ ಹೈಕೋರ್ಟ್ ಆದೇಶದ ಮೇರೆಗೆ ಎಸ್‌ಐಟಿ ಈ ಪ್ರಕರಣದ ತನಿಖೆ ನಡೆಸುತ್ತಿದೆ. ವಿಚಾರಣೆಗೆ ಹಾಜರಾಗದೆ ಇರುವ ಸಂತೋಷ್ ಅವರಿಗೆ ಎರಡನೇ ಬಾರಿಗೆ ನೋಟಿಸ್ ಜಾರಿ ಮಾಡಲು ಹೈಕೋರ್ಟ್ ಬುಧವಾರ ನಿರ್ದೇಶಿಸಿತ್ತು. ತನಿಖಾ ತಂಡದ ಎದುರು ಬಿ.ಶ್ರೀನಿವಾಸ್ ಅವರು ವಿಚಾರಣೆಗೆ ಹಾಜರಾಗಿದ್ದಾರೆ.

‘ಇ.ಸಿ ನೇಮಕದಲ್ಲಿ ಕಾನೂನು ಉಲ್ಲಂಘನೆ’

ಒಂದನೇ ಪುಟದಿಂದ...

ಚುನಾವಣಾ ಆಯುಕ್ತರ ಅಧಿಕಾರದ ಅವಧಿ ಗರಿಷ್ಠ ಆರು ವರ್ಷ ಎಂದು ಕಾನೂನು ಹೇಳುತ್ತದೆ. ಆದರೆ, 2004ರ ನಂತರ ಯಾವ ಚುನಾವಣಾ ಆಯುಕ್ತರಿಗೂ ಆರು ವರ್ಷಗಳ ಅವಧಿ ದೊರೆತಿಲ್ಲ ಎಂದು ಪೀಠವು ಬುಧವಾರದ ವಿಚಾರಣೆ ವೇಳೆ ಹೇಳಿತ್ತು.

‘ಇದಕ್ಕೆ ಸಂಬಂಧಿಸಿದಂತೆ ಕಾನೂನು ಇದೆ. ಆ ಕಾನೂನು ಪಾಲಿಸಲು ಏನೇನು ಅಗತ್ಯವೋ ಅದನ್ನು ನೀವು ಮಾಡಬೇಕು ಎಂದು ನಾವು ನಿರೀಕ್ಷಿಸುತ್ತೇವೆ. ಆದರೆ, ಚುನಾವಣಾ ಆಯುಕ್ತರಾಗಿ ನೇಮಕ ಮಾಡಿಕೊಳ್ಳಲು ನೀವು ಆಯ್ಕೆ ಮಾಡಿದ ಅಭ್ಯರ್ಥಿಗಳೆಲ್ಲರೂ ನಿವೃತ್ತ ಅಧಿಕಾರಿಗಳೇ ಏಕೆ ಆಗಿದ್ದಾರೆ? ಬೇರೆಯವರು ಯಾಕಿಲ್ಲ? ಜ್ಯೇಷ್ಠತೆಯೇ ಅರ್ಹತೆಯಾದರೆ, 40 ಅರ್ಹ ಅಧಿಕಾರಿಗಳು ಇದ್ದರು. ಹೀಗಿದ್ದೂ ಕೇವಲ ನಾಲ್ವರನ್ನು ಏಕೆ ಆಯ್ಕೆ ಮಾಡಿದ್ದೀರಿ? ಉಳಿದ 36 ಮಂದಿಯನ್ನು ಕೈಬಿಟ್ಟಿದ್ದು ಏಕೆ’ ಎಂದು ಪೀಠವು ಸರ್ಕಾರವನ್ನು ಪ್ರಶ್ನಿಸಿತು.

‘ಅರ್ಹ ಯುವ ಅಭ್ಯರ್ಥಿಗಳ ಅವಕಾಶವನ್ನು ನೀವು ಕಸಿಯುತ್ತಿಲ್ಲವೇ? ಯಾವುದೇ ಮುಖ್ಯ ಚುನಾವಣಾ ಆಯುಕ್ತರು ಮತ್ತು ಚುನಾವಣಾ ಆಯುಕ್ತರಿಗೆ ಆರು ವರ್ಷಗಳ ಪೂರ್ಣ ಅವಧಿ ಸಿಗಬಾರದು ಎಂದು ನೀವು ಪಟ್ಟು ಹಿಡಿದು ಕೂತಿದ್ದೀರಿ. ಇದು ಕಾನೂನಿಗೆ ವಿರುದ್ಧ. ನಿಮ್ಮ ಪ್ರಕಾರ ಯಾವ ಚುನಾವಣಾ ಆಯುಕ್ತರೂ ಆರು ವರ್ಷಗಳ ಅವದಿ ಪೂರೈಸಬಾರದು. ಇದು ಕಾನೂನೇ? ಕಾನೂನನ್ನು ನೀವು ಉಲ್ಲಂಘಿಸುತ್ತಿದ್ದೀರಿ ಮತ್ತು ನಾವು ಇದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇವೆ’ ಎಂದು ಪೀಠವು ಸರ್ಕಾರಕ್ಕೆ ಹೇಳಿತು.

ಈ ಅರ್ಜಿಗಳಿಗೆ ಸಂಬಂಧಿಸಿದಂತೆ ವಾದಿಗಳು ಮತ್ತು ಪ್ರತಿವಾದಿಯಾದ ಸರ್ಕಾರಕ್ಕೆ ಲಿಖಿತ ಹೇಳಿಕೆ ನೀಡುವಂತೆ ಪೀಠವು ಸೂಚಿಸಿದೆ. ತೀರ್ಪನ್ನು ಕಾಯ್ದಿರಿಸಿದೆ.

‘ಸ್ವಲ್ಪಹೊತ್ತು ಸುಮ್ಮನಿರಿ’: ವಿಚಾರಣೆ ವೇಳೆ ಸರ್ಕಾರದ ಪರವಾಗಿ ವಾದ ಮಾಡುತ್ತಿದ್ದ ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅವರ ಮಾತನ್ನು ವಕೀಲ ಪ್ರಶಾಂತ್ ಭೂಷಣ್ ತಡೆದರು. ಪೀಠದ ಮುಂದೆ ವಿಷಯ ಪ್ರಸ್ತಾಪಿಸಲು ಯತ್ನಿಸಿದರು. ಆಗ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ವೆಂಕಟರಮಣಿ, ‘ನೀವು ಸ್ವಲ್ಪಹೊತ್ತು ಸುಮ್ಮನಿರಿ’ ಎಂದು ಪ್ರಶಾಂತ್ ಭೂಷಣ್‌ಗೆ ತಾಕೀತು ಮಾಡಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಕಿವಿಗೊಡುವ ಸದ್ಬುದ್ಧಿ ಇದ್ದರೆ ನಾವು ನಮ್ಮ ಜೀವನದಲ್ಲಿ ಎಷ್ಟೋ ಅನಾಹುತಗಳನ್ನು ತಪ್ಪಿಸಬಹುದು.
–ಪೂರ್ಣಚಂದ್ರ ತೇಜಸ್ವಿ

ರಾಜೀವ್ ಹಂತಕರ ಬಿಡುಗಡೆ ಸಹಜನ್ಯಾಯಕ್ಕೆ ಪೂರಕ ನಡೆ

ರಾಜೀವ್ ಗಾಂಧಿ ಅವರ ಹತ್ಯೆ ಪ್ರಕರಣದಲ್ಲಿ ಶಿಕ್ಷೆಗೊಳಗಾಗಿದ್ದ ನಳಿನಿ ಶ್ರೀಹರನ್ ಸೇರಿದಂತೆ ಆರು ಮಂದಿ ಅಪರಾಧಿಗಳ ಬಿಡುಗಡೆಗೆ ಕಳೆದ ವಾರ ಸುಪ್ರೀಂ ಕೋರ್ಟ್ ಹೊರಡಿಸಿದ ಆದೇಶವು ಸಹಜ ನ್ಯಾಯವನ್ನು ಎತ್ತಿ ಹಿಡಿಯುವಂಥದ್ದು. ಈ ಅಪರಾಧಿಗಳ ಬಿಡುಗಡೆಗೆ ಕೇಂದ್ರ ಸರ್ಕಾರ ಮಾತ್ರವಲ್ಲದೆ ಹಲವು ಕಡೆಗಳಿಂದ ತೀವ್ರ ವಿರೋಧವಿತ್ತು ಎನ್ನುವುದು ಇಲ್ಲಿ ಗಮನಾರ್ಹ. ಬಿಡುಗಡೆಯ ಆದೇಶವನ್ನು ಹೊರಡಿಸುವ ಮುನ್ನ ತನ್ನ ವಾದ ಮಂಡನೆಗೆ ಸಮರ್ಪಕ ಕಾಲಾವಕಾಶವನ್ನೇ (ಕೋರ್ಟ್) ನೀಡಲಿಲ್ಲ ಎಂದು ಹೇಳಿರುವ ಸರ್ಕಾರ, ಈಗ ಆದೇಶದ ಕುರಿತು ಮರುಪರಿಶೀಲಿಸುವಂತೆ ಕೋರ್ಟ್‌ಗೆ ಅರ್ಜಿಯನ್ನೂ ಸಲ್ಲಿಸಿದೆ. ಅಲ್ಲದೆ, ಈ ಪ್ರಕರಣದ ಕುರಿತು ನಿರ್ಧಾರ ತೆಗೆದುಕೊಳ್ಳುವಾಗ ಸಹಜ ನ್ಯಾಯದ ತತ್ವಗಳು ಪಾಲನೆಯಾಗಿಲ್ಲ ಎಂದೂ ದೂರಿದೆ. ಕೋರ್ಟ್‌ನ ನಿರ್ಧಾರವನ್ನು ಕಾಂಗ್ರೆಸ್ ಪಕ್ಷ ಕೂಡ ಟೀಕಿಸಿದೆ. ಅಪರಾಧಿಗಳ ಬಿಡುಗಡೆಯ ಪರವಾಗಿದ್ದ ಗಾಂಧಿ ಕುಟುಂಬದ ನಿಲುವಿಗೂ ಆ ಪಕ್ಷವು ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸಿದೆ. ರಾಜೀವ್ ಹತ್ಯೆಯಲ್ಲಿ ಭಾಗಿಯಾದ ಅಪರಾಧಿಗಳನ್ನು ಬಿಡುಗಡೆ ಮಾಡುವಂತೆ ತಮಿಳುನಾಡು ಸರ್ಕಾರವು ರಾಜ್ಯಪಾಲರಿಗೆ ಶಿಫಾರಸು ಮಾಡಿದ್ದುದು ಮತ್ತು ಇನ್ನೊಬ್ಬ ಅಪರಾಧಿ ಎ.ಜಿ. ಪೇರ್ ಅರಿವಾಳನ್‌ನನ್ನು ಈಗಾಗಲೇ ಬಿಡುಗಡೆ ಮಾಡಿರುವುದು– ಈ ಎರಡೂ ಸಂಗತಿಗಳನ್ನು ಗಣನೆಗೆ ತೆಗೆದುಕೊಂಡ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಬಿ.ವಿ. ನಾಗರತ್ನ ಅವರಿದ್ದ ಪೀಠ ಬಿಡುಗಡೆಯ ಆದೇಶವನ್ನು ಹೊರಡಿಸಿದೆ.

ನ್ಯಾಯಾಲಯವು ಮಾನವೀಯ ನೆಲೆಯಲ್ಲಿ ಈ ಮಹತ್ವದ ನಿರ್ಧಾರವನ್ನು ತೆಗೆದುಕೊಂಡಿದೆ

ಅಪರಾಧಿಗಳ ನಡತೆಯಲ್ಲಿ ಆಗಿರುವ ಸುಧಾರಣೆಯ ದೃಷ್ಟಿಕೋನದಿಂದ ಈ ಬಿಡುಗಡೆಯನ್ನು ನೋಡಬೇಕೇ ವಿನಾ ಪ್ರತೀಕಾರದ ಮನೋಭಾವದಿಂದಲ್ಲ. ಅಪರಾಧ ನ್ಯಾಯ ವ್ಯವಸ್ಥೆ ಕೂಡ ಇದನ್ನೇ ಹೇಳುತ್ತದೆ. ಇಂತಹ ಸನ್ನಿವೇಶಗಳಲ್ಲಿ ಇಡೀ ವ್ಯವಸ್ಥೆಯು ಮಾನವೀಯತೆಯಿಂದ ನಡೆದುಕೊಳ್ಳಬೇಕಿರುವುದು ಅಪೇಕ್ಷಣೀಯ. ಅಪರಾಧಿಗಳು ಈಗಾಗಲೇ 30 ವರ್ಷಗಳವರೆಗೆ ಜೈಲಿನಲ್ಲೇ ಕಾಲ ಕಳೆದಿದ್ದಾರೆ ಮತ್ತು ಬಂದಿಯಾಗಿದ್ದಾಗ, ಸ್ವತಃ ಕೋರ್ಟ್ ಗಮನಿಸಿರುವಂತೆ, ಅವರೆಲ್ಲ ತೃಪ್ತಿಕರವಾದಂತಹ ಸನ್ನಡತೆಯನ್ನೇ ತೋರಿದ್ದಾರೆ. ಜೈಲಿನಲ್ಲಿ ಇದ್ದುಕೊಂಡೇ ಅವರು ಸ್ನಾತಕೋತ್ತರ ಮತ್ತು ಡಿಪ್ಲೊಮಾ ಪದವಿಗಳನ್ನೂ ಪಡೆದಿದ್ದಾರೆ. ಜೈಲುವಾಸ ಅವರ ಜೀವನದಲ್ಲಿ ಸುಧಾರಣೆಯನ್ನು ತಂದು, ಸಮಾಜದ ಇತರ ನಾಗರಿಕರಂತೆ ಬದುಕುವ ಮನೋಭಾವವನ್ನು ಅವರೂ ಬೆಳೆಸಿಕೊಂಡಿದ್ದಾರೆ ಎಂದಾದರೆ ಅವರಿಗೆ ಅಂತಹ ಅವಕಾಶವು ಸಿಗಲೇಬೇಕು. ನ್ಯಾಯವ್ಯವಸ್ಥೆಯ ಒಟ್ಟು ಉದ್ದೇಶವೇ ಇದಾಗಿದೆ. ಹಲವಾರು ಆರೋಪಿಗಳನ್ನು ಖುಲಾಸೆಗೊಳಿಸಿರುವುದು, ಮರಣದಂಡನೆಯನ್ನು ಪರಿವರ್ತಿಸಿರುವುದು ಮತ್ತು ಈಗ ಈ ಅಪರಾಧಿಗಳನ್ನು ಬಿಡುಗಡೆ ಮಾಡಿರುವುದು ಎಲ್ಲವೂ ಕಾನೂನು ಬದ್ಧವಾದ ಹಾಗೂ ಈ ಹಿಂದೆ ಅನುಸರಿಸಿದ ಪ್ರಕ್ರಿಯೆಗಳಿಗೆ ಪೂರಕವಾಗಿಯೇ ನಡೆದಂಥವು. ಅಪರಾಧಿಗಳ ಬಿಡುಗಡೆಯ ಈ ಆದೇಶವು ಮುಂದೆ ಕೆಟ್ಟ ನಿದರ್ಶನವಾಗಿ ಉಳಿಯಲಿದೆ ಎಂಬ ಕಳವಳವೂ ವ್ಯಕ್ತವಾಗಿದೆ. ಆದರೆ, ವಾಸ್ತವವಾಗಿ ಇದನ್ನೊಂದು ಒಳ್ಳೆಯ ನಿದರ್ಶನವಾಗಿ ಕಾಣುವ ಅಗತ್ಯ ಹೆಚ್ಚಿದೆ. ಏಕೆಂದರೆ, ಇಲ್ಲಿ ಪರಿಗಣಿಸಿದ ಸುಧಾರಣೆ ಮತ್ತು ಸನ್ನಡತೆ ಎರಡೂ ನ್ಯಾಯವ್ಯವಸ್ಥೆಯ ಉತ್ಕೃಷ್ಟ ಅಳತೆಗೋಲುಗಳೇ ಆಗಿವೆ. ಆದರೆ, ಬಿಡುಗಡೆಯ ಇಂತಹ ನಿದರ್ಶನ ಮುಂದೆ ದುರ್ಬಳಕೆಗೆ ಬಳಕೆಯಾಗಬಾರದು ಎಂಬುದರಲ್ಲಿ ಎರಡು ಮಾತಿಲ್ಲ.

ಪ್ರಕರಣದ ವಿಚಾರಣೆಯಲ್ಲಿ ತನ್ನನ್ನೂ ಒಬ್ಬ ಕಕ್ಷಿದಾರನನ್ನಾಗಿ ಪರಿಗಣಿಸಿಲ್ಲ ಎನ್ನುವ ಕೇಂದ್ರ ಸರ್ಕಾರದ ವಾದದಲ್ಲಿ ಯಾವುದೇ ಹುರುಳಿಲ್ಲ. ಏಕೆಂದರೆ, ತಮಿಳುನಾಡು ಸರ್ಕಾರದಿಂದ ಶಿಫಾರಸು ಬಂದಾಗ ರಾಜ್ಯಪಾಲರು ಯಾವುದೇ ನಿರ್ಧಾರ ತೆಗೆದುಕೊಳ್ಳದೆ ಅದನ್ನು ರಾಷ್ಟ್ರಪತಿ ಪರಿಶೀಲನೆಗೆ ಕಳಿಸಿದರು. ಈ ಶಿಫಾರಸಿಗೆ ಸಂಬಂಧಿಸಿದಂತೆ ರಾಷ್ಟ್ರಪತಿ ಸಹ ಯಾವುದೇ ನಿರ್ಧಾರ ಕೈಗೊಳ್ಳದೆ ಸುಮ್ಮನೆ ಕುಳಿತರು. ಈ ಕಾಲಹರಣಕ್ಕೆ ಕೇಂದ್ರ ಸರ್ಕಾರವೇ ಕಾರಣವಾಗಿದ್ದು, ರಾಜ್ಯಪಾಲರ ಧೋರಣೆಯನ್ನು ಕೂಡ ಅದು ಕೋರ್ಟ್‌ನಲ್ಲಿ ಸಮರ್ಥಿಸಿಕೊಂಡಿದೆ. ಎಲ್ಲವನ್ನೂ ಕೂಲಂಕಷವಾಗಿ ಪರಿಶೀಲಿಸಿಯೇ ಕೋರ್ಟ್ ತೀರ್ಪು ನೀಡಿದೆ. ಹೀಗಾಗಿ ತನ್ನನ್ನು ಕಕ್ಷಿದಾರನನ್ನಾಗಿ ಪರಿಗಣಿಸಿಲ್ಲ ಎನ್ನುವ ಕೇಂದ್ರದ ವಾದವು ಅರ್ಥ ಕಳೆದುಕೊಂಡಿದೆ. ‘ಭಯೋತ್ಪಾದನೆಯನ್ನು ಕಾಂಗ್ರೆಸ್ ಸಮರ್ಥಿಸುತ್ತಿದೆ’ ಎಂಬ ಟೀಕೆ ಬಿಜೆಪಿಯಿಂದ ಬಂದೀತು ಎನ್ನುವ ಭಯದಿಂದ ಕಾಂಗ್ರೆಸ್‌ನ ಪ್ರತಿಕ್ರಿಯೆ ಬಂದಂತಿದೆ. ಆದರೆ ಕೋರ್ಟ್ ಮಾತ್ರ ಮಾನವೀಯ ನೆಲೆಯಲ್ಲಿ ಈ ನಿರ್ಧಾರವನ್ನು ತೆಗೆದುಕೊಂಡಿದೆ.

ಈ ಸೇನಾ ದಂಡನಾಯಕನ ಜೀವನಗಾಥೆಯು ರಾಷ್ಟ್ರೀಯತೆಯ ಭಾವ ತುಂಬಲು ನೆರವಾಗಲಿದೆ

ಲಾಚಿತ್: ಚಿರಸ್ಥಾಯಿ ನೆನಪುಗಳು

ವಿಶ್ಲೇಷಣೆ

ಹಿಮಂತ ಬಿಸ್ವ ಶರ್ಮಾ

1982ನೆಯ ಇಸವಿ ನನಗೆ ಸ್ಪಷ್ಟವಾಗಿ ನೆನಪಿದೆ. ನಾನು ಏಳನೆಯ ತರಗತಿಯಲ್ಲಿದ್ದೆ. ಇತಿಹಾಸ ಪಠ್ಯಪುಸ್ತಕದಲ್ಲಿ ಇದ್ದ, ಮಹಾವೀರ ಲಾಚಿತ್ ಬರ್ಫುಕನ್ ಕುರಿತ ಅಧ್ಯಾಯವನ್ನು ಆಗ ಓದಿದ್ದೆ. ಲಾಚಿತ್ ಅವರ ಮಿಲಿಟರಿ ಶೌರ್ಯದ ಬಗ್ಗೆ ತಿಳಿದುಕೊಂಡಿದ್ದು ನನ್ನ ಮೇಲೆ ಗಾಢ ಪ್ರಭಾವ ಬೀರಿತು. ನಾನು ಆ ಅಧ್ಯಾಯವನ್ನು ಹಲವು ಬಾರಿ ಓದಿದ್ದೆ. ಮತ್ತೆ ಮತ್ತೆ ಓದಿದಂತೆಲ್ಲ ಅವರ ಸಾಹಸದ ಚಿತ್ರಣ ನನ್ನಲ್ಲಿ ಹೆಚ್ಚು ಸ್ಫುಟವಾಯಿತು.

ನಾನು ದೊಡ್ಡವನಾಗಿ, ಇತಿಹಾಸಕ್ಕೆ ಸಂಬಂಧಿಸಿದ ಹೆಚ್ಚಿನ ಪುಸ್ತಕಗಳನ್ನು ಓದಿದಂತೆಲ್ಲ ಕಣ್ಣಿಗೆ ರಾಚುವ ವ್ಯತ್ಯಾಸವೊಂದು ಗೊತ್ತಾಯಿತು. ಮೊಘಲ್ ಸಾಮ್ರಾಜ್ಯವನ್ನು ವೈಭವೀಕರಿಸುವ ದೊಡ್ಡ ಅಧ್ಯಾಯಗಳು ಕಾಣುತ್ತಿದ್ದವು. ಆದರೆ, ಮೊಘಲ್ ಸೈನ್ಯವು ಈಶಾನ್ಯ ಭಾರತದ ಕಡೆ ಲಗ್ಗೆ ಇಡುವುದನ್ನು ಯಶಸ್ವಿಯಾಗಿ ತಡೆದ, ಭಾರತದ ಅತ್ಯಂತ ಧೈರ್ಯಶಾಲಿ ದಂಡನಾಯಕರ ಪೈಕಿ ಒಬ್ಬರಾದ ಲಾಚಿತ್ ಕುರಿತು ಬಹಳ ಕಡಿಮೆ ಉಲ್ಲೇಖವಿತ್ತು. ಇದು ನನ್ನಲ್ಲಿ ಪ್ರಶ್ನೆಯೊಂದನ್ನು ಮೂಡಿಸಿತು. ನಾವು ಒಂದು ರಾಷ್ಟ್ರವಾಗಿ ಸ್ಟಾಕ್‌ಹೋಮ್ ಸಿಂಡ್ರೋಮ್‌ಗೆ ಬಲಿಯಾದೆವೇ? ಆಕ್ರಮಣಕಾರರನ್ನು ನಮ್ಮವರು ಎಂದು ಅಪ್ಪಿಕೊಳ್ಳಲಿಕ್ಕಾಗಿ ನಮ್ಮ ಹೀರೊಗಳನ್ನು ನಿರ್ಲಕ್ಷಿಸುವುದನ್ನು ಸಹಜವಾಗಿಸಲು ಸಿದ್ಧರಾದೆವಾ?

ಅಂದು ಇತಿಹಾಸದ ಪುಸ್ತಕಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ, ವೈಶಿಷ್ಟ್ಯವೊಂದು ಕಾಣಿಸಿತು. ಅಸ್ಸಾಂ ಕುರಿತ ಉಲ್ಲೇಖವು 200 ವರ್ಷಗಳಿಗಿಂತ ಹಿಂದಕ್ಕೆ ಹೋಗುತ್ತಿರಲಿಲ್ಲ. ಅಂದರೆ, ಬ್ರಿಟಿಷರು ಭಾರತವನ್ನು ನಿಯಂತ್ರಣಕ್ಕೆ ತೆಗೆದುಕೊಂಡ ನಂತರವೇ ಅಸ್ಸಾಂ ಮತ್ತು ಈಶಾನ್ಯ ರಾಜ್ಯಗಳ ಉದಯವಾಯಿತು ಎಂಬ ತಪ್ಪು ಭಾವನೆಯನ್ನು ಅದು ಒಂದು ತಲೆಮಾರಿನ ವಿದ್ಯಾರ್ಥಿಗಳಿಗೆ ನೀಡುತ್ತಿತ್ತು. ದೇಶದ ಈಶಾನ್ಯ ರಾಜ್ಯಗಳನ್ನು, ಅಲ್ಲಿನ ಜನರನ್ನು ಹಾಗೂ ಅವರ ಸಂಸ್ಕೃತಿಯನ್ನು ದೂರದ ಗಡಿ ಪ್ರದೇಶದ್ದೆಂಬಂತೆ ಮಾತ್ರ ಕಂಡಿದ್ದಿದೆ. ನಮ್ಮ ಇತಿಹಾಸವನ್ನು ಹೇಳಿದ ಬುದ್ಧಿಜೀವಿಗಳು ಹಾಗೆ ಕಾಣುವುದರ ಮುಂದುವರಿದ ಭಾಗ ಎಂದು ನನ್ನಲ್ಲಿದ್ದ ಆತಂಕವನ್ನು ಇದು ಸ್ಪಷ್ಟಪಡಿಸಿತು.

ಲಾಚಿತ್ ಜನಿಸಿ 400 ವರ್ಷಗಳು ಆಗಿರುವ ಈ ಸಂದರ್ಭದಲ್ಲಿ ಅವರ ಶೌರ್ಯದ ಬಗ್ಗೆ ಹೇಳಬೇಕು. ಅಸ್ಸಾಂ ಸಾಮ್ರಾಜ್ಯದ ಕೆಲವು ಭಾಗಗಳನ್ನು ಮೊಘಲರು ಆಕ್ರಮಿಸಿಕೊಂಡಿದ್ದ ಹೊತ್ತಿನಲ್ಲಿ ರಾಜ ಚಕ್ರಧ್ವಜ ಸಿಂಘ, ಅಹೋಂ ಸೇನೆಯ ಪ್ರಧಾನ ದಂಡನಾಯಕ ಆಗಿ ಲಾಚಿತ್ ಅವರನ್ನು ನೇಮಿಸಿದ. ಮೊಘಲರ ನಿರ್ದೇಶನಗಳನ್ನು ಧಿಕ್ಕರಿಸುವ ತೀರ್ಮಾನ ಮಾಡಿದ್ದ ಚಕ್ರಧ್ವಜ, ಗೌರವಾರ್ಥವಾಗಿ ಔರಂಗಜೇಬ ಕಳುಹಿಸಿದ್ದ ನಿಲುವಂಗಿ ತೊಡಲು ನಿರಾಕರಿಸಿದ್ದ. ಹೊರಗಿನವರಿಗೆ ಅಡಿಯಾಳಾಗಿ ಇರುವುದಕ್ಕಿಂತ ಸಾವು ಉತ್ತಮ ಎಂದು ಹೇಳಿದ್ದ. ಮೊಘಲರನ್ನು ಸಾಮ್ರಾಜ್ಯದಿಂದ ಹೊರಹಾಕುವ ಹೊಣೆ ಲಾಚಿತ್ ಮೇಲಿತ್ತು. ಅಧೀರರಾಗಿದ್ದ ಅಹೋಂ ಸೈನಿಕರು ತಮ್ಮಲ್ಲಿ ಸ್ಫೂರ್ತಿ ತುಂಬಬಲ್ಲ ನಾಯಕನಿಗೆ ಹಾತೊರೆಯುತ್ತಿದ್ದರು. ಸೈನಿಕರಲ್ಲಿ ಶಕ್ತಿ ತುಂಬಿದ ಲಾಚಿತ್, ಮೊಘಲ್ ಸೇನೆ ಮಂಡಿಯೂರುವಂತೆ ಮಾಡಿದರು.

ಐತಿಹಾಸಿಕ ಸರೈಘಾಟ್ ಯುದ್ಧದಲ್ಲಿ, ಕಡಿಮೆ ಸಂಪನ್ಮೂಲ ಹಾಗೂ ಕಡಿಮೆ ಸೈನಿಕರು ಇದ್ದರೂ, ತರಬೇತಿ ಪಡೆದ ಪೂರ್ಣಾವಧಿ ಸೈನ್ಯ ಇಲ್ಲದಿದ್ದರೂ ಲಾಚಿತ್ ಅವರು ರಾಮ್ ಸಿಂಗ್ ನೇತೃತ್ವದ ಶಕ್ತಿಶಾಲಿ ಮೊಘಲ್ ಸೈನ್ಯವನ್ನು ಸೋಲಿಸಿದರು. ಯುದ್ಧದಲ್ಲಿ ಶಕ್ತಿಯೆಂದರೆ, ಸೈನಿಕರ ಸಂಖ್ಯೆ ಹೆಚ್ಚಿರುವುದು ಮಾತ್ರವೇ ಅಲ್ಲ. ಬದಲಿಗೆ, ಇರುವ ಸಂಪನ್ಮೂಲಗಳನ್ನು ನ್ಯಾಯ ಸಮ್ಮತವಾಗಿ ಬಳಸಿಕೊಂಡು ಅಡ್ಡಿಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸಿಕೊಳ್ಳುವುದು ಶಕ್ತಿ ಎಂದು ತೋರಿಸಿದರು. ತಮ್ಮ ಧೈರ್ಯ, ದೃಢವಾಗಿ ನಿಲ್ಲುವ ಸ್ವಭಾವ ಹಾಗೂ ತಮ್ಮ ನಾಡನ್ನು ಸ್ವತಂತ್ರವಾಗಿಯೇ ಇರಿಸಬೇಕು ಎಂಬ ಹಟದ ನೆರವಿನಿಂದ ಅವರು ಈ ಗೆಲುವನ್ನು ಸಾಧ್ಯವಾಗಿಸಿಕೊಂಡರು.

ಯುದ್ಧತಂತ್ರದ ವಿಚಾರವಾಗಿ ಹೇಳುವುದಾದರೆ, ಯುದ್ಧದ ಸ್ಥಳ ಹಾಗೂ ಸಮಯವನ್ನು ತಮ್ಮ ಅಗತ್ಯಕ್ಕೆ ಅನುಗುಣವಾಗಿ ಬದಲಾವಣೆ ಮಾಡಿಕೊಂಡಿದ್ದು ಲಾಚಿತ್ ಅವರ ಅತ್ಯಂತ ಚುರುಕಿನ ತೀರ್ಮಾನವಾಗಿತ್ತು. ಅತಿಯಾದ ಆತ್ಮವಿಶ್ವಾಸದಲ್ಲಿ ಇದ್ದ ಹಾಗೂ ತಾಳ್ಮೆ ಕಳೆದುಕೊಂಡಿದ್ದ ಔರಂಗಜೇಬ ಹತಾಶೆಗೆ ಒಳಗಾಗಿ, ತನ್ನ ಸೈನ್ಯವನ್ನು ಬಯಲು ಪ್ರದೇಶದಿಂದ ನದಿಯ ಸಮೀಪಕ್ಕೆ ತರುವಂತೆ ಲಾಚಿತ್ ಮಾಡಿದರು. ಏಕೆಂದರೆ, ನೌಕಾ ಯುದ್ಧದಲ್ಲಿ ಮೊಘಲರಿಗೆ ನೈಪುಣ್ಯವಿರಲಿಲ್ಲ. ಅಲ್ಲದೆ, ಸಾಮ್ರಾಜ್ಯದ ವ್ಯಾಪ್ತಿಯಲ್ಲಿ ಸಮುದ್ರ ಪ್ರವೇಶಿಸುವ ಅವಕಾಶ ಇಲ್ಲದಿದ್ದರೂ ಶಕ್ತಿಯುತ ನೌಕಾಪಡೆಯನ್ನು ಕಟ್ಟಿದ ವಿಶ್ವದ ಏಕೈಕ ದಂಡನಾಯಕ ಬಹುಶಃ ಲಾಚಿತ್ ಮಾತ್ರ ಇರಬೇಕು. ಬ್ರಹ್ಮಪುತ್ರ ನದಿಯ ಬಲಿಷ್ಠ ಹರಿವಿನಿಂದ ಯುದ್ಧನೌಕೆಗಳನ್ನು ಅಡಗಿಸುವುದಕ್ಕೆ ಗುವಾಹಟಿಯ ದಿಘಲಿಪುಕುರಿ ಪ್ರದೇಶವನ್ನು ಲಾಚಿತ್ ಚಾಕಚಕ್ಯತೆಯಿಂದ ಬಳಸಿಕೊಂಡರು. ಮೊಘಲರೊಂದಿಗೆ ಹೋರಾಡಲು ಇಲ್ಲಿ ಯುದ್ಧನೌಕೆಗಳಿಗೆ ಫಿರಂಗಿಗಳನ್ನು ಅಳವಡಿಸಲಾಗುತ್ತಿತ್ತು. ಈ ಒಂದು ಸರಳ ಶೋಧವು ಆಕ್ರಮಣಕಾರರಿಗೆ ಸರೈಘಾಟ್‌ನಲ್ಲಿ ದುಬಾರಿಯಾಗಿ ಪರಿಣಮಿಸಿತು. ಇಲ್ಲಿ ಬಹಳ ಕಿರಿದಾಗಿ ಹರಿಯುವ ಬ್ರಹ್ಮಪುತ್ರ ನದಿ ನೌಕಾದಾಳಿಗೆ ಹೇಳಿಮಾಡಿಸಿದಂತಿದೆ.

ಇದು ಲಾಚಿತ್ ಅವರನ್ನು ರಾಷ್ಟ್ರೀಯ ಹೀರೊ ಆಗಿಸುತ್ತದೆ. ಅವರು ನೆನಪುಗಳಲ್ಲಿ ಹಾಗೂ ಭಾರತದ ಇತಿಹಾಸದ ಪುಟಗಳಲ್ಲಿ ಚಿರಸ್ಥಾಯಿಯಾಗಿ ನಿಂತಿದ್ದಾರೆ. ಸರೈಘಾಟ್ ಯುದ್ಧವು ಮಧ್ಯಯುಗದ ಇನ್ನೊಂದು ಐತಿಹಾಸಿಕ ಯುದ್ಧವಷ್ಟೇ ಅಲ್ಲ. ಇದು ಅಸ್ಸಾಂನ ಮತ್ತು ಈಶಾನ್ಯ ಭಾರತದ ಅಸ್ಮಿತೆ, ನಾಗರಿಕತೆಯು ಮೊಘಲರ ಅಧೀನಕ್ಕೆ ಒಳಗಾಗುವುದನ್ನು ತಡೆದ ವಿಜಯ. ಮಧ್ಯಯುಗದ ಆರಂಭದಿಂದಲೂ ಲೂಟಿ ಮಾಡಲು ಆಕ್ರಮಣ ನಡೆಸಿದವರಿಂದ ನಾಗರಿಕತೆಯ ಮೌಲ್ಯಗಳನ್ನು ರಕ್ಷಿಸಿದ, ಭಾರಿ ಯುದ್ಧಗಳಲ್ಲಿ ಸೆಣಸಿದ ರಾಣಾ ಪ್ರತಾಪ್, ಶಿವಾಜಿ ಅವರಂತಹ ಹೋರಾಟಗಾರರು ಮತ್ತು ಧೈರ್ಯಶಾಲಿಗಳು ಭಾರತದ ಇತಿಹಾಸದಲ್ಲಿ ಬಹಳ ಮಂದಿ ಇದ್ದಾರೆ. ಇಂತಹ ಧೈರ್ಯಶಾಲಿ ಹೋರಾಟಗಾರರ ಇತಿಹಾಸ ಮತ್ತು ನೆನಪುಗಳು ಬ್ರಿಟಿಷರ ಆಡಳಿತದ ವಿರುದ್ಧ ಭಾರತದಲ್ಲಿ ನಡೆದ ದೀರ್ಘಾವಧಿಯ ಹೋರಾಟದಲ್ಲಿ ಭಾರತೀಯರಿಗೆ ಸ್ಫೂರ್ತಿ ನೀಡಿವೆ.



ಸರೈಘಾಟ್ ಯುದ್ಧದ ಮಹತ್ವದ ಹಂತವೊಂದರಲ್ಲಿ ಲಾಚಿತ್ ಅವರು ಕಾಯಿಲೆಗೆ ತುತ್ತಾದರು ಎಂದು ಇತಿಹಾಸದ ದಾಖಲೆಗಳು ಹೇಳುತ್ತವೆ. ಆಗ ಅವರಿಗೆ ಯುದ್ಧರಂಗಕ್ಕೆ ತೆರಳದಂತೆ ಸಲಹೆ ನೀಡಲಾಯಿತು. ಆದರೆ, ತಾವು ಅಲ್ಲಿಗೆ ಹೋಗದಿದ್ದರೆ ಸೈನ್ಯದ ಸ್ಫೂರ್ತಿಗೆ ಧಕ್ಕೆ ಬರುತ್ತದೆ ಎಂಬುದನ್ನು ಲಾಚಿತ್ ಅರಿತುಕೊಂಡರು. ‘ನನ್ನ ದೇಶವಾಸಿಗಳು ಆಕ್ರಮಣದ ಕಾರಣದಿಂದಾಗಿ ತೊಂದರೆಗೆ ಒಳಗಾಗಿರುವಾಗ, ನನ್ನ ಸೈನ್ಯವು ಹೋರಾಟ ನಡೆಸುತ್ತ ತನ್ನ ಜೀವವನ್ನು ಅರ್ಪಿಸುತ್ತಿರುವಾಗ, ಕೇವಲ ಅನಾರೋಗ್ಯದ ಕಾರಣ ಹೇಳಿ ವಿಶ್ರಾಂತಿ ತೆಗೆದುಕೊಳ್ಳುವ ಬಗ್ಗೆ ನಾನು ಆಲೋಚನೆ ಮಾಡುವುದಾದರೂ ಹೇಗೆ? ನನ್ನ ದೇಶವೇ ತೊಂದರೆಯಲ್ಲಿ ಇರುವಾಗ ನಾನು ನನ್ನ ಪತ್ನಿ, ಮಕ್ಕಳ ಬಳಿ ಹೋಗುವ ಆಲೋಚನೆ ಮಾಡುವುದು ಹೇಗೆ’ ಎಂದು ಹೇಳಿದ್ದರಂತೆ. ಲಾಚಿತ್ ಹೀಗಿದ್ದರು.

ಅತ್ಯಂತ ಸವಾಲಿನ ಯುದ್ಧಗಳನ್ನು ಗೆಲ್ಲುವ ಧೈರ್ಯ ಬರುವುದು ಭಾರತ ಮಾತೆಯ ಕುರಿತು ಷರತ್ತುರಹಿತ ಪ್ರೀತಿ ಇದ್ದಾಗ. ಲಾಚಿತ್ ಅವರ ಜೀವನದಿಂದ ನಾನು ಪಡೆಯುವ ಅತಿದೊಡ್ಡ ಪ್ರೇರಣೆಗಳಲ್ಲಿ ಇದೂ ಒಂದು. ದೇಶ ಮೊದಲು ಹಾಗೂ ಉಳಿದಿದ್ದೆಲ್ಲವೂ ನಂತರ– ಕುಟುಂಬ ಮತ್ತು ತಾನು ಎಂಬ ಭಾವ ಕೂಡ– ಎನ್ನುವ ತತ್ವಕ್ಕೆ ನಿಜವಾಗಿಯೂ ಬದ್ಧರಾದಾಗ ಯಾವುದೇ ಪ್ರಮಾಣದ ಬೆದರಿಕೆಯನ್ನೂ ತೊಡೆದುಹಾಕುವ ಅದಮ್ಯ ಧೈರ್ಯ ಹುಟ್ಟುತ್ತದೆ.

ಅಸ್ಸಾಂ ಇಂದು ಕವಲುದಾರಿಯಲ್ಲಿ ನಿಂತಿದೆ. ನಮ್ಮ ರಾಜ್ಯ ಭಾರಿ ಬದಲಾವಣೆಯ ಹೊಸ್ತಿಲಲ್ಲಿ ನಿಂತಿದೆ. ಸರೈಘಾಟ್ ಯುದ್ಧಕ್ಕೆ ಹೋಲಿಸಬಹುದಾದ ಹಲವು ಯುದ್ಧಗಳನ್ನು ಸೆಣಸಬೇಕಿದೆ. ಮೂಲಭೂತವಾದ, ಇಸ್ಲಾಮಿಕ್ ಭಯೋತ್ಪಾದನೆ, ಮಾದಕ ಪದಾರ್ಥಗಳ ಸಮಸ್ಯೆ, ಜನಸಂಖ್ಯೆಯ ಸ್ವರೂಪದಲ್ಲಿ ಬದಲಾವಣೆ, ಅಕ್ರಮ ವಲಸೆಯಂತಹ ಸಮಸ್ಯೆಗಳ ಮೇಲೆ ಜಯ ಸಾಧಿಸಬೇಕಿದೆ. ಗೆಲುವು ಸಾಧಿಸಲು ಲಾಚಿತ್ ಅವರಂತಹ ಹಲವರು ಬೇಕು. ಅಂತಹ ಹಲವರು ಬರುತ್ತಾರೆ ಎಂಬುದು ನನ್ನಲ್ಲಿನ ವಿಶ್ವಾಸ.

ದೇಶದ ಮಹಾ ದಂಡನಾಯಕರಲ್ಲಿ ಒಬ್ಬರಾದ ಲಾಚಿತ್ ಅವರ ಜೀವನಗಾಥೆಯನ್ನು ಜನರ ಆಂದೋಲನವನ್ನಾಗಿ ಆಚರಿಸುವ ನಮ್ಮ ಯತ್ನವು ಮುಂದಿನ ತಲೆಮಾರಿನವರಲ್ಲಿ ರಾಷ್ಟ್ರೀಯತೆಯ ಭಾವ ಹಾಗೂ ಧೈರ್ಯವನ್ನು ತುಂಬುವಲ್ಲಿ ದೊಡ್ಡ ಯಶಸ್ಸು ಕಾಣುತ್ತದೆ.

ಲೇಖಕ: ಅಸ್ಸಾಂ ಮುಖ್ಯಮಂತ್ರಿ

ಚುರುಮುರಿ

ಫ್ರಿಜ್ಜು, ಕುಕ್ಕರು!

• ಬಿ.ಎನ್.ಮಲ್ಲೇಶ್

‘ಹಲೋ... ಏನಮ್ಮಾ ಸೊಸೆ, ಹೇಗಿದೀಯ?’

‘ಓ... ಏನತ್ತೆ ಇದ್ದಕ್ಕಿದ್ದಂತೆ ನಮ್ಮನ್ನ ನೆನಪಿಸ್ಕೊಂಡಿದೀರಾ? ಇವತ್ತೇನೋ ಕಾದಿದೆ ಅನ್ಸುತ್ತೆ...’

‘ಅದು ಆಮೇಲೆ ಹೇಳ್ತೀನಿ, ಎಲ್ರೂ ಹೇಗಿದೀರಾ?’

‘ನೀವು ನಮ್ಮನ್ನ ಮನೆಯಿಂದ ಹೊರಗಾಕಿದ ಮೇಲೆ ಎಲ್ರೂ ತಣ್ಣಗಿದೀವಿ. ಅಲ್ಲಿ ಡೆಲ್ಲೀಲಿ ಎಲ್ರೂ ಆರಾಮಾ?’

‘ನೀನು ಹೋದ ಮೇಲೆ ಇಲ್ಲಿ ನಾವೂ ತಣ್ಣಗಿದೀವಿ. ಡೆಲ್ಲೀಲೀಗ ಭಯಂಕರ ಚಳಿ, ವಾಯುಮಾಲಿನ್ಯ ಬೇರೆ. ಉಸಿರಾಡೋಕೂ ಕಷ್ಟ ಆಗ್ತಿದೆ’.

‘ಹುಷಾರು ಅತ್ತೆ, ಕಷ್ಟ ಆದ್ರೂ ಉಸಿರಾಡ್ತಿರಿ’.

‘ಉಸಿರಾಡದೆ ಇರ್ತೀನಾ? ನನ್ ಮಗನ್ನ ಬುಟ್ಟಿಗೆ ಹಾಕ್ಕಂಡ ನಿಂಗೊಂದು ದಾರಿ ಕಾಣಿಸದೆ ಬಿಡ್ತೀನಾ?’

‘ಹಳೆ ಸಿನಿಮಾಗಳ ರಮಾದೇವಿ ಕಾಲ ಹೋಯ್ತು ಅತ್ತೆ, ಈಗೆಲ್ಲ ಸೊಸೆಯಂದಿರ ಕಾಲ’.

‘ಮುಂದೆ ನೀನೂ ಅತ್ತೆ ಆಗಲ್ವ? ಆಗೇನ್ಮಾಡ್ತೀಯ?’

‘ಸೊಸೆಗೆ ಅಧಿಕಾರ ಕೊಡ್ತೀನಿ. ಡೆಲ್ಲೀಲಿ ಪ್ರಧಾನಮಂತ್ರಿ, ಮುಖ್ಯಮಂತ್ರಿ ಥರ ಕಿತ್ತಾಡಲ್ಲ. ಒಂದು ಮನೆ, ಒಬ್ರುದೇ ಅಧಿಕಾರ ಇರ್ಬೇಕು ಅಲ್ವ?’

‘ಅದ್ಕೇ ನಾನು ನಿನ್ನ ಹೊರಗಾಕಿದ್ದು’.

‘ನಂಗೂ ಬಿಡುಗಡೆ ಸಿಕ್ತು ಬಿಡಿ, ಅದಿರ್ಲಿ, ಏನಕ್ಕೆ ಫೋನ್ ಮಾಡಿದ್ದು? ನಿಮ್ಮ ಮಗ ಮನೇಲಿಲ್ಲ’.

‘ಅಯ್ಯೋ ಅವನಿಗಲ್ಲ, ನಿಂಗೇ ಮಾಡಿದ್ದು. ನಿಂಗೊಂದು ಗಿಫ್ಟ್ ಕಳಿಸೋಣ ಅಂತ. ನಿನ್ ಸೈಜಿನ ಒಂದು ಹಳೇ ಫ್ರಿಜ್ ಇದೆ, ಪಾರ್ಸಲ್ ಮಾಡ್ಲಾ?’

‘ಡೆಲ್ಲಿ ಫ್ರಿಜ್ ಅಂದ್ರೆ ಅರ್ಥ ಆಯ್ತು ಅತ್ತೆ, ನಮ್ಮನೇಲಿ ಒಳ್ಳೆ ಫ್ರಿಜ್ ಇದೆ. ಅದೇನೂ ಬೇಡ. ನಾನೂ ನಿಮಗೊಂದು ಗಿಫ್ಟ್ ಕಳಿಸ್ಲಾ ಅತ್ತೆ?’

‘ನನಗೆ ಗಿಫ್ಟಾ? ಏನು?’

‘ಇಲ್ಲಿ ಮಂಗಳೂರ್ ಕುಕ್ಕರು ಅಂತ ಒಂದು ಹೊಸ ಬ್ರ್ಯಾಂಡ್ ಕುಕ್ಕರ್ ಬಂದಿದೆ ಅತ್ತೆ, ಕಳಿಸ್ಲಾ?’

ಅತ್ತೆ ಪಿಟಿಕ್ಕೆನ್ನಲಿಲ್ಲ. ಫೋನ್ ಕಟ್ಟಾಯಿತು.

ದಿನದ ಟ್ವೀಟ್

ತೂಕಡಿಸುವವರಿಗೆ...

ರಾಜಧಾನಿಯಲ್ಲಿ ಇನ್ನೂ ಎರಡು ದಿನ ಮಳೆ- ಸುದ್ದಿ. ರಸ್ತೆಗುಂಡಿಗಳನ್ನು ಮುಚ್ಚಲು ಮತ್ತೊಂದು ಗಡುವು ವಿಸ್ತರಿಸಲು ಬಿಬಿಎಂಪಿಗೆ ಸುವರ್ಣಾವಕಾಶ! ತೂಕಡಿಸುತ್ತಿದ್ದ ಸಿಬ್ಬಂದಿಗೆ ಮಳೆ ಹಾಸಿಗೆ ಒದಗಿಸಿದೆ, ವರ್ಷಧಾರೆಗೆ ಅವರು ಚಿರಋಣಿಗಳಾಗಿರಬೇಕು!

ಪುಟ್ಟೇಗೌಡ

ಕಿಡಿನುಡಿ

ಕ.ಸಾ.ಪ. ಅಧ್ಯಕ್ಷ ಜೋಶಿಯವರೇ, ಇದು ಕನ್ನಡ ಸಮ್ಮೇಳನವೋ, ಪ್ರವಾಸೋದ್ಯಮ ಸಮ್ಮೇಳನವೋ? ಕನಕದಾಸ, ಶಿಶುನಾಳ ಶರೀಫ, ಸರ್ವಜ್ಞರನ್ನು ಉಳಿಸಿಕೊಳ್ಳಲು ಆಗಲಿಲ್ಲವೇ? ಕನ್ನಡವನು ಕಟ್ಟಡ ನುಂಗಿತ್ತಾ? ನುಡಿಯನು ಗೋಡೆ ನುಂಗಿತ್ತಾ?

(ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪರಿಷ್ಕೃತ ಲಾಂಛನಕ್ಕೆ ಪ್ರತಿಕ್ರಿಯೆ)



ಡಾ. ಶ್ರೀನಿವಾಸ ಕಕ್ಕಿಲ್ಲಾಯ, ತಜ್ಞ ವೈದ್ಯ

25 ವರ್ಷಗಳ ಹಿಂದೆ

ಮಂಗಳವಾರ, 25-11-1997

• **ಕೇಸರಿಗೆ ತಲುಪಿದ ಗುಜ್ರಾಲ್ ಪತ್ರ: ಬದಲಾಗದ ರಂಗದ ನಿಲುವು**

ನವದೆಹಲಿ, ನವೆಂಬರ್ 24– ಕೇಂದ್ರ ಸಂಪುಟದಿಂದ ಡಿಎಂಕೆ ಸಚಿವರನ್ನು ಕೈಬಿಡಬೇಕು ಎಂಬ ಕಾಂಗ್ರೆಸ್ ಬೇಡಿಕೆಯನ್ನು ತಿರಸ್ಕರಿಸಿ ಪ್ರಧಾನಿ ಐ.ಕೆ. ಗುಜ್ರಾಲ್ ಇಂದು ರಾತ್ರಿ ಔಪಚಾರಿಕವಾಗಿ ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಅವರಿಗೆ ಪತ್ರ ತಲುಪಿಸಿದ್ದಾರೆ.

ಪ್ರಧಾನಿಯವರ ಪತ್ರ ತಲುಪಿದ ನಂತರ ಇಂದು ಮಧ್ಯರಾತ್ರಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ನಡೆಸಿ ಪತ್ರದ ಬಗ್ಗೆ ಚರ್ಚೆ ನಡೆಸಿತಾದರೂ ಯಾವುದೇ ನಿರ್ಧಾರ ಕೈಗೊಳ್ಳದೇ ಸಭೆಯನ್ನು ನಾಳೆಗೆ ಮುಂದೂಡಿತು. ನಾಳಿನ ಸಭೆಯಲ್ಲಿ ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳುವುದಾಗಿ ಪಕ್ಷದ ಮೂಲಗಳು ತಿಳಿಸಿವೆ. ಈ ನಡುವೆ ಮಧ್ಯರಾತ್ರಿ ಸಭೆ ಸೇರಿದ್ದ ಸಂಯುಕ್ತ ರಂಗದ ನಿರ್ಣಾಯಕ ಸಮಿತಿಯು ಕಾಂಗ್ರೆಸ್‌ನ ಪ್ರತಿಕ್ರಿಯೆ ಕಾಯ್ದು ನೋಡಲು ತೀರ್ಮಾನಿಸಿತು.

• **ಸದನದ ಹೊರಗೆ ರಾಜಕೀಯ ಬಿಕ್ಕಟ್ಟು ಪರಿಹಾರಕ್ಕೆ ಸಂಗ್ಮಾ ಸಲಹೆ**

ನವದೆಹಲಿ, ನವೆಂಬರ್ 24– ರಾಜಕೀಯ ಬಿಕ್ಕಟ್ಟು ಪರಿಹಾರ ಸದನದೊಳಗೆ ಅಸಾಧ್ಯವಾದ್ದರಿಂದ ರಾಜಕೀಯ ಪಕ್ಷಗಳು ಸಂಸತ್ತಿನ ಹೊರಗೆ ತಮ್ಮ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕು ಎಂದು ಲೋಕಸಭೆಯ ಸ್ಪೀಕರ್ ಪಿ.ಎ. ಸಂಗ್ಮಾ ಹೇಳಿದರು.

‘ಲೋಕಸಭೆ ಕಲಾಪವನ್ನು ಅನಿರ್ದಿಷ್ಟ ಕಾಲ ಮುಂದೂಡುವ ಮೂಲಕ, ಮೊದಲು ನಿಮ್ಮ ಸಮಸ್ಯೆಯನ್ನು ಬಗೆಹರಿಸಿಕೊಳ್ಳಿ. ನಂತರ ನನ್ನಲ್ಲಿಗೆ ಬನ್ನಿ ಎಂದು ಹೇಳಿದ್ದೇನೆ. ಯಾವುದೇ ಸದನವನ್ನು ಪುನಃ ಕರೆಯಲು ಸ್ಪೀಕರ್‌ಗೆ ಅಧಿಕಾರವಿದೆ’ ಎಂದು ಅವರು ತಿಳಿಸಿದರು.

50 ವರ್ಷಗಳ ಹಿಂದೆ

ಶನಿವಾರ, 25-11-1972

• **ಟಿಕ್ಕಾ, ಮಾಣೆಕ್ ಷಾ ನಡುವೆ ಚರ್ಚೆ: ಪಾಕ್ ಸಲಹೆಗೆ ಭಾರತದ ಅಸ್ತು**

ನವದೆಹಲಿ, ನವೆಂಬರ್ 24– ಜಮ್ಮು ಮತ್ತು ಕಾಶ್ಮೀರದಲ್ಲಿ ಗಡಿ ಗುರುತಿಸುವ ಕಾರ್ಯದಲ್ಲಿ ಉಂಟಾಗಿರುವ ಬಿಕ್ಕಟ್ಟನ್ನು ಪರಿಹರಿಸಿ ಶಿಮ್ಲಾ ಒಪ್ಪಂದದ ಅನುಷ್ಠಾನವನ್ನು ತ್ವರಿತಗೊಳಿಸಲು ಸೇನೆಯ ದಂಡನಾಯಕರ ಮಟ್ಟದಲ್ಲಿ ಮಾತುಕತೆ ನಡೆಸಬೇಕೆಂಬ ಪಾಕಿಸ್ತಾನದ ಸಲಹೆಯನ್ನು ಭಾರತ ತತ್ವಶಃ ಅಂಗೀಕರಿಸಿದೆ.

ಆದರೆ ಭಾರತ ಸೇನೆಯ ದಂಡನಾಯಕ ಜನರಲ್ ಮಾಣೆಕ್ ಷಾ ಮತ್ತು ಪಾಕಿಸ್ತಾನದ ದಂಡನಾಯಕ ಜನರಲ್ ಟಿಕ್ಕಾ ಖಾನ್ ಅವರು ಮಾತುಕತೆಗಾಗಿ ಎಲ್ಲಿ ಸೇರುವರು ಎಂಬುದನ್ನು ಪಾಕಿಸ್ತಾನದ ಜತೆ ಸಮಾಲೋಚನೆ ನಡೆಸಿದ ನಂತರ ನಿರ್ಧರಿಸಲಾಗುವುದು. ಈ ಮಾತುಕತೆ ಬಹುಶಃ ಮುಂದಿನ ವಾರ ನಡೆಯಬಹುದು.

• **ಹತ್ತು ಸಹಸ್ರ ಕಾರ್ಮಿಕರಿಗೆ ತಿಂಗಳ ವೇತನ ವ್ಯವಸ್ಥೆ**

ಬೆಂಗಳೂರು, ನವೆಂಬರ್ 24– ದಶಕಗಳಿಂದ ದಿನಗೂಲಿಯ ಮೇಲೆ ದುಡಿಯುತ್ತಿರುವ ಕೆ.ಜಿ.ಎಫ್.ನ ಭಾರತ ಚಿನ್ನದ ಗಣಿಯು ಸುಮಾರು 10,000 ಮಂದಿ ಕೆಲಸಗಾರರನ್ನು ತಿಂಗಳ ವೇತನದ ಶಾಶ್ವತ ವ್ಯವಸ್ಥೆಗೆ ಪರಿವರ್ತಿಸುವ ಮಹತ್ತಾದ ಒಪ್ಪಂದಕ್ಕೆ ಗಣಿಯ ಆಡಳಿತ ಹಾಗೂ ಕಾರ್ಮಿಕ ನಾಯಕರು ಸಹಿ ಮಾಡಿದ್ದಾರೆ.

ಸಂಗತ

ನೀರು ಕುಡಿದಾಯ್ತು, ನಂತರ...?

ಮಕ್ಕಳು ಅಗತ್ಯ ಪ್ರಮಾಣದಲ್ಲಿ ನೀರು ಕುಡಿಯುವುದು ಸರಿಯಾದ ರೂಢಿ. ಆದರೆ ಅದಕ್ಕೆ ತಕ್ಕಂತೆ ಶಾಲೆಗಳಲ್ಲಿ ಶೌಚಾಲಯಗಳ ಸೌಲಭ್ಯ ಇದೆಯೇ?

• ಡಾ. ಕೆ.ಎಸ್.ಚೈತ್ರಾ

‘ಈ ಹೆಣ್ಣುಮಕ್ಕಳನ್ನು ಶಾಲೆಗೆ ಕಳಿಸೋದು ಬಹಳ ಕಷ್ಟ ಆಗಿದೆ. ಏನೋ ಹೊಸದಾಗಿ ವಾಟರ್ ಬೆಲ್ ಹೊಡೆದು ನೀರು ಕುಡೀಲೇಬೇಕು ಅಂತ ಕಂಪಲ್ಸರಿ ಮಾಡ್ತಾರಂತೆ. ಟೀಚರ್ ಎದುರೇ ಕುಡಿಯಬೇಕಂತೆ. ಈಗ ಬೇರೆ ಚಳಿ-ಮಳೆ! ಥೇ ಯಾಕಾಗಿ ಮಾಡ್ತಾರೋ ಇದನ್ನೆಲ್ಲಾ?’ ಎಂದು, ಬೆಂಗಳೂರಿನ ಮೆಜೆಸ್ಟಿಕ್ ಬಸ್‌ಸ್ಟ್ಯಾಂಡಿನಲ್ಲಿ ಬಸ್ಸಿಗಾಗಿ ಕಾಯುತ್ತಾ ನಿಂತಿದ್ದಾಗ ಸಿಕ್ಕ ಮಹಿಳೆ ಬೇಸರ ವ್ಯಕ್ತಪಡಿಸಿದಳು. ನನಗೆ ಆಶ್ಚರ್ಯವಾಯಿತು. ಶಾಲೆಯಲ್ಲಿ ದಿನಕ್ಕೆ ಮೂರು ಬಾರಿ ಗಂಟೆ ಬಾರಿಸಿ ಮಕ್ಕಳಿಗೆ ನೀರು ಕುಡಿಯಲು ನೆನಪು ಮಾಡಬೇಕು ಎಂಬ ಶಿಕ್ಷಣ ಇಲಾಖೆಯ ಆದೇಶ ಓದಿ ಖುಷಿ ಪಟ್ಟವರಲ್ಲಿ ನಾನೂ ಒಬ್ಬಳು. ಏಕೆಂದರೆ, ಬೆಳಿಗ್ಗೆ ಬೇಗನೆದ್ದು ಶಾಲೆಗೆ ಹೋಗುವ ಮಕ್ಕಳು ಸಂಜೆ ಮರಳಿ ಮನೆಗೆ ಬಂದಾಗ, ಕಳಿಸಿದ ನೀರು ಹಾಗೇ ಇರುವುದನ್ನು ಕಂಡು ತಾಯಿ- ವೈದ್ಯೆಯಾಗಿ ಸಹಜವಾಗಿಯೇ ನನಗೆ ಗಾಬರಿ.

ನೀರು ಬೇಸಿಗೆಯಲ್ಲಿ ಮಾತ್ರವಲ್ಲ, ಚಳಿಗಾಲದಲ್ಲೂ ದೇಹಕ್ಕೆ ಅವಶ್ಯವಾಗಿ ಬೇಕು. ಎಷ್ಟೋ ಬಾರಿ ನೀರಿನ ಕೊರತೆಯಾಗಿ ಮಕ್ಕಳಿಗೆ ತಲೆನೋವು, ಸುಸ್ತು, ಗೊಂದಲ, ಏಕಾಗ್ರತೆಯ ಕೊರತೆ ಸಾಮಾನ್ಯ. ಬಾಯಿ ಒಣಗುವುದು, ತುಟಿ ಬಿರಿಯುವಿಕೆ, ಜೊಲ್ಲುರಸದ ಉತ್ಪತ್ತಿ ಕಡಿಮೆಯಾಗಿ ಬಾಯಿಯಲ್ಲಿ ದುರ್ವಾಸನೆ, ದಂತಕ್ಷಯ ಹೆಚ್ಚುವುದು ದಂತವೈದ್ಯೆಯಾಗಿ ನನ್ನ ಗ್ರಹಿಕೆಗೆ ಬಂದ ವಿಷಯಗಳು. ಆದರೆ ಮಕ್ಕಳು ಮಾತ್ರ ಎಷ್ಟೇ ಹೇಳಿದರೂ ನೀರು ಕುಡಿಯುವುದರ ಬಗ್ಗೆ ಗಮನವನ್ನೇ ನೀಡುವುದಿಲ್ಲ. ಹೀಗಿರುವಾಗ ಶಿಕ್ಷಕರೇ ಶಾಲೆಯಲ್ಲಿ ಆಗಾಗ್ಗೆ ನೀರು ಕುಡಿಯುವ ಆರೋಗ್ಯಕರ ಅಭ್ಯಾಸ ಮಾಡಿಸುವುದು ಒಳ್ಳೆಯದಲ್ಲವೇ? ಆದರೆ ಈ ತಾಯಿಯ ಬೇಸರ ಅರ್ಥವಾಗಲಿಲ್ಲ.

‘ನೀರು ಕುಡಿಯುವುದು ಒಳ್ಳೆಯದೇ. ಆದರೆ ನೀರು ಕುಡಿದ ಮೇಲೆ ಅದನ್ನು ಬಿಡಬೇಕಲ್ಲಾ? ಅಂದ್ರೆ ಹೊಟ್ಟೆ ಒತ್ತಿ ಟಾಯ್ಲೆಟ್‌ಗೆ ಹೋಗಬೇಕಲ್ಲ, ಅದಕ್ಕೇನು ಮಾಡೋದು? ಶಾಲೆಗಳಲ್ಲಿ ಸರಿಯಾಗಿ ಟಾಯ್ಲೆಟ್ ಇಲ್ಲ. ಗಂಡು ಹುಡುಗರು ಏನೋ ಹೇಗೋ ಹೊರಗೆ ಹೋಗಿಬರ್ತಾರೆ. ಹೆಣ್ಣು ಮಕ್ಕಳು ಹಾಗೆ ಮಾಡಲಿಕ್ಕೆ ಆಗುತ್ತಾ?’ ಎಂದು ಆಕೆ ಪ್ರಶ್ನಿಸಿದಾಗ ಪರಿಸ್ಥಿತಿಯ ತೀವ್ರತೆ ಅರಿವಾಯಿತು.

ಮಕ್ಕಳಿಗೆ ಆರರಿಂದ ಎಂಟು ಲೋಟ ನೀರು ಕುಡಿಯಬೇಕು ಎಂದು ಎಲ್ಲರೂ, ಈಗ ಶಿಕ್ಷಣ ಇಲಾಖೆಯೂ ಹೇಳುತ್ತಿರುವುದು ಸರಿ. ಆದರೆ ಅದಕ್ಕೆ ತಕ್ಕಂತೆ ಮೂತ್ರ ವಿಸರ್ಜನೆಗೆ ಪೂರಕವಾಗಿ ಶೌಚಾಲಯಗಳು ಶಾಲೆಗಳಲ್ಲಿ ಇವೆಯೇ? ನೀರು ಕುಡಿಯಿರಿ, ಪೌಷ್ಟಿಕ ಆಹಾರ ಸೇವಿಸಿರಿ ಎಂದು ಪ್ರೋತ್ಸಾಹಿಸುವ ನಾವೆಲ್ಲರೂ ಮಕ್ಕಳು ಶೌಚಾಲಯಕ್ಕೆ ಹೋಗಬೇಕು ಎನ್ನುವುದನ್ನು ಗುಟ್ಟಿನ, ನಾಚಿಕೆಯ ವಿಷಯವೆಂಬಂತೆ ಪರಿಗಣಿಸುತ್ತೇವೆ. ಹಾಗಾಗಿಯೇ ಟಾಯ್ಲೆಟ್ ಎಂದು ಮಕ್ಕಳು ಧೈರ್ಯವಾಗಿ ಹೇಳಲೂ ಹಿಂಜರಿಯುವ ಸ್ಥಿತಿ ಮುಂದುವರಿದಿದೆ.

ಹುಡುಗಿಯರಂತೂ ಹೈಸ್ಕೂಲಿಗೆ ಬರುವಾಗ ಮೂರು ಕಾರಣಗಳಿಂದ ಶೌಚಾಲಯ ಬಳಕೆಯನ್ನು ನಿಲ್ಲಿಸುತ್ತಾರೆ. ಒಂದು, ಶೌಚಾಲಯವೇ ಇಲ್ಲದಿರುವುದು. ಎರಡು, ಕೊಳಕಾದ ಅಸುರಕ್ಷಿತ ಶೌಚಾಲಯ. ಮೂರು, ಅನುಮತಿ ಕೇಳಲು ಸಂಕೋಚ! ಪರಿಣಾಮವಾಗಿ, ಮನೆಯಲ್ಲಿ ಶೌಚ ಮುಗಿಸಿ ಬಂದರೆ ಸಂಜೆ ಮನೆಗೆ ಮರಳಿದ ನಂತರವೇ ಶೌಚಾಲಯದ ಭಾಗ್ಯ. ಹೀಗೆ ಗಂಟೆಗಟ್ಟಲೆ ಮೂತ್ರ ತಡೆ ಹಿಡಿಯಬೇಕೆಂದರೆ ನೀರು ಕಡಿಮೆ ಕುಡಿಯಬೇಕು. ಕೆಲವೊಮ್ಮೆ ಹೋಗಲೇಬೇಕಾಗಿ ಬಂದರೆ ಯಾರಿಗೂ ಗೊತ್ತಾಗದಂತೆ ಗುಟ್ಟಾಗಿ ಓಡುವುದು, ಅವಸರದಲ್ಲಿ ಮುಗಿಸುವುದು, ಸ್ವಚ್ಛತೆ ಬಗ್ಗೆ ಗಮನ ಕೊಡದಿರುವುದು ಇವೆಲ್ಲವೂ ಸಾಮಾನ್ಯ. ವಿಷಾದದ ಸಂಗತಿಯೆಂದರೆ, ಇವೆಲ್ಲಾ ಶೌಚಾಲಯ ಬಳಸುವ ನಾಚಿಕೆಯಿಂದ ಪಾರಾಗಲು ಬಳಸುವ ತಂತ್ರಗಳಾದರೂ ದಿನಚರಿಯಾಗುತ್ತವೆ. ಯೌವನ, ಪ್ರೌಢಾವಸ್ಥೆಯಲ್ಲಿಯೂ ಈ ಅಭ್ಯಾಸ ಮುಂದುವರಿಯುತ್ತದೆ. ಮಹಿಳೆಯರನ್ನು ಪದೇ ಪದೇ ಕಾಡುವ ಉರಿಮೂತ್ರ, ಮೂತ್ರನಾಳದ ಸೋಂಕಿಗೆ ಕುಡಿಯುವ ನೀರಿನ ಕೊರತೆಯ ಜತೆ ಹೀಗೆ ಮೂತ್ರ ತಡೆಹಿಡಿಯುವ ಅಭ್ಯಾಸವೂ ಕಾರಣ ಎಂಬುದು ಗಮನಾರ್ಹ.

ಹಾಗೆಂದು ಶಾಲೆಗಳಲ್ಲಿ ಹೆಸರಿಗೊಂದು ಶೌಚಾಲಯ ಇದ್ದರೆ ಸಾಕೇ? ಮೇಲೊಂದು ಚಾವಣಿ, ಚಿಲಕ ಕಿತ್ತು ಹೋದ ಲಡಕಾಸಿ ಬಾಗಿಲು, ಕೆಳಗೊಂದು ಗುಂಡಿ, ಸೋರುವ ನಲ್ಲಿ, ದುರ್ವಾಸನೆಯಿಂದ ಕೂಡಿದ ಕತ್ತಲ ಕೋಣೆ ಎಂದಾದರೆ ಉಪಯೋಗಿಸುವ ಮನಸ್ಸಿರಲಿ ಧೈರ್ಯವಾದರೂ ಹೇಗೆ ಬಂದೀತು? ಇದೇ ಕಾರಣದಿಂದ ಶಾಲೆಗಳಲ್ಲಿ ಶೌಚಾಲಯಗಳಿದ್ದರೂ ಊರ ಹೊರಗೆ, ಹಳ್ಳ -ಹೊಂಡಗಳ ಬಳಿ ಹುಡುಗಿಯರು ಶೌಚಕ್ಕೆ ಹೋಗಿ ಅಪಾಯಕ್ಕೆ ಸಿಲುಕಿದ ಅನೇಕ ನಿದರ್ಶನಗಳಿವೆ.

ಶೌಚಾಲಯಗಳು ಕನಿಷ್ಠ ಸೌಲಭ್ಯಗಳನ್ನು ಹೊಂದಿರಬೇಕು. ಶೌಚಾಲಯ ಬಳಸಬೇಕಾದ ರೀತಿ, ಸ್ವಚ್ಛತೆಯ ಬಗ್ಗೆ ಅರಿವು ಮೂಡಬೇಕು. ಶೌಚ-ಶೌಚಾಲಯಗಳ ಬಗ್ಗೆ ನಮ್ಮೆಲ್ಲರ ಯೋಚನಾ ಕ್ರಮ ಬದಲಾಗಬೇಕು. ಶಾಲಾ ಶಿಕ್ಷಕರು, ಸಿಬ್ಬಂದಿ ಮತ್ತು ಮಕ್ಕಳಲ್ಲಿ ನೀರು ಕುಡಿಯುವುದು ಆರೋಗ್ಯದ ದೃಷ್ಟಿಯಿಂದ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ನೀರನ್ನು ದೇಹದಿಂದ ಹೊರಹಾಕುವುದು ಎಂಬ ಜಾಗೃತಿ ಮೂಡಿದರೆ ಆ ಬಗ್ಗೆ ಅಸಡ್ಡೆ, ಹೆದರಿಕೆ, ವ್ಯಂಗ್ಯ ನಿಲ್ಲಬಹುದು. ಹಾಗಾಗಿ ಶಾಲೆಗಳಲ್ಲಿ ಸ್ವಚ್ಛ, ಸುರಕ್ಷಿತ ಶೌಚಾಲಯದ ವ್ಯವಸ್ಥೆ ಕಡ್ಡಾಯವಾಗಲಿ ಮತ್ತು ಸರಿಯಾಗಿ ಬಳಸುವ ಮನಃಸ್ಥಿತಿ ಮಕ್ಕಳಲ್ಲಿ ಮೂಡಲಿ.

ವಾಚಕರ ವಾಣಿ

ರೈತನಿಗೆ ಹೆಣ್ಣು ಕೊಡದ ರೈತ!

ಲಿಂಗಾನುಪಾತದ ಅಸಮತೋಲನದಿಂದ ಯುವಕರು ಮದುವೆಯಾಗಲು ಹೆಣ್ಣು ಸಿಗದಂತಾಗಿದೆ ಎಂಬ ಲಕ್ಷ್ಮೀಕಾಂತರಾಜು ಎಂ.ಜಿ. ಅವರ ಅಭಿಪ್ರಾಯವನ್ನು ಒಪ್ಪುವುದು ಕಷ್ಟ. ಇಂದಿನ ಯುವತಿಯರು ಹುಡುಗನ ವಿದ್ಯಾಭ್ಯಾಸ, ಸಂಪಾದನೆ, ಆಸ್ತಿಗೆ ಹೆಚ್ಚಿನ ಪ್ರಾಮುಖ್ಯ ನೀಡುತ್ತಾರೆ. ತನಗಿಂತ ಎತ್ತರವಿರಬೇಕು ಅಥವಾ ಸರಿಸಮನಾಗಿರಬೇಕು, ಹಣಕಾಸಿನ ವಿಚಾರದಲ್ಲಿ ಭದ್ರತೆ ಇರಬೇಕು ಎಂದು ಬಯಸುವವರೇ ಹೆಚ್ಚು. ಹೀಗಾಗಿ ಇಂತಹ ಪರಿಸ್ಥಿತಿ ಉಂಟಾಗಿದೆ.

ಲಿಂಗಾನುಪಾತದ ಅಸಮತೋಲನವು ಭಾರತಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ಇದೆ. ಆದರೆ ಮದುವೆಯಾಗದ ಯುವಕರ ಸಂಖ್ಯೆ ಇತ್ತೀಚೆಗೆ ಹೆಚ್ಚಾಗಿದೆ. ರೈತರಿಗೆ, ಸಣ್ಣ ಉದ್ಯೋಗಿಗಳಿಗೆ, ಸ್ವ ಉದ್ಯೋಗಿಗಳಿಗೆ ಹೆಣ್ಣು ಸಿಗುವುದು ಕಷ್ಟವಾಗಿದೆ. ದುರದೃಷ್ಟವೆಂದರೆ, ಒಬ್ಬ ಯುವ ರೈತ ತಾನು ರೈತನಾದ್ದರಿಂದ ತನಗೆ ಹೆಣ್ಣು ಸಿಗುತ್ತಿಲ್ಲ ಎಂದು ದುಃಖಿಸುತ್ತಾನೆ. ಆದರೆ ತನ್ನ ಸಹೋದರಿಯನ್ನು ಇನ್ನೊಬ್ಬ ರೈತನಿಗೆ ಕೊಟ್ಟು ಮದುವೆ ಮಾಡಲು ಸಿದ್ಧನಿರುವುದಿಲ್ಲ.

ಸುನೀಲ ಟಿ.ಪಿ., ಮಳವಳ್ಳಿ

ಎಲ್ಲ ಸಮುದಾಯಗಳಿಗೂ ಮಾದರಿ ನಡೆ

‘ಭಯೋತ್ಪಾದಕರನ್ನು ಮುಸ್ಲಿಂ ಸಮುದಾಯದಿಂದ ಬಹಿಷ್ಕರಿಸಿ’ ಎಂದು ರಾಜ್ಯ ವಕ್ಫ್ ಕಮಿಟಿಗೆ ಉಮ್ಮತ್ ಚಿಂತಕರ ವೇದಿಕೆ ಮನವಿ ಸಲ್ಲಿಸಿರುವುದು (ಪ್ರ.ವಾ., ನ. 23) ಪ್ರಶಂಸನೀಯ. ಎಲ್ಲ ಸಮುದಾಯಗಳಲ್ಲೂ ಒಳ್ಳೆಯವರು ಹಾಗೂ ಕೆಟ್ಟವರು ಹೀಗೆ ಎರಡೂ ರೀತಿಯ ಜನರು ಇರುತ್ತಾರೆ. ಎಲ್ಲ ಧರ್ಮ, ಜಾತಿಗಳಲ್ಲೂ ಬಹುತೇಕರು ಯಾವುದರ ಗೊಡವೆಗೂ ಹೋಗದೆ ವೈಯಕ್ತಿಕ ಬದುಕಿನಲ್ಲೇ ನೆಮ್ಮದಿಯನ್ನು ಕಂಡುಕೊಳ್ಳುವ ಮನಃಸ್ಥಿತಿಯನ್ನು ಉಳ್ಳವರಾಗಿರುತ್ತಾರೆ.

ಯಾರೋ ಕೆಲವರು ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿದ್ದಾರೆಂಬ ಕಾರಣಕ್ಕೆ ಆ ಇಡೀ ಸಮುದಾಯವನ್ನೇ ದ್ವೇಷಿಸುವ ಕೆಲಸವನ್ನು ಯಾರೂ ಮಾಡಬಾರದು. ಉಮ್ಮತ್ ಚಿಂತಕರ ವೇದಿಕೆಯ ಈ ನಡೆ ಎಲ್ಲ ಸಮುದಾಯದವರಿಗೂ ಮಾದರಿಯಾಗಬೇಕು.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರ್, ಕೊಪ್ಪ

ಹಾಲಿನ ದರ: ಇರಲಿ ಸಮ ಸಂಖ್ಯೆ

ನಂದಿನಿ ಬ್ರ್ಯಾಂಡ್‌ನ ಎಲ್ಲ ಮಾದರಿಯ ಹಾಲು, ಮೊಸರಿನ ದರವನ್ನು ಪ್ರತೀ ಲೀಟರ್‌ಗೆ ಎರಡು ರೂಪಾಯಿ ಏರಿಸಲಾಗಿದೆ. ಅದರಂತೆ ಟೋನ್ಡ್ ಹಾಲು ₹ 39, ಹಾಗೂ ಸ್ಪೆಷಲ್ ಹಾಲು, ಶುಭಂ ಹಾಲಿನ ಲೀಟರ್ ದರ ತಲಾ ₹ 45 ಹಾಗೂ ಮೊಸರಿನ ದರ ಲೀಟರ್‌ಗೆ ₹ 47 ಇದೆ. ಈ ದರಗಳು ಬೆಸ ಸಂಖ್ಯೆಯಲ್ಲಿ ಇರುವುದರಿಂದ, ಅರ್ಧ ಲೀಟರ್‌ನ ದರಗಳು ಕ್ರಮವಾಗಿ ₹ 19.50, ₹ 22.50 ಹಾಗೂ ₹ 23.50 ಆಗುತ್ತವೆ. ಹಿಂದಿನ ಬಾರಿಯ ಹೆಚ್ಚಳದಲ್ಲೂ ಇದೇ ಪರಿಸ್ಥಿತಿ ಇತ್ತು. ಈಗ ಐವತ್ತು ಪೈಸೆಯ ನಾಣ್ಯ ಸಂಪೂರ್ಣವಾಗಿ ಮರೆಯಾಗಿರುವುದರಿಂದ ಈ ಹೆಚ್ಚಳ ವರ್ತಕರಿಗೆ ಅನಧಿಕೃತವಾಗಿ ಐವತ್ತು ಪೈಸೆಯ ಲಾಭ ಪಡೆಯಲು ಅನುವು ಮಾಡಿಕೊಡುತ್ತದೆ. ಕರ್ನಾಟಕ ಹಾಲು ಮಹಾಮಂಡಳಕ್ಕೆ (ಕೆಎಂಎಫ್) ಇದು ತಿಳಿಯದ್ದೇನೂ ಅಲ್ಲ.

ದಿನವೂ ಅರ್ಧ ಲೀಟರ್‌ನ ಲಕ್ಷಗಟ್ಟಲೆ ಪ್ಯಾಕೆಟ್‌ಗಳು ನಗದು ಪಾವತಿಯ ಮೂಲಕ ಮಾರಾಟವಾಗುತ್ತವೆ. ಬೂತ್‌ಗಳು ಹಾಗೂ ಮಾರಾಟದ ಏಜೆಂಟರು ಈ ಮಾರ್ಗದಲ್ಲಿ ಅನಧಿಕೃತ ಲಾಭ ಗಳಿಸಲು ಹಾದಿ ಮಾಡಿಕೊಟ್ಟಂತಾಗಿದೆ. ಹಾಗಾಗಿ ಕೆಎಂಎಫ್, ಅರ್ಧ ಲೀಟರ್ ಪ್ಯಾಕೆಟ್‌ಗಳ ಬೆಲೆಯನ್ನು ಪೂರ್ಣ ರೂಪಾಯಿಗಳಲ್ಲಿ ನಿರ್ಧರಿಸಬೇಕು. ಕಡಿಮೆ ಮಾಡಿದರೆ ಗ್ರಾಹಕರಿಗೆ ನ್ಯಾಯ, ಹೆಚ್ಚಿಸಿ ಉತ್ಪಾದಕರಿಗೆ ವರ್ಗಾಯಿಸಿದರೆ ಅದೂ ನ್ಯಾಯ.

ಶ್ರೀಧರ ಬಾಣಾವರ, ಬೆಂಗಳೂರು

ಮತ್ತೊಮ್ಮೆ ದಾಖಲಾತಿ ಪಡೆಯಲಿ

ಪ್ರಾಥಮಿಕ ಶಿಕ್ಷಕರ ನೇಮಕಾತಿಗೆ ತಂದೆಯ ಆದಾಯ ಪ್ರಮಾಣಪತ್ರ ಸಲ್ಲಿಸಿದ ಕಾರಣಕ್ಕೆ ಸಾವಿರಾರು ಹೆಣ್ಣುಮಕ್ಕಳ ಶಿಕ್ಷಕಿಯಾಗುವ ಕನಸು ಕಮರುವಂತೆ ಆಗಿದೆ. ಸಮಾಜದ ಅನೇಕ ಪಿಡುಗುಗಳಿಗೆ, ವೈಯಕ್ತಿಕ ದಾಸ್ಯ, ನೋವುಗಳಿಗೆ ಮಹಿಳೆಯರು ಆರ್ಥಿಕವಾಗಿ ಸ್ವತಂತ್ರರಾಗಿ ಇಲ್ಲದಿರುವುದೇ ಕಾರಣವಾಗಿದೆ. ಅವರ ಬದುಕಿನ ಸುಖ, ಸಂತೋಷ, ಸ್ವಾತಂತ್ರ್ಯವನ್ನು ಕಸಿಯದೆ, ಅವರ ಕನಸುಗಳಿಗೆ ಕೊಳ್ಳಿ ಇಡದೆ, ಶಿಕ್ಷಣ ಇಲಾಖೆಯು ಮತ್ತೊಮ್ಮೆ ದಾಖಲಾತಿಗಳನ್ನು ಪಡೆದು ಅರ್ಹ ಹೆಣ್ಣುಮಕ್ಕಳಿಗೆ ಅವಕಾಶ ದೊರಕಿಸಿಕೊಡಲಿ.

ಸರೋಜ ಎಂ.ಎಸ್., ಸಾಗರ

ಚುನಾವಣಾ ಸುಧಾರಣೆಗೆ ಪೂರಕ ನಡೆ

ದೇಶದ ಚುನಾವಣಾ ವ್ಯವಸ್ಥೆಯ ಸಂರಚನೆ ಮತ್ತು ಅದರ ಕಾರ್ಯವೈಖರಿ ಬಗ್ಗೆ ಸುಪ್ರೀಂ ಕೋರ್ಟ್ ತೀಕ್ಷ್ಣ ನಿಗಾ ವಹಿಸಿರುವುದು (ಪ್ರ.ವಾ., ನ. 24) ಸ್ವಾಗತಾರ್ಹ. ಚುನಾವಣಾ ಪದ್ಧತಿಯನ್ನು ಪರಿಣಾಮಕಾರಿಯಾಗಿ ಸುಧಾರಿಸಬೇಕಾದ ಅಗತ್ಯದ ಬಗ್ಗೆ ದೇಶದ ಬೌದ್ಧಿಕ ವಲಯದಲ್ಲಿ ಉಂಟಾಗಿರುವ ಹಪಹಪಿಯು ಉನ್ನತ ನ್ಯಾಯಾಂಗದ ಕಿವಿ ಮುಟ್ಟಿರುವುದು ಸಂತಸದ ಸಂಗತಿ. ‘ಅಗತ್ಯ ಬಿದ್ದಲ್ಲಿ ಪ್ರಧಾನಮಂತ್ರಿಗಳ ಕ್ರಮವನ್ನೂ ಪ್ರಶ್ನಿಸಬಲ್ಲದಿಟ್ಟ ಚುನಾವಣಾ ಆಯೋಗ ಬೇಕಾಗಿದೆ’ ಎಂಬ ಸುಪ್ರೀಂ ಕೋರ್ಟ್ ಮಾತು ಅರ್ಥಪೂರ್ಣ.

ಆರ್.ಕೆ.ದಿವಾಕರ, ಬೆಂಗಳೂರು

ನೆರವು ನೀಡಿ

29 ವರ್ಷದವನಾದ ನಾನು ಮಿದುಳು ರಕ್ತಸ್ರಾವದಿಂದ ಬಳಲುತ್ತಿದ್ದೇನೆ. ಇದರ ಭಾಗವಾಗಿ ವೈದ್ಯರು ಶಸ್ತ್ರಚಿಕಿತ್ಸೆಗೆ ಸೂಚಿಸಿದ್ದಾರೆ. ಸದ್ಯ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಶಸ್ತ್ರಚಿಕಿತ್ಸೆಗಾಗಿ ವೈದ್ಯರು ₹ 5 ಲಕ್ಷ ವೆಚ್ಚವಾಗಲಿದೆ ಎಂದು ತಿಳಿಸಿದ್ದಾರೆ. ಈ ಹಣವನ್ನು ಭರಿಸುವ ಶಕ್ತಿ ನಮ್ಮ ಕುಟುಂಬಕ್ಕೆ ಇಲ್ಲ. ದಾನಿಗಳು ದಯಮಾಡಿ ನನಗೆ ಆರ್ಥಿಕ ಸಹಾಯ ನೀಡಬೇಕು. ಬ್ಯಾಂಕ್ ವಿವರ: ಎ.ಹೇಮಗಿರಿ ರೆಡ್ಡಿ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಮಾರತ್ತಹಳ್ಳಿ ಶಾಖೆ, ಖಾತೆ ಸಂಖ್ಯೆ 221910100041138, IFSC: UBIN0822191, ಮೊಬೈಲ್: 8217530360.

ಹೇಮಗಿರಿ ರೆಡ್ಡಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

'ಹೆಣ್ಣಿನ ಮೇಲಿನ ದೌರ್ಜನ್ಯ ತಡೆಗೆ ಕ್ರಿಯಾಶೀಲರಾಗಿ'

ಪ್ರಜಾವಾಣಿ ವಾರ್ತೆ

ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಯುವ ಹಿಂಸೆಯು ಅತ್ಯಂತ ವ್ಯಾಪಕವಾಗಿದೆ. ಇದು ಮಾನವ ಹಕ್ಕು ಉಲ್ಲಂಘನೆಗಳಲ್ಲಿ ಅತ್ಯಂತ ಗಂಭೀರವಾದುದು. ಜಗತ್ತಿನಾದ್ಯಂತ ಮೂವರು ಮಹಿಳೆಯರಲ್ಲಿ ಒಬ್ಬ ಮಹಿಳೆಯು ಹಿಂಸೆಗೆ ಒಳಗಾಗುತ್ತಾಳೆ. ಕಳೆದ ಒಂದು ದಶಕದಲ್ಲಿ ಈ ಪ್ರಮಾಣವು ಬದಲಾಗಿಲ್ಲ. ಪ್ರತಿ ಒಂದು ತಾಸಿನಲ್ಲಿ ಐವರು ಮಹಿಳೆಯರು ಅಥವಾ ಹೆಣ್ಣು ಮಕ್ಕಳು ತಮ್ಮ ಕುಟುಂಬದವರಿಂದಲೇ ಕೊಲೆಯಾಗುತ್ತಾರೆ ಎಂಬುದು ತೀರಾ ಇತ್ತೀಚಿನ ಅಂದಾಜು ಎಂದು ವಿಶ್ವ ಸಂಸ್ಥೆಯು ಹೇಳಿದೆ.

ಹೀಗಾಗಿಯೇ, ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಮೇಲೆ ನಡೆಯುವ ಹಿಂಸೆ ತಡೆಗೆ ಜಾಗೃತಿ ಮೂಡಿಸುವುದಕ್ಕಾಗಿ ವಿಶ್ವ ಸಂಸ್ಥೆಯು ಅಭಿಯಾನವೊಂದನ್ನು ನಡೆಸಲಿದೆ. ಇದೇ ಶುಕ್ರವಾರದಿಂದ (ನವೆಂಬರ್ 25) ಆರಂಭವಾಗುವ ಅಭಿಯಾನವು ಡಿಸೆಂಬರ್ 10ರವರೆಗೆ ನಡೆಯಲಿದೆ. 'ಒಟ್ಟಾಗಿ! ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಮೇಲಿನ ಹಿಂಸೆ ತಡೆಗೆ ಕ್ರಿಯಾಶೀಲರಾಗಿ!' ಎಂಬುದು ಈ ಅಭಿಯಾನದ ಘೋಷವಾಕ್ಯ. ಮಹಿಳಾಪರ ಹೋರಾಟಗಾರರು ಅಥವಾ ಮಾನವ ಹಕ್ಕುಗಳ ಕಾರ್ಯಕರ್ತರು ಮಾತ್ರವಲ್ಲ, ಜಗತ್ತಿನ ಎಲ್ಲರೂ ತಮ್ಮ ಸುತ್ತಲಿನ ಮಹಿಳೆಯರು, ಹೆಣ್ಣು ಮಕ್ಕಳ ಮೇಲೆ ನಡೆಯುವ ಹಿಂಸೆಯನ್ನು ತಡೆಯಲು ಕ್ರಿಯಾಶೀಲರಾಗಬೇಕು ಎಂಬುದು ಈ ಘೋಷ ವಾಕ್ಯದ ಅರ್ಥ.

'ಐದು ವರ್ಷಗಳ ಹಿಂದೆ ಜಗತ್ತಿನಾದ್ಯಂತ ಆರಂಭವಾದ 'ಮೀಟೂ' ಅಭಿಯಾನವು ಮಹಿಳೆಯರ ಮೇಲಿನ ದೌರ್ಜನ್ಯ ತಡೆ ಕುರಿತ ಕಿಡಿ ಹೊತ್ತಿಸಿತ್ತು. ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಕ್ರಮ ಕೈಗೊಳ್ಳಬೇಕಾದ ತುರ್ತು ಎಷ್ಟಿದೆ ಎಂಬುದರತ್ತ ಬೆಳಕು ಚೆಲ್ಲಿತ್ತು. ಜಗತ್ತಿನ ವಿವಿಧ ಭಾಗಗಳಲ್ಲಿ ಇದರ ರೀತಿಯ ಹಲವು ಅಭಿಯಾನಗಳು ನಡೆದಿವೆ. ಹೆಣ್ಣಿನ ಮೇಲಿನ ದೌರ್ಜನ್ಯವನ್ನು ತಡೆಯಬೇಕು ಎಂಬುದು ಹಿಂದೆಂದಿಗಿಂತಲೂ ಈಗ ಮುಖ್ಯ ರಾಜಕೀಯ ಕಾರ್ಯಸೂಚಿಯೂ ಆಗಿದೆ. ಜಗತ್ತಿನ ವಿವಿಧ ಭಾಗಗಳಲ್ಲಿ ಕಾನೂನು, ನೀತಿ, ಅಗತ್ಯ ಸೇವೆಗಳು, ತಡೆ ಕಾರ್ಯತಂತ್ರಗಳು ಬಲಗೊಳ್ಳುತ್ತಿವೆ ಎಂಬುದು ಆಶಾದಾಯಕ ಬೆಳವಣಿಗೆ' ಎಂಬ ಅಭಿಮತವನ್ನೂ ವಿಶ್ವ ಸಂಸ್ಥೆಯ ಈ ಅಭಿಯಾನವು ಹೊಂದಿದೆ.

ಮಹಿಳಾ ಸುರಕ್ಷತೆಯ ವಿಚಾರದಲ್ಲಿ ಕಳವಳಕಾರಿ ಅಂಶಗಳೂ ಕಂಡು ಬರುತ್ತಿವೆ. ಮಾನವ ಹಕ್ಕು ವಿರೋಧಿ ಚಳವಳಿಗಳು ನಡೆಯುತ್ತಿವೆ. ಮಹಿಳಾ ಹಕ್ಕುಗಳ ಸಂಘಟನೆಗಳು ಹಾಗೂ ಪ್ರತಿಪಾದಕರು, ಕಾರ್ಯಕರ್ತರನ್ನು ದಮನ ಮಾಡುವ ಪ್ರವೃತ್ತಿಯೂ ವರದಿಯಾಗಿದೆ. 'ಮಹಿಳಾ ಹಕ್ಕುಗಳ ರಕ್ಷಕರು ದಮನಕ್ಕೆ ಒಳಗಾಗುತ್ತಿದ್ದಾರೆ. ಮಾನವ ಹಕ್ಕುಗಳನ್ನು ಯಾವುದೇ ತಾರತಮ್ಯ ಇಲ್ಲದೆ ಸಂರಕ್ಷಿಸಲಾಗುವುದು ಎಂದು ಸರ್ಕಾರಗಳು ಭರವಸೆ ಕೊಟ್ಟಿದ್ದರೂ ದೌರ್ಜನ್ಯ ನಡೆಯುತ್ತಿದೆ' ಎಂದು ವಿಶ್ವ ಸಂಸ್ಥೆಯು ಮಾನವ ಹಕ್ಕುಗಳ ರಕ್ಷಣೆ ವಿಶೇಷ ಪ್ರತಿನಿಧಿ ಹೇಳಿದ್ದಾರೆ.

'ಮಹಿಳೆಯರ ಹತ್ಯೆಯನ್ನು ಮುಚ್ಚಿಡಲು ಹಲವು ದೇಶಗಳ ಸರ್ಕಾರಗಳು ಬಲವನ್ನು ಕೂಡ ಉಪಯೋಗಿಸಿವೆ. ಕೆಲವೆಡೆ ಮಹಿಳಾ ಹಕ್ಕುಗಳ ಸಂಘಟನೆಗಳ ಕಾನೂನುಬದ್ಧ ಸ್ಥಾನವನ್ನೇ ರದ್ದುಪಡಿಸಲಾಗಿದೆ. ಮಹಿಳಾ ಹಕ್ಕುಗಳ ಮುಂಚೂಣಿ ಕಾರ್ಯಕರ್ತರ ಹತ್ಯೆ ಪ್ರಕರಣಗಳು ಹೆಚ್ಚಾಗಿರುವ ಆತಂಕಕಾರಿ ಸನ್ನಿವೇಶವೂ ಇದೆ. ಸಾಮಾಜಿಕ ಜಾಲ ತಾಣಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ದಮನಿಸಲು ಆನ್‌ಲೈನ್ ದೌರ್ಜನ್ಯವು ಎಂದಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಈಗ ನಡೆಯುತ್ತಿದೆ' ಎಂಬ ಅಭಿಪ್ರಾಯವನ್ನೂ ಅಭಿಯಾನವು ಹೊಂದಿದೆ.

ಸಣ್ಣ ದೌರ್ಜನ್ಯವನ್ನೂ ಗಂಭೀರವಾಗಿ ಪರಿಗಣಿಸಬೇಕು

ಇಂತಹ ಸನ್ನಿವೇಶ ಎದುರಿಸುವಲ್ಲಿ ಹಲವು ಸ್ತರದ ಬದಲಾವಣೆ ಅಗತ್ಯ. ಮಕ್ಕಳಲ್ಲಿ ಸಮಾನ ಮನಸ್ಥಿತಿ, ಅಂದರೆ ಹೆಣ್ಣು ಮತ್ತು ಗಂಡು ಇಬ್ಬರೂ ಸಮಾನರು ಎಂಬ ಅರಿವು ಮೂಡಿಸಿದರೆ, ಆ ಹಂತದಲ್ಲಿ ಹಲ್ಲೆ-ದೌರ್ಜನ್ಯಗಳು ನಡೆಯುವುದನ್ನು ತಡೆಯಬಹುದು. ಇದರ ಜತೆಯಲ್ಲಿ ಸಣ್ಣಮಟ್ಟದ ದೌರ್ಜನ್ಯವನ್ನೂ ಗಂಭೀರವಾಗಿ ಪರಿಗಣಿಸುವ ಮನಸ್ಥಿತಿ ಮೂಡಿಸಬೇಕು. ಬಹುತೇಕ ಸಂದರ್ಭದಲ್ಲಿ ಸಾರ್ವಜನಿಕವಾಗಿ, ಕೆಲಸದ ಸ್ಥಳಗಳಲ್ಲಿ ನಡೆಯುವ ಸಣ್ಣಮಟ್ಟದ ದೌರ್ಜನ್ಯಗಳು ವರದಿಯಾಗುವುದೇ ಇಲ್ಲ. ಏಕೆಂದರೆ ಅಂತಹ ದೌರ್ಜನ್ಯಗಳ ಬಗ್ಗೆ ಅಧಿಕಾರಿಗಳಿಗೆ ಅಥವಾ ಸಂಬಂಧಪಟ್ಟವರಿಗೆ ದೂರು ನೀಡಿದರೂ ಅದನ್ನು ಅವರು ಗಂಭೀರವಾಗಿ ಪರಿಗಣಿಸುವುದೇ ಇಲ್ಲ. ಹೀಗಾಗಿ ನಮಗೆ ಯಾವುದೇ ನೆರವು ಸಿಗುವುದಿಲ್ಲ ಎಂಬ ಕಾರಣಕ್ಕೆ ಹಲವರು ದೂರು ನೀಡುವುದೇ ಇಲ್ಲ. ದೌರ್ಜನ್ಯಕ್ಕೆ ಒಳಗಾಗುವ ಮಹಿಳೆಯರು ಮಾತ್ರವಲ್ಲ, ಪುರುಷರು ಸಹ ತಾವು ದುರ್ಬಲರಾಗಿದ್ದಾಗ ಇಂತಹ ಅಸಹಾಯಕತೆಯಲ್ಲಿ ಸಿಲುಕುತ್ತಾರೆ. ಇಂತಹ ಸ್ಥಿತಿಯಲ್ಲಿ ಬದಲಾವಣೆ ತರಬೇಕು. ಅತ್ಯಂತ ಸಣ್ಣ ಪ್ರಮಾಣದ ದೌರ್ಜನ್ಯವೂ ಗಂಭೀರವಾದುದು ಎಂದು ಅಧಿಕಾರದಲ್ಲಿ ಇರುವವರು ಪರಿಗಣಿಸುವಂತಾಗಬೇಕು. ಆಗ ಇಂತಹ ದೌರ್ಜನ್ಯಗಳನ್ನು ತಡೆಯಬಹುದು.

ಎಂ.ಡಿ.ಪಲ್ಲವಿ, ಗಾಯಕಿ ಮತ್ತು ನಟಿ

ಸ್ವಯಂರಕ್ಷಣೆ ತರಬೇತಿ ಕಡ್ಡಾಯವಾಗಲಿ



ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ ನಿಗ್ರಹ ಪ್ರತಿಯೊಂದು ಮನೆಯಿಂದಲೂ ಆರಂಭವಾಗಬೇಕಿದೆ. ಎಲ್ಲ ಕುಟುಂಬದಲ್ಲಿ ಹೆಣ್ಣುಮಕ್ಕಳನ್ನು ಗೌರವದಿಂದ, ಸಮಾನವಾಗಿ ನಡೆಸಿಕೊಳ್ಳುವ ಆರೋಗ್ಯಕರ ವಾತಾವರಣ ಏರ್ಪಡಬೇಕಿರುವುದು ಎಲ್ಲಕ್ಕಿಂತ ಮುಖ್ಯ. ಕಡ್ಡಾಯ ಶಿಕ್ಷಣದ ಜೊತೆಗೆ ಸ್ವಯಂರಕ್ಷಣೆ ತರಬೇತಿಯನ್ನೂ ಕಡ್ಡಾಯಗೊಳಿಸಬೇಕಿದೆ. ಇದು ಶಾಲಾ, ಕಾಲೇಜು ಹಂತದಿಂದಲೇ ಆರಂಭವಾಗಬೇಕು

- ಸ್ವಯಂರಕ್ಷಣೆ ಕುರಿತಂತೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಮತ್ತು ಪಾಠಗಳನ್ನು ಕಡ್ಡಾಯವಾಗಿ ಅಳವಡಿಸುವುದು
- ಲಿಂಗಾಧಾರಿತ ದೌರ್ಜನ್ಯಗಳು, ಪುರುಷ ಪ್ರಧಾನ ಸಮಾಜದಿಂದ ಉಂಟಾಗಿರುವ ಸಮಸ್ಯೆಗಳು, ಲಿಂಗ ಸಮಾನತೆಯ ಅವಶ್ಯಕತೆ ಕುರಿತ ವಿಶೇಷ ಪಾಠಗಳನ್ನು ಹೆಣ್ಣುಮಕ್ಕಳ ಜೊತೆಜೊತೆಗೆ ಗಂಡುಮಕ್ಕಳೂ ಕಲಿಯುವಂತೆ ಕಡ್ಡಾಯಗೊಳಿಸುವುದು
- ಕೌಟುಂಬಿಕ ಅಥವಾ ಸಾರ್ವಜನಿಕ ವಲಯಗಳಲ್ಲಿ ಯಾವುದೇ ಲೈಂಗಿಕ ಕಿರುಕುಳವಾದಲ್ಲಿ, ಅಹವಾಲು ಸಲ್ಲಿಸಲು ದಿನದ ಯಾವುದೇ ಸಮಯದಲ್ಲೂ ಲಭ್ಯವಿರುವಂತೆ ಮಹಿಳಾ ಸಹಾಯವಾಣಿ, ಮಕ್ಕಳ ಸಹಾಯವಾಣಿ ಮತ್ತು ಪೊಲೀಸ್ ಸೇವೆ ಕ್ರಿಯಾಶೀಲವಾಗಿರುವಂತೆ ನೋಡಿಕೊಳ್ಳುವುದು ಮತ್ತು ಹೆಣ್ಣುಮಕ್ಕಳಿಗೆ ಈ ಸೌಲಭ್ಯವನ್ನು ಬಳಸಿಕೊಳ್ಳುವ ಕುರಿತು ತರಬೇತಿ ಕೊಡುವುದು
- ಪ್ರತಿಯೊಂದು ಶಾಲಾ ಕಾಲೇಜುಗಳಲ್ಲಿ ಹೆಣ್ಣುಮಕ್ಕಳು ತಮಗಾದ ಯಾವುದೇ ಲೈಂಗಿಕ ಕಿರುಕುಳವನ್ನು ಮುಜುಗರವಿಲ್ಲದೆ ಹೇಳಿಕೊಳ್ಳಬಹುದಾದ ವಿಶ್ವಾಸಾರ್ಹ ಸಮಾಲೋಚನಾ ಸಮಿತಿಯೊಂದನ್ನು ರಚಿಸಿಕೊಳ್ಳುವುದು
- ಲೈಂಗಿಕ ದೌರ್ಜನ್ಯ/ಕಿರುಕುಳ ಎಸಗಿದ ಅಪರಾಧಿಗಳಿಗೆ ಕಠಿಣ ಶಿಕ್ಷೆ ಮತ್ತು ಅವಶ್ಯಕ ಸಮಾಲೋಚನೆ ಸಿಗುವಂಥ ವ್ಯವಸ್ಥೆ ರೂಪಿಸುವುದು
- ಪ್ರತೀ ಕುಟುಂಬದಲ್ಲೂ, ಶಾಲಾ ಕಾಲೇಜುಗಳಲ್ಲೂ ಗಂಡುಮಕ್ಕಳಿಗೆ ಲಿಂಗ ಸಮಾನತೆ ಕುರಿತ ವಿಶೇಷ ಶಿಕ್ಷಣ ಕೊಡಬೇಕಾದದ್ದು ಅತ್ಯಗತ್ಯ. ಸಣ್ಣ ವಯಸ್ಸಿನಿಂದಲೇ ಮೌಲಿಕ, ನೈತಿಕ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಮಕ್ಕಳಿಗೆ ಕಲಿಸಿಕೊಡಬೇಕಾದದ್ದು ಪ್ರತಿಯೊಂದು ಸರ್ಕಾರದ ಮತ್ತು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಬೇಕು

ಡಾ. ಚರಿತಾ ಮೈಸೂರು, ಕಲಾವಿದೆ, ಉಪನ್ಯಾಸಕಿ

ಶ್ರೇಷ್ಠತೆಯ ವ್ಯಸನವನ್ನು ಚಿವುಟಬೇಕು

ಮಹಿಳೆಯರು ಹಾಗೂ ಹೆಣ್ಣು ಮಕ್ಕಳ ವಿರುದ್ಧದ ಶೋಷಣೆಗೆ ತಡೆಯೊಡ್ಡುವ ಕೆಲಸ ಮಕ್ಕಳ ಬಾಲ್ಯದಿಂದಲೇ ಆರಂಭವಾಗಬೇಕು. ಮನೆ ಹಾಗೂ ಶಾಲೆಗಳು ಇದರಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಪುರುಷ ಪ್ರಧಾನ ಗುಣವು ಆರಂಭದಿಂದಲೇ ಮನಸ್ಸಿನಲ್ಲಿ ಅಡಿಯಿಟ್ಟಿರುತ್ತದೆ. ಲಿಂಗ ಶ್ರೇಷ್ಠತೆಯ ಈ ವ್ಯಸನವನ್ನು ಮಕ್ಕಳ ಬಾಲ್ಯದಲ್ಲಿಯೇ ಚಿವುಟುವ ಕೆಲಸ ಆಗಬೇಕು. ಲಿಂಗ ತಾರತಮ್ಯ ನಿವಾರಣೆಯ ಕುರಿತಂತೆ ಮಕ್ಕಳ ಮನಸ್ಸಿನಲ್ಲಿ ಪರಿವರ್ತನೆ ತರಬೇಕು. ಗಂಡು-ಹೆಣ್ಣು ಸಮಾನರು ಎಂಬ ಅಂಶವನ್ನು ಅತ್ಯಂತ ಪ್ರಜ್ಞಾಪೂರ್ವಕವಾಗಿ ಮಕ್ಕಳಲ್ಲಿ ಬೆಳೆಸಬೇಕು. ಯಾವ ಹೆಣ್ಣುಮಗುವನ್ನೂ ಅಪಮಾನಿಸುವ ಹಕ್ಕು ತನಗಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಡಬೇಕು. ಶಿಕ್ಷಣ ಮತ್ತು ಕಲಿಕೆಯ ಭಾಗವಾಗಿ ಇವೆಲ್ಲವೂ ಆಗಬೇಕು.

ಆರ್ಥಿಕವಾಗಿ ದುರ್ಬಲರಾಗಿರುವವರು ಹಾಗೂ ಜಾತಿ ಪದ್ಧತಿಯಲ್ಲಿ ತಳಭಾಗದಲ್ಲಿರುವ ಜನರೇ ಸಾಮಾನ್ಯವಾಗಿ ಹೆಚ್ಚಾಗಿ ಶೋಷಣೆಗೆ ಒಳಗಾಗುತ್ತಿದ್ದಾರೆ. 'ನಾವು ನಿಮ್ಮ ಜೊತೆಗಿದ್ದೇವೆ' ಎಂಬ ಆತ್ಮಸ್ಥೈರ್ಯವನ್ನು ಅವರಲ್ಲಿ ತುಂಬಬೇಕಿದೆ. ಅವರ ಹಕ್ಕುಗಳ ರಕ್ಷಣೆಗೆ ಗಟ್ಟಿ ದನಿಯಲ್ಲಿ ಮಾತನಾಡಬೇಕಿದೆ. ಅನ್ಯಾಯವನ್ನು ಮುಲಾಜಿಲ್ಲದೆ ಖಂಡಿಸುವ ಮನಸ್ಥಿತಿ ಬೆಳೆಸಿಕೊಳ್ಳಬೇಕು.

ಹೆಣ್ಣು ಮಕ್ಕಳಿಗೆ ವೈಯಕ್ತಿಕ ಹಕ್ಕುಗಳಿವೆ ಎಂಬುದರ ಅರಿವು ಎಲ್ಲರಿಗೂ ಇರಬೇಕಾಗಿದೆ. ಅವರ ಎಳೆಯ ಬಾಲ್ಯವನ್ನು ಗೌರವಿಸಬೇಕು. ಮಕ್ಕಳ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ಗ್ರಾಮಪಂಚಾಯಿತಿ ಮಟ್ಟದಲ್ಲಿ ನಡೆಯುವ ಗ್ರಾಮಸಭೆಗಳಿಗೆ ಕಾನೂನಿನ ಮಾನ್ಯತೆ ದೊರಕಿಸಿಕೊಡುವ ಅಗತ್ಯವಿದೆ. ಈ ಸಭೆಗಳು ಬಹುತೇಕ ಯಾಂತ್ರಿಕವಾಗಿ ಮುಕ್ತಾಯವಾಗುತ್ತವೆ. ಈ ಸಭೆಯಲ್ಲಿ ಜಿಲ್ಲಾ, ತಾಲ್ಲೂಕು ಮಟ್ಟದ ಮಕ್ಕಳ ಹಕ್ಕುಗಳ ರಕ್ಷಣೆ ಅಧಿಕಾರಿಗಳು, ನ್ಯಾಯಾಧೀಶರು, ಪೊಲೀಸ್ ಅಧಿಕಾರಿಗಳು ಇರುವಂತೆ ನೋಡಿಕೊಂಡರೆ ಅರ್ಥಪೂರ್ಣವಾಗುತ್ತದೆ. ಮಕ್ಕಳ ರಕ್ಷಣೆಗೆ ಬಲ ಬರುತ್ತದೆ.

ಜಿ.ಟಿ. ಸತ್ಯನಾರಾಯಣ, ಸಾಮಾಜಿಕ ಹೋರಾಟಗಾರರು, ತುಮರಿ

ಅರಿವು ಮನೆಯಿಂದಲೇ ಮೂಡಬೇಕು

ನಾವು ಹೆಣ್ಣುಮಕ್ಕಳನ್ನು ಹೇಗೆ ನಡೆಸಿಕೊಳ್ಳಬೇಕು ಎಂದು ಮಕ್ಕಳಿಗೆ ಹೇಳಿಕೊಡುವ ಮೂಲಕ ಇಂತಹ ದೌರ್ಜನ್ಯಗಳನ್ನು ತಡೆಯಬಹುದು. ಏಕೆಂದರೆ, ನಾನು ನನ್ನ ಪತ್ನಿಯನ್ನು ಹೇಗೆ ನಡೆಸಿಕೊಳ್ಳುತ್ತೇನೆ ಎಂಬುದನ್ನು ನನ್ನ ಮಗ ನೋಡುತ್ತಾನೆ ಮತ್ತು ಅದೇ ರೀತಿ ಹೆಣ್ಣುಮಕ್ಕಳನ್ನು ನಡೆಸಿಕೊಳ್ಳುತ್ತಾನೆ. ಹೀಗಾಗಿ ನಮ್ಮ ವರ್ತನೆ ಸರಿಯಾಗಿದ್ದರೆ, ಮುಂದಿನ ಪೀಳಿಗೆಯು ಸರಿಯಾಗುತ್ತದೆ. ಶಾಲಾ-ಕಾಲೇಜಿನಲ್ಲಿ ಈ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳಿರಬೇಕು. ಆದರೆ, ಅದಕ್ಕಿಂತಲೂ ಮೊದಲೇ ಮನೆಯಿಂದಲೇ ಪೋಷಕರ ನಡವಳಿಕೆಯ ಮೂಲಕ ಇಂತಹ ಅರಿವು ಮಕ್ಕಳಿಗೆ ಮೂಡಬೇಕು. ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳನ್ನು ನಡೆಸಿಕೊಳ್ಳುವ ನಮ್ಮ ಮನಸ್ಥಿತಿಯು ಬದಲಾಗಬೇಕು. ಉದಾಹರಣೆಗೆ, ಗಂಡು ಮಕ್ಕಳು ಪ್ರವಾಸಕ್ಕೆ ಹೋಗುವಾಗ ನಾವು ನೀಡುವ ಎಚ್ಚರಿಕೆಯ ವಿಧಾನವೇ ಬೇರೆ. ಹೆಣ್ಣುಮಕ್ಕಳಿಗೆ ನೀಡುವ ಎಚ್ಚರಿಕೆಯ ವಿಧಾನವೇ ಬೇರೆ. ಇಂಥ ಪೂರ್ವಾಗ್ರಹದ ದೃಷ್ಟಿಕೋನ ಮೊದಲು ಬದಲಾಗಬೇಕು. ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಮಹಿಳೆಯ ಮೇಲಿನ ಹಿಂಸಾತ್ಮಕ ಕೃತ್ಯ ನಡೆದಾಗ, ಸಂಜೆ ಆರು ಗಂಟೆಯ ನಂತರ ಅಲ್ಲಿಗೆ ಹೋಗಬೇಡಿ ಎಂದು ಸರ್ಕಾರ ಹೇಳಿತು. ಆದರೆ, ಸರ್ಕಾರವು ಅಭಯ ಮೂಡಿಸುವ ಕೆಲಸ ಮಾಡಬೇಕಿತ್ತು, ಬದಲಿಗೆ ಈ ರೀತಿ ನಿರ್ಬಂಧ ಹೇರುವ ಕ್ರಮವನ್ನಲ್ಲ. ಇಂತಹ ಕೃತ್ಯಗಳು ನಡೆದಾಗಲೆಲ್ಲಾ ಸಂತ್ರಸ್ತೆಯ ಉಡುಗೆ ಮತ್ತು ವರ್ತನೆಯ ಬಗ್ಗೆಯೇ ಪ್ರಶ್ನೆ ಎತ್ತಲಾಗುತ್ತದೆ. ಆ ರೀತಿ ಉಡುಗೆ ತೊಡಬಾರದಿತ್ತು, ಅಷ್ಟು ಹೊತ್ತಿನಲ್ಲಿ ಅಲ್ಲಿಗೆ ಏಕೆ ಹೋಗಬೇಕಿತ್ತು ಎಂಬ ಬೀಸು ಹೇಳಿಕೆಗಳು ಬರುತ್ತವೆ. ಸಚಿವರೇ ಅಂತಹ ಹೇಳಿಕೆ ನೀಡುತ್ತಾರೆ. ಇದರ ಬದಲಿಗೆ, ಹೆಣ್ಣು ಮಕ್ಕಳನ್ನು ಹೇಗೆ ನಡೆಸಿಕೊಳ್ಳಬೇಕು ಎಂದು ಗಂಡುಮಕ್ಕಳಿಗೆ ಹೇಳಿಕೊಡಬೇಕು. ಹೀಗೆ ಮನೆಯೊಳಗೆ, ಸಾಮಾಜಿಕವಾಗಿ ನೈತಿಕ ಪ್ರಜ್ಞೆ ಮೂಡಿಸುವ ಕೆಲಸವಾಗಬೇಕು. ಸರ್ಕಾರವೂ ಕಠಿಣ ಕಾನೂನಿನ ಕ್ರಮದ ಅಭಯ ನೀಡಬೇಕು.

ಶಿವಕುಮಾರ್ ಮಾವಲಿ, ಸಾಹಿತಿ, ಉಪನ್ಯಾಸಕ

ಸಮಸ್ಯೆಯ ಮೂಲ ಸರಿಪಡಿಸಬೇಕು

ಇಂತಹ ದೌರ್ಜನ್ಯಗಳ ಬಗ್ಗೆ ನಿರಂತರವಾಗಿ ಜಾಗೃತಿ ಮೂಡಿಸುವ ಕೆಲಸ ಆಗಬೇಕು. ಅದು ಶಿಕ್ಷಣದ ಮೂಲಕ ಮತ್ತು ಸಮಾಜದ ವಿವಿಧ ಸ್ತರಗಳನ್ನು ತಲುಪುವ ಕಾರ್ಯಕ್ರಮಗಳ ಮೂಲಕ ಆಗುಮಾಡಬೇಕು. ಮತ್ತೆ, ಈ ರೀತಿಯ ದೌರ್ಜನ್ಯ ಎಸಗುವವರಿಗೆ ದೊಡ್ಡಮಟ್ಟದ ಶಿಕ್ಷೆಯಾಗಬೇಕು. ಏಕೆಂದರೆ, ಏನು ಮಾಡಿದರೂ ಶಿಕ್ಷೆ ಆಗುವುದಿಲ್ಲ ಎಂಬ ನಿರಾಳ ಭಾವ ದೌರ್ಜನ್ಯ ಎಸಗಿದವರಲ್ಲಿ ಬಹುತೇಕ ಇರುತ್ತದೆ. ಇಂತಹ ದೌರ್ಜನ್ಯಗಳು ನಡೆದಾಗ, ಆ ದೌರ್ಜನ್ಯದ ಬಗ್ಗೆ ಹೆಚ್ಚು ಚರ್ಚೆ ಮಾಡುತ್ತೇವೆ. ಆದರೆ, ಆ ದೌರ್ಜನ್ಯಕ್ಕೆ ಕಾರಣವಾಗುವ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳಲು ಯತ್ನಿಸುವುದಿಲ್ಲ. ಹೆಣ್ಣುಮಕ್ಕಳನ್ನು ಅರಿಯುವ ದಾರಿಗಳನ್ನು ವಿರೂಪಗೊಳಿಸಿದ್ದೇವೆ. ಧಾರ್ಮಿಕ ಪರಿಸರ ಮತ್ತು ರಾಜಕೀಯ ಪರಿಸರದಲ್ಲಿರುವ ವಾತಾವರಣವೂ ಇಂತಹ ಕೃತ್ಯಗಳಿಗೆ ಕಾರಣವಾಗುತ್ತವೆ. ಧರ್ಮದ ಬಗ್ಗೆ ಅಪಾರವಾದ ಗೌರವ ಬೆಳೆಸಿಕೊಂಡಾಗ, ಆ ಧರ್ಮದ ಮುಸುಕಿನಲ್ಲಿ ನಡೆಯುವ ಅನ್ಯಾಯದ ಬಗ್ಗೆ ಗಮನ ನೀಡುವುದಿಲ್ಲ. ಯಾವುದೇ ವ್ಯವಸ್ಥೆಯನ್ನು ಪರೀಕ್ಷೆಗೊಳಪಡಿಸದೆ ಒಪ್ಪಿಕೊಂಡಾಗ ಅದರ ರೋಗಗಳು ಉಲ್ಬಣಗೊಳ್ಳುತ್ತವೆ. ಅದರ ಮುಸುಕಿನಲ್ಲಿ ನಡೆಯುವ ಅನ್ಯಾಯದ ಕಡೆ ಗಮನ ಕೊಡುವುದಿಲ್ಲ. ಹಾಗಾಗಿ ಇಂತಹ ಕೃತ್ಯಗಳು ನಡೆದಾಗ, ಆ ಕೃತ್ಯಗಳ ಹಿನ್ನೆಲೆಯಲ್ಲಿ ಇರುವ ರೋಗಗ್ರಸ್ತ ಮನಸ್ಥಿತಿಯನ್ನು ಪತ್ತೆ ಮಾಡಬೇಕು. ನಿರಂತರವಾಗಿ ಎಚ್ಚರಗೊಳ್ಳದೆ ಬೇರೆ ದಾರಿಯಿಲ್ಲ. ಇಲ್ಲವಾದರೆ ಇನ್ನಷ್ಟು ಹೆಣ್ಣು ಮಕ್ಕಳು ಬಲಿಯಾಗುವರು. ಅವರಿಗೆ ಸೂಕ್ತ ರಕ್ಷಣೆ ಒದಗಿಸಿ ಲೈಂಗಿಕ ಹಿಂಸೆಗಳನ್ನು ಕೊನೆಗಾಣಿಸಬೇಕಿದೆ. ಅವರಿಗೆ ಸಂಪೂರ್ಣ ಘನತೆಯ ಬದುಕನ್ನು ಒದಗಿಸುವುದು ಮಾನವ ಜನಾಂಗದ ಕರ್ತವ್ಯ

ವಿಕ್ರಮ ವಿಸಾಜಿ, ಕವಿ, ಉಪನ್ಯಾಸಕ

ಠಾಣೆಗಳಲ್ಲಿ ಆಗಬೇಕಿದೆ ಪರಿವರ್ತನೆ

'ಒಂದು ಸಮಾಜದಲ್ಲಿರುವ ಸ್ತ್ರೀ ಪುರುಷ ಸಂಬಂಧ ಎಷ್ಟು ಆರೋಗ್ಯಕರವಾಗಿದೆ ಎನ್ನುವುದು, ಮಾನವನು ತನ್ನ ಪಶು ಮನಃಸ್ಥಿತಿಯಿಂದ ಮನುಷ್ಯನಾಗುವತ್ತ ಎಷ್ಟು ಸಾಗಿದ್ದಾನೆ ಎನ್ನುವುದರ ಅಳತೆಗೋಲಾಗಿದೆ' ಎಂದು ಕಾರ್ಲ್‌ಮಾರ್ಕ್ಸ್ ಹೇಳುತ್ತಾರೆ. ಬಹಳಷ್ಟು ಮನೆಗಳಲ್ಲಿ ಇಂದಿಗೂ ಕೌಟುಂಬಿಕ ದೌರ್ಜನ್ಯ ಎನ್ನುವುದು ನಿರಂತರವಾಗಿ ನಡೆಯುತ್ತಲೇ ಇದೆ.

ಕಳೆದ ವಾರವಷ್ಟೇ, ಕೌಟುಂಬಿಕ ದೌರ್ಜನ್ಯ ಅನುಭವಿಸಿದ ಹೆಣ್ಣೊಬ್ಬಳಿಗೆ ಬೆಂಬಲವಾಗಿ ಪೊಲೀಸ್ ಠಾಣೆಗೆ ದೂರು ನೀಡಲು ಹೋಗಿದ್ದೆ. ಅಲ್ಲಿನ ಸಬ್ ಇನ್‌ಸ್ಪೆಕ್ಟರ್, ದೈಹಿಕ ದೌರ್ಜನ್ಯಕ್ಕೆ ಒಳಗಾದ ವಿಡಿಯೊ ನೋಡಿದ ಮೇಲೆ, ಹೆಣ್ಣು ಹೇಗೆ ಪತಿಯನ್ನು ಒಲಿಸಿಕೊಳ್ಳಬೇಕು ಮತ್ತು ತಾನು ಹೇಗೆಲ್ಲಾ ಒಲಿಸಿಕೊಳ್ಳುತ್ತೇನೆ ಎನ್ನುವುದರ ಬಗ್ಗೆ ಅಸಹ್ಯವಾದ ಸುದೀರ್ಘ ಭಾಷಣ ಮಾಡಿದ್ದರು.

ಪೊಲೀಸ್ ಠಾಣೆಗೆ ದೂರು ನೀಡಲು ಹೋಗುವ ಮಹಿಳೆಯರಿಗೆ ಸೂಕ್ತ ವಾತಾವರಣ ಕಲ್ಪಿಸಲಾಗಿದೆಯೇ ಎಂದು ಪ್ರಶ್ನಿಸಿಕೊಳ್ಳಬೇಕಿದೆ. ಈ ದಿಸೆಯಲ್ಲಿ ಬದಲಾವಣೆ ಆಗಬೇಕಿದೆ. ಮಹಿಳಾ ಪೊಲೀಸ್ ಠಾಣೆಗಳಲ್ಲಿ ಕರ್ತವ್ಯದಲ್ಲಿರುವ ಸಿಬ್ಬಂದಿಗೆ ಈ ಕುರಿತು ಕಡ್ಡಾಯ ತರಬೇತಿ ಮತ್ತು ಸ್ಪಷ್ಟ ನಿರ್ದೇಶನ ನೀಡಬೇಕಿದೆ. ದೌರ್ಜನ್ಯದಿಂದ ರಕ್ಷಣೆ ನೀಡಬೇಕಾದ ಠಾಣೆಗಳಿಂದಲೇ ಈ ಪರಿವರ್ತನೆ ಆರಂಭವಾಗಬೇಕು.

ಆಯಿಶಾ ಫರ್ಝಾನ ಯು.ಟಿ
ನಾಗರಿಕ ಸೇವಾ ಪರೀಕ್ಷೆಗಳ ತರಬೇತುದಾರರು

ಆಧಾರ: ಯುಎನ್‌ವಿಮೆನ್ ಜಾಲತಾನ– ಲಿಂಗ ಸಮಾನತೆ ಸಾಧಿಸುವುದಕ್ಕಾಗಿ ಇರುವ ವಿಶ್ವ ಸಂಸ್ಥೆಯ ಘಟಕ

ಪ್ರಜಾವಾಣಿ ಪ್ರಜಾಧ್ವನಿ — ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

FIFA ವಿಶ್ವಕಪ್‌ನಲ್ಲಿ ಅರ್ಜೆಂಟೀನಾ ಮತ್ತು ಜರ್ಮನಿ ವಿರುದ್ಧ ಗೆಲುವು ದಾಖಲಿಸಿದ ಸೌದಿ ಅರೇಬಿಯ ಮತ್ತು ಜಪಾನ್ ಜಾಗತಿಕ ಫುಟ್‌ಬಾಲ್‌ನ ಶಕ್ತಿಕೇಂದ್ರವಾಗುವ ಸಾಮರ್ಥ್ಯ ಹೊಂದಿವೆ ಎಂದು ಭಾವಿಸುವಿರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ | 284

ಶಿವನಲ್ಲಿ ಮೇನಾದೇವಿ ಪ್ರಾರ್ಥನೆ

ದೇವತೆಗಳು ಮತ್ತು ಮುನಿಗಳ ಪಾದಗಳನ್ನು ತೊಳೆದ ಪರ್ವತರಾಜ, ಅತಿಥಿಗಳಿಗೆಲ್ಲ ಕಾಣಿಕೆಗಳನ್ನು ಕೊಟ್ಟು ಸತ್ಕರಿಸಿದ. ಶಿವ-ಗೌರಿಯ ಕಲ್ಯಾಣ ಮಹೋತ್ಸವದ ನಾಲ್ಕನೆಯ ದಿನವೂ ಯಾವುದಕ್ಕೂ ಕೊರತೆಯಿಲ್ಲದಂತೆ ವಿಜೃಂಭಣೆಯಿಂದ ಕಾರ್ಯಕ್ರಮಗಳು ನಡೆಯಿತು. ಐದನೇ ದಿನ ಪ್ರಾರಂಭವಾದಾಗ ದೇವತೆಗಳೆಲ್ಲರೂ ತಮ್ಮ ಊರುಗಳಿಗೆ ಹೊರಡಲು ಪರ್ವತರಾಜನನ್ನು ವಿಜ್ಞಾಪಿಸಿಕೊಂಡರು. ದೇವತೆಗಳ ಮಾತನ್ನು ಒಪ್ಪದ ಪರ್ವತರಾಜ, 'ದೇವತೆಗಳಿರಾ, ದಯೆಯಿಟ್ಟು ಇನ್ನೂ ಕೆಲವು ದಿನ ಇಲ್ಲಿಯೇ ಇರಬೇಕು' ಎಂದು ಮನವಿ ಮಾಡಿದ. ಒತ್ತಾಯಪೂರ್ವಕವಾಗಿ ಅತಿಥಿಗಳನ್ನು ಬಹಳ ದಿನಗಳವರೆಗೂ ಇರಿಸಿಕೊಂಡು ಆದರದಿಂದ ಸತ್ಕರಿಸಿದ.

ಎಲ್ಲರೂ ಬಹಳ ದಿನಗಳವರೆಗೂ ಇದ್ದರು. ನಂತರ ಹೊರಡಲು ಅನುಮತಿಸುವಂತೆ ಕೋರಿದರು. ಸಮ್ಮತಿಸಿದ ಹಿಮವಂತ ಇಷ್ಟದೇವತೆಯನ್ನು ಪೂಜಿಸಿದ ನಂತರ, ಪಟ್ಟಣದ ಪ್ರಮುಖರು ಮತ್ತು ತನ್ನ ಬಂಧುಗಳೊಡನೆ ದೇವತೆಗಳಿದ್ದ ಜನಾವಾಸಕ್ಕೆ ಬಂದ. ಅಲ್ಲಿ ಮಹೇಶ್ವರನನ್ನು ಪೂಜಿಸಿದ. ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳೊಡನೆ ಪರಮೇಶ್ವರನನ್ನು ಕಳುಹಿಸಿಕೊಟ್ಟ.

ಈ ಸಂದರ್ಭದಲ್ಲಿ ಮುನಿಗಳೂ ದೇವತೆಗಳೂ ಪರ್ವತರಾಜನನ್ನು ಉತ್ತಮವಾಗಿ ವಿವಾಹ ಕಾರ್ಯ ನಡೆಸಿಕೊಟ್ಟದ್ದಕ್ಕೆ ಹೊಗಳಿದರು. 'ನೀನೇ ಧನ್ಯ. ಪರಮಪ್ರಭುವಾದ ಶಿವ ನಿನ್ನ ಮನೆಯ ಬಾಗಿಲಿಗೆ ಬಂದು, ನಿನ್ನ ಮಗಳ ವಿವಾಹವಾದ. ಬ್ರಹ್ಮ, ವಿಷ್ಣು ಸಹ ನಿನ್ನ ಮನೆಗೆ ಬಂದಿರಬೇಕಾದರೆ ನಿನ್ನಂತಹ ಪುಣ್ಯವಂತ ಲೋಕದಲ್ಲಿ ಯಾರೂ ಇಲ್ಲ. ನೀನು ನಮಗೆ ಬಿಡಾರಮಾಡಿಕೊಟ್ಟಿರುವ ಜನವಾಸವಂತೂ ಅತಿರಮ್ಯವಾಗಿದೆ. ಬಂದವರೆಲ್ಲರಿಗೂ ಅಪೂರ್ವವಾದ ಭೋಜನವು ನಡೆಯಿತು. ಇಂತಹ ಪೂರ್ಣಾನಂದದಲ್ಲಿ ಭಾಗವಹಿಸಿದ ನಾವೆಲ್ಲರೂ ಧನ್ಯರು' ಎಂದರು.

ಶಿವನು ಪಾರ್ವತಿಯೊಡನೆ ಕೈಲಾಸಕ್ಕೆ ಹೊರಡುವಾಗ ಮೇನಾದೇವಿ ಅಳುತ್ತಾ ಹೇಳಿದಳು, 'ಕರುಣಾನಿಧಿಯೇ, ಪಾರ್ವತಿಯಲ್ಲಿ ದಯೆ ಇಟ್ಟು ಕಾಪಾಡುತ್ತಿರು. ಒಂದು ವೇಳೆ ಅವಳಲ್ಲಿ ಅನೇಕ ದೋಷಗಳಿದ್ದರೂ, ಯಾವುದೇ ತಪ್ಪು ಮಾಡಿದರೂ ಕ್ಷಮಿಸು. ಅವಳು ನಿನ್ನ ಚರಣಕಮಲಗಳನ್ನೇ ನಂಬಿ ಬರುತ್ತಿದ್ದಾಳೆ. ಜನ್ಮಜನ್ಮದಲ್ಲಿಯೂ ನೀನೇ ಪತಿಯಾಗಬೇಕೆಂದು ತಪಸ್ಸು ಮಾಡಿ ಮದುವೆಯಾಗಿದ್ದಾಳೆ. ಕನಸಿನಲ್ಲಾಗಲಿ, ಜಾಗ್ರತಾವಸ್ಥೆಯಲ್ಲಾಗಲಿ, ನಿನ್ನನ್ನು ಬಿಟ್ಟು ಮತ್ತಾರನ್ನೂ ಅವಳು ಸ್ಮರಿಸಿಲ್ಲ. ನಿನ್ನ ಭಕ್ತಿಯುತವಾದ ಸ್ತೋತ್ರಗಳನ್ನು ಕೇಳಿದ ಮಾತ್ರದಿಂದ ಪಾರ್ವತಿಯು ಆನಂದಭಾಷ್ಪವನ್ನು ಸುರಿಸುತ್ತಾ, ರೋಮಾಂಚಿತಳಾಗುವಳು. ಇಂಥ ಪತಿಹಿತ ಬಯಸುವ ನನ್ನ ಮಗಳನ್ನು ಚೆನ್ನಾಗಿ ನೋಡಿಕೋ. ಅವಳೆಂದು ನೋವು ಪಡದಂತೆ ಜೋಪಾನವಾಗಿ ಬಾಳಿಸು' ಎನ್ನುತ್ತಾ, ಪಾರ್ವತಿಯನ್ನು ಈಶ್ವರನಿಗೆ ಸಮರ್ಪಿಸಿದಳು.

ಮಗಳ ಅಗಲಿಕೆಯ ದುಃಖ ತಾಳಲಾರದ ಮೇನಾದೇವಿ ಮೂರ್ಛೆ ಹೋದಳು. ಮೇನಾದೇವಿಯನ್ನು ಮೇಲೆತ್ತಿ ಸಂತೈಸಿದ ಶಿವ, ಪತ್ನಿಯಾದ ಪಾರ್ವತಿಯನ್ನು ಪ್ರಾಣದಂತೆ ಜಾಗ್ರತೆಯಾಗಿ ನೋಡಿಕೊಳ್ಳುವುದಾಗಿ ಅಭಯ ನೀಡಿದ. ಸಮಾಧಾನಿತಳಾದ ಮೇನಾದೇವಿಯಿಂದ ಬೀಳ್ಕೊಂಡ ಸದಾಶಿವ ದೇವತೆಗಳೊಡನೆ ಹೊರಟ. ಈಶ್ವರನೊಂದಿಗೆ ಪರ್ವತರಾಜ ಮಾತನಾಡುತ್ತಾ ನಿಧಾನವಾಗಿ ಹಿಮವತ್ಪರ್ವತದ ಹೊರಗಡೆ ಇರುವ ಉದ್ಯಾನಕ್ಕೆ ಬಂದ. ಅಲ್ಲಿ ಈಶ್ವರನ ಆಗಮನಕ್ಕಾಗಿ ಅವನ ಪರಿವಾರ ಕಾಯುತ್ತಿತ್ತು. ಗಂಡನ ಮನೆಗೆ ಪಾರ್ವತಿಯನ್ನು ಕಳುಹಿಸುವಾಗ ಮೇನಾದೇವಿ ಸಂಪ್ರದಾಯದಂತೆ ಹಿರಿಯ ಮುತ್ತೈದೆಯರಿಂದ ಪತಿವ್ರತಾಧರ್ಮದ ಬೋಧನೆ ಮಾಡಿಸಿದಳು.

ಇಲ್ಲಿಗೆ ಶ್ರೀಶಿವಮಹಾಪುರಾಣದಲ್ಲಿಯ ಪಾರ್ವತೀಖಂಡದ ಐವತ್ತಮೂರನೆಯ ಅಧ್ಯಾಯ ಮುಗಿಯಿತು.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ನಂದನ ಮಾದರಿ

ಧನ್ಯ ಹೊಲೆಯರ ನಂದ; ಹಿಡಿದುದವನನು ಕನಸು
ಸ್ವರ್ಣಸಭೆಯಾ ಶೈವತಾಂಡವದ ಕನಸು ||
ಅನ್ಯಚಿಂತೆಗಳನದು ಬಿಡಿಸುತವನಾತ್ಮವನು |
ಚಿನ್ಮಯಕೆ ಸೇರಿಸಿತು – ಮಂಕುತಿಮ್ಮ || 764 ||

ಪದ-ಅರ್ಥ: ಹಿಡಿದುದವನನು = ಹಿಡಿದುದು + ಅವನನು, ಅನ್ಯಚಿಂತೆಗಳನದು = ಅನ್ಯ + ಚಿಂತೆಗಳನು + ಅದು, ಬಿಡಿಸುತವನಾತ್ಮವನು = ಬಿಡಿಸುತ + ಅವನ + ಆತ್ಮವನು.

ವಾಚ್ಯಾರ್ಥ: ಹೊಲೆಯರ ನಂದ ಧನ್ಯ. ಸ್ವರ್ಣಸಭೆಯಲ್ಲಿ ಶಿವನ ತಾಂಡವ ನೃತ್ಯವನ್ನು ಕಾಣುವ ಕನಸು ಅವನನ್ನು ಹಿಡಿಯಿತು. ಅದು ಅವನ ಉಳಿದ ಚಿಂತೆಗಳನ್ನು ಬಿಡಿಸಿ, ಅವನಾತ್ಮವನ್ನು ಶಾಶ್ವತವಾಗಿಸಿತು.

ವಿವರಣೆ: ಕಗ್ಗದಲ್ಲೊಂದು ಕಥೆ. ಸಮಾಜಕ್ಕೆ ಮಾದರಿಯಾದ, ಈಗಲೂ ಮಾದರಿಯಾಗಬಹುದಾದ ಕಥೆ. ತಮಿಳಿನ ಪೆರಿಯ ಪುರಾಣದಲ್ಲಿ ಅರವತ್ಮೂರು ಜನ ಮಹಾನ್ ಶೈವ ಭಕ್ತರ ಪರಂಪರೆ ಇದೆ. ಆ ಸಂತರನ್ನು ನಾಯನಾರ್‌ಗಳು ಎನ್ನುತ್ತಾರೆ. ಅವರಲ್ಲಿ ಹದಿನೆಂಟನೆಯವರನ್ನು ನಂದನಾರ್ ಅಥವಾ ತಿರುನಾಳೈಪ್ಪೋವರ್ ನಾಯನಾರ್ ಎಂದು ಕರೆಯುತ್ತಾರೆ. ಅವರ ಹೆಸರು ನಂದ. ಆತ ಅಂದು ಹೊಲೆಯರ ಕುಟುಂಬಕ್ಕೆ ಸೇರಿದವ. ಅವನ ಕಾರ್ಯ ನಗಾರಿ ಮತ್ತು ಇತರ ವಾದ್ಯಗಳಿಗೆ ಚರ್ಮವನ್ನು ಸಿದ್ಧಪಡಿಸುವುದು. ಮತ್ತೆ ಅದರೊಂದಿಗೆ ಹೊಲದಲ್ಲಿ ಕೂಲಿ ಕೆಲಸ. ಅತ್ಯಂತ ಬಡತನದ ಸ್ಥಿತಿಯಲ್ಲಿ ಪುಳ್ಳೈಪ್ಪಡಿ ಎಂಬ ಗ್ರಾಮದಲ್ಲಿ ಹುಟ್ಟಿ ಬೆಳೆದ ನಂದನಿಗೆ ಒಂದೇ ಕನಸು. ತಾನು ಚಿದಂಬರದಲ್ಲಿ ಶಿವ ತಾಂಡವ ನೃತ್ಯಮಾಡುವುದನ್ನು ಕಾಣಬೇಕು. ಅವನಿಗೆ ಚರ್ಮ ಹದಮಾಡುವಾಗ, ಬೆಳೆ ನಾಟಿಮಾಡುವಾಗ, ರಾಶಿ ಮಾಡುವಾಗ ಕಾಣುತ್ತಿದ್ದುದು ಶಿವತಾಂಡವ ಮಾತ್ರ. ಅಂದಿನ ಜಾತಿ ವಿಷದ ಮಡುವಿನಲ್ಲಿದ್ದ ನಂದನಿಗೆ ಹೆದರಿಕೆ. ತಾನು ಚಿದಂಬರಂಗೆ ಹೋಗುವುದು ಸರಿಯೇ? ಮೇಲ್ವರ್ಗದವರು ತನ್ನನ್ನು ಬಿಟ್ಟಾರೆಯೆ? ಅಲ್ಲಿಗೆ ಹೋಗಬೇಕೆಂದವನು ನಾಳೆ ಹೋಗುತ್ತೇನೆ, ನಾಳೆ ಹೋಗುತ್ತೇನೆ ಎಂದು ಮುಂದೆ ಹಾಕುತ್ತ ಬಂದ. ಅದಕ್ಕೆ ಮುಂದೆ ಅವನ ಹೆಸರು ತಿರುನಾಳೈಪ್ಪೋವರ್ ಎಂದಾಯಿತು. ಹಾಗೆಂದರೆ "ಈತ ನಾಳೆ ಹೋಗುತ್ತಾನೆ". ಅಷ್ಟು ಹಿಂಜರಿದು ಕೊನೆಗೂ ಮನಸ್ಸು ಗಟ್ಟಿ ಮಾಡಿಕೊಂಡು ನಂದ ಚಿದಂಬರಕ್ಕೆ ಹೋದ. ಊರೊಳಗೆ ಹೋಗಲು ಧೈರ್ಯ ಸಾಲದೆ ಬರೀ ನಗರ ಪ್ರದಕ್ಷಿಣೆ ಮಾಡಿ, ದಣಿದು ಊರ ಹೊರಗೆ, ಮರದ ಕೆಳಗೆ ಮಲಗಿಬಿಟ್ಟ. ಶಿವ ತನ್ನ ಪರಮಭಕ್ತನ ಏಕಾಗ್ರತೆ, ಭಕ್ತಿಯನ್ನು ಕಂಡು ಮರುದಿನ ಬೆಳಿಗ್ಗೆ ದೇವಸ್ಥಾನದೊಳಗೆ ಬರಲು ಹೇಳಿದ. ದೇವಸ್ಥಾನದಲ್ಲಿದ್ದ ಮೂರು ಸಾವಿರ ಬ್ರಾಹ್ಮಣರಿಗೂ ಅವನನ್ನು ಸ್ವಾಗತಿಸಲು ಹೇಳಿ, ಅವನು ಬಂದಾಗ ಅವನನ್ನು ತನ್ನೊಳಗೆ ಸೇರಿಸಿಕೊಂಡ. ತನ್ನ ಆರಾಧ್ಯದೈವವನ್ನೇ ಸೇರಿಕೊಂಡ ನಂದ ಪರಮಭಕ್ತ ನಾಯನಾರ್ ಆದ. ಇದು ಕಥೆ. ಇದನ್ನು ಕಗ್ಗ ನಮಗೊಂದು ಆದರ್ಶವೆಂದು ನೀಡುತ್ತದೆ. ನಂದನ ಏಕಾಗ್ರತೆ, ತನ್ಮಯತೆ, ಸದಾ ಕಾಲದ ತುಡಿತ ಅವನ ಉಳಿದ ಚಿಂತೆಗಳನ್ನು ಮರೆಸಿಬಿಟ್ಟಿತ್ತು. ಅಷ್ಟೇ ಅಲ್ಲ ಅವನನ್ನು ಚಿನ್ಮಯನನ್ನಾಗಿಸಿತು, ಅಮರನಾಗಿಸಿತು. ಅಮರತ್ವಕ್ಕೆ, ಸಾರ್ಥಕ್ಯಕ್ಕೆ ನಂದನ ಗುಣಗಳೇ ನಮಗೆ ಮಾದರಿ. ಅವು, ಜೀವನಕ್ಕೊಂದು ಪರಮಾದರ್ಶದ ಗುರಿ, ಗುರಿಯ ಮೇಲಿನ ಕಣ್ಣು ತೆಗೆಯದ ತಾದಾತ್ಮ್ಯತೆ, ಸತತ ಪರಿಶ್ರಮ. ಇವು ಎಲ್ಲರಿಗೂ, ಯಾವ ಕಾಲಕ್ಕೂ ಮಾದರಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶುಕ್ರವಾರ ನವೆಂಬರ್ 25, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಶುಕ್ಲ ದ್ವಿತೀಯ ಗಂ. 22-35 ನಕ್ಷತ್ರ: ಜ್ಯೇಷ್ಠ ಗಂ. 17-21 ಯೋಗ: ಸುಕರ್ಮ ಗಂ. 08-43, ಧೃತಿ ಗಂ. 28-59 ಕರಣ: ಬಾಲವ ಗಂ. 12-08, ವೃಶ್ಚಿಕ ಮಾಸದ 08 ನೇ ದಿನ.
ರಾಹುಕಾಲ: ಬೆಳಿಗ್ಗೆ 10-30–12-00
ಸೂರ್ಯೋದಯ: 06-38 **ಸೂರ್ಯಾಸ್ತ:** 05-57
ಮುಸ್ಲಿಂ ದಿನಾಂಕ: 29 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ: 2, 6

ಮೇಷ: ಸಹೋದರರಲ್ಲಿನ ಸಂಬಂಧ ಗಟ್ಟಿಗೊಂಡು ಸುರಕ್ಷತೆಯ ಭಾವ ಉಂಟಾಗುವುದು. ಮನೆಯಲ್ಲಿ ಅನುಕೂಲಕರ ಸನ್ನಿವೇಶ ನಿರ್ಮಾಣವಾಗಲಿದೆ. ಅನಿರೀಕ್ಷಿತ ಪ್ರಯಾಣ ಬದುಕಿನ ಹೊಸ ದಾರಿಗೆ ಕಾರಣವಾಗಲಿದೆ.

ವೃಷಭ: ಜೀವನ ಕ್ರಮದಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾದ ಅನಿವಾರ್ಯತೆ ಈ ದಿನ ನಿಮಗಿದೆ. ಭೂ ವ್ಯವಹಾರಗಳಿಂದ ಹೆಚ್ಚಿನ ಲಾಭ ಪಡೆಯುವಿರಿ. ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಏಕಾಗ್ರತೆ ಅನಿವಾರ್ಯ.

ಮಿಥುನ: ಕುಲ ದೇವರ ದರ್ಶನ ಅಥವಾ ಕ್ಷೇತ್ರಕ್ಕೆ ಕಾಣಿಕೆ ಕಳುಹಿಸಿದ ನಂತರ ಈ ದಿನವನ್ನು ಪ್ರಾರಂಭಿಸಿ. ವ್ಯವಹಾರದ ವಿಚಾರದಲ್ಲಿ ಇನ್ನೂ ಅನುಭವ ಬೇಕಾಗುವುದು. ತೆರಿಗೆಯ ಕೆಲಸಗಳೆಲ್ಲವೂ ಪೂರ್ಣಗೊಳಿಸಲು ಪ್ರಯತ್ನಿಸಿ.

ಕರ್ಕಾಟಕ: ಹಿಂದೆ ಕೈಗೊಂಡ ನಿರ್ಧಾರಗಳಲ್ಲಿ ಕೆಲ ಬದಲಾವಣೆಗಳನ್ನು ಮಾಡಿಕೊಳ್ಳುವುದರಿಂದ ವ್ಯಾಪಾರ ವ್ಯವಹಾರಗಳಲ್ಲಿ ಉತ್ತಮ ಧನ ಲಾಭ ಕಾಣುವಿರಿ. ವೈಜ್ಞಾನಿಕ ವಿಷಯಗಳ ಅಧ್ಯಯನ ಮಾಡುವವರಿಗೆ ಶುಭ.

ಸಿಂಹ: ವೃತ್ತಿಯಲ್ಲಿ ಸ್ಪರ್ಧಾತ್ಮಕ ಪೈಪೋಟಿಯಲ್ಲಿ ಸಿಕ್ಕ ಗೆಲುವಿನಿಂದ ಹೆಚ್ಚಿನ ಸಂತೋಷ ಮತ್ತು ತೃಪ್ತಿ ಉಂಟಾಗಲಿದೆ. ಅರ್ಹತೆ ಹೊಂದಿದವರಿಗೆ ಹೆಸರಾಂತ ಶಿಕ್ಷಣ ಸಂಸ್ಥೆಯಲ್ಲಿ ಬಹಳ ಸುಲಭವಾಗಿ ಅಧ್ಯಾಪಕ ವೃತ್ತಿ ದೊರೆಯುವುದು.

ಕನ್ಯಾ: ಪತ್ರಿಕಾ ವರದಿಗಾರರಿಗೆ ಈ ದಿನ ಬಹಳ ವಿಶೇಷ ದಿನವಾಗಿ ಜೀವನದಲ್ಲಿ ಸದಾಕಾಲ ನೆನಪಿರುವಂತೆ ಆಗಬಹುದು. ಲೇಖನಗಳಿಗೆ ತೀಕ್ಷ್ಣ ಪ್ರತಿಕ್ರಿಯೆ ವ್ಯಕ್ತವಾಗುತ್ತದೆ. ಆಭರಣ ವ್ಯಾಪಾರಿಗಳಿಗೆ ಧನಲಾಭ ಪ್ರಾಪ್ತಿ.

ತುಲಾ: ಜಮೀನಿನ ಕೆಲಸಗಳು ಯಾವುದೇ ತೊಂದರೆ ಇಲ್ಲದೆ ನೆರವೇರಲಿವೆ. ವ್ಯವಹಾರ ವೃದ್ಧಿಯಾಗಿ ಸಮಸ್ಯೆಗಳು ಬಗೆ ಹರಿಯುವುವು. ಕಂಪನಿಯಲ್ಲಿ ಸಿಗುವ ಗೌರವವನ್ನು ಉಳಿಸಿಕೊಳ್ಳುವತ್ತ ಹೆಚ್ಚಿನ ಗಮನ ಹರಿಸುವುದು ಉತ್ತಮ.

ವೃಶ್ಚಿಕ: ಬೆನ್ನು ಮತ್ತು ಕಾಲಿನ ನೋವು ನಿವಾರಿಸಿಕೊಳ್ಳಲು ಸೂಕ್ತ ವ್ಯಾಯಾಮ ತಿಳಿದುಕೊಳ್ಳಿ. ಉದ್ಯೋಗ ತ್ಯಜಿಸಿ ಹುಟ್ಟಿದೂರಿನಲ್ಲಿ ಕೃಷಿ ಮಾಡುವ ಯೋಚನೆ ಬರುವುದು. ನಿರ್ಧಾರ ತೆಗೆದುಕೊಳ್ಳುವಾಗ ದುಡುಕಬೇಡಿ.

ಧನು: ಕಾರ್ಖಾನೆಯೊಂದನ್ನು ಗುತ್ತಿಗೆ ಆಧಾರದಲ್ಲಿ ಪಡೆದುಕೊಳ್ಳುವ ಅವಕಾಶಗಳು ಸ್ನೇಹಿತನ ಸಹಾಯದಿಂದ ಬರಬಹುದು. ವಸ್ತ್ರ ವಿನ್ಯಾಸ ಸಲಹೆಗಾರರಿಗೆ ಪ್ರತಿಷ್ಠಿತ ಗಾರ್ಮೆಂಟ್ಸ್ ಸಂಸ್ಥೆಯಲ್ಲಿ ಉದ್ಯೋಗ ಸಿಗುವುದು.

ಮಕರ: ಪ್ರಯೋಜನ ಪಡೆದ ವ್ಯಕ್ತಿಗಳು ನಿಮ್ಮನ್ನು ದೂಷಿಸುವರು. ಈ ಘಟನೆ ಭಾವುಕರನ್ನಾಗಿ ಮಾಡಲಿದೆ. ಮಾನಸಿಕ ನೋವನ್ನು ಮರೆಯಲು ಪ್ರೀತಿಪಾತ್ರರೊಂದಿಗೆ ಮಾತನಾಡುವಿರಿ. ವಾಹನ ಚಾಲನೆಯಲ್ಲಿ ಜಾಗರೂಕರಾಗಿ.

ಕುಂಭ: ಕಚೇರಿಯಲ್ಲಿ ಎಲ್ಲರೊಂದಿಗೆ ಸಂತೋಷವಾಗಿರುವಿರಿ. ಇಂದು ಕತೆ ಕವನಗಳ ಬರವಣಿಗೆಯಲ್ಲಿ ಹೆಚ್ಚಿನ ಸಮಯ ಕಳೆಯುವಿರಿ. ಉನ್ನತ ಅಧಿಕಾರಿಗಳ ಮೇಲೆ ಇದ್ದ ತಪ್ಪು ತಿಳಿವಳಿಕೆ ದೂರಾಗಲಿದೆ.

ಮೀನ: ಅಧಿಕಾರಸ್ಥರು ಹಾಗೂ ನಿಮ್ಮ ಹಿರಿಯ ನೌಕರರ ಜತೆ ನಿಮ್ಮ ಸ್ನೇಹ ಸಂಬಂಧ ಹೆಚ್ಚಾಗಿ ಬೆಳೆದು ವೃತ್ತಿಯಲ್ಲಿ ನವ ಉಲ್ಲಾಸ ಮೂಡಲಿದೆ. ಹವ್ಯಾಸಿ ಛಾಯಾಗ್ರಹಕರಿಗೆ ಪ್ರಶಸ್ತಿ ಗೆಲ್ಲುವಂತಹ ಚಿತ್ರ ಸೆರೆಹಿಡಿಯುವ ಅವಕಾಶ.

ಪದಬಂಧ 5149

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3. ದೇವಾಲಯದ ಸಭಾಮಂಟಪ (4)
5. ಮಣಿ ಧರಿಸಿದ ಚಲುವೆ (3)
6. ಲೋಪದೋಷಗಳನ್ನು ಸರಿಪಡಿಸುವವನು (4)
8. ಸಮ ದಲ್ಲಿ ಸೇರುವಿಕೆ (4)
12. ಅಂತರವಿದ್ದಾಗಲೇ ಕಣ್ಮರೆಯಾಗುವಿಕೆ! (4)
14. ಗುರುತುಳ್ಳ ವ್ಯಕ್ತಿ (4)
15. ಧಾನ್ಯ ಸಂಗ್ರಹಿಸುವ ಸ್ಥಳ (3)
16. ಅರಣ್ಯದಲ್ಲಿ ವಾಸಿಸುವಿಕೆ (4)

ಮೇಲಿಂದ ಕೆಳಕ್ಕೆ
1. ವಾರಕ್ಕೊಮ್ಮೆ ಬರುವ ಪತ್ರಿಕೆ (5)
2. ಅಂತಃಪುರವನ್ನು ಹೀಗೆನ್ನಿ (4)
3. ಅದೇ ತಾನೆ ಅರಳಿದ ಹೂ (4)
4. ಗಣಿತವನ್ನು ಬಲ್ಲವನು (3)
7. ವಿರಕ್ತನ ಮೈಯಲ್ಲಿ ಹರಿಯುತ್ತಿರುವ ನೆತ್ತರು (2)
9. ಗಣಿಯ ಧಣಿ ಕಲಿಸಿದ ಲೆಕ್ಕ ಶಾಸ್ತ್ರ (3)
10. ಪ್ರಯೋಜನಕ್ಕೆ ಬಾರದವನು (5)
11. ಉದಾರಿ ಸಾಗುತ್ತಿರುವ ರಸ್ತೆ! (2)
12. ಮನೆಯ ಒಳಭಾಗ (4)
13. ಹೊಸ ಶೈಲಿಯ ಕವಿ (4)
14. ಬೆಳೆಯುವ ಗಿಡದ ಚಿಗುರಿನಂತೆ ಬಂದ ರಾಜವಂಶ (3)



5148ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ನಾಟಿಮದ್ದು 3.ತಲೆಮಾರು 5.ಡಿರಗ 7.ಪಡಪೋಸಿ 9.ರಾಗ 10.ಡಿಗ 11.ತಲೋದರಿ 14.ಗಡಿಗೆ 16.ತರಾತುರಿ 17.ಸರಸ್ವತಿ

ಮೇಲಿಂದ ಕೆಳಕ್ಕೆ:
1.ನಾಡಾಡಿ 2.ಮತಂಗ 3.ತಡಬಡ 4.ರುಮಾಲು 6.ರಕ್ತಗತ 7.ಪರಾರಿ 8.ಸಿಡಿಮಿಡಿ 12.ದಸ್ತಗಿರಿ 13.ಸ್ವಗತ 14.ಗಟಾರ 15.ಗೆಳತಿ

ಸುಡೊಕು 5535

4		3		2		6		1
	6	2					9	
				3			4	8
	4		3		1		7	
1	3	7				4		5
			4		7		1	
	2		5				3	
6		9				5		4
	5				2		8	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5534 ಸುಡೊಕು

3	2	6	5	8	4	9	7	1
7	9	8	1	2	3	5	6	4
5	4	1	9	7	6	3	2	8
6	7	3	8	1	5	2	4	9
4	5	2	7	6	9	1	8	3
8	1	9	3	4	2	6	5	7
9	3	4	2	5	8	7	1	6
1	6	5	4	9	7	8	3	2
2	8	7	6	3	1	4	9	5

ಷೇರುಪೇಟೆ ವಹಿವಾಟು 762



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,267
ಇಂದಿನ ಅಂತ್ಯ	18,484
▲	217
ದಿನದ ಗರಿಷ್ಠ	18,529

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹555
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹555

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1520 (1525)
ಸೋಯಾ (ರಿಫೈನ್ಡ್)	₹1335 (1325)
ಸೂರ್ಯಕಾಂತಿ (ರಿಫೈನ್ಡ್)	₹1450 (1460)
ಪಾಮೋಲಿನ್	₹970 (965)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹144.50
ಆರ್‌ಎಸ್‌ಎಸ್-5	₹136.50
ಗುಡ್ ಲಾಟ್	₹129.50

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1800-2600
ಮಧ್ಯಮ	₹1000-1800
ಸಣ್ಣ	₹500-1000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹498-671
ದ್ವಿತಳಿ (ಬಿ.ವಿ)	₹458-845

ಹೂಡಿಕೆದಾರರನ್ನು ಆಮಂತ್ರಿಸಿದ ಶಿವರಾಜ್ ಸಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಧ್ಯಪ್ರದೇಶದಲ್ಲಿ ಕೈಗಾರಿಕೆಗಳಿಗೆ ಅಗತ್ಯ ಪ್ರಮಾಣದಲ್ಲಿ ಜಮೀನು ಲಭ್ಯವಿದೆ ಎಂದು ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಗುರುವಾರ ಹೇಳಿದರು.

ಶಿವರಾಜ್ ಸಿಂಗ್

ಇಂದೋರ್‌ನಲ್ಲಿ ಜನವರಿಯಲ್ಲಿ ನಡೆಯಲಿರುವ ಹೂಡಿಕೆದಾರರ ಸಮಾವೇಶಕ್ಕೆ ಪೂರ್ವಭಾವಿಯಾಗಿ ಉದ್ಯಮಿಗಳ ಜೊತೆ ಚರ್ಚಿಸಲು ಅವರು ಬೆಂಗಳೂರಿಗೆ ಬಂದಿದ್ದರು. ಉದ್ಯಮಿಗಳಿಗೆ ಅಗತ್ಯವಿರುವ ಪ್ರಮಾಣದಲ್ಲಿ ನೀರು ಹಾಗೂ ವಿದ್ಯುತ್ ಕೂಡ ರಾಜ್ಯದಲ್ಲಿ ಲಭ್ಯವಿದೆ ಎಂದು ಅವರು ಮಾಹಿತಿ ನೀಡಿದರು.

'ಕೈಗಾರಿಕೆಗಳ ಅಗತ್ಯಕ್ಕೆ ಅನುಗುಣವಾಗಿ ನೀತಿಗಳಲ್ಲಿ ಸೂಕ್ತ ಬದಲಾವಣೆ ತರಲು ಸರ್ಕಾರ ಒಪ್ಪುತ್ತದೆ' ಎಂದು ಅವರು ಭರವಸೆ ನೀಡಿದರು ಎಂದು ಪ್ರಕಟಣೆ ತಿಳಿಸಿದೆ. ಉದ್ಯಮಿಗಳು, ಹೂಡಿಕೆದಾರರು ಸಮಾವೇಶಕ್ಕೆ ಬರಬೇಕು ಎಂದು ಅವರು ಆಹ್ವಾನಿಸಿದರು.

ಹಂತ ಹಂತವಾಗಿ ಮುಚ್ಚಲಿದೆ ಅಮೆಜಾನ್ ಅಕಾಡೆಮಿ

ಬೆಂಗಳೂರು (ರಾಯಿಟರ್ಸ್): ಅಮೆಜಾನ್ ಡಾಟ್ ಕಾಂ ಕಂಪನಿಯು ಭಾರತದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಎರಡು ವರ್ಷಗಳ ಹಿಂದೆ ಆರಂಭಿಸಿದ ಆನ್‌ಲೈನ್ ಕಲಿಕಾ ವೇದಿಕೆಯನ್ನು ಮುಚ್ಚುವುದಾಗಿ ಗುರುವಾರ ತಿಳಿಸಿದೆ. ಆದರೆ, ಇದಕ್ಕೆ ನಿರ್ದಿಷ್ಟ ಕಾರಣವನ್ನು ಕಂಪನಿ ನೀಡಿಲ್ಲ.

ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ವರ್ಚುವಲ್ ಕಲಿಕೆಗೆ ಬೇಡಿಕೆ ಹೆಚ್ಚಾಗಿದ್ದರಿಂದ 'ದಿ ಅಮೆಜಾನ್ ಅಕಾಡೆಮಿ ಪ್ಲಾಟ್‌ಫಾರಂ' ಆರಂಭಿಸಲಾಯಿತು. ಈ ವೇದಿಕೆಯ ಮೂಲಕ ಜೆಇಇ ಸೇರಿದಂತೆ ಹಲವು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕೋಚಿಂಗ್ ನೀಡಲಾಗುತ್ತಿದೆ. ವೇದಿಕೆಯನ್ನು ಬಳಸುತ್ತಿರುವ ಹಾಲಿ ಗ್ರಾಹಕರನ್ನು ಗಮನದಲ್ಲಿ ಇಟ್ಟುಕೊಂಡು ಇದನ್ನು ಹಂತ ಹಂತವಾಗಿ ಸ್ಥಗಿತಗೊಳಿಸುವ ನಿರ್ಧಾರಕ್ಕೆ ಬರಲಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಭಾರತದಲ್ಲಿ ಲಾಕ್‌ಡೌನ್ ತೆರವಾದ ಬಳಿಕ ಶಾಲೆಗಳು ಮತ್ತು ಕೋಚಿಂಗ್ ಕೇಂದ್ರಗಳು ಮತ್ತೆ ಆರಂಭ ಆಗತೊಡಗಿವೆ. ಇದರಿಂದಾಗಿ ಹಲವು ತಂತ್ರಜ್ಞಾನ ಆಧಾರಿತ ಶಿಕ್ಷಣ ಸಂಸ್ಥೆಗಳು ಒತ್ತಡಕ್ಕೆ ಒಳಗಾಗಿವೆ.

ಬೈಜುಸ್ ಕಂಪನಿಯು 2,500 ಸಿಬ್ಬಂದಿಯನ್ನು ಕೆಲಸದಿಂದ ತೆಗೆಯುವುದಾಗಿ ಕಳೆದ ತಿಂಗಳು ಹೇಳಿದೆ. ಸ್ಥಳೀಯ ಮಾಧ್ಯಮಗಳ ವರದಿಗಳ ಪ್ರಕಾರ, ಅನ್‌ಅಕಾಡೆಮಿ, ಟಾಪರ್, ವೈಟ್‌ಹ್ಯಾಟ್ ಜೆಆರ್ ಮತ್ತು ವೇದಾಂತು ಕಂಪನಿಗಳು ಸಹ ಸಿಬ್ಬಂದಿ ಕಡಿತ ಮಾಡುವುದಾಗಿ ಈಗಾಗಲೇ ಹೇಳಿವೆ.

ಬಿಸ್ಲೆರಿ ಮಾರಾಟಕ್ಕೆ ಮಾತುಕತೆ

ನವದೆಹಲಿ (ಪಿಟಿಐ): ಬಾಟಲಿಯಲ್ಲಿ ಕುಡಿಯುವ ನೀರನ್ನು ಮಾರಾಟ ಮಾಡುವ ಬಿಸ್ಲೆರಿ ಇಂಟರ್‌ನ್ಯಾಷನಲ್ ಕಂಪನಿಗೆ ಖರೀದಿದಾರರನ್ನು ಅರಸುತ್ತಿರುವುದಾಗಿ ಕಂಪನಿಯ ಅಧ್ಯಕ್ಷ ರಮೇಶ್ ಚೌಹಾಣ್ ಅವರು ಹೇಳಿದ್ದಾರೆ.

ಈ ವಿಚಾರವಾಗಿ ಟಾಟಾ ಕನ್ಸ್ಯೂಮರ್ ಪ್ರಾಡಕ್ಟ್ಸ್ (ಟಿಸಿಪಿಎಲ್) ಸೇರಿದಂತೆ ಹಲವು ಕಂಪನಿಗಳ ಜೊತೆ ಮಾತುಕತೆ ನಡೆಸಿರುವುದಾಗಿ ಅವರು ತಿಳಿಸಿದ್ದಾರೆ.

ಬಿಸ್ಲೆರಿ ಜೊತೆ ಮತುಕತೆ ನಡೆದಿರುವುದನ್ನು ಟಿಸಿಪಿಎಲ್, ಷೇರುಪೇಟೆಗೆ ನೀಡಿರುವ ಮಾಹಿತಿಯಲ್ಲಿ ಖಚಿತಪಡಿಸಿದೆ. ಕಂಪನಿಯನ್ನು ₹ 7,000 ಕೋಟಿಗೆ ಟಿಸಿಪಿಎಲ್‌ಗೆ ಮಾರಾಟ ಮಾಡುವ ಒಪ್ಪಂದ ಅಂತಿಮಗೊಂಡಿದೆ ಎಂಬ ವರದಿಯನ್ನು ಚೌಹಾಣ್ ಅಲ್ಲಗಳೆದಿದ್ದಾರೆ. ಬಾಟಲಿ ನೀರಿನ ಮಾರುಕಟ್ಟೆಯಲ್ಲಿ ಟಿಸಿಪಿಎಲ್ ಈಗಾಗಲೇ ಅಸ್ತಿತ್ವ ಹೊಂದಿದೆ.

ಕಲ್ಲಿದ್ದಲು ಸಂಗ್ರಹ ಹೆಚ್ಚಿಸಲು ಕ್ರಮ

ನವದೆಹಲಿ: ದೇಶದ ಉಷ್ಣವಿದ್ಯುತ್ ಸ್ಥಾವರಗಳಲ್ಲಿನ ಕಲ್ಲಿದ್ದಲು ಸಂಗ್ರಹವನ್ನು ಮಾರ್ಚ್ ಅಂತ್ಯಕ್ಕೆ ಮೊದಲು 4.5 ಕೋಟಿ ಟನ್‌ಗೆ ಹೆಚ್ಚಿಸುವ ಯೋಜನೆ ಇದೆ ಎಂದು ಕೇಂದ್ರ ಸರ್ಕಾರ ಗುರುವಾರ ಹೇಳಿದೆ. ಕಲ್ಲಿದ್ದಲು ಉತ್ಪಾದನೆಯು ಕೆಲವು ತಿಂಗಳಲ್ಲಿ ಹೆಚ್ಚಾಗಿದೆ.

'ಈ ತಿಂಗಳ ಅಂತ್ಯದ ಹೊತ್ತಿಗೆ ದೇಶದ ಕಲ್ಲಿದ್ದಲು ಆಧಾರಿತ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಕಲ್ಲಿದ್ದಲು ಸಂಗ್ರಹವನ್ನು 3 ಕೋಟಿ ಟನ್‌ಗೆ ಹೆಚ್ಚಿಸುವ ಉದ್ದೇಶ ಕೇಂದ್ರ ಕಲ್ಲಿದ್ದಲು ಸಚಿವಾಲಯಕ್ಕೆ ಇದೆ' ಎಂದು ಪ್ರಕಟಣೆ ತಿಳಿಸಿದೆ. ಬೇಸಿಗೆ ಕಾಲದಲ್ಲಿ ಉಷ್ಣವಿದ್ಯುತ್ ಸ್ಥಾವರಗಳಲ್ಲಿ ಕಲ್ಲಿದ್ದಲಿನ ಕೊರತೆ ತೀವ್ರವಾಗಿತ್ತು. ಇದರಿಂದಾಗಿ ಹಲವು ಕಡೆಗಳಲ್ಲಿ ವಿದ್ಯುತ್ ಕಡಿತ ಜಾರಿಗೆ ಬಂದಿತ್ತು.

ಮುಂಬೈ ಧಾರಣೆ

ಶೇಂಗಾ

24–11–2022

ಜಾವಾ 70/80(ಹೊಸ)	11800-11850
ಜಾವಾ 80/90(ಹೊಸ)	10900-10950
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	10000-10100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1530)
ಒಂದು ವಾರದ ಡೆಲಿವರಿ	1525 (1525)
ಸೋಯಾ ಕಚ್ಚಾ	1320 (1310)
ಪಾಮ್ ವಾರದ ಡೆಲಿವರಿ	968 (963)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,450 (52,250)
ಬೆಳ್ಳಿ ಕೆ.ಜಿ 62,225 (61,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಜಾಗತಿಕ ಷೇರುಪೇಟೆಗಳ ಗಳಿಕೆ, ಕಚ್ಚಾ ತೈಲ ದರ ಇಳಿಕೆ ಪರಿಣಾಮ

ಸೆನ್ಸೆಕ್ಸ್, ನಿಫ್ಟಿ: ದಾಖಲೆ ವಹಿವಾಟು

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಗುರುವಾರದ ವಹಿವಾಟಿನಲ್ಲಿ ಶೇ 1ಕ್ಕೂ ಹೆಚ್ಚಿನ ಏರಿಕೆ ಕಂಡು, ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿ ವಹಿವಾಟು ಅಂತ್ಯಗೊಳಿಸಿದವು.

ಅಮೆರಿಕದ ಕೇಂದ್ರೀಯ ಬ್ಯಾಂಕ್ ಕಡಿಮೆ ಪ್ರಮಾಣದಲ್ಲಿ ಬಡ್ಡಿದರ ಹೆಚ್ಚಳ ಮಾಡುತ್ತದೆ ಎಂಬ ನಿರೀಕ್ಷೆಯಿಂದಾಗಿ ಜಾಗತಿಕ ಮಾರುಕಟ್ಟೆಗಳ ವಹಿವಾಟು ಗುರುವಾರ ಸ್ಥಿರವಾಗಿತ್ತು. ಹೀಗಾಗಿ ದೇಶಿ ಷೇರುಪೇಟೆಗಳಲ್ಲಿಯೂ ಸಕಾರಾತ್ಮಕ ವಹಿವಾಟು ನಡೆಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 762 ಅಂಶ ಏರಿಕೆ ಕಂಡು ದಾಖಲೆಯ 62,272 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 217 ಅಂಶ ಹೆಚ್ಚಾಗಿ ಗರಿಷ್ಠ ಮಟ್ಟವಾದ 18,484 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ಅಮೆರಿಕದ ಷೇರುಪೇಟೆ ವಹಿವಾಟು ಏರಿಕೆ ಕಾಣುವ ಜೊತೆಗೆ ಡಾಲರ್ ಮೌಲ್ಯ ಇಳಿಕೆ ಹಾಗೂ ಬಾಂಡ್ ಗಳಿಕೆ ಕಡಿಮೆ ಆಗಿದೆ. ಭಾರತದಲ್ಲಿ ಆರ್ಥಿಕ ಚೇತರಿಕೆಯು ಉತ್ತಮವಾಗಿದೆ ಎನ್ನುವುದನ್ನು ಸಾಲ ನೀಡಿಕೆ ಹೆಚ್ಚಳ ಮತ್ತು ಬಂಡವಾಳ ಲಭ್ಯತೆಯು ಸೂಚಿಸುತ್ತಿದೆ. ಈ ಎರಡು ಅಂಶಗಳು ಸೆನ್ಸೆಕ್ಸ್ ಏರಿಕೆಗೆ ಕಾರಣವಾದವು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ಮುಖ್ಯಾಂಶಗಳು

- ಐ.ಟಿ., ಬ್ಯಾಂಕಿಂಗ್, ತೈಲ ಷೇರುಗಳ ಗಳಿಕೆ
- ಮೂರು ದಿನಗಳ ವಹಿವಾಟಿನಲ್ಲಿ ಸೆನ್ಸೆಕ್ಸ್ 1,167 ಅಂಶ ಏರಿಕೆ

ಕಚ್ಚಾ ತೈಲ ದರದಲ್ಲಿ ಇಳಿಕೆ ಆಗುತ್ತಿರುವುದು ದೊಡ್ಡ ಮಟ್ಟದ ಸಕಾರಾತ್ಮಕ ಬೆಳವಣಿಗೆ. ಇದರಿಂದಾಗಿ ಸೆನ್ಸೆಕ್ಸ್‌ನಲ್ಲಿ ದೊಡ್ಡ ಮಟ್ಟದ ಏರಿಕೆ ಕಂಡುಬಂದಿದೆ. ಎಚ್‌ಡಿಎಫ್‌ಸಿ ಲಿಮಿಟೆಡ್, ಎಚ್‌ಡಿಎಫ್‌ಸಿ ಬ್ಯಾಂಕ್, ಇನ್ಫೊಸಿಸ್ ಮತ್ತು ಟಿಸಿಎಸ್‌ನಂತಹ ದೊಡ್ಡ ಕಂಪನಿಗಳ ಷೇರುಗಳು ಸೂಚ್ಯಂಕದ ಏರಿಕೆಗೆ ಕಾರಣವಾಗಿವೆ ಎಂದೂ ಅವರು ತಿಳಿಸಿದ್ದಾರೆ.

ಕಂಪನಿಗಳ ಗಳಿಕೆ (%)	
ಇನ್ಫೊಸಿಸ್	2.93
ಎಚ್‌ಸಿಎಲ್ ಟೆಕ್ನಾಲಜೀಸ್	2.59
ಪವರ್‌ಗ್ರಿಡ್	2.56
ವಿಪ್ರೊ	2.43
ಟೆಕ್ ಮಹೀಂದ್ರ	2.39
ಟಿಸಿಎಸ್	2

ವಲಯವಾರು ಗಳಿಕೆ: ಐ.ಟಿ., ಟೆಕ್, ತೈಲ ಮತ್ತು ಅನಿಲ, ಹಣಕಾಸು ಸೇವೆಗಳು, ಬಂಡವಾಳ ಸರಕುಗಳು, ಇಂಧನ ಮತ್ತು ಎಫ್‌ಎಂಸಿಜಿ ವಲಯಗಳು ದಿನದ ವಹಿವಾಟಿನಲ್ಲಿ ಉತ್ತಮ ಗಳಿಕೆ ಕಂಡುಕೊಂಡವು. ಬ್ರೆಂಟ್ ಕಚ್ಚಾ ತೈಲ ದರ ಶೇ 0.46ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 85.02 ಡಾಲರ್‌ಗೆ ತಲುಪಿತು.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ದೇಶದ ಷೇರುಪೇಟೆಗಳಲ್ಲಿ ಗುರುವಾರದ ವಹಿವಾಟಿನಲ್ಲಿ ₹1,231 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ರೂಪಾಯಿ ಮೌಲ್ಯ 23 ಪೈಸೆ ಹೆಚ್ಚಳ

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಗುರುವಾರ 23 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹81.70ರಂತೆ ವಿನಿಮಯಗೊಂಡಿತು.

ಡಾಲರ್ ಮೌಲ್ಯ ಇಳಿಕೆ ಮತ್ತು ದೇಶಿ ಷೇರುಪೇಟೆಗಳ ಸಕಾರಾತ್ಮಕ ವಹಿವಾಟಿನಿಂದಾಗಿ ರೂಪಾಯಿ ಮೌಲ್ಯ ಹೆಚ್ಚಳ ಕಾಣುವಂತಾಯಿತು.

2023ರಲ್ಲಿಯೂ ರೂಪಾಯಿ ಒತ್ತಡದಲ್ಲಿಯೇ ಇರುವ ಸಾಧ್ಯತೆ ಇದೆ. ಒಂದು ಡಾಲರ್‌ಗೆ ₹85ರ ಮಟ್ಟವನ್ನೂ ತಲುಪಬಹುದು ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಚಾಲ್ತಿ ಖಾತೆ ಕೊರತೆಯು ಹೆಚ್ಚಾಗುತ್ತಿರುವುದರಿಂದ ರೂಪಾಯಿ ಮೇಲೆ ಒತ್ತಡ ಉಂಟಾಗಲಿದೆ ಎಂದಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	250-300
ನಡುಗೋಲು	450-480
ರಾಶಿ	480-500
ರಾಶಿ ಉತ್ತಮ	550-600
ಜರಡಿ	700-750
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1250-1350
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹಳತು	48000-55000
ಹೊಸತು	27500-38000
ಕಾರ್ಕಳ	
ಹೊಸತು	25000-37500
ಹಳತು	40000-55500
ಕುಮಟ	
ಚಿಪ್ಪು	22121-31799
ಕೋಕ	12509-28600
ಹಳೆಚಾಲಿ	36299-39299
ಹೊಸಚಾಲಿ	29299-32799
ಪುತ್ತೂರು	
ಕೋಕ	11000-26000
ಹೊಸತು	32000-38000
ಸಾಗರ	
ಬಿಳಿಗೋಟು	20199-31089
ಚಾಲಿ	26129-36899
ಕೋಕ	10819-33009
ಕೆಂಪುಗೋಟು	20129-36299
ರಾಶಿ	40123-47110
ಸಿಪ್ಪೆಗೋಟು	7269-18988
ಶಿವಮೊಗ್ಗ	
ಬೆಟ್ಟೆ	48100-51089
ಗೊರಬಲು	17109-35191
ಹೊಸತು	44759-46599
ರಾಶಿ	44469-47759
ಸಿದ್ದಾಪುರ	
ಬಿಳಿಗೋಟು	27699-33209
ಚಾಲಿ	35099-38899
ಕೋಕ	26199-31289
ಕೆಂಪುಗೋಟು	28199-28199
ರಾಶಿ	44599-46099
ತಟ್ಟಿಬೆಟ್ಟೆ	38509-44939
ಶಿರಸಿ	
ಬೆಟ್ಟೆ	30601-44399
ಬಿಳಿಗೋಟು	18199-34899
ಚಾಲಿ	36099-40406
ರಾಶಿ	41689-46699
ಯಲ್ಲಾಪುರ	
ಬಿಳಿಗೋಟು	26199-34799
ಚಾಲಿ	35601-39399
ಕೋಕ	17900-28622
ಕೆಂಪುಗೋಟು	26706-33699
ರಾಶಿ	45009-49169
ತಟ್ಟಿಬೆಟ್ಟೆ	38000-44500

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13200	13200	---	160.40 ಸೆಂಟ್ಸ್
ಎಸಿ	6720	6500	---	
ಆರ್‌ಪಿ	8500	8000	---	ಲಂಡನ್
ಆರ್‌ಸಿ	4530	4000	---	1812 ಡಾಲರ್ಸ್

ನೇಪಾಳ: ಎನ್‌ಸಿಪಿಗೆ ಮುನ್ನಡೆ

ಕಠ್ಮಂಡು (ಪಿಟಿಐ): ನೇಪಾಳ ಪ್ರಧಾನಿ ಶೇರ್ ಬಹದ್ದೂರ್ ದೇವುಬಾ ಅವರ ನೇತೃತ್ವದ ಆಡಳಿತರೂಢ ನೇಪಾಳಿ ಕಾಂಗ್ರೆಸ್ (ಎನ್‌ಸಿಪಿ) ನೇತೃತ್ವದ ಮೈತ್ರಿಕೂಟ ಸಂಸತ್ ಚುನಾವಣೆಯಲ್ಲಿ ಗುರುವಾರದವರೆಗೆ ಪ್ರಕಟವಾಗಿರುವ ಫಲಿತಾಂಶದಲ್ಲಿ 101 ಸ್ಥಾನಗಳ ಪೈಕಿ 58 ಸ್ಥಾನಗಳನ್ನು ಗೆದ್ದುಕೊಂಡು, ಮುನ್ನಡೆ ಸಾಧಿಸಿದೆ.

ಈವರೆಗಿನ ಫಲಿತಾಂಶದಲ್ಲಿ ಆಡಳಿತರೂಢ ನೇಪಾಳಿ ಕಾಂಗ್ರೆಸ್ 36 ಸ್ಥಾನಗಳನ್ನು ಗೆದ್ದಿದೆ. ಇನ್ನೂ 16 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದೆ. ಮೈತ್ರಿಕೂಟದ ಪಾಲುದಾರರಾದ ಸಿಪಿಎನ್–ಮಾವೋವಾದಿ ಕೇಂದ್ರ ಪಕ್ಷ 9 ಸ್ಥಾನಗಳು, ಸಿಪಿಎನ್–ಯುಎಸ್ 9 ಸ್ಥಾನಗಳು, ರಾಷ್ಟ್ರೀಯ ಜನಮೋರ್ಚಾ ಮತ್ತು ಲೋಕತಾಂತ್ರಿಕ ಸಮಾಜವಾದಿ ಪಕ್ಷ ತಲಾ ಎರಡು ಸ್ಥಾನ ಗೆದ್ದುಕೊಂಡಿವೆ. ಸಿಪಿಎನ್–ಎಂಸಿ 7 ಸ್ಥಾನಗಳು ಮತ್ತು ಸಿಪಿಎನ್–ಯುಎಸ್ 1 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿವೆ. ಪ್ರಮುಖ ವಿರೋಧ ಪಕ್ಷ, ಮಾಜಿ ಪ್ರಧಾನಿ ಕೆ.ಪಿ.ಶರ್ಮಾ ಓಲಿ ಅವರ ನೇತೃತ್ವದ ಸಿಪಿಎನ್–ಯುಎಂಎಲ್ 22 ಸ್ಥಾನಗಳನ್ನು ಗೆದ್ದುಕೊಂಡಿದ್ದು, 27 ಸ್ಥಾನಗಳಲ್ಲಿ ಮುನ್ನಡೆಯಲ್ಲಿದೆ.

ವಿರೋಧ ಪಕ್ಷದ ಮಿತ್ರಪಕ್ಷಗಳಾದ ರಾಷ್ಟ್ರೀಯ ಪ್ರಜಾತಂತ್ರ ಪಕ್ಷ 4 ಸ್ಥಾನಗಳನ್ನು ಗೆದ್ದಿದ್ದು, ಎರಡು ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದೆ. ಜನತಾ ಸಮಾಜವಾದಿ ಪಕ್ಷ ಒಂದು ಸ್ಥಾನ ಗೆದ್ದುಕೊಂಡಿವೆ. ಹೊಸ ಪಕ್ಷ ರಾಷ್ಟ್ರೀಯ ಸ್ವತಂತ್ರ ಪಕ್ಷ 7 ಸ್ಥಾನಗಳನ್ನು ಗೆದ್ದಿದ್ದು, ಒಂದು ಸ್ಥಾನದಲ್ಲಿ ಮುನ್ನಡೆ ಸಾಧಿಸಿದೆ.

ನಾಗರಿಕ ಉನ್ಮುಕ್ತಿ ಪಕ್ಷ 2, ನೇಪಾಳ ಮಜ್ದೂರ್ ಕಿಸಾನ್ ಪಕ್ಷ ಹಾಗೂ ಜನಮತ ಪಕ್ಷ ತಲಾ ಒಂದು ಸ್ಥಾನ ಗೆದ್ದಿವೆ.

ಸಂಸತ್ ಮತ್ತು ಏಳು ಪ್ರಾಂತೀಯ ವಿಧಾನಸಭೆಗಳಿಗೆ ಕಳೆದ ಭಾನುವಾರ ಚುನಾವಣೆ ನಡೆದಿದ್ದು, ಸೋಮವಾರದಿಂದ ಮತ ಎಣಿಕೆ ನಡೆಯುತ್ತಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲ್ಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿ ಇದೆ. 10,000-15,000. 8951315839, 9880545002

ಬೆಂಗಳೂರಿನ ಬಾಣಸವಾಡಿ ಮನೆಯಲ್ಲಿ ಅಡುಗೆ (ವೆಜ್ & ನಾನ್‌ವೆಜ್) ಕೆಲಸ ಹಾಗೂ ಮನೆಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ವಯಸ್ಸು: 30-40 ವರ್ಷ. ಸಂಬಳ: 10,000. ಉಚಿತ ಊಟ+ವಸತಿ ಕೊಡಲಾಗುವುದು. ಸಂಪರ್ಕಿಸಿ: 9902817655

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

Part-Time Jobs

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು, ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000 20000 ಗಳಿಸಿ. ಕರೆಮಾಡಿ: 9611224633/ 9611225344

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಆಯುರ್ವೇದಿಕ್ ಉತ್ಪನ್ನಗಳ ನೇರ ಮಾರಾಟ 50 ಮಹಿಳಾ ಪ್ರತಿನಿಧಿಗಳು ಬೇಕಾಗಿದ್ದಾರೆ ಸಂಬಳ 30 ರಿಂದ 50 ಸಂಪರ್ಕಿಸಿ: 8892501007/ 9606701007

ಭವಿಷ್ಯ

Astrology

ಸಮಸ್ಯೆ ಏನೇಯಿರಲಿ ಎಷ್ಟೇ ಕಠಿಣವಾಗಿರಲಿ 600ವರ್ಷ ಹಳೆಯ 108ಜ್ಯೋತಿಷ್ಯ ತಂತ್ರಗಳಿಂದ ವಶೀಕರಣ, ಪ್ರೇಮವಿಚಾರ, ದಾಂಪತ್ಯ, ಹಣಕಾಸು, ಇನ್ಯಾವುದೇ ಸಮಸ್ಯೆಗಳಿಗೆ ಪರಿಹಾರ ಶತಸಿದ್ಧ. ಪಂಡಿತ್ ಗಣೇಶ್‌ಕುಮಾರ್ 9880444450

ಪ್ರವಾಸ

Travel

ಸೋಮನಾಥ್ ದ್ವಾರಕಾ ಮಾತ್ರಗಯಾ ಉಜ್ಜಯಿನಿ ಓಂಕಾರೇಶ್ವರ್ ಅಷ್ಟ ಜ್ಯೋತಿರ್ಲಿಂಗಗಳು 03.12.2022 23.01.2023 ರಿಂದ 15/10 ದಿನಗಳು ಮಾಘ ಸ್ನಾನದ ಪ್ರಯುಕ್ತ ಕಾಶಿ,ಪ್ರಯಾಗ ನೈಮೀಶಾರಣ್ಯ,ಚಿತ್ರಕೂಟ,ಗಯಾ 26.01.2023 ರಿಂದ 8 ದಿನಗಳು. ವಿಯವಾಡ,ಭದ್ರಾಚಲಂ ಅನ್ನಾವರಂ ಪಂಚರಾಮ ಮಂದಿರಗಳು 02.02.2023 ರಿಂದ 10 ದಿನಗಳು. ಸಿಕ್ಕಿಂ,ಡಾರ್ಜಲಿಂಗ್ ಗೌಹಾಟಿ ಕೊಲ್ಕತ್ತ,ಪುರಿ ಭುವನೇಶ್ವರ್ 02.02.2023 ರಿಂದ 14 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

ASTRO YATRA

ಶ್ರೀ ರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ
31 ವರ್ಷದ ಸುದೀರ್ಘ ಅನುಭವುಳ್ಳ, ವಂಶಪಾರಂಪರಿಕ ಜ್ಯೋತಿಷ್ಯರು
ಗುರೂಜಿ ಮಹೇಶ್‌ಭಟ್
ಮಕ್ಕಳು ಪ್ರೀತಿಯಲ್ಲಿ ಬಿದ್ದು ಮಾತು ಕೇಳದಿದ್ದಲ್ಲಿ, ಪ್ರೀತಿಯಲ್ಲಿ ನಂಬಿ ಮೋಸ, ಪ್ರೀತಿಸಿದವರಿಂದ ತೊಂದರೆ, ಇಷ್ಟಪಟ್ಟವರು ನಿಮ್ಮಂತೆ ಬರಲು, ಮದುವೆಯಲ್ಲ ವಿಳಂಬ, ಗಂಡ–ಪರಸ್ತ್ರೀ ವಶದಲ್ಲಿದ್ದರೆ, ಡೈವೋರ್ಸ್ ಪ್ರಾಬ್ಲಂ, ಪುರುಷತ್ವ ಸಮಸ್ಯೆ, ಅತ್ತೆ ಕಾಟ, ಶತ್ರುಕಾಟ, ಹಣಕಾಸು, ಮಾಂತ್ರಿಕ ಸಮಸ್ಯೆಯಿಂದ ಆರೋಗ್ಯ ತೊಂದರೆ, ಇನ್ಯಾವುದೇ ಬಗೆಹರಿಯದಂತಹ ಕಠಿಣ ಸಮಸ್ಯೆಗಳಿಗೆ ಕೆಲವೇ ಗಂಟೆಗಳಲ್ಲಿ ಗ್ಯಾರಂಟಿ ಪರಿಹಾರ. ಸ್ತ್ರೀಯರಿಗೆ ವಿಶೇಷ ಪರಿಹಾರ.
Google, TV, FB, Insta, Youtube ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ಹಣ ಕಳೆದುಕೊಂಡಿದ್ದರೆ, ಶುದ್ಧ, ಶೀಘ್ರ ಪರಿಹಾರಕ್ಕಾಗಿ ಕರೆಮಾಡಿ
ಖಾಯಂ ವಿಳಾಸ: ನಂ. 15, 1ನೇ ಮೇನ್, 1ನೇ ಕ್ರಾಸ್, ಅಯ್ಯಣ್ಣ ಶೆಟ್ಟಿ ಲೇಔಟ್, ಪೊಲೀಸ್ ಸ್ಟೇಷನ್ ಹಿಂಭಾಗ, ಬ್ಯಾಟರಾಯನಪುರ, ಮೈಸೂರು ರಸ್ತೆ, ಬೆಂಗಳೂರು.
ದೂರದ ಊರಿನವರಿಗೆ ಫೋನಿನ ಮೂಲಕ ಪರಿಹಾರ. 9686999517

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ ವಿಮಾನ/ A/C ರೂಂ/ A/C ಬಸ್ಸಿನಲ್ಲಿ 15.12.2022 ಸೋಮನಾಥ ಕಚ್‌ಬುಜ್ ಓಂಕಾರೇಶ್ವರ್ ಮಂಹಾಕಾಳೇಶ್ವರ್ ಹಾಗೂ ಪೂರಿಜಗನ್ನಾಥ್ ಕಲ್ಕತ್ತ,ಗ್ಯಾಂಗ್‌ಟಕ್,ಡಾರ್ಜಲಿಂಗ್ ಇತ್ಯಾದಿ. ಹೈದ್ರಾಬಾದ್ ಭದ್ರಾಚಲಂ,ಪಂಚರಾಮ ಕ್ಷೇತ್ರ 14 ದಿನಗಳು. 24.12.2022 ಕಾಶಿ,ಬುದ್ದಗಯಾ ಅಲಹಾಬಾದ್ ಇತ್ಯಾದಿ. ಶಿರಡಿ ಪ್ರವಾಸ 6 ದಿನಗಳು. ರಾಮೇಶ್ವರ,ಮದುರೈ ಕನ್ಯಾಕುಮಾರಿ 9 ದಿನಗಳು. ಮಹಾಶಿವರಾತ್ರಿ ಪ್ರಯುಕ್ತ 11.02.2023 ನೇಪಾಳ.ಪೋಖ್ರಾ ವಾರಣಾಸಿ ಅಯೋಧ್ಯ ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ 26574131 8317446683 9448508708

03.12.2022, 2 ದಿನಗಳು ತಲಕಾವೇರಿ, ಭಾಗಮಂಡಲ, ಅಬ್ಬೆಫಾಲ್ಸ್, ದುಬಾರೆ ಇತ್ಯಾದಿ. 10.12.2022, 2 ದಿನಗಳು ಮೈಲಾರಲಿಂಗ, ವೀರನಾರಾಯಣ, ಲಕ್ಕುಂಡಿ, ಗವಿಸಿದ್ದೇಶ್ವರಮಠ ಇತ್ಯಾದಿ. 9481433157

ವ್ಯಾಪಾರ

Business Offers

Machinery & Tools

START YOUR Own Business. Paper Plates, Paper Cups. Fully Automatic Machines Manufactured in Bangalore. 'Guru Enterprises': 9845049816

CONNECT

ಸಾಲ ಲಭ್ಯವಿದೆ
ಆಸ್ತಿ ಮೇಲಿನ ಸಾಲ
- ಮನೆ ಸಾಲ
- ಅಡಮಾನ ಸಾಲ
- ಮನೆ ವಿಸ್ತರಣೆ ಸಾಲ
- ಫ್ಲಾಟ್ ಖರೀದಿ ಸಾಲ
- ಇತರ ಬ್ಯಾಂಕ್ ಸಾಲವನ್ನುತೆಗೆದುಕೊಳ್ಳಲಾಗುತ್ತದೆ

* ಸಿಬಿಲ್ ಅಗತ್ಯವಿಲ್ಲ * ಆದಾಯದ ದಾಖಲೆ ಅಗತ್ಯವಿಲ್ಲ
* ಕಡಿಮೆ ಪೇಪರ್ ವರ್ಕ್ * ತ್ವರಿತ ಸಂಸ್ಕರಣೆ
* ಸಮಂಜಸವಾದ ಬಡ್ಡಿ ದರ

Saminath Financial Services
#2 P.Guttahalli, Vinayaka circle Malleshwaram, Bangalore-003
www.saminathfinance.com info@saminathfinance.com
79758 47433, 80880 91647

Book Your Classifieds Ads
Online Log in to dhclassifieds.com
Contact :
9845114560 : 9731810277
9901641752 : 9886213331
080 - 45557163 / 164
DH DECCAN HERALD ಪ್ರಜಾವಾಣಿ

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ವಿದೇಶಿ, ಉಕ್ರೇನ್ ವಾಯುರಕ್ಷಣೆ ಕ್ಷಿಪಣಿ ವ್ಯವಸ್ಥೆಯೇ ಕಾರಣ– ಆರೋಪ

ಕೀವ್ ಹಾನಿಗೆ ಉಕ್ರೇನ್ ಹೊಣೆ: ರಷ್ಯಾ

ಮಾಸ್ಕೊ (ಎಎಫ್‌ಪಿ): ಉಕ್ರೇನ್‌ನ ರಾಜಧಾನಿ ಕೀವ್, ಪ್ರಮುಖ ನಗರಗಳಲ್ಲಿ ಮೂಲಸೌಕರ್ಯ ಗುರಿಯಾಗಿಸಿ ಕ್ಷಿಪಣಿ ದಾಳಿ ನಡೆಸಿದೆ ಎಂಬುದನ್ನು ರಷ್ಯಾ ನಿರಾಕರಿಸಿದೆ. ವಿದೇಶಿ ಮತ್ತು ಉಕ್ರೇನ್ ವಾಯುರಕ್ಷಣಾ ಕ್ಷಿಪಣಿಗಳು ಹಾನಿ ಮಾಡುತ್ತಿವೆ ಎಂದೂ ಆರೋಪಿಸಿದೆ.

ಕೀವ್ ನಗರದ ಮೇಲೆ ಒಂದೇ ಒಂದು ದಾಳಿಯನ್ನೂ ನಮ್ಮ ಸೇನಾ ಪಡೆ ನಡೆಸಿಲ್ಲ. ವಿದೇಶಿ ಮತ್ತು ಉಕ್ರೇನ್ ವಾಯು ರಕ್ಷಣಾ ವ್ಯವಸ್ಥೆಗಳ ಕ್ಷಿಪಣಿಗಳ ಪತನದಿಂದಾಗಿ ಹಾನಿಯಾಗಿದೆ ಎಂದು ರಷ್ಯಾ ರಕ್ಷಣಾ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ರಷ್ಯಾದ ಬೇಡಿಕೆಗಳನ್ನು ಪೂರೈಸಿದರೆ, ಪರಿಸ್ಥಿತಿಯನ್ನು ಸಹಜಸ್ಥಿತಿಗೆ ತರಲು ಉಕ್ರೇನ್‌ನ ಅಧ್ಯಕ್ಷರಿಗೆ ಎಲ್ಲ ಅವಕಾಶಗಳೂ ಸಿಗಲಿವೆ ಎಂದು ಪುಟಿನ್ ಆಡಳಿತ ಕಚೇರಿ ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೊವ್ ಹೇಳಿದ್ದಾರೆ.

ಉಕ್ರೇನ್ ಮೇಲೆ ನಡೆಯುತ್ತಿರುವ ಭಾರಿ ದಾಳಿಯು ಅಲ್ಲಿನ ಸೇನಾ ನೆಲೆಗಳು ಮತ್ತು ಇಂಧನ ಸೌಲಭ್ಯಗಳನ್ನು ಗುರಿಯಾಗಿಸಿಕೊಂಡಿದೆ ಎಂದೂ ರಷ್ಯಾ ಸ್ಪಷ್ಟಪಡಿಸಿದೆ.

ಉಕ್ರೇನ್‌ನಲ್ಲಿ ಇಂಧನ ಮೂಲಸೌಕರ್ಯಗಳಿಗೆ ಆಗಿರುವ ಹಾನಿಯು, ಚಳಿಗಾಲದಲ್ಲಿ ದೇಶದ ಲಕ್ಷಾಂತರ ಜನರಿಗೆ ತೀವ್ರ ಪರಿಣಾಮ ಆಗಲಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಎಚ್ಚರಿಸಿದೆ.

ಬುಧವಾರ ಪ್ರಮುಖ ಇಂಧನ ಮೂಲಸೌಕರ್ಯಗಳ ಮೇಲೆ ಕ್ಷಿಪಣಿ ದಾಳಿ ನಡೆದಿದೆ. ದಾಳಿಯಿಂದ ಹತ್ತು ಜನರು ಮೃತಪಟ್ಟು, ಸುಮಾರು 50 ಜನರು ಗಾಯಗೊಂಡಿದ್ದಾರೆ ಎಂದು ಉಕ್ರೇನ್ ಪ್ರಾಸಿಕ್ಯೂಟರ್ ಜನರಲ್ ಆಂಡ್ರಿ ಕೊಸ್ಟಿನ್ ತಿಳಿಸಿದ್ದಾರೆ.

ಕೀವ್‌ನಲ್ಲಿ ಕತ್ತಲು: ಕೀವ್ ನಗರದ ಬಹುತೇಕ ಕಡೆಗಳಲ್ಲಿ ನೀರು ಸರಬರಾಜು ವ್ಯವಸ್ಥೆ ಸಹಜ ಸ್ಥಿತಿಗೆ ಮರಳಿದ್ದರೂ ಶೇ 70ರಷ್ಟು ನಗರ ವಿದ್ಯುತ್ ವ್ಯತ್ಯಯದಿಂದ ಕಗ್ಗತ್ತಲಿನಲ್ಲಿ ಮುಳುಗಿದೆ ಎಂದು ನಗರದ ಮೇಯರ್ ವಿಟಾಲಿ ಕ್ಲಿಚ್‌ಕೊ ಹೇಳಿದ್ದಾರೆ.

ಕೀವ್ ನಗರ ಸೇರಿ ವಿವಿಧೆಡೆ ಬುಧವಾರ 70 ಕ್ಷಿಪಣಿಗಳು, ಡ್ರೋನ್‌ಗಳನ್ನು ರಷ್ಯಾ ಪಡೆಗಳು ಹಾರಿಸಿವೆ ಎಂದು ಉಕ್ರೇನ್ ದೂರಿದೆ. ಇದೇ ವೇಳೆ ಉಭಯ ರಾಷ್ಟ್ರಗಳು ಬಂಧಿಸಿದ್ದ ತಲಾ 50 ಮಂದಿ ಯುದ್ಧ ಕೈದಿಗಳು, ನಾಗರಿಕರನ್ನು ವಿನಿಮಯ ಮಾಡಿಕೊಂಡಿವೆ.

ಉಕ್ರೇನ್ ಶಸ್ತ್ರಾಸ್ತ್ರ ಪಡೆ ಯೋಧರು ರಷ್ಯಾ ಪಡೆಗಳ ಮೇಲೆ ಎಂ777 ಹೋವಿಟ್ಜರ್ ಫಿರಂಗಿಯಿಂದ ಪ್ರತಿ ದಾಳಿ ನಡೆಸಿದರು– ಎಎಫ್‌ಪಿ ಚಿತ್ರ

'ನ್ಯಾಟೊ–ರಷ್ಯಾ ಸಂಘರ್ಷ?': 'ಉಕ್ರೇನ್‌ನಲ್ಲಿ ರಷ್ಯಾ ಮತ್ತು ನ್ಯಾಟೊ ನಡುವೆ ಮುಖಾಮುಖಿ ಸಂಘರ್ಷದ ಪುರಾವೆಗಳು ದಿನೇ ದಿನೇ ಹೆಚ್ಚುತ್ತಿವೆ. ಉಕ್ರೇನ್ ಪರವಾಗಿ ಅದರ ಮೈತ್ರಿ ರಾಷ್ಟ್ರಗಳ ಸೇನಾ ಪರಿಣತರ ಪಾಲ್ಗೊಳ್ಳುವಿಕೆ ಹೆಚ್ಚುತ್ತಿದೆ. ಡಜನ್‌ಗಟ್ಟಲೆ ಖಾಸಗಿ ಮಿಲಿಟರಿ ಪಡೆಗಳು ಭಾಗಿಯಾಗಿವೆ' ಎಂದು ರಷ್ಯಾದ ವಿದೇಶಾಂಗ ಸಚಿವಾಲಯದ ವಕ್ತಾರೆ ಮಾರಿಯಾ ಜಖರೋವಾ ತಿಳಿಸಿರುವುದಾಗಿ 'ಟಾಸ್' ಸುದ್ದಿಸಂಸ್ಥೆ ತಿಳಿಸಿದೆ. ಹಾಗೆಯೇ ಉಕ್ರೇನ್ ಮೇಲೆ ವ್ಯಾಪಕ ದಾಳಿ ನಡೆಸಲು ರಷ್ಯಾ ಪಡೆಗಳು ಸಿದ್ಧತೆ ನಡೆಸುತ್ತಿವೆ ಎಂದು ಉಕ್ರೇನ್ ರಕ್ಷಣಾ ಸಚಿವಾಲಯದ ಗುಪ್ತಚರ ನಿರ್ದೇಶನಾಲಯ ಹೇಳಿದೆ.

ಸಂಕ್ಷಿಪ್ತ ಸುದ್ದಿ

ಗಡಿಪಾರು ಆದೇಶ: ಮೇಲ್ಮನವಿಗೆ ಅನುಮತಿ ಕೋರಿ ನೀರವ್ ಅರ್ಜಿ

ಲಂಡನ್ (ಪಿಟಿಐ): ಭಾರತದ ವಜ್ರದ ಉದ್ಯಮಿ 51 ವರ್ಷದ ನೀರವ್ ಮೋದಿ, ಸುಪ್ರೀಂ ಕೋರ್ಟ್ ತಮ್ಮ ವಿರುದ್ಧ ನೀಡಿರುವ ಗಡಿಪಾರು ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಲು ಅನುಮತಿ ಕೋರಿ ಇಲ್ಲಿನ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಮಾನಸಿಕ ಆರೋಗ್ಯ ಸ್ಥಿತಿ ಆಧಾರದಲ್ಲಿ ನೀರವ್ ಮೋದಿ ಅವರು ಸಲ್ಲಿಸಿದ್ದ ಮೇಲ್ಮನವಿಯನ್ನು ಹೈಕೋರ್ಟ್‌ನ ದ್ವಿಸದಸ್ಯ ಪೀಠ ಈ ತಿಂಗಳ ಆರಂಭದಲ್ಲಿ ತಿರಸ್ಕರಿಸಿತ್ತು.

ಸದ್ಯ, ಕಾರಾಗೃಹದಲ್ಲಿರುವ ನೀರವ್ ಮೇಲ್ಮನವಿ ಸಲ್ಲಿಕೆ ಕುರಿತಂತೆ ಕಾನೂನು ಹೋರಾಟದ ಆಯ್ಕೆ ಮುಕ್ತವಾಗಿದೆ. ಗಡಿಪಾರು ಕ್ರಮ ಎಂದು ಜಾರಿಯಾಗಲಿದೆ ಎಂದು ಹೇಳಲಾಗದು ಎಂದು ಗೃಹ ಇಲಾಖೆಯ ಮೂಲಗಳು ತಿಳಿಸಿವೆ.

ಕೋವಿಡ್: ಚೀನಾದ ಇನ್ನಷ್ಟು ಕಡೆ ಲಾಕ್‌ಡೌನ್

ಬೀಜಿಂಗ್ (ಎಪಿ): ಚೀನಾದಲ್ಲಿ ಕೋವಿಡ್ ಸೋಂಕಿತರ ಸಂಖ್ಯೆಯಲ್ಲಿ ಏರಿಕೆಯಾಗುತ್ತಿದ್ದು, ಹಿಂದೆಯೇ ಇನ್ನಷ್ಟು ಪ್ರದೇಶಗಳಲ್ಲಿ ಲಾಕ್‌ಡೌನ್ ನಿರ್ಬಂಧಗಳನ್ನು ಜಾರಿಗೊಳಿಸಲಾಗಿದೆ. ಕಠಿಣ ನಿರ್ಬಂಧ ವಿರುದ್ಧ ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸುಮಾರು 66 ಲಕ್ಷ ಜನಸಂಖ್ಯೆ ಇರುವ ಝೆಂಗ್‌ಝೌ ಪ್ರಾಂತ್ಯದ ಎಂಟು ಜಿಲ್ಲೆಗಳಲ್ಲಿ ಐದು ದಿನ ಲಾಕ್‌ಡೌನ್ ಘೋಷಿಸಲಾಗಿದೆ. ಆಹಾರ ಖರೀದಿ ಮತ್ತು ತುರ್ತು ಸಂದರ್ಭ ಹೊರತುಪಡಿಸಿ ಹೊರಗೆ ಬರದಂತೆ ಜನರಿಗೆ ಸೂಚಿಸಲಾಗಿದೆ. ರಾಷ್ಟ್ರೀಯ ಆರೋಗ್ಯ ಆಯೋಗದ ವರದಿ ಪ್ರಕಾರ, ಗುರುವಾರ ಚೀನಾದಲ್ಲಿ 31,444 ಪ್ರಕರಣ ದಾಖಲಾಗಿದೆ. 2019ರಿಂದ ಈವರೆಗೆ ಒಂದೇ ದಿನ ದಾಖಲಾದ ಅತಿಹೆಚ್ಚು ಪ್ರಕರಣ ಇದಾಗಿದೆ.

ಬಿಸಿಯೂಟಕ್ಕೆ ₹16 ಕೋಟಿ ಸಂಗ್ರಹ: ಇಸ್ಕಾನ್

ವಾಷಿಂಗ್ಟನ್ (ಪಿಟಿಐ): ಅಕ್ಷಯಪಾತ್ರೆ ಸಂಸ್ಥೆಯು ಕಳೆದ ವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ₹16 ಕೋಟಿ ನೆರವು ಸಂಗ್ರಹಿಸಿದೆ. ಇದನ್ನು ಭಾರತದಲ್ಲಿ ವಿದ್ಯಾರ್ಥಿಗಳ ಮಧ್ಯಾಹ್ನದ ಬಿಸಿಊಟ ಯೋಜನೆಗೆ ಬಳಸಲಾಗುವುದು ಎಂದು ಸಂಸ್ಥೆ ಹೇಳಿದೆ.

ಅಕ್ಷಯ ಪಾತ್ರ ಫೌಂಡೇಷನ್‌ನ ಅಮೆರಿಕದ ಮೂರು ರಾಜ್ಯಗಳ ಸ್ವಯಂಸೇವಕರ ಘಟಕ ನೆವಾರ್ಕ್‌ನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ನೆರವು ಸಂಗ್ರಹವಾಗಿದೆ ಎಂದು ಸಂಸ್ಥೆಯ ಭಾರತ ಸಿಇಒ ಶ್ರೀಧರ್ ವೆಂಕಟ್ ತಿಳಿಸಿದರು.

'ಪಾಲಕರು ಮತ್ತು ವಿದ್ಯಾರ್ಥಿಗಳಿಗೆ ಊಟ, ಶಿಕ್ಷಣದ ನಡುವೆ ಆಯ್ಕೆಯ ಸಂದರ್ಭ ಎದುರಾಗಬಾರದು. ಎರಡನ್ನೂ ನೀಡುವುದು ಸಂಸ್ಥೆ ಗುರಿ' ಎಂದು ಅಕ್ಷಯಪಾತ್ರೆ ಅಮೆರಿಕ ಘಟಕದ ಸದಸ್ಯೆ ಡಾ.ರಚನಾ ಕುಲಕರ್ಣಿ ಹೇಳಿದರು.

ಪಾಕ್ ಸೇನೆ ಮುಖ್ಯಸ್ಥರಾಗಿ ಜನರಲ್ ಅಸೀಂ ಮುನೀರ್ ನೇಮಕ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ ಐಎಸ್‌ಐನ ಮಾಜಿ ಮುಖ್ಯಸ್ಥ, ಲೆಫ್ಟಿನೆಂಟ್ ಜನರಲ್ ಸೈಯದ್ ಅಸೀಂ ಮುನೀರ್ ಅವರನ್ನು ಪಾಕಿಸ್ತಾನ ಸೇನೆ ಮುಖ್ಯಸ್ಥರಾಗಿ ಪ್ರಧಾನಿ ಶೆಹಬಾಜ್ ಷರೀಫ್ ನೇಮಕ ಮಾಡಿದ್ದಾರೆ. ನೇಮಕವನ್ನು ಅಧ್ಯಕ್ಷರು ಅನುಮೋದಿಸಿದ್ದಾರೆ.

ಅಸೀಂ ಮುನೀರ್

ಈ ಮೂಲಕ ಸೇನೆಯ ಉನ್ನತ ಸ್ಥಾನಕ್ಕೆ ನೇಮಕ ಕುರಿತ ಕುತೂಹಲಕ್ಕೆ ತೆರೆ ಬಿದ್ದಿದೆ. ಲೆಫ್ಟಿನೆಂಟ್ ಜನರಲ್ ಮುನೀರ್ ಈ ಹಿಂದೆ ಐಎಸ್‌ಐ ಅಲ್ಲದೆ, ಸೇನಾ ಗುಪ್ತಚರ (ಎಂಐ) ಮುಖ್ಯಸ್ಥರಾಗಿಯೂ ಕಾರ್ಯನಿರ್ವಹಿಸಿದ್ದರು.

ಸತತ 3 ಅವಧಿಗೆ ಸೇನಾ ಮುಖ್ಯಸ್ಥರಾಗಿದ್ದ 61 ವರ್ಷದ ಜನರಲ್ ಖಮರ್ ಜಾವೇದ್ ಬಜ್ವಾ ಅವರು ನವೆಂಬರ್ 29ರಂದು ನಿವೃತ್ತರಾಗಲಿದ್ದು, ತೆರವಾಗುವ ಸ್ಥಾನಕ್ಕೆ ಮುನೀರ್ ನೇಮಕಗೊಂಡಿದ್ದಾರೆ.

ಭಾರತ–ನ್ಯೂಜಿಲೆಂಡ್ ಮೊದಲ ಏಕದಿನ ಪಂದ್ಯ ಇಂದು

ಶಿಖರ್ ನಾಯಕತ್ವಕ್ಕೆ ಸವಾಲು

ಆಕ್ಲೆಂಡ್ (ಎಎಫ್‌ಪಿ): ಮುಂದಿನ ವರ್ಷ ಭಾರತದಲ್ಲಿಯೇ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಗೆ ತಂಡ ಕಟ್ಟುವ ಪ್ರಯೋಗ ನ್ಯೂಜಿಲೆಂಡ್ ಅಂಗಳದಿಂದ ಆರಂಭವಾಗಲಿದೆ.

ಶಿಖರ್ ಧವನ್ ನಾಯಕತ್ವದ ಭಾರತ ತಂಡವು ಇಲ್ಲಿ ಮೂರು ಪಂದ್ಯಗಳ ಸರಣಿಯನ್ನು ಆಡಲಿದೆ. ಇದರ ಮೊದಲ ಹಣಾಹಣಿ ಶುಕ್ರವಾರ ನಡೆಯಲಿದೆ. ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಹಾಗೂ ಕೆ.ಎಲ್. ರಾಹುಲ್ ಸೇರಿದಂತೆ ಅನುಭವಿಗಳು ವಿಶ್ರಾಂತಿ ಪಡೆದಿದ್ದಾರೆ. ಇತ್ತೀಚೆಗಷ್ಟೇ ಕಿವೀಸ್ ಎದುರು ಭಾರತ ಗೆದ್ದ ಟಿ20 ಸರಣಿಯಲ್ಲಿ ನಾಯಕತ್ವ ವಹಿಸಿದ್ದ ಹಾರ್ದಿಕ್ ಪಾಂಡ್ಯ ಕೂಡ ಈ ಸರಣಿಯಲ್ಲಿ ಆಡುತ್ತಿಲ್ಲ.

ಯುವ ಆಟಗಾರರಾದ ಶುಭಮನ್ ಗಿಲ್, ದೀಪಕ್ ಹೂಡಾ, ವೇಗಿ ಉಮ್ರಾನ್ ಮಲಿಕ್ ಅವರಿಗೆ ತಮ್ಮ ಸಾಮರ್ಥ್ಯ ಸಾಬೀತುಪಡಿಸಲು ಅವಕಾಶ ಸಿಗುವ ನಿರೀಕ್ಷೆ ಇದೆ. ಇಬ್ಬರು ವಿಕೆಟ್‌ಕೀಪರ್‌ಗಳಿಗೆ ಈ ತಂಡದಲ್ಲಿ ಸ್ಥಾನ ನೀಡಲಾಗಿದೆ. ಕೀಪಿಂಗ್ ಮತ್ತು ಬ್ಯಾಟಿಂಗ್ ಎರಡರಲ್ಲೂ ಮಿಂಚುವ ಸವಾಲು ರಿಷಭ್ ಪಂತ್ ಹಾಗೂ ಸಂಜು ಸ್ಯಾಮ್ಸನ್ ಅವರ ಮುಂದಿದೆ. ಕೇರಳದ ಸಂಜು ಈ ಹಿಂದೆಯೂ ಉತ್ತಮವಾಗಿ ಆಡಿದ್ದರು.

ಶಿಖರ್ ಕಳೆದ ಎರಡು ವರ್ಷಗಳಲ್ಲಿ ಏಕದಿನ ಕ್ರಿಕೆಟ್‌ನಲ್ಲಿ 1000 ರನ್‌ಗಳನ್ನು ಗಳಿಸಿದ್ದಾರೆ. ಅವರನ್ನು ಈ ಮಾದರಿಗೆ ಮಾತ್ರ ಆಯ್ಕೆ ಮಾಡಲಾಗುತ್ತಿದೆ. ಟಿ20 ಹಾಗೂ ಟೆಸ್ಟ್‌ಗಳಿಗೆ ಪರಿಗಣಿಸಿಲ್ಲ. ಸೂರ್ಯಕುಮಾರ್ ಯಾದವ್ ಟಿ20 ಮಾದರಿಯಿಂದ 50 ಓವರ್‌ಗಳ ಮಾದರಿಯಲ್ಲಿಯೂ ತಮ್ಮ ಅಬ್ಬರದ ಆಟವನ್ನು ಮುಂದುವರಿಸುವ ಹುಮ್ಮಸ್ಸಿನಲ್ಲಿದ್ದಾರೆ.

ಆರ್ಷದೀಪ್ ಸಿಂಗ್ ಅವರಿಗೆ ತಮ್ಮ ಸ್ವಿಂಗ್ ಚಾತುರ್ಯ ಮೆರೆಯಲು ಮತ್ತೊಂದು ಅವಕಾಶ ಸಿಗಲಿದೆ.

ಕೇನ್ ವಿಲಿಯಮ್ಸನ್ ನಾಯಕತ್ವದ ಆತಿಥೇಯ ಬಳಗವು ಟಿ20 ಸರಣಿಯಲ್ಲಿ ಆಡಿದ್ದ ತಂಡವನ್ನೇ ಉಳಿಸಿಕೊಂಡಿದೆ.

ಟ್ರೋಫಿಯೊಂದಿಗೆ ನ್ಯೂಜಿಲೆಂಡ್ ತಂಡದ ನಾಯಕ ಕೇನ್ ವಿಲಿಯಮ್ಸನ್ ಹಾಗೂ ಭಾರತ ತಂಡದ ನಾಯಕ ಶಿಖರ್ ಧವನ್ –ಪಿಟಿಐ ಚಿತ್ರ

ತಂಡಗಳು: ಭಾರತ: ಶಿಖರ್ ಧವನ್ (ನಾಯಕ), ಶುಭಮನ್ ಗಿಲ್, ಸೂರ್ಯಕುಮಾರ್ ಯಾದವ್, ಶ್ರೇಯಸ್ ಅಯ್ಯರ್, ರಿಷಭ್ ಪಂತ್ (ವಿಕೆಟ್‌ಕೀಪರ್), ಸಂಜು ಸ್ಯಾಮ್ಸನ್ (ವಿಕೆಟ್‌ಕೀಪರ್), ದೀಪಕ್ ಹೂಡಾ, ಶಹಬಾಜ್ ಅಹಮದ್, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಯಜುವೇಂದ್ರ ಚಾಹಲ್, ದೀಪಕ್ ಚಾಹರ್, ಆರ್ಷದೀಪ್ ಸಿಂಗ್, ಶಾರ್ದೂಲ್ ಠಾಕೂರ್, ಕುಲದೀಪ್ ಸೇನ್, ಉಮ್ರಾನ್ ಮಲಿಕ್. **ನ್ಯೂಜಿಲೆಂಡ್:** ಕೇನ್ ವಿಲಿಯಮ್ಸನ್ (ನಾಯಕ), ಫಿನ್ ಅಲೆನ್, ಡೆವೊನ್ ಕಾನ್ವೆ, ಟಾಮ್ ಲಥಾಮ್, ಡೆರಿಲ್ ಮಿಚೆಲ್, ಗ್ಲೆನ್ ಫಿಲಿಪ್ಸ್, ಮಿಚೆಲ್ ಬ್ರೇಸ್‌ವೆಲ್, ಟಿಮ್ ಸೌಥಿ, ಮ್ಯಾಟ್ ಹೆನ್ರಿ, ಆ್ಯಡಂ ಮಿಲ್ನೆ, ಜಿಮ್ಮಿ ನಿಶಾಮ್, ಮಿಚೆಲ್ ಸ್ಯಾಂಟನರ್, ಲಾಕಿ ಫರ್ಗ್ಯುಸನ್ (ಪಂದ್ಯ ಆರಂಭ: ಬೆಳಿಗ್ಗೆ 7)

ವಿಶ್ವ ಯೂತ್ ಚಾಂಪಿಯನ್‌ಷಿಪ್ ಏಳು ಬಾಕ್ಸರ್‌ಗಳು ಫೈನಲ್‌ಗೆ

ನವದೆಹಲಿ (ಪಿಟಿಐ): ವಿಶ್ವ ಯೂತ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಬಾಕ್ಸರ್‌ಗಳ ಉತ್ತಮ ಪ್ರದರ್ಶನ ಮುಂದುವರಿದಿದ್ದು, ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ ಒಟ್ಟು ಏಳು ಮಂದಿ ಫೈನಲ್ ಪ್ರವೇಶಿಸಿದ್ದಾರೆ.

ಸ್ಪೇನ್‌ನ ಲಾ ನೂಸಿಯಾದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದ ವಂಶಜ್, ವಿಶ್ವನಾಥ್ ಸುರೇಶ್ ಮತ್ತು ಆಶೀಶ್ ಅವರು ಪ್ರಶಸ್ತಿ ಸುತ್ತು ತಲುಪಿದರು.

ಮಹಿಳೆಯರ ವಿಭಾಗದಲ್ಲಿ ಕೀರ್ತಿ (+81 ಕೆ.ಜಿ), ಭಾವನಾ ಶರ್ಮಾ (48 ಕೆ.ಜಿ), ದೇವಿಕಾ ಘೋರ್ಪಡೆ (52 ಕೆ.ಜಿ) ಮತ್ತು ರವೀನಾ (63 ಕೆ.ಜಿ) ಅವರು ಫೈನಲ್‌ಗೆ ಲಗ್ಗೆಯಿಟ್ಟರು.

ಏಷ್ಯನ್ ಯೂತ್ ಬಾಕ್ಸಿಂಗ್ ಚಾಂಪಿಯನ್ ವಂಶಜ್ ಅವರು 63.5 ಕೆ.ಜಿ ವಿಭಾಗದಲ್ಲಿ ಅಮೆರಿಕದ ಡೆಶಾನ್ ಕ್ರಾಕ್ಲೆಮ್ ವಿರುದ್ಧ 3–2ರಲ್ಲಿ ಗೆದ್ದರೆ, ಆಶೀಶ್ (54 ಕೆ.ಜಿ) ಅವರು 4–3 ರಲ್ಲಿ ಉಜ್ಬೆಕಿಸ್ತಾನದ ಖುಜಂಜರ್ ನೊರ್ತೋಜಿವ್ ಅವರನ್ನು ಮಣಿಸಿದರು. ವಿಶ್ವನಾಥ್ 4–1 ಪಾಯಿಂಟ್ಸ್‌ಗಳಿಂದ ಪೋರ್ಟೊರಿಕೊದ ಜುವಾನ್ಮ ಲೊಪೆಜ್ ವಿರುದ್ಧ ಜಯಿಸಿದರು.

ಮಹಿಳೆಯರ ವಿಭಾಗದಲ್ಲಿ ಕೀರ್ತಿ, 3–2 ರಲ್ಲಿ ಕಜಕಸ್ತಾನದ ಅಸೆಲ್ ತೊಕ್ತಸಿನ್ ಅವರನ್ನು ಮಣಿಸಿದರು. ರವೀನಾ ಹಾಗೂ ಭಾವನಾ ಕ್ರಮವಾಗಿ ಕಜಕಸ್ತಾನದ ಅಸೆಮ್ ತನತರ್ ಮತ್ತು ಗುಲ್ನಾಜ್ ಬರಿಬಯೆವಾಗೆ ಸೋಲುಣಿಸಿದರು.

ನಾಲ್ವರಿಗೆ ಕಂಚು: ಮಹಿಳೆಯರ ವಿಭಾಗದಲ್ಲಿ ತಮನ್ನಾ (50 ಕೆ.ಜಿ), ಕುಂಜುರಾಣಿ ದೇವಿ ತೊಂಗಮ್ (60 ಕೆ.ಜಿ), ಮುಸ್ಕಾನ್ (75 ಕೆ.ಜಿ) ಮತ್ತು ಲಾಶು ಯಾದವ್ (70 ಕೆ.ಜಿ) ಅವರು ಸೆಮಿಫೈನಲ್‌ನಲ್ಲಿ ಸೋತು ಕಂಚು ಪಡೆದರು.

ಭಾರತದ ದೇವಿಕಾ ಘೋರ್ಪಡೆ (ಎಡ) ಅವರು ಸೆಮಿಫೈನಲ್‌ನಲ್ಲಿ ಪೈಪೋಟಿ ನಡೆಸಿದರು –ಪಿಟಿಐ ಚಿತ್ರ

ಹಾಕಿ: ಮೈಸೂರು ವಿಭಾಗ ಜಯಭೇರಿ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಮೈಸೂರು ವಿಭಾಗದ ತಂಡವು ಇಲ್ಲಿನ ಭಾರತ ಕ್ರೀಡಾ ಪ್ರಾಧಿಕಾರದ ಹಾಕಿ ಮೈದಾನದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ ಆಯೋಜಿಸಿದ್ದ ಪ್ರಾಥಮಿಕ ಮತ್ತು ಪ್ರೌಢಶಾಲಾ ಬಾಲಕ, ಬಾಲಕಿಯರ ರಾಜ್ಯಮಟ್ಟದ ಹಾಕಿ ಟೂರ್ನಿಯಲ್ಲಿ 14 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿತು.

ಮೈಸೂರು 9 ಅಂಕಗಳನ್ನು ಪಡೆದರೆ. ಬೆಳಗಾವಿಯು 6 ಅಂಕ ಗಳಿಸಿ ದ್ವಿತೀಯ , ಕಲಬುರಗಿ 3 ಅಂಕ ಪಡೆದು ತೃತೀಯ ಸ್ಥಾನ ಗಳಿಸಿತು. ಬೆಂಗಳೂರು ವಿಭಾಗದಿಂದ ಅಂಕ ಗಳಿಕೆ ಸಾಧ್ಯವಾಗಲಿಲ್ಲ.

14 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಬೆಳಗಾವಿ ವಿಭಾಗವು 8–0ಯಿಂದ ಬೆಂಗಳೂರನ್ನು ಸೋಲಿಸಿತು. 17 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಕಲಬುರಗಿ ವಿಭಾಗವು 3–1ರಿಂದ ಬೆಳಗಾವಿಯನ್ನು, ಎಸ್‌ಎಸ್ ಕೊಡಿಗೆ ತಂಡದವರು 7–1ರಿಂದ ಕಲಬುರಗಿಯನ್ನು, ಮೈಸೂರು ವಿಭಾಗವು 1–0ಯಿಂದ ಬೆಂಗಳೂರನ್ನು ಮಣಿಸಿತು.

ಬಾಲಕಿಯರ ವಿಭಾಗದಲ್ಲಿ ಬೆಂಗಳೂರು ವಿಭಾಗವು 2–0ಯಿಂದ ಕಲಬುರಗಿಯನ್ನು, ಎಸ್‌ಎಸ್ ಕೊಡಿಗೆ ತಂಡವು 8–0ಯಿಂದ ಬೆಂಗಳೂರು ಮತ್ತು ಮೈಸೂರು ವಿಭಾಗವು 4–0ಯಿಂದ ಬೆಳಗಾವಿಯನ್ನು ಸೋಲಿಸಿತು.

ಮಡಿಕೇರಿಯ ಭಾರತ ಕ್ರೀಡಾ ಪ್ರಾಧಿಕಾರದ ಹಾಕಿ ಮೈದಾನದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯೋಜಿಸಿದ್ದ ಹಾಕಿ ಟೂರ್ನಿಯಲ್ಲಿ 17 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಮೈಸೂರು ಮತ್ತು ಬೆಳಗಾವಿ ತಂಡದವರು ಗೋಲಿಗಾಗಿ ಪೈಪೋಟಿ ನಡೆಸಿದರು

ಬಾಂಗ್ಲಾ ಏಕದಿನ ತಂಡ: ಶಕೀಬ್ ವಾಪಸ್

ಢಾಕಾ (ಪಿಟಿಐ): ಆಲ್‌ರೌಂಡರ್ ಶಕೀಬ್ ಅಲ್ ಹಸನ್ ಅವರು ಬಾಂಗ್ಲಾದೇಶ ಏಕದಿನ ಕ್ರಿಕೆಟ್ ತಂಡಕ್ಕೆ ಮರಳಿದ್ದು, ಭಾರತ ವಿರುದ್ಧದ ಸರಣಿಯಲ್ಲಿ ಆಡಲಿದ್ದಾರೆ.

ಶಕೀಬ್ ಅವರು ವೆಸ್ಟ್ ಇಂಡೀಸ್ ಮತ್ತು ಜಿಂಬಾಬ್ವೆ ವಿರುದ್ಧದ ಸರಣಿಯಲ್ಲಿ ಆಡಿರಲಿಲ್ಲ. ಆದರೆ ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಬಾಂಗ್ಲಾ ತಂಡವನ್ನು ಮುನ್ನಡೆಸಿದ್ದರು.

ಬ್ಯಾಟರ್‌ಗಳಾದ ನಜ್ಮುಲ್ ಹೊಸೇನ್ ಮತ್ತು ಯಾಸಿರ್ ಅಲಿ ಅವರು 16 ಸದಸ್ಯರ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಬ್ಯಾಟರ್ ಮೊಸದ್ದೆಕ್ ಹೊಸೇನ್, ಸ್ಪಿನ್ನರ್ ತೈಜುಲ್ ಇಸ್ಲಾಂ ಮತ್ತು ವೇಗಿ ಶರೀಫುಲ್ ಇಸ್ಲಾಂ ಅವರನ್ನು ಪರಿಗಣಿಸಿಲ್ಲ.

ಭಾರತ ವಿರುದ್ಧದ ಸರಣಿಯ ಮೊದಲ 2 ಪಂದ್ಯಗಳು ಡಿ.4 ಮತ್ತು 7 ರಂದು ಢಾಕಾದಲ್ಲಿ ನಡೆಯಲಿದ್ದು, ಕೊನೆಯ ಪಂದ್ಯ ಡಿ.10 ರಂದು ಚಿತ್ತಗಾಂಗ್‌ನಲ್ಲಿ ಆಯೋಜನೆಯಾಗಿದೆ.

ತಂಡ ಹೀಗಿದೆ: ತಮೀಮ್ ಇಕ್ಬಾಲ್ (ನಾಯಕ), ಲಿಟನ್ ದಾಸ್, ಅನಾಮುಲ್ ಹಕ್, ಶಕೀಬ್ ಅಲ್ ಹಸನ್, ಮುಷ್ಫಿಕುರ್ ರಹೀಂ, ಅಫೀಫ್ ಹೊಸೇನ್, ಯಾಸಿರ್ ಅಲಿ, ಮೆಹ್ದಿ ಹಸನ್ ಮಿರಾಜ್, ಮುಸ್ತಫಿಜುರ್ ರಹ್ಮಾನ್, ತಸ್ಕಿನ್ ಅಹಮದ್, ಹಸನ್ ಮಹಮೂದ್, ಎಬಾದತ್ ಹೊಸೇನ್, ನಸುಮ್ ಅಹಮದ್, ಮಹಮೂದುಲ್ಲಾ ರಿಯಾದ್, ನಜ್ಮುಲ್ ಹೊಸೇನ್ ಮತ್ತು ನೂರುಲ್ ಹಸನ್.

ಭಾರತ ಸರ್ಕಾರ

ವಿಶೇಷ ಭೂಸ್ವಾಧೀನಾಧಿಕಾರಿ ಕಛೇರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು

ತುಮಕೂರು-ಶಿವಮೊಗ್ಗ ವಿಭಾಗ (ರಾಹೆ-206)

2ನೇ ಮಹಡಿ, ಸೆಂಟ್ರಲ್ ಅವೆನ್ಯು, ಎಸ್‌ಬಿಐ ಬ್ಯಾಂಕು ಸಮೀಪ, ಎನ್‌ಟಿ ರಸ್ತೆ, ಶಿವಮೊಗ್ಗ.

ಸಾರ್ವಜನಿಕ ಪ್ರಕಟಣೆ

(ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 ಕಲಂ 3(ಜಿ) ರಂತೆ)

ರಾಷ್ಟ್ರೀಯ ಹೆದ್ದಾರಿ ಕಾಯಿದೆ 1956 (1956ರ 48) ಮತ್ತು ತಿದ್ದುಪಡಿ ಕಾಯಿದೆ 1997ರ ಸೆಕ್ಷನ್ 3ಡಿ (1) ಮತ್ತು (2) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಭಾರತ ಸರ್ಕಾರವು ತನ್ನ ಗೆಜೆಟ್ ಅಧಿಸೂಚನೆ ನಂಬರ್ **ಎಸ್.ಒ. 4452(ಇ)** ದಿನಾಂಕ 22ನೇ ಸೆಪ್ಟಂಬರ್, 2022 ರಲ್ಲಿ ಕೆಳಗೆ ಪ್ರಕಟಿಸಿರುವ ಅಧಿಸೂಚನೆಯಲ್ಲಿರುವ ಜಮೀನುಗಳನ್ನು ರಾಷ್ಟ್ರೀಯ ಹೆದ್ದಾರಿ ನಂ. 206 **ಕಿ.ಮೀ. 132.000 ರಿಂದ ಕಿ.ಮೀ. 174.000 ರವರೆಗೆ (ತುಮಕೂರು-ಶಿವಮೊಗ್ಗ ವಿಭಾಗ)** ಕರ್ನಾಟಕ ರಾಜ್ಯದ ಕೆಲವು ಗ್ರಾಮಗಳ ರಸ್ತೆಯನ್ನು ಮೇಲ್ದರ್ಜೆಗೆ ಏರಿಸಿ ವಿಸ್ತರಣೆ ನಾಲ್ಕು ಪಥದ ರಸ್ತೆ ಹಾಗೂ ಕಾರ್ಯ ನಿರ್ವಹಣೆ ಮತು ಸಂರಕ್ಷಣೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಂಡಿರುತ್ತದೆ.

ರಾಷ್ಟ್ರೀಯ ಹೆದ್ದಾರಿ ಕಾಯಿದೆ 1956 ಕಲಂ 3(ಡಿ)(1) ಹಾಗೂ (2) ರನ್ವಯ, ರಾಷ್ಟ್ರೀಯ ಹೆದ್ದಾರಿ ವಿಸ್ತರಣೆಗಾಗಿ ಬೇಕಾಗಿರುವ ಈ ಕೆಳಗಿನ ಷೆಡ್ಯೂಲ್‌ನಲ್ಲಿ ಎಲ್ಲಾ ಜಮೀನುಗಳು ಭಾರತ ಸರ್ಕಾರದ ಅಧಿಕೃತ ಗೆಜೆಟ್‌ನಲ್ಲಿ ಪ್ರಕಟವಾದ ದಿನಾಂಕದಿಂದ ಎಲ್ಲಾ ಋಣಭಾರದಿಂದ ವಿಮುಕ್ತಿ ಹೊಂದಿ ಭಾರತ ಸರ್ಕಾರದಲ್ಲಿ ವಿಹಿತಗೊಂಡಿರುತ್ತದೆ. ಆದ ಕಾರಣ, ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 (1956 ರ 48) ಮತ್ತು ತಿದ್ದುಪಡಿ ಕಾಯಿದೆ 1997ರ ಪ್ರಕಾರ 3 (ಜಿ)(1), 3(ಜಿ)(2), 3(ಜಿ)(3) ಮತ್ತು (ಜಿ)(4) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನಿನ ಮಾಲೀಕರುಗಳಿಗೆ ಮತ್ತು ಸದರಿ ಜಮೀನುಗಳಲ್ಲಿ ಹಿತಾಸಕ್ತಿ ಉಳ್ಳವರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಅವರುಗಳ ಜಮೀನುಗಳನ್ನು ಕೇಂದ್ರ ಸರ್ಕಾರಕ್ಕೆ ವಶಪಡಿಸಿಕೊಂಡಿರುವ ಬಗ್ಗೆ ಅವರಿಗೆ ಪರಿಹಾರ ಧನ ನಿರ್ಧರಿಸಿ ಪಾವತಿ ಮಾಡುವ ಸಲುವಾಗಿ ಸಂಬಂಧಪಟ್ಟ ಜಮೀನಿನ ಹಕ್ಕಿನ ಬಗ್ಗೆ ದಾಖಲಾತಿ ಪತ್ರದೊಂದಿಗೆ ಅಂದರೆ (1) ಕ್ರಯ/ವಿಭಾಗ ಮತ್ತು ಇತರೆ ಪತ್ರಗಳು (2) ಆರ್.ಟಿ.ಸಿ. (ಪಹಣಿ ಪತ್ರ ಇಲ್ಲಿಯವರೆಗೆ/ಪಂಚಾಯ್ತಿ ಖಾತಾ, ಲೈಸೆನ್ಸ್, ಧೃಡೀಕೃತ ಪ್ಲ್ಯಾನ್ (3) ಮ್ಯೂಟೇಷನ್ ಪತ್ರಗಳು (4) ಕಂದಾಯ ಪಾವತಿ ರಶೀದಿ (5) ಋಣಭಾರ ಪತ್ರ 13 ವರ್ಷಕ್ಕೆ (5) ಭೂ ಮಂಜೂರಿ ಆದೇಶ (7) ಭೂ-ಪರಿವರ್ತನೆ ಆದೇಶ ಮತ್ತು ಅನುಮೋದಿತ ನಕ್ಷೆ (8) ಸಾಗುವಳಿ ಚೀಟಿ (9) ಆಕಾರ್ ಬಂದ್ (10) ಜಾತಿ ಪ್ರಮಾಣ ಪತ್ರ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಾತ್ರ) ಇತರೆ ಪ್ರತಿಗಳೊಂದಿಗೆ ತಮ್ಮ ಬೇಡಿಕೆಗಳೇನಾದರೂ ಇದ್ದಲ್ಲಿ , ಈ ಕೆಳಗೆ ನಮೂದಿಸಿರುವ ಸ್ಥಳದಲ್ಲಿ ಮತ್ತು ದಿನಾಂಕದಂದು ಖುದ್ದಾಗಿ ಅಥವಾ ವಕೀಲರ ಮೂಲಕ ಸಲ್ಲಿಸತಕ್ಕದ್ದು.

ತಾಲ್ಲೂಕು ಮತ್ತು ಗ್ರಾಮದ ಹೆಸರು	ವಿಚಾರಣಾ ದಿನಾಂಕ ಮತ್ತು ಸಮಯ	ಭೂಮಾಲೀಕರು/ಹಿತಾಸಕ್ತಿಯುಳ್ಳವರು ಅವರ ಬೇಡಿಕೆಗಳನ್ನು ಸಲ್ಲಿಸುವ ಹಾಗೂ ವಿಚಾರಣಾ ಸ್ಥಳ
ತಾಲ್ಲೂಕು: ಕಡೂರು 1. ಬೀರೂರು (ಗ್ರಾಮೀಣ) 2. ಬೀರೂರು ಕಾವಲ್ (ಗ್ರಾಮೀಣ) 3. ಹನುಮಪುರ 4. ಜೋಡಿ ತಿಮ್ಮಪುರ 5. ಕೆ ತಿಮ್ಮಪುರ 6. ಮಲ್ಲೇಶ್ವರ (ಗ್ರಾಮೀಣ) 7. ನಾಗದೇವರಹಳ್ಳಿ 8. ತುರುವನಹಳ್ಳಿ 9. ಯು. ಕೋಡಿಹಳ್ಳಿ 10. ಉಳ್ಳಿನಾಗೂರು (ಗ್ರಾಮೀಣ) 11. ವಿ ಎಲ್ ನಗರ	**15.12.2022ರಂದು ಬೆಳಗ್ಗೆ 11.00 ರಿಂದ ಮಧ್ಯಾಹ್ನ 2.00ರ ವರೆಗೆ**	**ವಿಶೇಷ ಭೂಸ್ವಾಧೀನಾಧಿಕಾರಿಗಳ ಮತ್ತು ಸಕ್ಷಮ ಪ್ರಾಧಿಕಾರ, ಶಿವಮೊಗ್ಗ 2ನೇ ಮಹಡಿ, ಸೆಂಟ್ರಲ್ ಅವೆನ್ಯೂ, ಎಸ್‌ಬಿಐ ಬ್ಯಾಂಕ್ ಹತ್ತಿರ, ಎನ್ ಟಿ ರಸ್ತೆ, ಶಿವಮೊಗ್ಗ - 577 202. ದೂರವಾಣಿ ಸಂ. 08182-220020.**

ಸಹಿ/-
ಮೇಘನಾ ಆರ್. ಕೆ.ಎ.ಎಸ್
ವಿಶೇಷ ಭೂಸ್ವಾಧೀನಾಧಿಕಾರಿಗಳು ಮತು ಸಕ್ಷಮ ಪ್ರಾಧಿಕಾರ,
ತುಮಕೂರು-ಶಿವಮೊಗ್ಗ ರಾ.ಹೆ. ಸಂ. 206,
2ನೇ ಮಹಡಿ, ಸೆಂಟ್ರಲ್ ಅವೆನ್ಯೂ, ಎಸ್‌ಬಿಐ ಬ್ಯಾಕ್ ಹತ್ತಿರ, ಎನ್ ಟಿ ರಸ್ತೆ, ಶಿವಮೊಗ್ಗ

ಅನುಸೂಚಿ

ಕರ್ನಾಟಕ ರಾಜ್ಯದ ಚಿಕ್ಕಮಗಳೂರು ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ-206 ರಲ್ಲಿ ಕಿ.ಮೀ. 132.000 ರಿಂದ ಕಿ.ಮೀ. 174.000 ರ ವರೆಗೆ (ತುಮಕೂರು-ಶಿವಮೊಗ್ಗ ವಿಭಾಗ) ಕಟ್ಟಡಗಳು ಮತ್ತು ಕಟ್ಟಡಗಳ ರಹಿತ ಸ್ವಾಧೀನಗೊಳ್ಳಲಿರುವ ಜಮೀನುಗಳ ಸಂಕ್ಷಿಪ್ತ ವಿವರ.

ರಾಜ್ಯ : ಕರ್ನಾಟಕ — **ಜಿಲ್ಲೆ : ಚಿಕ್ಕಮಗಳೂರು**

ಕ್ರ ಸಂ.	ಸರ್ವೆ ಸಂಖ್ಯೆ	ಜಮೀನಿನ ತರಹೆ	ಜಮೀನಿನ ಸ್ವರೂಪ	ಜಮೀನಿನ ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ	ಭೂಮಾಲೀಕರ ಹೆಸರು / ಹಿತಾಸಕ್ತಿದಾರರ ಹೆಸರು ಸರ್ವೆ ನಂಬರ್
1	2	3	4	5	6
ತಾಲ್ಲೂಕು : ಕಡೂರು					
ಜಿಲ್ಲೆ : ಬೀರೂರು (ಗ್ರಾಮೀಣ)					
1	120/2ಎ	ಖಾಸಗಿ	ಖುಷ್ಕಿ	0.0101	ಆರ್ ಮಹದೇವಪ್ಪ ಬಿನ್ ರಾಮಪ್ಪ, 120/2ಎ
2	120/2ಸಿ	ಖಾಸಗಿ	ಖುಷ್ಕಿ	0.0051	ಮೂಡ್ಲಗಿರಿಯಪ್ಪ ಬಿನ್ ಕೊನ್ಕೇರಿತಿಮ್ಮಣ್ಣ ,120/2ಸಿ
3	120/5	ಖಾಸಗಿ	ಖುಷ್ಕಿ	0.0176	ಮೋಹನಪ್ಪ ಬಿನ್ ಲೇಟ್ ರಂಗಪ್ಪ, ಧರ್ಮಪ್ಪ ಬಿನ್ ಲೇಟ್ ರಂಗಪ್ಪ, ದಾನಪ್ಪ ಬಿನ್ ಲೇಟ್ ರಂಗಪ್ಪ, 120/5
4	123/2	ಖಾಸಗಿ	ಖುಷ್ಕಿ	0.0379	ನರಸಿಂಯ್ಯ ಬಿನ್ ಸಣ್ಣಗೋವಿಂದಪ್ಪ, ಲಕ್ಷ್ಮಣ ಬಿನ್ ತಿಮ್ಮಣ್ಣನ ಸಣ್ಣಗೋವಿಂದಪ್ಪ ಬಿನ್ ತಿಮ್ಮಣ್ಣ ,123
5	14	ಸರ್ಕಾರ	ಖುಷ್ಕಿ	0.0379	ಸ್ಮಶಾನ ಮೋಕ್ಷಧಮಾ, 14
6	17	ಖಾಸಗಿ	ಭಾಗಾಯ್ತು	0.1515	ಸ್ಮಶಾನ ಎಂ ಕೆ ಕಾಲೋನಿ, ಎಂ ಶೈಲ ಕೋಂ ಶಂಕರ ನಾಯಿಕ, ಶಂಕರ ನಾಯಿಕ ಬಿನ್ ಹರಿಶ್ಚಂದ್ರ ನಾಯಿಕ, ಅಬ್ದುಲ್ ಸಲೀಮ್ ಬಿನ್ ಲೇಟ್ ಅಬ್ದುಲ್ ರೆಹಮಾನ್ ಸಾಹೇಬ್ ಮತ್ತು ಇತರರು, 17
7	18	ಸರ್ಕಾರ	ಖುಷ್ಕಿ/ಭಾಗಾಯ್ತು	0.1821	ಸರ್ಕಾರಿ ಸ್ಮಶಾನ, 18
8	21	ಖಾಸಗಿ	ಭಾಗಾಯ್ತು	0.0733	ಬಿ ಎಸ್ ಈರೋಜಿರಾವ್ ಬಿನ್ ಸಿದ್ದೋಜಿರಾವ್, 21
9	22	ಖಾಸಗಿ	ಖುಷ್ಕಿ/ಭಾಗಾಯ್ತು	0.0126	ಮಂಜುಳಾಬಾಯಿ ಬಿನ್ ಲೇಟ್ ಬಿ ಎಂ ವೀರೋಜಿರಾವ್, ಬಿ ಎಂ ಪುಟ್ಟೋಜಿರಾವ್ ಬಿನ್ ಮಂಜುನಾಥರಾವ್, ಬಿ ಎಂ ವೀರೋಜಿರಾವ್, ಚಿನ್ನೋಜಿರಾವ್ ಬಿನ್ ಈರೋಜಿರಾವ್ ಬಿ ವಿ ರಾಜಶೇಖರಪ್ಪ ಬಿನ್ ಕೆ ವಿ ವೀರಭದ್ರಪ್ಪ, ಬಿ ವಿ ರುದ್ರಪ್ಪ ಬಿನ್ ಲೇಟ್ ವೀರಪ್ಪ, ಬಿ ವಿ ಸುರೇಶ್ ಬಿನ್ ಲೇಟ್ ವೀರಪ್ಪ, 22
10	23/2	ಖಾಸಗಿ	ಭಾಗಾಯ್ತು	0.0177	ಪತ್ರೆ ಎಸ್ ದೇವದತ್ತ ಬಿನ್ ಪತ್ರೆ ಸಿ ಸದಾಶಿವನ್, 23/2
11	6/1	ಖಾಸಗಿ	ಭಾಗಾಯ್ತು/ಖುಷ್ಕಿ	0.0278	ಡಿ ಆರ್ ರಮೇಶ್ ಬಿನ್ ಡಿ ಕೆ ರುದ್ರಪ್ಪ, 6/1
12	6/2	ಖಾಸಗಿ	ಭಾಗಾಯ್ತು/ಖುಷ್ಕಿ	0.0228	ಡಿ ವಿ ಸುನಿಲ್ ಬಿನ್ ಡಿ ಎಲ್ ವಿಜಯದೇವ್, 6/2
13	9/2	ಖಾಸಗಿ	ಎಎಲ್‌ಎನ್	0.0228	ಸುರಯ್ಯ ಕೋಂ ಮೊಹಮ್ಮದ್ ರಫೀಕ್, ಫಸಿಯಾಭಾನು ಬಿನ್ ಮೊಹಮ್ಮದ್ ರಫೀಕ್, ರುಹಿನಾಜ್ ಬಿನ್ ಮೊಹಮ್ಮದ್ ರಫೀಕ್, ಮೊಹಮ್ಮದ್ ಶಹಲಾಂ ಬಿನ್ ಮೊಹಮ್ಮದ್ ರಫೀಕ್ ಬಿ ಆರ್ ಅಲ್ಮಾಸ್ ಬಿನ್ ಮೊಹಮ್ಮದ್ ರಫೀಕ್, 9/2
ಗ್ರಾಮ: ಬೀರೂರು ಕಾವಲ್ (ಗ್ರಾಮೀಣ)					
14	180	ಖಾಸಗಿ	ಖುಷ್ಕಿ	0.0051	ಕೆ ಆರ ಯೋಗೇಂದ್ರ, ದೇವೀರಮ್ಮ ಕೋಂ ಮಲ್ಲಯ್ಯ, ಗೋವಿಂದಪ್ಪ ಬಿನ್ ದಳವಾಯಿ ತಿಮ್ಮಣ್ಣ, ಲೀಲಮ್ಮ ಕೋಂ ಗೋವಿಂದಪ್ಪ, 180
15	181	ಖಾಸಗಿ	ಖುಷ್ಕಿ	0.0909	ಟಿ ಗೋವಿಂದಪ್ಪ ಬಿನ್ ದಳವಾಯಿ ತಿಮ್ಮಣ್ಣ, ಟಿ ಗೋವಿಂದಪ್ಪ ಬಿನ್ ತಿಮ್ಮಪ್ಪ, ಕೆ ಆರ್ ಯೋಗೇಂದ್ರ ಬಿನ್ ಜೆ ದೇವೀರಮ್ಮ ಕೋಂ ಮಲ್ಲಯ್ಯ, 181
16	184	ಖಾಸಗಿ	ಖುಷ್ಕಿ	0.0354	ದಿನೇಶ್, ಶ್ರೀರಾಮ್, ಶ್ರೀಕಾಂತ್, ಎಂ ಎಸ್ ಗೀತಾ ಕೋಂ ಎಂ ಎನಂ ಶಿವಕುಮಾರ, 184
17	185	ಖಾಸಗಿ	ಖುಷ್ಕಿ	0.0329	ಕೆ ಟಿ ರಾಜಶೇಖರ ಬಿನ್ ತಿಮ್ಮಯ್ಯಬಿ ಆರ್ ಚಂದ್ರಶೇಖರ, ಬಿನ್ ಆರ್ ತಿಮ್ಮಯ್ಯ, 185
18	189	ಖಾಸಗಿ	ಖುಷ್ಕಿ	0.0177	ಲಕ್ಷ್ಮಿದೇವಮ್ಮ ಕೋಂ ಲೇಟ್ ಬಿ ಎಂ ಲೋಕೇಶಪ್ಪ, ಪಾರ್ವತಮ್ಮ ಕೋಂ ಲೇಟ್ ಗೋವಿಂದಪ್ಪ, 189
19	378	ಖಾಸಗಿ	ಖುಷ್ಕಿ	0.0126	ಕೆ ಎಂ ಹಾಲಪ್ಪ ಬಿನ್ ಕೆ ಎಲ್ ಮರುಳಪ್ಪ, 378
20	4-ಫೋಕಲ್	ಸರ್ಕಾರ	ಸರ್ಕಾರ	0.394	ಎಸ್ ಆರ್ ಲಕ್ಷ್ಮಯ್ಯ ಬಡಾವಣೆ, 4-ಫೋಕಲ್
21	88/3	ಖಾಸಗಿ	ಖುಷ್ಕಿ	0.0228	ಸರ್ಕಾರ, 88/3
22	88/5	ಖಾಸಗಿ	ಖುಷ್ಕಿ	0.0101	ಕೆ ಸಿ ಜಗದೀಶ್ ಬಿನ್ ಚಿಕ್ಕಣ್ಣ, 88/5
23	88/6	ಖಾಸಗಿ	ಖುಷ್ಕಿ	0.0733	ಕೆ ಸಿ ರಾಜೀವ್ ಬಿನ್ ಚಿಕ್ಕಣ್ಣ, 88/6
ಗ್ರಾಮ: ಹನುಮಪುರ					
24	10/1	ಖಾಸಗಿ	ಖುಷ್ಕಿ	0.0405	ಗೋವಿಂದಪ್ಪ ಬಿನ್ ಹನುಮಣ್ಣ, ಗಂಗಪ್ಪ ಬಿನ್ ಹನುಮಣ್ಣ, ಬಿ ರವಿ ಬಿನ್ ಬಸಪ್ಪ, ಓಂಕಾರಪ್ಪ ಟಿ ಬಿನ್ ತಿಮ್ಮಣ್ಣ ಯಾನೆ ಗುಂಡಯ್ಯ ತಿಮ್ಮಣ್ಣ, 10/1
25	5/1	ಖಾಸಗಿ	ಖುಷ್ಕಿ	0.0253	ತಿಮ್ಮಣ್ಣ ಕೋಂ ಲೇಟ್ ಸಾ ಕಾ ಹನುಮಣ್ಣ, ತಿಮ್ಮಣ್ಣ ಬಿನ್ ಲೇಟ್ ಸಾ ಕಾ ಹನುಮಣ್ಣ, 5/1
26	5/2	ಖಾಸಗಿ	ಖುಷ್ಕಿ	0.0202	ಟಿ ಕೃಷ್ಣಮೂರ್ತಿ ಬಿನ್ ಲೇಟ್ ಕೆ ತಿಮ್ಮಪ್ಪ, 5/2
27	5/3	ಖಾಸಗಿ	ಖುಷ್ಕಿ	0.0101	ಗೋವಿಂದಪ್ಪ ಬಿನ್ ಲೇಟ್ ಬ್ಯಾಡಗಿ ಕರಿಯಪ್ಪ, 5/3
28	9/2	ಖಾಸಗಿ	ಖುಷ್ಕಿ	0.0101	ರತ್ನಮ್ಮ ಕೋಂ ಟಿ ಐ ಕರಿಯಪ್ಪ, 9/2
29	9/3	ಖಾಸಗಿ	ಖುಷ್ಕಿ	0.0253	ಕರಿಹನುಮೇಗೌಡ ಬಿನ್ ಗೋವಿಂದಪ್ಪ, ಜಿ ಶ್ರೀಧರ ಬಿನ್ ಲೇಟ್ ಗೋವಿಂದಪ್ಪ, 9/3
30	9/4	ಖಾಸಗಿ	ಖುಷ್ಕಿ	0.0405	ಹೇಮಾವತಿ ಕೋಂ ಸೋಮಶೇಖರಪ್ಪ, 9/4
31	9/6	ಖಾಸಗಿ	ಖುಷ್ಕಿ	0.0101	ಜಿ ಶ್ರೀಧರ ಬಿನ್ ಲೇಟ್ ಗೋವಿಂದಪ್ಪ, 9/6
ಗ್ರಾಮ: ಜೋಡಿ ತಿಮ್ಮಾಪುರ					
32	153	ಸರ್ಕಾರ	ಸರ್ಕಾರ	0.1515	ಕಂದಾಯ ವಿಭಾಗ, ಹಿಂದು ಸ್ಮಶಾನ, ಸರ್ಕಾರಿ ಪ್ರೌಢ ಶಾಲೆ ಜೋಡಿತಿಮ್ಮಪುರ ಮತ್ತು ಇತರರು, 153
ಗ್ರಾಮ: ಕೆ ತಿಮ್ಮಾಪುರ					
33	12/4	ಖಾಸಗಿ	ತರಿ/ಭಾಗಾಯ್ತು	0.0051	ಹೇಮಲತ ಕೋಂ ಕೆ ಬಿ ಸೋಮಶೇಖರ, 12/4
ಗ್ರಾಮ: ಮಲ್ಲೇಶ್ವರ (ಗ್ರಾಮೀಣ)					
34	105/1	ಖಾಸಗಿ	ತರಿ	0.0278	ಲೋಕೇಶ ಬಿನ್ ಸಣ್ಣತಿಮ್ಮಯ್ಯ, ಕೆ ಎಸ್ ಶಿವಣ್ಣ ಬಿನ್ ಲೇಟ್ ಸೋಮಯ್ಯ, ಕೆ ಎಸ್ ರಾಜು ಬಿನ್ ಲೇಟ್ ಸೋಮಯ್ಯ, 105/1
35	64/2	ಖಾಸಗಿ	ತರಿ	0.0101	ಕೆ ಹೆಚ್ ಲಕ್ಕಣ್ಣ ಬಿನ್ ಕೆ ಎಲ್ ಹಾಲಪ್ಪ, 64/2
36	64/4	ಖಾಸಗಿ	ತರಿ	0.0025	ಚಂದ್ರಮ್ಮ ಬಿನ್ ಪುಟ್ಟತಿಮ್ಮಯ್ಯ, ಭಾಗ್ಯಮ್ಮ ಬಿನ್ ಚಂದ್ರಮ್ಮ, 64/4
37	64/5	ಖಾಸಗಿ	ತರಿ	0.0152	ಕೆ ಹೆಚ್ ಲಕ್ಕಣ್ಣ ಬಿನ್ ಕೆ ಎಲ್ ಹಾಲಪ್ಪ, 64/5
38	71	ಖಾಸಗಿ	ತರಿ	0.0152	ಕೆ ಎಸ್ ಬಸವರಾಜು ಬಿನ್ ಕೆ ಎನ್ ಸೋಮಣ್ಣ , 71
ಗ್ರಾಮ: ನಾಗದೇವರಹಳ್ಳಿ					
39	84	ಖಾಸಗಿ	ಭಾಗಾಯ್ತು	0.0152	ಕೆ ಎಂ ವಿನಾಯಕ ಬಿನ್ ಕೆ ಎಸ್ ಮಲ್ಲಿಕಾರ್ಜುನ ಪ್ರಸನ್ನ, ಕೆ ಎಲ್ ಶಿವಲಿಂಗ ಸ್ವಾಮಿ ಬಿನ್ ಲೇಟ್ ಕೆ ಎಸ್ ಲಿಂಗಪ್ಪ, ಕೆ ಎಲ್ ದಯಾನಂದ ಬಿನ್ ಕೆ ಎಸ್ ಲಿಂಗಪ್ಪ, ಕೆ ವಿ ವೀಣಾ ಕೋಂ ಲೇಟ್ ಕೆ ಎಲ್ ವಿಜಯಕುಮಾರ್, 84
ಗ್ರಾಮ: ತುರುವನಹಳ್ಳಿ					
40	173	ಖಾಸಗಿ	ತರಿ	0.0455	ಸಾಗುನಾಥ್ ಬಿನ್ ಹುಚ್ಚಣ್ಣ, ರಾಮಪ್ಪ ಬಿನ್ ಹುಚ್ಚಣ್ಣ, ಲಕ್ಕಮ್ಮ ಕೋಂ ಲೇಟ್ ತಿಮ್ಮಣ್ಣ , 173
41	174	ಖಾಸಗಿ	ತರಿ	0.0354	ದೇವಮ್ಮ ಕೋಂ ತಿಮ್ಮಯ್ಯ ಸೋಮೇಶ್ ಬಿನ್ ಲೇಟ್ ತಿಮ್ಮಯ್ಯ, ಬಸಪ್ಪ ಬಿನ್ ತಿಮ್ಮಯ್ಯ, 174
42	175/1	ಖಾಸಗಿ	ತರಿ	0.0076	ಕೆ ಜಿ ಶಿವಕುಮಾರ್ ಬಿನ್ ಕೆ ಪಿ ಗೋವಿಂದಪ್ಪ ಶ್ರೀನಿವಾಸ್ ಬಿನ್ ಕೆ ಪಿ ಗೋವಿಂದಪ್ಪ, ಸುನಂದ ಟಿ ಸಿ ಕೋಂ ಕೆ ಜಿ ಮಂಜುನಾಥ್, 175/1
43	182/2	ಖಾಸಗಿ	ತರಿ	0.0606	ಸಗುಣಪ್ಪ ಬಿನ್ ಹುಚ್ಚಪ್ಪ, ಸಿದ್ದಯ್ಯ ಬಿನ್ ಹುಚ್ಚಪ್ಪ, 182/2
44	183/1	ಖಾಸಗಿ	ಖುಷ್ಕಿ	0.1416	ಬಿ ಎನ್ ಧ್ರುವಕುಮಾರ ಬಿನ್ ನಾರಾಯಣಶೆಟ್ಟಿ, ಈಶ್ವರಪ್ಪ ಬಿನ್ ನಾಗಣ್ಣ, ನಾಗಣ್ಣ ಬಿನ್ ಲಕ್ಕಣ್ಣ, ಕಮಲಮ್ಮ ಕೋಂ ದಾಸಪ್ಪ, ನಾಗರಾಜ ಬಿನ್ ಲೇಟ್ ಅಲುಬಿಂಗಿ ಹೊಳೆಯಪ್ಪ, 183/1
45	188/1ಎ1	ಖಾಸಗಿ	ತರಿ	0.0404	ಕಮಲಮ್ಮ ಬಿನ್ ಲೇಟ್ ಸಣ್ಣಮಲ್ಲಯ್ಯ, 188/1ಎ1
46	188/1ಎ2	ಖಾಸಗಿ	ತರಿ	0.0278	ಬಿ ಎಸ್ ಸತೀಶ್ ಬಿನ್ ಲೇಟ್ ಬಿ ಎನ್ ಸುಬ್ಬರಾಯಶೆಟ್ಟಿ, 188/1ಎ2
47	71	ಖಾಸಗಿ	ಖುಷ್ಕಿ	0.0531	ಕೆ ಜಿ ಕೃಷ್ಣಮೂರ್ತಿ ಬಿನ್ ಗೋವಿಂದಪ್ಪ, ಕೆ ಜಿ ಸಿದ್ದನಾಯಿಕ ಬಿನ್ ಗೋವಿಂದಪ್ಪ, ಕೆ ಜಿ ರಂಗಯ್ಯ ಬಿನ್ ಗೋವಿಂದಪ್ಪ ಕೆ ಜಿ ಗೋವಿಂದಸ್ವಾಮಿ ಬಿನ್ ಗೋವಿಂದಪ್ಪ, 71
48	77	ಖಾಸಗಿ	ತರಿ	0.0126	ಲಕ್ಕಮ್ಮ ಕೋಂ ರಂಗಣ್ಣ, ವಾಸಪ್ಪ ಬಿನ್ ರಂಗಣ್ಣ, ಕೆ ಆರ್ ಮಂಜುನಾಥ್ ಬಿನ್ ಆರ್ ರಾಮಯ್ಯ, 77
49	86/1	ಖಾಸಗಿ	ಭಾಗಾಯ್ತು	0.0202	ಸುರೇಶ್ ಕೆ ಟಿ ಬಿನ್ ತಿಮ್ಮಯ್ಯ, 86/1
50	87/1	ಖಾಸಗಿ	ತರಿ	0.0304	ಶಂಕರಮ್ಮ ಕೋಂ ಲೇಟ್ ಸಿದ್ದಪ್ಪ, ಪರಮೇಶ್ ಬಿನ್ ಲೇಟ್ ಸಿದ್ದಪ್ಪ, ಎಸ್ ತಿಮ್ಮಯ್ಯ ಬಿನ್ ಲೇಟ್ ಸಿದ್ದಪ್ಪ, ರತ್ನಮ್ಮ ಕೋಂ ಲೇಟ್ ಸಗುಣಪ್ಪ, 87/1
51	88/1	ಖಾಸಗಿ	ತರ್ಕಿ	0.0202	ಕರಿಯಮ್ಮ ಕೋಂ ಮಲ್ಲಪ್ಪ, ಮಲ್ಲಪ್ಪ, ಶ್ರೀನಿವಾಸ್ ಬಿನ್ ಮಲ್ಲಪ್ಪ, ಕೆ ಎಸ್ ಚಂದ್ರಮತಿ ಬಿನ್ ನಾಗಣ್ಣ, 88/1
52	91/2	ಖಾಸಗಿ	ತರಿ	0.0076	ಲೋಕೇಶಪ್ಪ ಬಿನ್ ಸಣ್ಣಹೊನ್ನಪ್ಪ, ಕೆ ಎಸ್ ಜಗದೀಶ್ ಬಿನ್ ಸಣ್ಣಹೊನ್ನಪ್ಪ, 91/2
ಗ್ರಾಮ: ಯು. ಕೋಡಿಹಳ್ಳಿ					
53	2	ಖಾಸಗಿ	ಖುಷ್ಕಿ	0.1568	ನಾಗರತ್ನಮ್ಮ ಕೋಂ ಕೆ ಆರ್ ಹೊನ್ನಪ್ಪ, 2
ಗ್ರಾಮ: ಉಳ್ಳಿನಾಗೂರು (ಗ್ರಾಮೀಣ)					
54	18/3	ಖಾಸಗಿ	ಖುಷ್ಕಿ	0.0506	ಜಿ ಇ ಪುಷ್ಪ ಬಿನ್ ಗೌರಪುರ ಈಶ್ವರಪ್ಪ, 18/3
55	26/1	ಖಾಸಗಿ	ಖುಷ್ಕಿ	0.0051	ಸರ್ಕಾರ, 26/1
56	26/3	ಖಾಸಗಿ	ಖುಷ್ಕಿ	0.0051	ಜಿ ಇ ಪುಷ್ಪ ಬಿನ್ ಗೌರಪುರ ಈಶ್ವರಪ್ಪ, 26/3
ಗ್ರಾಮ: ವಿ ಎನ್ ನಗರ					
57	12	ಖಾಸಗಿ	ಎನ್‌ಎಕೆ	0.0354	ಎಂ ಆರ್ ಶಂಕರ್ ಬಿನ್ ೦ ಎಲ್ ರಾಮಚಂದ್ರಶೆಟ್ಟಿ - ಎಎಲ್‌ಎನ್, 12
58	9 / 2	ಖಾಸಗಿ	ಭಾಗಾಯ್ತು	0.0152	ಪೂರ್ಣಿಮಾಬಾಯಿ ಕೋಂ ಲೇಟ್ ವಸಂತಕುಮಾರ್ ನಾಯಕ್, ಹರ್ಷಿತ ವಿ ಬಿನ್ ಲೇಟ್ ವಸಂತಕುಮಾರ ನಾಯಕ್, ರಂಜಿತ ವಿ ಬಿನ್ ಲೇಟ್ ವಸಂತಕುಮಾರ್ ನಾಯಕ್, ಟಿ ಜಿ ನಾರಾಯಣ ನಾಯಕ್ ಬಿನ್ ಲೇಟ್ ಗೋವಿಂದನಾಯಿಕ, 9/2
			ಒಟ್ಟು	**2.5099**	

[F. No. NHAI/4lane TMK-SMG/LA/Karnataka/Notif./3a-Corrigendum/PIU-Shimoga/NH-206/3D]

ರಾಜೇಶ್ ಗುಪ್ತ, ನಿರ್ದೇಶಕರು

ಸ್ವಿಟ್ಜರ್ಲೆಂಡ್ ತಂಡದ ಗೆಲುವಿನ ರೂವಾರಿ ಬ್ರೀಲ್ ಎಂಬೊಲೊ (ಕೆಂಪು) ಚೆಂಡನ್ನು ಹೆಡ್ ಮಾಡುತ್ತಿರುವುದು –ಎಎಫ್‌ಪಿ ಚಿತ್ರ

ಕ್ಯಾಮರೂನ್‌ಗೆ ನಿರಾಶೆ ● 48ನೇ ನಿಮಿಷದಲ್ಲಿ ಕಾಲ್ಚಳಕ ಮೆರೆದ ಸ್ವಿಸ್ ತಾರೆ

ಬ್ರೀಲ್ ಏಕೈಕ ಗೋಲ್ ಸ್ವಿಸ್ ಜಯಭೇರಿ

ಅಲ್ ವಾಕ್ರಾ, ಕತಾರ್ (ಎಪಿ): ಬ್ರೀಲ್ ಎಂಬೊಲೊ ಹೊಡೆದ ಏಕೈಕ ಗೋಲಿನ ನೆರವಿನಿಂದ ಸ್ವಿಟ್ಜರ್ಲೆಂಡ್ ತಂಡವು ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಗುರುವಾರ ಅಲ್ ಜನಾಬ್ ಕ್ರೀಡಾಂಗಣದಲ್ಲಿ ನಡೆದ ಜಿ ಗುಂಪಿನ ಪಂದ್ಯದಲ್ಲಿ ಸ್ವಿಸ್ ತಂಡವು 1–0ಯಿಂದ ಕ್ಯಾಮರೂನ್ ವಿರುದ್ಧ ಗೆದ್ದಿತು. ಕ್ಯಾಮರೂನ್‌ನಲ್ಲಿ ಜನಿಸಿ, ಸ್ವಿಸ್‌ನಲ್ಲಿ ನೆಲೆ ಕಂಡುಕೊಂಡಿರುವ ಬ್ರೀಲ್ 48ನೇ ನಿಮಿಷದಲ್ಲಿ ಗೋಲು ಹೊಡೆದು ಗೆಲುವಿನ ರೂವಾರಿಯಾದರು.

ಗೋಲ್‌ಪೋಸ್ಟ್‌ನ ಮಧ್ಯಭಾಗದಿಂದ ಸುಮಾರು ಎಂಟು ಮೀಟರ್ ದೂರದಲ್ಲಿದ್ದ ಎಂಬೊಲೊ ಕಾಲ್ಚಳಕ ಮೆರೆದರು. ಶೆರ್ಡಾನ್ ಶಕೀರಿ ಮಾಡಿದ ಪಾಸ್ ಅನ್ನು ಚುರುಕಾಗಿ ಗ್ರಹಿಸಿದ ಬ್ರೀಲ್ ಚುರುಕಾದ ಕಿಕ್ ಮಾಡಿದರು.

ಆ ಕ್ಷಣ ಭಾವುಕರಾದ ಬ್ರೀಲ್ ಕ್ಯಾಮರೂನ್ ಅಭಿಮಾನಿಗಳತ್ತ ಕ್ಷಮಾಯಾಚಿಸುವ ರೀತಿಯಲ್ಲಿ ಸಂಜ್ಞೆ ಮಾಡಿದರು. ಮರುಕ್ಷಣವೇ ತಮ್ಮ ತಂಡದ ಸಹ ಆಟಗಾರರೊಂದಿಗೆ ಸಂಭ್ರಮಿಸಿದರು.

ಐದು ವರ್ಷದ ಬಾಲಕನಾಗಿದ್ದಾಗಲೇ ಬ್ರೀಲ್ ತಮ್ಮ ಕುಟುಂಬದೊಂದಿಗೆ ಕ್ಯಾಮರೂನ್ ತೊರೆದಿದ್ದರು. ಕೆಲವು ವರ್ಷ ಫ್ರಾನ್ಸ್‌ನಲ್ಲಿದ್ದ ಬ್ರೀಲ್ ನಂತರ ಸ್ವಿಟ್ಜರ್ಲೆಂಡ್‌ಗೆ ತೆರಳಿದ್ದರು. 25 ವರ್ಷದ ಬ್ರೀಲ್‌ಗೆ ಇದು ಎರಡನೇ ವಿಶ್ವಕಪ್ ಟೂರ್ನಿ.

ಟೂರ್ನಿ ಆರಂಭವಾದಾಗಿನಿಂದಲೂ ಆಫ್ರಿಕಾ ಮೂಲದ ತಂಡಗಳು ಗೆದ್ದಿಲ್ಲ. ಟ್ಯುನಿಷಿಯಾ, ಮೊರಕ್ಕೊ ತಂಡಗಳ ಪಂದ್ಯಗಳೂ ಡ್ರಾ ಆಗಿವೆ. ಆದರೆ ಜಯಿಸಿದ ಬೇರೆ ಖಂಡಗಳ ಕೆಲವು ತಂಡಗಳಿಗೆ ಆಫ್ರಿಕಾ ಮೂಲದ ಆಟಗಾರರು ಗೋಲು ಕಾಣಿಕೆ ನೀಡಿದ್ದಾರೆ!

ಕ್ಯಾಮರೂನ್ ತಂಡದ ಅಭಿಮಾನಿಗಳು –ಎಎಫ್‌ಪಿ ಚಿತ್ರ

ಬೆಲ್ಜಿಯಂ ಜಯಕ್ಕೆ ಮಿಚಿ ನೆರವು

ಅಲ್ ರಯ್ಯಾನ್, ಕತಾರ್ (ರಾಯಿಟರ್ಸ್): ಮಿಚಿ ಬಾಟ್‌ಶುವಾಯಿ ಗಳಿಸಿದ ಏಕೈಕ ಗೋಲಿನ ನೆರವಿನಿಂದ ಬೆಲ್ಜಿಯಂ ತಂಡ, ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಅಹಮದ್ ಬಿನ್ ಅಲಿ ಕ್ರೀಡಾಂಗಣದಲ್ಲಿ ಬುಧವಾರ ರಾತ್ರಿ ನಡೆದ ಪಂದ್ಯದಲ್ಲಿ ಬೆಲ್ಜಿಯಂ, 36 ವರ್ಷಗಳ ಬಿಡುವಿನ ಬಳಿಕ ವಿಶ್ವಕಪ್ ಆಡುತ್ತಿರುವ ಕೆನಡಾ ತಂಡವನ್ನು ಮಣಿಸಿತು.

ಫಿಫಾ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನದಲ್ಲಿರುವ ಬೆಲ್ಜಿಯಂಗೆ ಕೆನಡಾ ಆಟಗಾರರು ತಕ್ಕ ಪೈಪೋಟಿ ನೀಡಿದರು.

ಮಿಚಿ ಅವರು 44ನೇ ನಿಮಿಷದಲ್ಲಿ ಗೆಲುವು ಗೋಲು ತಂದಿತ್ತರು. ಟೋಬಿ ಅಲ್ಡೆವೆರಲ್ಡ್ ನೀಡಿದ ಪಾಸ್‌ನಲ್ಲಿ ಚೆಂಡನ್ನು ನಿಯಂತ್ರಣಕ್ಕೆ ಪಡೆದುಕೊಂಡು ಎದುರಾಳಿ ಗೋಲ್‌ಕೀಪರ್ ಮಿಲಾನ್ ಬೋರ್ಜಾನ್ ಅವರನ್ನು ತಪ್ಪಿಸಿ ಗುರಿ ಸೇರಿಸಿದರು. ಪ್ರಮುಖ ಆಟಗಾರ ರೊಮೆಲು ಲುಕಾಕು ಅವರು ಗಾಯದ ಕಾರಣ ಈ ಪಂದ್ಯದಲ್ಲಿ ಆಡದೇ ಇದ್ದುದರಿಂದ ಮಿಚಿ ಮೇಲೆ ಹೆಚ್ಚಿನ ಜವಾಬ್ದಾರಿಯಿತ್ತು.

ಪೆನಾಲ್ಟಿ ಮಿಸ್: ಕೆನಡಾ ಈ ಹಿಂದೆ ಒಮ್ಮೆ ಮಾತ್ರ ವಿಶ್ವಕಪ್‌ನಲ್ಲಿ ಆಡಿತ್ತು. 1986ರಲ್ಲಿ ಮೆಕ್ಸಿಕೊದಲ್ಲಿ ನಡೆದಿದ್ದ ಟೂರ್ನಿಯಲ್ಲಿ ಗುಂಪು ಹಂತದ ಎಲ್ಲ ಮೂರೂ ಪಂದ್ಯಗಳನ್ನು ಸೋತಿತ್ತಲ್ಲದೆ, ಗೋಲು ಗಳಿಸಲು ವಿಫಲವಾಗಿತ್ತು.

ವಿಶ್ವಕಪ್‌ನಲ್ಲಿ ಮೊದಲ ಗೋಲು ಗಳಿಸುವ ಅತ್ಯುತ್ತಮ ಅವಕಾಶ ಕೆನಡಾ ತಂಡಕ್ಕೆ ಈ ಪಂದ್ಯದಲ್ಲಿ ಲಭಿಸಿತ್ತು. ಆದರೆ 11ನೇ ನಿಮಿಷದಲ್ಲಿ ದೊರೆತ ಪೆನಾಲ್ಟಿ ಕಿಕ್ ಅವಕಾಶವನ್ನು ಅಲ್ಫೋನ್ಸೊ ಡೇವಿಸ್ ಹಾಳುಮಾಡಿಕೊಂಡರು. ಸ್ಪಾಟ್ ಕಿಕ್‌ಅನ್ನು ಬೆಲ್ಜಿಯಂ ಗೋಲ್‌ಕೀಪರ್ ತಿಬೊ ಕೋರ್ತುವಾ ಯಶಸ್ವಿಯಾಗಿ ತಡೆದರು.

5 ವಿಶ್ವಕಪ್‌ಗಳಲ್ಲಿ ಗೋಲು ಗಳಿಸಿದ ಮೊದಲ ಆಟಗಾರ

ರೊನಾಲ್ಡೊ ವಿಶ್ವದಾಖಲೆ

ಕ್ರಿಸ್ಟಿಯಾನೊ ರೊನಾಲ್ಡೊ – ಎಎಫ್‌ಪಿ ಚಿತ್ರ

ದೋಹಾ (ರಾಯಿಟರ್ಸ್): ಸ್ಟಾರ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಅವರು ದೋಹಾದ ‘ಸ್ಟೇಡಿಯಂ 974’ ರಲ್ಲಿ ಗುರುವಾರ ರಾತ್ರಿ ವಿಶ್ವದಾಖಲೆಯೊಂದನ್ನು ಸ್ಥಾಪಿಸಿದರು.

ಐದು ವಿಶ್ವಕಪ್ ಟೂರ್ನಿಗಳಲ್ಲಿ ಗೋಲು ಗಳಿಸಿದ ಮೊದಲ ಆಟಗಾರ ಎಂಬ ಅಪೂರ್ವ ಸಾಧನೆಗೆ ಭಾಜನರಾದರು. ಅವರ ಆಟದ ಬಲದಿಂದ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಪೋರ್ಚುಗಲ್ 3–2 ಗೋಲುಗಳಿಂದ ಘಾನಾ ತಂಡವನ್ನು ಮಣಿಸಿತು.

37 ವರ್ಷದ ರೊನಾಲ್ಡೊ ಅವರು ಈ ಹಿಂದೆ ಆಡಿದ್ದ ನಾಲ್ಕು ವಿಶ್ವಕಪ್ ಟೂರ್ನಿಗಳಲ್ಲೂ ಗೋಲು ಗಳಿಸಿದ್ದರು. ಬ್ರೆಜಿಲ್‌ನ ಪೆಲೆ, ಜರ್ಮನಿಯ ಉವೆ ಸೀಲರ್ ಮತ್ತು ಮಿರೊಸ್ಲಾವ್ ಕ್ಲೋಸ್ ಅವರೊಂದಿಗೆ ದಾಖಲೆಯನ್ನು ಹಂಚಿಕೊಂಡಿದ್ದರು. ಇದೀಗ ಅವರು ಐದನೇ ವಿಶ್ವಕಪ್ ಟೂರ್ನಿಯಲ್ಲಿ ಗೋಲು ಗಳಿಸಿ ಎಲ್ಲರನ್ನೂ ಹಿಂದಿಕ್ಕಿದ್ದಾರೆ.

ರೊನಾಲ್ಡೊ 65ನೇ ನಿಮಿಷದಲ್ಲಿ ಪೆನಾಲ್ಟಿ ಕಿಕ್ ಅವಕಾಶದಲ್ಲಿ ಗೋಲು ಗಳಿಸಿದರು. ರೊನಾಲ್ಡೊ ಅವರನ್ನು ಪೆನಾಲ್ಟಿ ಆವರಣದಲ್ಲಿ ಎದುರಾಳಿ ಆಟಗಾರ ಬೀಳಿಸಿದ್ದಕ್ಕೆ ರೆಫರಿ ಪೆನಾಲ್ಟಿ ಕಿಕ್ ಅವಕಾಶ ನೀಡಿದರು.

73ನೇ ನಿಮಿಷದಲ್ಲಿ ಆಂಡ್ರೆ ಅಯೇವ್ ಘಾನಾ ತಂಡಕ್ಕೆ ಸಮಬಲದ ಗೋಲು ತಂದಿತ್ತರು. ಆಕ್ರಮಣಕಾರಿ ಆಟ ಮುಂದುವರಿಸಿದ ಪೋರ್ಚುಗಲ್, ಐದು ನಿಮಿಷಗಳಲ್ಲಿ ಮತ್ತೆ ಮುನ್ನಡೆ ಗಳಿಸಿತು. ಜಾವೊ ಫೆಲಿಕ್ಸ್ 78ನೇ ನಿಮಿಷದಲ್ಲಿ ಎದುರಾಳಿ ಗೋಲ್‌ಕೀಪರ್‌ಅನ್ನು ಚಾಣಾಕ್ಷತನದಿಂದ ತಪ್ಪಿಸಿ ಚೆಂಡನ್ನು ಗುರಿ ಸೇರಿಸಿದರು.

ಇದಾದ ಎರಡು ನಿಮಿಷಗಳ ಬಳಿಕ ರಫಾಯೆಲ್ ಲಿಯೊ ಅವರು ಪೋರ್ಚುಗಲ್ ತಂಡದ ಮುನ್ನಡೆಯನ್ನು 3–1ಕ್ಕೆ ಹೆಚ್ಚಿಸಿದರು.

ಹಿನ್ನಡೆ ಅನುಭವಿಸಿದರೂ ಘಾನಾ ತಂಡ ಸುಲಭದಲ್ಲಿ ತಲೆಬಾಗಲು ಸಿದ್ಧವಿರಲಿಲ್ಲ. ಒಸ್ಮಾನ್ ಬುಕಾರಿ 89ನೇ ನಿಮಿಷದಲ್ಲಿ ಗೋಲು ಗಳಿಸಿ ಹಿನ್ನಡೆಯನ್ನು 2–3ಕ್ಕೆ ತಗ್ಗಿಸಿದರು. ಆ ಬಳಿಕ ಕೊನೆಯ ನಿಮಿಷಗಳಲ್ಲಿ ಘಾನಾ ಸಮಬಲದ ಗೋಲಿಗೆ ಪ್ರಯತ್ನಿಸಿದರೂ, ಪೋರ್ಚುಗಲ್ ಡಿಫೆಂಡರ್‌ಗಳು ಹಾಗೂ ಗೋಲ್‌ಕೀಪರ್ ತಡೆಯಾಗಿ ನಿಂತು ತಮ್ಮ ತಂಡದ ಗೆಲುವನ್ನು ಖಚಿತಪಡಿಸಿಕೊಂಡರು.

ಮೊದಲ ಅವಧಿ ಗೋಲುರಹಿತವಾಗಿತ್ತು. ರೊನಾಲ್ಡೊ ಅವರಿಗೆ ಮೊದಲ 15 ನಿಮಿಷಗಳಲ್ಲಿ ಗೋಲು ಗಳಿಸುವ ಎರಡು ಉತ್ತಮ ಅವಕಾಶಗಳು ಲಭಿಸಿತ್ತಾದರೂ, ಗುರಿ ಸೇರಿಸಲು ವಿಫಲರಾದರು.

ಡ್ರಾ ಪಂದ್ಯದಲ್ಲಿ ದ. ಕೊರಿಯಾ

ದೋಹಾ (ಎಎಫ್‌ಪಿ): ಫುಟ್‌ಬಾಲ್‌ನಲ್ಲಿ ‘ಏಷ್ಯಾದ ಹುಲಿ’ ದಕ್ಷಿಣ ಕೊರಿಯಾ ತಂಡ ಮತ್ತು ಉರುಗ್ವೆ ನಡುವಣ ಪಂದ್ಯವು ಡ್ರಾನಲ್ಲಿ ಮುಕ್ತಾಯವಾಯಿತು.

ಖ್ಯಾತನಾಮ ಆಟಗಾರ ಸನ್ ಹೆಂಗ್ ಮಿನ್ ಕೊರಿಯಾ ತಂಡಕ್ಕೆ ಮರಳಿದ್ದರು. ಅದರಿಂದಾಗಿ ತಂಡವು ಜಯಿಸುವ ವಿಶ್ವಾಸ ಗರಿಗೆದರಿತ್ತು. ಆದರೆ, ಉರುಗ್ವೆಯ ನಾಯಕ ಡೀಗೊ ಗಾಡಿನ್ ಹಾಗೂ ರಿಯಲ್ ಮ್ಯಾಡ್ರಿಡ್ ಮಿಡ್‌ಫೀಲ್ಡರ್ ಆಗಿರುವ ಫೆಡೆರಿಕೊ ವಾಲ್ವೆರ್ಡೆ ಅವರ ಗೋಲುಗಳಿಕೆಯ ಪ್ರಯತ್ನಗಳೂ ಫಲ ಕೊಡಲಿಲ್ಲ.

ಕೊರಿಯಾದ ವಾಂಗ್ ಯು ಜೊ ತಮಗೆ ಸಿಕ್ಕಿದ್ದ ಸುಲಭ ಅವಕಾಶವನ್ನೂ ಕೈಚೆಲ್ಲಿದರು. 10 ಯಾರ್ಡ್ ದೂರದಿಂದ ಗೋಲ್‌ಕೀಪರ್ ಅಷ್ಟೇ ಇದ್ದ ಪೋಸ್ಟ್‌ಗೆ ನಿಖರವಾಗಿ ಕಿಕ್ ಮಾಡುವಲ್ಲಿ ವಾಂಗ್ ವಿಫಲರಾದರು. ಅವರು ಒದ್ದ ಚೆಂಡು ಗೋಲುಪೋಸ್ಟ್ ಮೇಲಿಂದ ಸಾಗಿಹೋಯಿತು.

ಎಚ್ ಗುಂಪಿನ ಈ ಪಂದ್ಯದಲ್ಲಿ ಉಭಯ ತಂಡಗಳು ಅಂಕಗಳನ್ನು ಹಂಚಿಕೊಂಡವು.

‘ಇದೊಂದು ಉತ್ತಮ ಪಂದ್ಯ. ಮೊದಲಾರ್ಧದಲ್ಲಿ ನಮ್ಮ ತಂಡದ ಆಟಗಾರರು ಚೆನ್ನಾಗಿ ಆಡಿದರು. ಅದರಲ್ಲಿ ಕೆಲವು ಸಂದರ್ಭಗಳಲ್ಲಿ ಕೈತಪ್ಪಿ ಹೋಗುವ ಪಂದ್ಯವನ್ನು ಮರಳಿ ವಶಕ್ಕೆ ಪಡೆದಿದ್ದೆವು’ ಎಂದು ಕೊರಿಯಾದ ಕೋಚ್, ಪೋರ್ಚುಗೀಸ್ ಮೂಲದ ಪಾಲೊ ಬೆಂಟೊ ಹೇಳಿದರು.

ಪಂದ್ಯ ಕುರಿತು ಪ್ರತಿಕ್ರಿಯಿಸಿದ ಉರುಗ್ವೆ ಕೋಚ್ ಡೀಗೊ ಅಲೊನ್ಸೊ, ‘ಉತ್ತಮ ಪಂದ್ಯ ಇದಾಗಿತ್ತು. ಎರಡು ತಂಡಗಳ ಕಠಿಣ ಪೈಪೋಟಿ ಇದರಲ್ಲಿತ್ತು’ ಎಂದರು.

ದಕ್ಷಿಣ ಕೊರಿಯಾದ ಗೋಲ್‌ಕೀಪರ್ ಕಿಮ್ ಸಿಯಾಂಗ್ ಜೆಯು ಉರುಗ್ವೆಯ ಆಟಗಾರನ ಗೋಲು ಗಳಿಸುವ ಪ್ರಯತ್ನವನ್ನು ತಡೆದರು –ಎಎಫ್‌ಪಿ ಚಿತ್ರ

ಮನಗೆದ್ದ ಜಪಾನ್ ಅಭಿಮಾನಿಗಳು

ದೋಹಾ (ರಾಯಿಟರ್ಸ್): ಬುಧವಾರ ರಾತ್ರಿ ಫಿಫಾ ವಿಶ್ವಕಪ್ ಇತಿಹಾಸದಲ್ಲಿಯೇ ಜಪಾನ್ ತಂಡವು ಐತಿಹಾಸಿಕ ಜಯ ದಾಖಲಿಸಿತು. ಬಲಿಷ್ಠ ಜರ್ಮನಿಗೆ ಸೋಲಿನ ಆಘಾತ ನೀಡಿದ ಜಪಾನ್ ತಂಡದ ಆಟಗಾರರಿಗೆ ಶ್ಲಾಘನೆಯ ಮಹಾಪೂರವೇ ಹರಿಯುತ್ತಿದೆ.

ಪಂದ್ಯ ಮುಗಿದ ನಂತರ ಇದೇ ಕ್ರೀಡಾಂಗಣದಲ್ಲಿ ಜಪಾನ್ ತಂಡದ ಅಭಿಮಾನಿಗಳು ಮಾಡಿದ ಸ್ವಚ್ಛತಾ ಕಾರ್ಯ ಈಗ ವಿಶ್ವದೆಲ್ಲೆಡೆ ಮೆಚ್ಚುಗೆಗೆ ಪಾತ್ರವಾಗುತ್ತಿದೆ. ಪಂದ್ಯ ಮುಗಿದು ಪ್ರೇಕ್ಷಕರೆಲ್ಲ ನಿರ್ಗಮಿಸಿದ ನಂತರ ಜಪಾನ್ ದೇಶದ ಅಭಿಮಾನಿಗಳ ತಂಡವೊಂದು ಗ್ಯಾಲರಿಯಲ್ಲಿ ಬಿದ್ದ ಕಸವನ್ನು ಹೆಕ್ಕಿ ದೊಡ್ಡ ಚೀಲಗಳಲ್ಲಿ ತುಂಬಿಕೊಂಡು ಹೋದ ವಿಡಿಯೊಗಳು ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಸ್ವತಃ ಫಿಫಾ ಕೂಡ ಜಪಾನಿಯರ ಕಾಳಜಿ ಹಾಗೂ ಶಿಸ್ತನ್ನು ಕೊಂಡಾಡಿದೆ. ತನ್ನ ಅಧಿಕೃತ ಟ್ವಿಟರ್ ಖಾತೆಯಲ್ಲಿ ವಿಡಿಯೊ ತುಣುಕು ಹಂಚಿಕೊಂಡಿದೆ.

ಮೊರೊಕ್ಕೊ ಅಭಿಮಾನಿಯ ಆಕ್ಷೇಪ: ಇದಕ್ಕೆ ಪ್ರತಿಕ್ರಿಯಿಸಿರುವ ಅಭಿಮಾನಿ ಸಿಮೊ ಬೈನ್ ಎಂಬುವವರು, ‘ಜಪಾನ್ ಕಾರ್ಯ ಶ್ಲಾಘನೀಯ. ಕ್ರೊವೇಷ್ಯಾ ವಿರುದ್ಧದ ಪಂದ್ಯದಲ್ಲಿ ಆಡಿದ ಮೊರೊಕ್ಕೊ ತಂಡದ ಅಭಿಮಾನಿಗಳು ಇಂತಹದ್ದೇ ಕಾರ್ಯ ಮಾಡಿದ್ದಾರೆ. ಆದರೆ ಫಿಫಾ ಅವರ ಬಗ್ಗೆ ಉಲ್ಲೇಖಿಸಿಲ್ಲ. ನಿಗದಿತ ತಂಡವೊಂದನ್ನಷ್ಟೇ ಉಲ್ಲೇಖಿಸಬೇಕು ಎಂಬ ಪೂರ್ವಯೋಜನೆಯೇನಾದರೂ ಇದೆಯೇ’ ಎಂದು ಪ್ರಶ್ನಿಸಿದ್ದಾರೆ.

ಅವರು ಇದಕ್ಕೆ ಸಂಬಂಧಿಸಿದ ವಿಡಿಯೊ ತುಣುಕುಗಳನ್ನೂ ಹಂಚಿಕೊಂಡಿದ್ದಾರೆ.

ಡ್ರೆಸಿಂಗ್ ಕೊಠಡಿಯೂ ಸ್ವಚ್ಛ: ಪಂದ್ಯವನ್ನು ಗೆದ್ದ ಬಳಿಕ ಬಹುತೇಕ ತಂಡಗಳು ಸಂಭ್ರಮಾಚರಣೆ ಮಾಡಿ ಡ್ರೆಸಿಂಗ್ ಕೊಠಡಿಯನ್ನು ಅವ್ಯವಸ್ಥೆಯ ಸ್ಥಿತಿಯಲ್ಲಿ ಬಿಟ್ಟು ಹೋಗುತ್ತವೆ. ಆದರೆ ಜಪಾನ್ ಆಟಗಾರರು ತಮ್ಮ ಡ್ರೆಸಿಂಗ್ ಕೊಠಡಿಯನ್ನೂ ಸ್ವಚ್ಛಗೊಳಿಸಿ, ಎಲ್ಲವನ್ನು ಒಪ್ಪವಾಗಿಟ್ಟು ತೆರಳಿದ್ದಾರೆ. ಆ ಚಿತ್ರವೂ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.



ಕ್ರೀಡಾಂಗಣದ ಗ್ಯಾಲರಿ ಸ್ವಚ್ಛಗೊಳಿಸಿದ ಜಪಾನ್ ಅಭಿಮಾನಿಗಳು –ಟ್ವಿಟರ್ ಚಿತ್ರ

ಇಂದು ಸೆನೆಗಲ್ ವಿರುದ್ಧ ಗೆಲುವು ಅನಿವಾರ್ಯ

ಕತಾರ್‌ಗೆ ಕಡೆಯ ಅವಕಾಶ

ದೋಹಾ (ಎಪಿ/ರಾಯಿಟರ್ಸ್): ಕತಾರ್ ತಂಡ ಫಿಫಾ ವಿಶ್ವಕಪ್ ಟೂರ್ನಿಯ ತನ್ನ ಎರಡನೇ ಪಂದ್ಯದಲ್ಲಿ ಶುಕ್ರವಾರ ಸೆನೆಗಲ್ ವಿರುದ್ಧ ಪೈಪೋಟಿ ನಡೆಸಲಿದೆ. ಲೀಗ್ ಹಂತದಲ್ಲೇ ಹೊರಬೀಳುವ ಅಪಾಯದಿಂದ ಪಾರಾಗಲು ಆತಿಥೇಯರಿಗೆ ಗೆಲುವು ಅನಿವಾರ್ಯ.

ಕತಾರ್ ‘ಎ’ ಗುಂಪಿನ ಮೊದಲ ಪಂದ್ಯದಲ್ಲಿ 0–2 ರಲ್ಲಿ ಈಕ್ವೆಡಾರ್ ಕೈಯಲ್ಲಿ ಸೋತಿತ್ತು. ಮಾತ್ರವಲ್ಲ, ಫಿಫಾ ವಿಶ್ವಕಪ್‌ನ ಮೊದಲ ಪಂದ್ಯದಲ್ಲಿ ಸೋಲು ಅನುಭವಿಸಿದ ಮೊದಲ ಆತಿಥೇಯ ರಾಷ್ಟ್ರ ಎನಿಸಿಕೊಂಡಿತ್ತು.

ದಕ್ಷಿಣ ಆಫ್ರಿಕಾ (2010) ತಂಡ ಹೊರತುಪಡಿಸಿ ಯಾವುದೇ ಆತಿಥೇಯ ರಾಷ್ಟ್ರ ವಿಶ್ವಕಪ್ ಟೂರ್ನಿಯ ಲೀಗ್ ಹಂತದಲ್ಲೇ ಹೊರಬಿದ್ದಿಲ್ಲ. ಅಂತಹ ಅವಮಾನದಿಂದ ಪಾರಾಗಲು ಶುಕ್ರವಾರ ಗೆಲುವು ಅಗತ್ಯ. ಆದರೆ ಆಫ್ರಿಕನ್ ಚಾಂಪಿಯನ್ ಸೆನೆಗಲ್ ವಿರುದ್ಧ ಜಯ ಸುಲಭವಲ್ಲ ಎಂಬುದರ ಅರಿವು ಕತಾರ್‌ಗೆ ಇದೆ.

ಒಮ್ಮೆಯೂ ವಿಶ್ವಕಪ್‌ಗೆ ಅರ್ಹತೆ ಪಡೆಯದ ರಾಷ್ಟ್ರಕ್ಕೆ ಟೂರ್ನಿಯ ಆತಿಥ್ಯ ನೀಡಿದ್ದ ಫಿಫಾ ನಿರ್ಧಾರವನ್ನು ಈಗಾಗಲೇ ಹಲವರು ಟೀಕಿಸಿದ್ದಾರೆ. ಲೀಗ್ ಹಂತದಲ್ಲೇ ಹೊರಬಿದ್ದರೆ ಈ ಟೀಕೆ ಇನ್ನಷ್ಟು ಹೆಚ್ಚಲಿದೆ. ಅದಕ್ಕೆ ಅವಕಾಶ ನೀಡಬಾರದು ಎಂಬುದು ಕತಾರ್‌ನ ಉದ್ದೇಶ.

‘ನಮ್ಮ ಮೇಲೆ ಹೆಚ್ಚಿನ ಜವಾಬ್ದಾರಿಯಿದೆ. ಮೊದಲ ಪಂದ್ಯದಲ್ಲಿ ಎದುರಿಸಿದ್ದಷ್ಟು ಒತ್ತಡ, ಸೆನೆಗಲ್ ವಿರುದ್ಧ ಆಡುವಾಗ ಆಟಗಾರರಿಗೆ ಎದುರಾಗದು ಎಂಬುದು ನನ್ನ ವಿಶ್ವಾಸ. ಗೆಲುವಿಗೆ ಎಲ್ಲ ರೀತಿಯಲ್ಲೂ ಪ್ರಯತ್ನಿಸುತ್ತೇವೆ’ ಎಂದು ಕತಾರ್ ತಂಡದ ಕೋಚ್ ಫೆಲಿಕ್ಸ್ ಸ್ಯಾಂಚೆಜ್ ಹೇಳಿದ್ದಾರೆ.

ಅರಬ್ ನಾಡಿನ ಇತರ ತಂಡಗಳು ಉತ್ತಮ ಪ್ರದರ್ಶನ ನೀಡುತ್ತಿರುವುದು ಸಹಜವಾಗಿ ಕತಾರ್ ತಂಡವನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಸೌದಿ ಅರೇಬಿಯಾ ತಂಡ, ಪ್ರಬಲ ಅರ್ಜೆಂಟೀನಾಕ್ಕೆ ಆಘಾತ ನೀಡಿತ್ತು. ಟ್ಯುನಿಷಿಯಾ ಮತ್ತು ಮೊರೊಕ್ಕೊ ಕ್ರಮವಾಗಿ ಡೆನ್ಮಾರ್ಕ್ ಹಾಗೂ ಕ್ರೊವೇಷ್ಯಾ ಜತೆ ಡ್ರಾ ಸಾಧಿಸಿದ್ದವು.

‘ಇತರ ಅರಬ್ ರಾಷ್ಟ್ರಗಳ ಪ್ರದರ್ಶನ ನಿಜವಾಗಿಯೂ ನಮಗೆ ಹೊಟ್ಟೆಕಿಚ್ಚು ಉಂಟುಮಾಡಿದೆ. ಸೆನೆಗಲ್ ವಿರುದ್ಧ ಶ್ರೇಷ್ಠ ಪ್ರದರ್ಶನ ನೀಡುತ್ತೇವೆ’ ಎಂದು ತಂಡದ ಮಿಡ್‌ಫೀಲ್ಡರ್ ಇಸ್ಮಾಯಿಲ್ ಮೊಹಮ್ಮದ್ ಹೇಳಿದ್ದಾರೆ.

ಆರಂಭಿಕ ಪಂದ್ಯದಲ್ಲಿ ಬಲಿಷ್ಠ ನೆದರ್ಲೆಂಡ್ಸ್ ಎದುರು ಸೋತಿದ್ದ ಸೆನೆಗಲ್, ಪುಟಿದೆದ್ದು ನಿಲ್ಲುವ ವಿಶ್ವಾಸದಲ್ಲಿದೆ. ಮೊದಲ ಪಂದ್ಯದಲ್ಲಿ ಗಾಯಗೊಂಡಿದ್ದ ಮಿಡ್‌ಫೀಲ್ಡರ್ ಚೆಕೌ ಕೊಯಾಟೆ, ಶುಕ್ರವಾರ ಕಣಕ್ಕಿಳಿಯುವ ಸಾಧ್ಯತೆ ಕಡಿಮೆ. ಈ ತಂಡವು ಫಾರ್ವರ್ಡ್ ಆಟಗಾರರಾದ ಇಸ್ಮಾಯಿಲಾ ಸಾರ್, ಬುಲಾಯೆ ದಿಯಾ ಮತ್ತು ಕ್ರೆಪಿನ್ ದಿಯಾಟ ಅವರ ಮೇಲೆ ಹೆಚ್ಚಿನ ನಿರೀಕ್ಷೆ ಇಟ್ಟುಕೊಂಡಿದೆ.

ಆತ್ಮವಿಶ್ವಾಸದಲ್ಲಿ ಇಂಗ್ಲೆಂಡ್: ಶುಕ್ರವಾರ ರಾತ್ರಿ ನಡೆಯುವ ಪಂದ್ಯದಲ್ಲಿ ಇಂಗ್ಲೆಂಡ್ ತಂಡ ಅಮೆರಿಕದ ಸವಾಲು ಎದುರಿಸಲಿದೆ. ಮೊದಲ ಪಂದ್ಯದಲ್ಲಿ 6–2 ಗೋಲುಗಳಿಂದ ಇರಾನ್ ತಂಡವನ್ನು ಮಣಿಸಿದ್ದ ಇಂಗ್ಲೆಂಡ್, ಸತತ ಎರಡನೇ ಗೆಲುವು ಪಡೆದು ನಾಕೌಟ್ ಹಂತ ಪ್ರವೇಶಿಸುವ ಆತ್ಮವಿಶ್ವಾಸದಲ್ಲಿದೆ.

ಇಂದಿನ ಪಂದ್ಯ

Vs	ವೇಲ್ಸ್ – ಇರಾನ್	ಮಧ್ಯಾಹ್ನ 3.30
Vs	ಕತಾರ್ – ಸೆನೆಗಲ್	ಸಂಜೆ 6.30
Vs	ನೆದರ್ಲೆಂಡ್ಸ್ – ಈಕ್ವೆಡಾರ್	ರಾತ್ರಿ 9.30
Vs	ಇಂಗ್ಲೆಂಡ್ – ಅಮೆರಿಕ	ತಡರಾತ್ರಿ 12.30

ಲೈವ್: ಸ್ಪೋರ್ಟ್ಸ್ 18, ಎಂಟಿವಿ, ಜಿಯೊ ಸಿನೆಮಾ ಆ್ಯಪ್

ಫಿಡೆ ವಿಶ್ವ ಚೆಸ್ ಸೆಮಿಫೈನಲ್‌ಗೆ ಭಾರತ ತಂಡ

ಜೆರುಸಲೆಂ (ಪಿಟಿಐ): ಭಾರತ ತಂಡದವರು ಫಿಡೆ ವಿಶ್ವ ತಂಡ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಟೈ ಬ್ರೇಕರ್‌ನಲ್ಲಿ ಫ್ರಾನ್ಸ್ ತಂಡವನ್ನು ಮಣಿಸಿ ಸೆಮಿಫೈನಲ್ ಪ್ರವೇಶಿಸಿದರು.

ಗುರುವಾರ ನಡೆದ ಕ್ವಾರ್ಟರ್‌ಫೈನಲ್ ಎರಡು ಸೆಟ್‌ಗಳ ಪಂದ್ಯಗಳ ಬಳಿಕ ಸಮಬಲದಲ್ಲಿ ಕೊನೆಗೊಂಡಿತು. ಇದರಿಂದ ವಿಜೇತರನ್ನು ನಿರ್ಣಯಿಸಲು ಟೈಬ್ರೇಕರ್‌ನ ಮೊರೆ ಹೋಗಲಾಯಿತು. ಬ್ಲಿಟ್ಜ್ ಟೈಬ್ರೇಕರ್‌ನಲ್ಲಿ ಭಾರತ 2.5–1.5 ಪಾಯಿಂಟ್ಸ್‌ಗಳಿಂದ ಗೆದ್ದಿತು.

ನಾಲ್ಕು ಪಂದ್ಯಗಳನ್ನೊಂಡ ಟೈಬ್ರೇಕರ್‌ನ ಮೊದಲ ಗೇಮ್‌ನಲ್ಲಿ ವಿದಿತ್ ಗುಜರಾತಿ ಅವರು ಫ್ರಾನ್ಸ್‌ನ ಮ್ಯಾಕ್ಸಿಮ್ ವಾಶಿರ್ ಲಗ್ರಾವ್ ಜತೆ 45 ನಡೆಗಳಲ್ಲಿ ಡ್ರಾ ಮಾಡಿಕೊಂಡರು. ಅನುಭವಿ ಸ್ಪರ್ಧಿ ಕೆ.ಶಶಿಕಿರಣ್ 55 ನಡೆಗಳಲ್ಲಿ ಮ್ಯಾಕ್ಸಿಮ್ ಲಗಾರ್ಡ್ ಎದುರು ಸೋತರು. ಇದರಿಂದ ಫ್ರಾನ್ಸ್ 1.5–0.5 ಮುನ್ನಡೆ ಪಡೆಯಿತು.

ಆದರೆ ನಿಹಾಲ್ ಸರಿನ್ ಮತ್ತು ಎಸ್.ಎಲ್.ನಾರಾಯಣನ್ ಅವರು ಕ್ರಮವಾಗಿ ಜೂಲ್ಸ್ ಮೊಸಾರ್ಡ್ ಹಾಗೂ ಲಾರೆಂಟ್ ಫ್ರೆಸಿನೆಟ್ ಅವರನ್ನು ಮಣಿಸಿ ಭಾರತದ ರೋಚಕ ಗೆಲುವಿಗೆ ಕಾರಣರಾದರು. ಸೆಮಿಫೈನಲ್‌ನಲ್ಲಿ ಭಾರತ ತಂಡ, ಉಜ್ಬೆಕಿಸ್ತಾನದ ಸವಾಲು ಎದುರಿಸಲಿದೆ.

ಇದಕ್ಕೂ ಮುನ್ನ ನಡೆದಿದ್ದ ಎರಡು ಸೆಟ್‌ಗಳ ಪಂದ್ಯದ ಮೊದಲ ಸೆಟ್‌ನಲ್ಲಿ ಭಾರತ 3–1 ರಲ್ಲಿ ಫ್ರಾನ್ಸ್ ತಂಡವನ್ನು ಮಣಿಸಿತ್ತು. ಆದರೆ ಎರಡನೇ ಸೆಟ್‌ಅನ್ನು ಇದೇ ಅಂತರದಿಂದ ಗೆದ್ದ ಫ್ರಾನ್ಸ್ ಪಂದ್ಯವನ್ನು ಟೈಬ್ರೇಕರ್‌ಗೆ ಕೊಂಡೊಯ್ಯುವಲ್ಲಿ ಯಶಸ್ವಿಯಾಗಿತ್ತು.

ಇನ್ನೊಂದು ಸೆಮಿಫೈನಲ್‌ನಲ್ಲಿ ಸ್ಪೇನ್– ಚೀನಾ ಎದುರಾಗಲಿವೆ. ಈ ತಂಡಗಳು ಕ್ವಾರ್ಟರ್ ಫೈನಲ್‌ನಲ್ಲಿ ಕ್ರಮವಾಗಿ ಅಜರ್‌ಬೈಜಾನ್ ಹಾಗೂ ಪೋಲೆಂಡ್ ವಿರುದ್ಧ ಗೆದ್ದವು.

ಸೌದಿಯ ಶಹರಾನಿಗೆ ಶಸ್ತ್ರಚಿಕಿತ್ಸೆ

ರಿಯಾದ್ (ಎಎಫ್‌ಪಿ): ಅರ್ಜೆಂಟೀನಾ ವಿರುದ್ಧದ ಪಂದ್ಯದಲ್ಲಿ ಗಾಯಗೊಂಡಿದ್ದ ಸೌದಿ ಅರೇಬಿಯಾ ತಂಡದ ಡಿಫೆಂಡರ್ ಯಾಸಿರ್ ಅಲ್ ಶಹರಾನಿ ಅವರಿಗೆ ಶಸ್ತ್ರಚಿಕಿತ್ಸೆ ಮಾಡಲಾಗಿದೆ.

ಪಂದ್ಯದಲ್ಲಿ ಯಾಸಿರ್ ಅವರು ಇನ್ನೊಬ್ಬ ಆಟಗಾರನಿಗೆ ಡಿಕ್ಕಿ ಹೊಡೆದಿದ್ದರು. ಆಗ ಅವರ ತಲೆಗೆ ಬಲವಾದ ಪೆಟ್ಟು ಬಿದ್ದು ಕುಸಿದಿದ್ದರು.

‘ಅವರ ಆರೋಗ್ಯ ಸ್ಥಿರವಾಗಿದೆ. ಎದೆ ಹಾಗೂ ತಲೆಗೆ ಪೆಟ್ಟು ಬಿದ್ದಿದ್ದು ಶಸ್ತ್ರಚಿಕಿತ್ಸೆ ನೀಡಲಾಗಿದೆ’ ಎಂದು ವೈದ್ಯರ ತಂಡದ ಮೂಲಗಳು ತಿಳಿಸಿವೆ. ಈ ಪಂದ್ಯದಲ್ಲಿ ಸೌದಿ ತಂಡವು ಅರ್ಜೆಂಟೀನಾಗೆ ಸೋಲಿನ ಆಘಾತ ನೀಡಿತ್ತು.

ಡೆನ್ಮಾರ್ಕ್‌ನ ಥಾಮಸ್ ಡೆಲನೇಗೆ ಗಾಯ; ದೋಹಾ (ರಾಯಿಟರ್ಸ್): ಡೆನ್ಮಾರ್ಕ್ ತಂಡದ ಮಿಡ್‌ಫೀಲ್ಡರ್ ಥಾಮಸ್ ಡೆಲನೇ ಅವರ ಮೊಣಕಾಲಿಗೆ ಗಂಭೀರ ಗಾಯವಾಗಿದ್ದು ವಿಶ್ವಕಪ್ ಟೂರ್ನಿಯಿಂದ ನಿರ್ಗಮಿಸಿದ್ದಾರೆ.

ಡಿ ಗುಂಪಿನಲ್ಲಿ ಟ್ಯುನಿಷಿಯಾ ವಿರುದ್ಧ ನಡೆದಿದ್ದ ಪಂದ್ಯದಲ್ಲಿ ಅವರ ಮೊಣಕಾಲಿಗೆ ಪೆಟ್ಟಾಗಿತ್ತು. ಅವರಿಗೆ ನಾಲ್ಕು ವಾರಗಳ ವಿಶ್ರಾಂತಿ ಅಗತ್ಯವಿದೆ ಎಂದು ವೈದ್ಯರು ತಿಳಿಸಿದ್ದಾರೆ.